

ಆಗಸ್ಟ್ ೧೯೯೬
ಮನೆ ಮಂದಿಗೆಲ್ಲ ಮುದ ನೀಡುವ ಮಾಸಿಕ
ಕಸ್ತೂರಿ
ರೋದ್
ಮಾಂತ್ರಿಕನೊಡನೆ
ಒಂದು ದಿನ...
ಚ್ಚೆಗಳು
ನನ್ನು
ಜಿಸುತ್ತವೆ ?
ಬೆಲೆ:
ರೂ. ೬-೦೦

ಶಿಕ್ಷಣ ಕ್ಷಣ



'ಕಸ್ತೂರಿ'ಯ ಸಂಗ್ರಹದಿಂದ

ಕಸ್ತೂರಿ

ಕನ್ನಡ ಡೈಜೆಸ್ಟ್

ಲೋಕ ಶಿಕ್ಷಣ ಟ್ರಸ್ಟಿನ ಹೆಮ್ಮೆಯ ಕಾಣಿಕೆ

ವ್ಯವಸ್ಥಾಪಕ ಸಂಪಾದಕ:
ಕೆ. ಶಾಮರಾವ್

ಸಂಪಾದಕ:
ಎನ್. ವಿ. ಜೋಶಿ

ಸಹ ಸಂಪಾದಕ:
ವೆಂಕಟನಾರಾಯಣ

ನಿರ್ವಹಣೆ:
ಗೋಪಾಲ ವಾಜಪೇಯಿ
ಶ್ರೀಕಾಂತ ಮಳಗಿ

ಕಲೆ:
ಪಿ. ಆರ್. ಪಾಟೀಲ
ಎಂ. ಎಸ್. ಶಶೀಧರ

ಮುಖಪುಟ:
ಕೋಮಲ ತಾರೆ
ವರ್ಣಚಿತ್ರ:
ಎನ್. ಎಸ್. ರಘುಪತಿ
ಕೊನೆ ರಕ್ಷಾಪುಟ:
'ಕಸ್ತೂರಿ'ಯ ಸಂಗ್ರಹದಿಂದ

ಕಸ್ತೂರಿ ಕಾರ್ಯಾಲಯ
ಕೊಪ್ಪೀಕರ ರಸ್ತೆ
ಹುಬ್ಬಳ್ಳಿ-೫೮೦೦೨೦.

ಗ್ರಾಹಕನ ಮನಸ್ಸು

ಒಂದು ಕಂಪನಿಯ ಆಡಳಿತ ವ್ಯವಸ್ಥೆಗೂ - ದೇಶದ ರಾಜಕೀಯಕ್ಕೂ ಏನು ಸಂಬಂಧ? ಏನೂ ಸಂಬಂಧ ಇಲ್ಲ ಎನ್ನುವಿರಾ? ನೀವು ಹಾಗೆ ಭಾವಿಸಿದ್ದರೆ ಅದು ತಪ್ಪು.

ಈಗ ಆಡಳಿತ ನಿರ್ವಹಣೆ ಎನ್ನುವುದು ಒಂದು ವಿಜ್ಞಾನವಾಗಿಯೇ ಬೆಳೆದಿದೆ. ಅದಕ್ಕಾಗಿಯೆಂದೇ ದೊಡ್ಡ ದೊಡ್ಡ ಕಂಪನಿಗಳು ಆಡಳಿತ ತಜ್ಞರನ್ನು ನಿಯಮಿಸಿಕೊಳ್ಳುತ್ತಿವೆ. ಹೊಸ ಹೊಸ ಉತ್ಪಾದನೆಗಳನ್ನು ಹೊರತರುವಾಗ ಅವುಗಳಿಗೆ ಗ್ರಾಹಕರಿಂದ ಸಕಾರಾತ್ಮಕವಾದ ಪ್ರತಿಕ್ರಿಯೆ ದೊರೆತೀತೋ ಇಲ್ಲವೋ ಎನ್ನುವುದನ್ನು ಖಚಿತಪಡಿಸಿಕೊಳ್ಳಲು ಕ್ಲಿಷ್ಟಕರವಾದ ಸರ್ವೇಕ್ಷಣೆಗಳನ್ನು ನಡೆಸುತ್ತಿವೆ.


ಹತ್ತುವರ್ಷಗಳ ಹಿಂದೆ ಆ ಮಾತಿರಲಿಲ್ಲ. ಗತಾನುಗತವಾಗಿ ಕೊಳ್ಳುತ್ತಾ ಬಂದ ಮಾಲನ್ನೇ ಗ್ರಾಹಕರು ಮುಂದೆಯೂ ಕೊಳ್ಳುತ್ತಾರೆ; ಒಂದು ಬ್ರ್ಯಾಂಡಿಗೆ ಒಗ್ಗಿದವರು ಅದನ್ನೆಂದೂ ಬದಲಿಸುವುದಿಲ್ಲ ಎಂಬ ಭಾವನೆ ನಿರ್ವಹಣೆಯ ತಜ್ಞರಿಗಿತ್ತು. ಆದರೆ ಕಾಲ ಬದಲಾಯಿತು. ಉಚ್ಚಮಟ್ಟದ ವಸ್ತುಗಳನ್ನು ಉತ್ಪಾದಿಸುವ ಹಳೆಯ ಕಂಪನಿಗಳು ಮಾರುಕಟ್ಟೆಗೆ ಬಂದಂತೆಲ್ಲ ಕೋಟ್ಯವಧಿ ರೂಪಾಯಿಗಳಷ್ಟು ಬೆಲೆಯ ಸಾಮಗ್ರಿಯನ್ನು ಉತ್ಪಾದಿಸುವ ಕಂಪನಿಗಳ ಮಾರುಕಟ್ಟೆಯ ಭಾಗ ಕರಗತೊಡಗಿತು. ಎಷ್ಟೋ ಕಂಪನಿಗಳು ಉತ್ಪಾದನೆಯನ್ನೇ ನಿಲ್ಲಿಸಿದವು ಅಥವಾ ಮಾರ್ಪಾಟುಗೊಳಿಸಿದವು. ಗ್ರಾಹಕರ ಆದ್ಯತೆಯತ್ತ ಕಂಪನಿಗಳು ಹೆಚ್ಚು ಗಮನಹರಿಸತೊಡಗಿದವು. ಭಾರತದಲ್ಲಿ ಮಾರುಕಟ್ಟೆಯ ಸಂಶೋಧನೆ ಬೆಳೆದು ಬಂದದ್ದು ಇಂತಹ ಸಂದರ್ಭದಲ್ಲೆ.

ಇದೇ ಕಾಲದಲ್ಲೆ ಹುಟ್ಟಿಕೊಂಡ 'ಇಂಡಿಯಾ ಟುಡೆ'ಯಂತಹ ಪತ್ರಿಕೆಗಳೂ ಚುನಾವಣೆಯ ಸಮಯದಲ್ಲಿ ತಜ್ಞ ಸಂಸ್ಥೆಗಳ ಸಹಕಾರದಿಂದ ಸರ್ವೆ ನಡೆಸಿ ಲೇಖನಗಳನ್ನು ಪ್ರಕಟಿಸತೊಡಗಿದವು.

ಆದರೆ ರಾಜಕೀಯ ಪಕ್ಷಗಳು ಮಾತ್ರ ಪಾಳೆಗಾರಿಕೆಯ ಮನೋಭಾವವನ್ನು ಕೈ ಬಿಡಲಿಲ್ಲ. ವೋಟ್ ಬ್ಯಾಂಕ್ ತತ್ವದ ಆಧಾರದ ಮೇಲೆಯೇ ಚುನಾವಣಾ ತಂತ್ರವನ್ನು ರೂಪಿಸುವ ಮನೋಭಾವವನ್ನೂ ತ್ಯಜಿಸಲಿಲ್ಲ. ಮೊನ್ನೆ ಮೊನ್ನೆ ಲೋಕಸಭೆಗೆ ನಡೆದ ಚುನಾವಣೆಯಲ್ಲಿ ಪರಿಣಾಮವೇನಾಯಿತೆನ್ನುವುದು ಈಗ ಎಲ್ಲರಿಗೂ ಗೊತ್ತೇ ಇದೆ.

ಕಂಪನಿಯ ತಜ್ಞರು ಹಲವಾರು ವರ್ಷಗಳ ಹಿಂದೆಯೆ ಕಂಡುಕೊಂಡ ತಥ್ಯವನ್ನು ರಾಜಕಾರಣಿಗಳು ಆಗಲೇ ಕಂಡುಕೊಂಡಿದ್ದರೆ ದೇಶದ ರಾಜಕೀಯ ಪರಿಸ್ಥಿತಿಯೇ ಬದಲಾಗುತ್ತಿತ್ತೋ ಏನೋ!

- ವ್ಯವಸ್ಥಾಪಕ ಸಂಪಾದಕ



ಸಹಚಿಂತನ

ಜಾಣನ ಕೈಗೆ ಗೋಣಿ ಸಿಕ್ಕರೆ....

'ಕಸದಿಂದ ರಸ' ಎಂಬಂತೆ ಬುದ್ಧಿಯನ್ನು ಉಪಯೋಗಿಸಿ ಸಣಬಿನಿಂದ ತಯಾರಿಸಿದ ಅನೇಕ ನಿತ್ಯೋಪಯೋಗಿ ವಸ್ತುಗಳ ಸವಿಸ್ತಾರ ಮಾಹಿತಿಯನ್ನು ಒದಗಿಸಿದ ಲೇಖನ 'ಜಾಣನ ಕೈಗೆ ಗೋಣಿ ಸಿಕ್ಕರೆ.' (ಜುಲೈ ೧೯೯೬)

ಬಾಯಾರು : **ಪ್ರಮೋದ ಶ್ರೀಕಾಂತ**

ಮರಣವೇ ಮಹಾನವಮಿ:
ಒಂದು ಚಿಂತನೆ

ಎಂ.ವಿ.ಶರ್ಮಾ ತದ್ದಲಸೆ ಅವರ ವಿಚಾರಸರಣಿ ತರ್ಕಬದ್ಧವಾಗಿದ್ದರೂ ನಕಾರಾತ್ಮಕವಾಗಿದೆ. ಮರಣ ದೇಹಕ್ಕೆ ಹೊರತು ಆತ್ಮನಿಗಲ್ಲವೆಂಬುದು ಸನಾತನ ಧರ್ಮದ ಸಿದ್ಧಾಂತ. 'ಆನಂದೇನ ಜಾತಾನಿ ಜೀವಂತಿ' ಎಂಬುದು ಉಪನಿಷತ್ ವಾಕ್ಯ. ಇಲ್ಲದಿದ್ದರೆ ಅತ್ಯಂತ ಕಷ್ಟದಲ್ಲಿರುವ ಭಿಕ್ಷುಕ ಬದುಕಲು ಬಯಸುವುದೇಕೆ? ಮರಣಾಸನ್ನನಾದ ವಯಸ್ಕನಿಗೂ ಚಿಕಿತ್ಸೆ ಪಡೆದು ಆಯುಷ್ಯವನ್ನು ಹೆಚ್ಚಿಸಿಕೊಳ್ಳಬೇಕೆಂಬ ಕಾತರವೇಕೆ? ಸದಾ ಮರಣವನ್ನು ಸ್ಮರಿಸುತ್ತ ಜೀವಿತದ ಉದ್ದೇಶವನ್ನೇ ಕಡೆಗಣಿಸಿ ಜೀವನ್ಮೃತನಂತೆ ಬದುಕುವುದರಲ್ಲಿ ಯಾವ ಪುರುಷಾರ್ಥವಿದೆಯೋ ತಿಳಿಯದು. ಮಗುವಾಗಿದ್ದಾಗಿನಿಂದ ಮುದುಕನಾಗುವವರೆಗೆ ಜೀವನದ ಹಲವಾರು ಮುಖಗಳ ಮೂಲಕ ಆನಂದಾನುಭವವನ್ನು ಹೆಚ್ಚಿಸಿಕೊಂಡು ಕೊನೆಗೆ ಆನಂದದ ನಿಜವಾದ ಸ್ರೋತವನ್ನೇ ಕಂಡುಹಿಡಿಯುವ ಹಂಬಲ ಮನುಷ್ಯನದು. ಅದನ್ನು ಬಿಟ್ಟು ಜೀವನ ವಿಮುಖವಾದ ವಿಚಾರಗಳಿಂದ ಕಂಗೆಟ್ಟು ಪಲಾಯನವಾದಿಯಾಗುವುದಲ್ಲ. ಭಯದಿಂದ ಮುಕ್ತವಾಗಬೇಕೆಂದು ಬಯಸುವ ಮನುಷ್ಯ ಸದಾ ಮರಣಭಯದ ಭೂತವನ್ನೇ ಬೆಂಬತ್ತಿರಬೇಕೆ? ಅದು ಬಂದಾಗ ಜೀರ್ಣ ವಸ್ತ್ರವನ್ನು ತೊರೆದು ಹೊಸ ವಸ್ತ್ರವನ್ನು ತೊಡುವ ಭಾವದಲ್ಲಿ ಭಯವಿಲ್ಲದೆ ಸ್ವೀಕರಿಸುವಂತಾದರೆ ಅದೊಂದು ಮನುಷ್ಯನ ಮಹತ್ಸಾಧನೆಯೇ ಸರಿ.

ಧಾರವಾಡ **ಡಾ.ಕೆ.ಎಸ್.ಆಮೂರ**

ಎಂ.ವಿ. ಶರ್ಮಾ ತದ್ದಲಸೆ ಅವರ ಲೇಖನ ಓದಿದೆ. ಅದು ಕೃತಿಚೌರ್ಯ ಎಂದು ಹೇಳಲು ಬೇಸರವಾಗುತ್ತಿದೆ. ಆಚಾರ್ಯ ವಿನೋಬಾ ಭಾವೆಯವರ 'ಗೀತಾಪ್ರವಚನ'ದ (ಅನುವಾದಕರು: ಸಿದ್ದವನಹಳ್ಳಿ ಕೃಷ್ಣಶರ್ಮಾ) ಎಂಟನೆಯ ಅಧ್ಯಾಯ 'ಪ್ರಯಾಣ ಸಾಧನೆ-ಸಾತತ್ಯಯೋಗ'ದ ಪ್ಯಾರಾಗಳನ್ನು ಹಿಂದೆಮುಂದೆ ಮಾಡಿರುವ ಲೇಖಕರು ಅವೇ ವಾಕ್ಯಗಳನ್ನು ಸ್ವಂತ ಅಭಿಪ್ರಾಯವೆಂಬಂತೆ ಬರೆದು ಬಿಟ್ಟಿದ್ದಾರೆ.

ಹಾಸನ **ಹೊ.ಸ.ಪ್ರಕಾಶ**

'ಮರಣವೇ ಮಹಾನವಮಿ' ಎನ್ನುವುದು ಘೋಷ್ಯವಾಕ್ಯ; ಶಾಸ್ತ್ರ, ಸಂಪ್ರದಾಯ, ಉಪನಿಷತ್ ಸಾಹಿತ್ಯದಲ್ಲಿ ಬಳಕೆಯಲ್ಲಿ ಬಂದಿರುವಂಥದು. 'ಅನಾಯಾಸೇನ ಮರಣಂ ವಿನಾ...'ಎಂದು ನಿತ್ಯವೂ ಕೋರುವ ಕ್ರಿಯಾಶೀಲರಿದ್ದಾರೆ. ಅಂಥವರಿಗೆ ಮತ್ತು ವಾಚಕರಿಗೆ ಈ ವಾಕ್ಯದ ವಿಚಾರದರ್ಶ ಒದಗಿಸುವುದು ನನ್ನ ಉದ್ದೇಶ. ಈ ಆಶಯಕ್ಕಾಗಿ ನನ್ನ ಅರಿವು, ಅಧ್ಯಯನ, ಹಿರಿಯರ ವ್ಯಾಖ್ಯಾನದ ವಿವರಗಳನ್ನು ವಾಸ್ತವಿಕಾಂಶಗಳಿಂದ ವಿಶ್ಲೇಷಿಸಿದ್ದೇನೆ. ವೇದವ್ಯಾಸ, ಮಹಾತ್ಮ ಬುದ್ಧನಿಂದ ಗಾಂಧೀಜಿಯವರೆಗೂ ಅನೇಕರು ಇದನ್ನು ವಿವೇಚಿಸಿದ್ದಾರೆ. ಈ ಎಲ್ಲ ವಿವರಗಳೂ ಇಲ್ಲಿ ವಿಸ್ತಾರವಾಗುತ್ತವೆ. ಇದರ ಮೂಲ, ಆಧಾರ, ನೆರವುಗಳನ್ನು ಸ್ಮರಿಸುವುದು ಇಲ್ಲಿ ಸಾಧ್ಯವೂ ಇಲ್ಲ; ಸೂಕ್ತವೂ ಆಗುವುದಿಲ್ಲ.

'ಮರಣವೇ ಮಹಾನವಮಿ'ಯ ಪ್ರವರ್ತಕ ನಾನಲ್ಲ ನಿಜ. ಕೇವಲ ಪ್ರತಿಪಾದಕ. ಇಲ್ಲಿನ ವಿಚಾರಸರಣಿಗೆ ವಿರೋಧಾಭಿಪ್ರಾಯ ಬಂದರೆ ಪ್ರಕಟಿಸುವುದು ನ್ಯಾಯ. ವಿಚಾರ, ಸಮಾಲೋಚನೆ,

ಜಿಜ್ಞಾಸೆಗೆ ಸಾದೃಶ್ಯ ಸ್ಪಷ್ಟತೆಯನ್ನು ಸಾದರಗೊಳಿಸುವುದು ಸಹಜ. ಆದರೆ ಕೃತಿಚೌರ್ಯದ ಆಪಾದನೆ ಅಸಂಬದ್ಧ.

ತದ್ದಲಸೆ(ಉ.ಕ.) - ಎಂ.ವಿ.ಶರ್ಮಾ

ಇದನ್ನು ಕೊಡಿ

ಆರೋಗ್ಯದಂಗಳದಲ್ಲಿ ಈಗಾಗಲೇ ಸಾಕಷ್ಟು ವಿಷಯಗಳನ್ನು ಕೊಟ್ಟಿದ್ದೀರಿ. ಸಾಮಾನ್ಯವಾಗಿ ಪುರುಷರಿಗೆ ತೊಂದರೆಕೊಡುವ ಪ್ರೊಸ್ಟೇಟ್ ಗ್ಲಾಂಡ್ ಕಾಯಿಲೆಯ ಬಗೆಗೆ ತಜ್ಞರಿಂದ ವಿವರವಾದ ಲೇಖನವನ್ನು ಬರೆಸಿ ಪ್ರಕಟಿಸಿದರೆ ಅನೇಕರಿಗೆ ಅನುಕೂಲವಾಗುತ್ತದೆ.

ಹೈದರಾಬಾದ್ ಪುಷ್ಪ ನಾಗೇಂದ್ರ

ಆಗಂತುಕ

ಜುಲೈ ಸಂಚಿಕೆಯಲ್ಲಿ ಪ್ರಕಟವಾದ ಪಾಂಡುರಂಗ ಪಾಳರ 'ಆಗಂತುಕ' ವಾಸ್ತವಿಕತೆಗೆ ಸಮೀಪವಾಗಿ ಹೆಣೆದ ಕಥೆ. ಕುತೂಹಲದಿಂದ ಓದಿಸಿಕೊಂಡು ಹೋಗುತ್ತದೆ. ಈ ಸುಂದರ ಕಥೆ 'ಕಸ್ತೂರಿ'ಯ ಕಂಪನ್ನು ಹೆಚ್ಚಿಸಿದೆ.

ಗಣೇಶಗುಡಿ ಸು.ಹೆ.

ದೊಡ್ಡವರಾರು ?

'ಕಸ್ತೂರಿ'ಯ ಜೂನ್ ಸಂಚಿಕೆಯಲ್ಲಿ ಇಬ್ಬರು ಸಂಗೀತಗಾರರಿಗೆ ಸಂಬಂಧಿಸಿದ ಎರಡು ವಿಭಿನ್ನ ಪ್ರಸಂಗಗಳು ಬೇರೆ ಬೇರೆ ಪುಟಗಳಲ್ಲಿ ಪ್ರಕಟವಾಗಿದೆ. ಸಂಭಾವನೆಯನ್ನು ಲೆಕ್ಕಕ್ಕೂ ತಾರದ ರಾಜಗುರುವೆಲ್ಲಿ? (ಹಿರಿಯರ ಹಾದಿ, ಪುಟ ೫೧), ತಟ್ಟೆ ತುಂಬ ಕೊಟ್ಟ ಹಣದಲ್ಲಿ ಸಾಚಾ ಎಷ್ಟು, ಖೋಟಾ ಎಷ್ಟು ಎಂದು ನೋಡಿದ ನೆರೆನಾಡಿನ ತಿರುಕ್ಕೋಡಿಕಾವಲ್ ಕೃಷ್ಣ ಅಯ್ಯರ್ ಎಲ್ಲಿ? (ಮಹಾರಾಜರು ನಕ್ಕಾಗ, ಪುಟ ೯೦.) ಬಹುಶಃ ಗುರುವೃಂದದಲ್ಲಿರುವಂತೆ ಕಲಾವೃಂದದಲ್ಲೂ ವಿತ್ತಾಪಹಾರಕರು ಹಾಗೂ ಚಿತ್ತಾಪಹಾರಕರು ಇದ್ದಾರೇನೋ.

ಬೆಂಗಳೂರು ಜಿ.ಎಸ್.ವೇಣುಗೋಪಾಲ್

(ಇಬ್ಬರೂ ದೊಡ್ಡವರೆ. ಎರಡನೆಯ ಪ್ರಸಂಗ ಸ್ವಭಾವವೈಚಿತ್ರ್ಯವನ್ನಷ್ಟೇ ಪ್ರತಿಬಿಂಬಿಸುತ್ತದೆ. -ಸಂಪಾದಕ)



ಗಂಡಸರಿಗೆ ರಕ್ಷಣೆ

ಸೌಂದರ್ಯಪ್ರಸಾಧನಗಳ (ಜೂನ್ ೯೬) ಗುಟ್ಟು ತಿಳಿಸಿ ಗಂಡಸರನ್ನು ಕಾಪಾಡಿದ್ದೀರಿ ಸ್ವಾಮಿ ಇಂತಹ ಇನ್ನಷ್ಟು ಲೇಖನಗಳು ಬಂದರೆ ಗಂಡಂದಿರ ಜೇಬಿಗೆ ಬೀಳುವ ಕತ್ತರಿ ಕಡಿಮೆಯಾದೀತು ಅಲ್ಲವೆ? ಆದರೆ ವನಿತೆಯರ ಬಹಿಷ್ಕಾರದಿಂದ ಪತ್ರಿಕೆಯ ಪ್ರಸಾರ ಕಡಿಮೆಯೂ ಆದೀತು ಎಚ್ಚರಿಕೆ

ಚಿತ್ರದುರ್ಗ - ಬೇದ್ರೆ ಎನ್.ಮಂಜುನಾಥ

ಜೂನ್ ಸಂಚಿಕೆಯ ಮುಖಪುಟದ ಮೇಲ ರೂಪದರ್ಶಿಯ ಚಿತ್ರವನ್ನು ನೋಡಿದ ನಂತರ ಇತ್ತೀಚೆಗೆ 'ಕಸ್ತೂರಿ'ಯು ಏಕೋ ಮಡಿವಂತಿಕೆಯನ್ನು ಕಳೆದುಕೊಳ್ಳುತ್ತಿದೆ ಎಂಬ ಭಾವನೆ ಬಂತು ಅದಕ್ಕೆ ಅವಕಾಶ ಮಾಡಿಕೊಡಬೇಡಿ. ನಿಜವಾಗಿಯೆಂದರೆ 'ಕಸ್ತೂರಿ'ಯೊಂದು ಪ್ರತಿಷ್ಠಿತ ಪತ್ರಿಕೆ ಪ್ರವಾಸ ಕಾಲದಲ್ಲಿ ಸಹಪ್ರಯಾಣಿಕನ ಕೈಯಲ್ಲಿ 'ಕಸ್ತೂರಿ'ಯನ್ನು ಕಂಡರೆ ಸಾಕು, ಇತರರು ಅವನತ್ತ ನೋಡುವ ದೃಷ್ಟಿಕೋನವೇ ಬದಲಾಗುತ್ತದೆ.

ಹೊನ್ನಳ್ಳಿ ನ್ಯಾಮತಬಾಶಾ ಹುಣಶಾಳ

(ಆರನೇ ಪುಟಕ್ಕೆ

ಅಂತರಂಗ

ಪುಸ್ತಕ ವಿಭಾಗ

ಸ್ಥಿರ ಶೀರ್ಷಿಕೆಗಳು

ಬೆಳಕಿಂಡಿ

ನಿಜವಾಗಿಯೆಂದರೆ ಸಂಪತ್ತನ್ನು ಹಂಚುವುದು ಅಷ್ಟು ಮಹತ್ವದ್ದಲ್ಲ. ಅದರ ಬದಲು ಸುಸಂಧಿಗಳನ್ನು ಹಂಚುವದೇ ಮಹತ್ವದ್ದು. ಸರಕಾರ ಅದರತ್ತಲೇ ಗಮನಹರಿಸಬೇಕು.

- ಆರ್ಥರ್ ವಾಂಡರ್‌ಬರ್ಗ್

ಜನ ತಪ್ಪುಮಾಡದ ಹಾಗೆ ನೋಡಿಕೊಳ್ಳುವುದು ಸರಕಾರದ ಕೆಲಸವಲ್ಲ, ಸರಕಾರ ತಪ್ಪು ಮಾಡದ ಹಾಗೆ ನೋಡಿಕೊಳ್ಳುವುದೇ ಜನರ ಕೆಲಸ.

- ಆರ್.ಎಚ್.ಜೆ.

ಗಾಳಿಸುದ್ದಿ: ಬಚ್ಚಿಟ್ಟ ಮಾಹಿತಿಯಿಂದ ಉಂಟಾದ ತರಂಗ.

- ರೋಜರ್ ಫೈರ್‌ಫಿಟ್

ರಚನಾತ್ಮಕ ಸಲಹೆಗಳನ್ನು ಕೊಡುವವರು ಮೆಚ್ಚಿಕೊಳ್ಳುವಷ್ಟು ಅವುಗಳನ್ನು ಇನ್ನಾರೂ ಮೆಚ್ಚಿಕೊಳ್ಳುವುದಿಲ್ಲ.

- ಎಚ್.ಸಿ.

ಅತಿಯಾದ ಅವಸರ ಅವಘಡಕ್ಕೆ ದಾರಿ.

- ಮೋಲಿಯರ್

ಆರೋಗ್ಯದಂಗಳ

೧೪೫

ಒಗ್ಗದಿರುವಿಕೆಯ ನೆಗಡಿ ಹಾಗೂ ದಮ್ಮು

ಡಾ. ಧನ್ಯಕುಮಾರ ಇಜಾರಿ

(ಮೂರನೇ ಪುಟದಿಂದ)

ಜೂನ್ ಸಂಚಿಕೆಯಲ್ಲಿ ಕಾಲಕ್ಕೆ ತಕ್ಕಂತೆ... 'ಹಾರಾಡುವ ಪುರೋಹಿತರ' ಬಗೆಗೆ ಓದಿ ಪುರೋಹಿತರ ಇನ್ನೊಂದು ವರ್ಗದ ಪರಿಚಯವಾಯಿತು. ಇವರು ನಗರಗಳ ನಡುವೆ ವಿಮಾನದಲ್ಲಿ ಹಾರಾಡುವವರಾದರೆ ನಮ್ಮ ದಕ್ಷಿಣ ಕನ್ನಡದಲ್ಲಿ ಹಳ್ಳಿಯ ನಾಗಬನಗಳ ನಡುವೆ ಕಾರಿನಲ್ಲಿ ಓಡಾಡುವ ವರ್ಗವೊಂದಿದೆ. ಸಣ್ಣ ರೀತಿಯ ಆಶ್ಲೇಷಾಬಲಿಯಂತಹ ಪೂಜೆಯಲ್ಲಿ ಗಂಟೆಗಿಂತ ಕಡಿಮೆ ಅವಧಿಗೆ ಭಾಗ ವಹಿಸಿದರೂ ಇವರು ತೆಗೆದುಕೊಳ್ಳುವ ಶುಲ್ಕ ಸಾವಿರಕ್ಕಿಂತ ಹೆಚ್ಚು. ನಾಗಮಂಡಲವಿದ್ದರಂತೂ ಅವರಿಗೊಂದು ನಿಧಿ ಸಿಕ್ಕಂತೆ. ಕಪ್ಪುಹಣ ಹರಿಯಲಿಕ್ಕೊಂದು ಮಾರ್ಗವಾಗಿದೆ ಇಂತಹ ಧಾರ್ಮಿಕ ಕೆಲಸಗಳು.

ಶಿರ್ವಾ ಪು.ಭ.

ಸ್ಪಷ್ಟೀಕರಣ

'ಕಸ್ತೂರಿ'ಯ ಜುಲೈ ತಿಂಗಳ ಸಂಚಿಕೆಯಲ್ಲಿ ಎಕ್ಸ್‌ರೇಗಳನ್ನು ಕುರಿತ ಒಂದು ಲೇಖನವು ಪ್ರಕಟವಾಗಿದೆಯಷ್ಟೆ. ಆ ಲೇಖನವನ್ನು ಬರೆದವರು ಡಾ. ಎಚ್.ಎಸ್. ಮೋಹನ್, ವಿಜಯಾ ಕಣ್ಣಿನ ಆಸ್ಪತ್ರೆ, ಸಾಗರ. ಇದೇ ಹೆಸರಿನ, ಆದರೆ ಲೇಖನದ ಕೆಲವು ಅಭಿಪ್ರಾಯಗಳನ್ನು ಒಪ್ಪದ ವೃತ್ತಿಬಾಂಧವರಿರುವುದರಿಂದ ಈ ಸ್ಪಷ್ಟೀಕರಣ

- ಸಂಪಾದಕ

ಮತ್ತಷ್ಟು ಮೆರಗು

ಅಸ್ಸಾಂ ರಾಜ್ಯದ ಪೂರ್ವೋತ್ತರದ ಕೊನೆಯ ನಗರ ತಿನ್‌ಸುಖಿಯಾದ ರೈಲ್ವೆ ನಿಲ್ದಾಣದ ಪುಸ್ತಕ ದಂಗಡಿಯಲ್ಲಿ 'ಕಸ್ತೂರಿ'ಯನ್ನು ನೋಡಿ ಬಹಳ ಸಂತಸವಾಯಿತು. ಕೂಡಲೆ ಅದನ್ನು ಕೊಂಡು ಓದಿದೆ. ಎರಡು ವರ್ಷಗಳ ನಂತರ ಅದನ್ನೋದಿದ ನನಗೆ ಅನಿಸಿದ್ದು ಇಷ್ಟು: ಕೆಲ ಸ್ಥಿರ ಶೀರ್ಷಿಕೆಗಳನ್ನು 'ಕಸ್ತೂರಿ'ಯು ಈಗ ಕಳೆದುಕೊಂಡಿದ್ದರೂ ಹೊಸ ಆಕರ್ಷಕ ಶೀರ್ಷಿಕೆಗಳನ್ನು ಪಡೆದು ಹೆಚ್ಚಿನ ಮೆರಗನ್ನು ಪಡೆದಿದೆ.

ತಿನ್‌ಸುಖಿಯ ಜಿ.ಅನಂತಯ್ಯ ಹಂದೆ

ಹಾರಾಡುವ ತಟ್ಟೆಗಳು

ಜುಲೈ ಸಂಚಿಕೆಯ ಪುಸ್ತಕ ವಿಭಾಗದಲ್ಲಿ ಪ್ರಕಟವಾದ 'ಫ್ಲಾಯಿಂಗ್ ಸಾಸರ್ಸ್' ಬಗೆಗೆ ಓದುತ್ತಾ ಹೋದಂತೆ ಅಚ್ಚರಿಯ ಆಳ ಹೆಚ್ಚುತ್ತಾ ಹೋಯಿತು.

ಲೋಕಾಪುರ ನಿಂಗಣ್ಣ ಈ.ಮುದ್ದಾಪುರ

ಈ ಬರಹ ಅತ್ಯಂತ ಕುತೂಹಲಕರವಾದ, ರೋಮಾಂಚಕವಾದ ನಿದರ್ಶನಗಳನ್ನು ಒಳಗೊಂಡಿದೆ. ಕಣ್ಣಿಗೆ ಕಾಣದ ಶಕ್ತಿಗಳ ಕುರಿತು ಉಂಟಾಗುವ ಇಂತಹ ಅದೆಷ್ಟೋ ಘಟನೆಗಳು, ಅನುಭವಗಳು ನಮ್ಮಲ್ಲಿ ಹಾಸುಹೊಕ್ಕಾಗಿವೆ. ಮನುಷ್ಯನ ಮನಸ್ಸು ಇದ್ದದ್ದನ್ನು ಬಿಟ್ಟು ಇರದ್ದರ ಕಡೆಗೆ ತುಡಿಯುವುದರಲ್ಲಿ ಸಾರ್ಥಕ್ಯವನ್ನು ಅನುಭವಿಸುತ್ತದೇನೋ!

ಪ್ರಸ್ತುತ, ಹಾರಾಡುವ ತಟ್ಟೆಗಳ ಕುರಿತ ಅಸಂಖ್ಯಾತ ನಿದರ್ಶನಗಳಲ್ಲಿ ದೊರಕಿರುವ ಸಾಕ್ಷಿ ಅವರಿವರ ಹೇಳಿಕೆಗಳು ಮಾತ್ರ. ಫೋಟೋ ಅಂತೂ ಇಲ್ಲವೇ ಇಲ್ಲ. ಆ ಅಗೋಚರ ವ್ಯಕ್ತಿಗಳ ಜೊತೆ ಮಾತನಾಡಿದ ಕುರುಹಾಗಿ ಒಂದು ಗುರುತೂ ಇಲ್ಲ.

ಮನುಷ್ಯನ ಮನಸ್ಸು ಊಹಾತೀತವಾದದ್ದನ್ನು ಕಾಣಲು ಇಷ್ಟಪಡುತ್ತದೆ. ಅದಕ್ಕೆ ಕೂದಲೆಳೆಯಷ್ಟು ಅವಕಾಶ ದೊರೆತರೆ ಸಾಕು, ಅದನ್ನು ಭ್ರಮಿಸುತ್ತದೆ, ತನ್ನದೇ ಕಲ್ಪನೆಗಳಲ್ಲಿ ವಿಹರಿಸುತ್ತದೆ. ಇದು ಮನಸ್ಸಿನ ಸುಪ್ತ ಬಯಕೆ. ಇಂತಹ ವಿಷಯಗಳಲ್ಲಿ ಸ್ವಯಂ ವಶೀಕರಣಕ್ಕೊಳಗಾಗುವ ಮನಸ್ಸು ಗಣಪತಿ ಹಾಲು ಕುಡಿದದ್ದನ್ನು ಕಾಣುತ್ತದೆ. ದೈವ - ಭೂತಗಳನ್ನೂ ನೋಡುತ್ತದೆ.

ಜಗತ್ತಿನಾದ್ಯಂತ ನಿರಂತರವಾಗಿ ಆಕಾಶವನ್ನು ವೀಕ್ಷಿಸುವ ಸಂಸ್ಥೆಯಿದೆ. ಪ್ರತಿನಿತ್ಯ ಗಾಳಿಯ ದಿಕ್ಕನ್ನು, ಮೋಡದ ಚಲನೆಯನ್ನು ಪರೀಕ್ಷಿಸುವ ಯಂತ್ರಗಳಿವೆ. ಆದರೆ ಬೃಹತ್ ಗಾತ್ರದ, ಅನೇಕ ಸಂಖ್ಯೆಯಲ್ಲಿರುವ ಈ ಹಾರಾಡುವ ತಟ್ಟೆಗಳು ಯಾವ ಯಂತ್ರಗಳ ದೃಷ್ಟಿಗೂ ಬೀಳುವುದಿಲ್ಲ. ಕೇವಲ ಭೂಮಿಯ ಮೇಲಿರುವ ಸಾಮಾನ್ಯ ಮನುಷ್ಯನ ಹಾಗೂ ವಿಮಾನ ಚಾಲಕರ ಕಣ್ಣಿಗೆ ಮಾತ್ರ ಬೀಳುತ್ತವೆ!

ಕಾರವಾರ ಡಾ.ಎಂ.ಆರ್.ಮಂದಾರವಲ್ಲಿ

ಕಸ್ತೂರಿ

ವರ್ಷ: ೪೦ | ಆಗಸ್ಟ್ ೧೯೯೬ | ಸಂಚಿಕೆ: ೧೨

ಯಾತ್ರಾಫಲ

ಸಂಗ್ರಹ: ಟಿ.ಎಸ್. ಲಲಿತ

ಕಾಶೀಯಾತ್ರೆಯನ್ನು ಮುಗಿಸಿ ಗಂಗಾ ಜಲವನ್ನು ಪಾತ್ರೆಗಳಲ್ಲಿ ತುಂಬಿಕೊಂಡು ಕೆಲವರು ಸಾಧುಗಳು ಹಿಂದಿರುಗುತ್ತಿದ್ದರು. ಆ ತೀರ್ಥವನ್ನು ರಾಮೇಶ್ವರದಲ್ಲಿ ಅಭಿಷೇಕ ಮಾಡಬೇಕೆಂಬುದು ಅವರ ಸಂಕಲ್ಪವಾಗಿತ್ತು. ಹಿಂದಿರುಗುವ ದಾರಿಯಲ್ಲಿ ರಾಜಸ್ತಾನದ ಮರುಭೂಮಿಯಲ್ಲಿ ಒಂಟೆಯೊಂದು ನೀರಿಲ್ಲದೆ ಪ್ರಾಣಸಂಕಟದಿಂದ ನರಳುತ್ತಿತ್ತು. ಅದನ್ನು ಕಂಡ ಸಾಧುಗಳಿಗೆ ಮರುಕವುಂಟಾದರೂ ನೀರಿನ ಅನುಕೂಲವಿಲ್ಲದೆ ಅವರೆಲ್ಲ ನಿರುಪಾಯರಾಗಿದ್ದರು. ಅವರಲ್ಲಿ ಒಬ್ಬಾತ ತನ್ನ ಕೈಯಲ್ಲಿದ್ದ ಗಂಗಾಪಾತ್ರೆಯನ್ನೇ ಒಡೆದು ಅದರಲ್ಲಿನ ನೀರನ್ನೆಲ್ಲ ಒಂಟೆಯ ಬಾಯಿಗೆ ಸುರಿದ. ರಾಮೇಶ್ವರದ ಅಭಿಷೇಕಕ್ಕಾಗಿ ಸಂಗ್ರಹಿಸಿದ ಗಂಗಾತೀರ್ಥವನ್ನು ಒಂಟೆಯ ಬಾಯಿಗೆ ಹಾಕಿದ ಬಗ್ಗೆ ಉಳಿದವರು ಆಕ್ಷೇಪಿಸಿದಾಗ, ತನಗೆ ಆ ಒಂಟೆಯಲ್ಲೇ ರಾಮೇಶ್ವರನ ದರ್ಶನವಾಯಿತೆಂದೂ ಕಷ್ಟದಲ್ಲಿ ಸಿಲುಕಿದ ಪ್ರಾಣಿಗಳಿಗೆ ಮಾಡುವ ಉಪಕಾರವೂ ಈಶ್ವರನ ಪೂಜೆಯೇ ಆಗಿರುವುದೆಂದೂ ಆ ಸಾಧುವು ಅವರಿಗೆ ಉಪದೇಶಿಸಿದ.

ನಿಜವಾಗಿಯೆಂದರೆ ಪರಮಾತ್ಮನು ನಮ್ಮಿಂದ ಬಹುದೂರದಲ್ಲಿ ಇಲ್ಲ. ನಮ್ಮ ಸೇವೆಯನ್ನು ಸ್ವೀಕರಿಸಲು ಸಿದ್ಧನಾಗಿ ನಮ್ಮ ಮುಂದೆಯೆ ಎಲ್ಲ ಜೀವಿಗಳಲ್ಲಿ ನೆಲೆಸಿದ್ದಾನೆ. ಜನತೆಯಲ್ಲಿರುವ



ಪರಮಾತ್ಮನನ್ನು ಗುರುತಿಸಿಕೊಂಡು ಲೋಕಾರಾಧನೆಯನ್ನು ಮಾಡುವುದೇ ವಿಶೇಷವಾದ ಪರಮಾತ್ಮನ ಪೂಜೆ.

('ಗೀತಾ ಸಾರೋದ್ಧಾರ'ದಿಂದ)



ಸರೋದ್

ತೊಡೆಯ ಮೇಲಿರಿಸಿಕೊಂಡ ಕೂಸನ್ನು ಬೆನ್ನು ತಟ್ಟಿದಂತೆ, ಎದೆಸವರಿದಂತೆ, ಸವರಿ ಅದು ಸುಸ್ವರದಲ್ಲಿ ಕಿಲಕಿಲನೆ ಮಾತನಾಡಿದಂತೆ, ಆ ಸುಸ್ವರದಲ್ಲಿ ತಲ್ಲೀನನಾಗಿ ತಾನು ಘನಾನಂದ ಪಡೆದಂತೆ...

-ಇದು ವೇದಿಕೆಯ ಮೇಲೆ ಸರೋದ್ ನುಡಿಸುತ್ತ ಕೂಡುವ ಅಮ್ಜದ್ ಅಲಿಯವರ ಕುರಿತು ನೀಡಬಹುದಾದ ಊಹಾ ಚಿತ್ರ.

ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕ್ಷೇತ್ರದಲ್ಲಿ ಸರೋದ್‌ಗೊಂದು ಶಾಶ್ವತ ಸ್ಥಾನವನ್ನು



ಮೃದುಗಾನ....ಮಧುರವಚನ....

ಮಾಂತ್ರಿಕನೊಂದಿಗೆ ಒಂದು ದಿನ..

- ಈಶ್ವರ ಪ್ರಸಾದ್

ತಂದಿತ್ತಿರುವ ಮಹನೀಯ ಅಮ್ಜದ್ ಅಲಿಖಾನ್ "ಇದೀಗ ಶಾಸ್ತ್ರೀಯ ಸಂಗೀತ ಲೋಕಪ್ರಿಯತೆಯ ಉತ್ತುಂಗದಲ್ಲಿದೆ" ಎಂದು ಅಭಿಪ್ರಾಯ ವ್ಯಕ್ತಪಡಿಸುವಾಗ ಅದಕ್ಕೆ ತಕ್ಕ ಪುರಾವೆಗಳನ್ನು ಪ್ರಾಂಜಲವಾಗಿಯೂ ವಿನಯಶೀಲನಾಗಿಯೂ ನೀಡಲು ಮರೆಯುವುದಿಲ್ಲ.

ತಮ್ಮ ಸಿದ್ಧಿ-ಸಾಧನೆ-ಗೌರವಗಳು 'ಪಿತಾ-ಗುರು' ಉಸ್ತಾದ್ ಹಾಫೀಜ್ ಅಲಿ ಖಾನ್‌ರ ಆಶೀರ್ವಾದಗಳಿಂದಾಗಿಯೇ ಬಂದದ್ದು ಎಂದು ನಿತ್ಯ ನೆನೆದು ತಲೆಬಾಗುವ ಅಮ್ಜದ್, ಇಂದು ತಮಗೆ ಸಂದಿರುವ ಸ್ಥಾನ ಹಾಗೂ ಯಶಕ್ಕೆ ಕಾರಣ ತಮ್ಮ ಪತ್ನಿ ಶುಭಲಕ್ಷ್ಮಿ ಎಂದು ಪ್ರಾಮಾಣಿಕವಾಗಿ ನುಡಿಯುತ್ತಾರೆ.

'ಪ್ರತಿಯೊಬ್ಬ ಯಶಸ್ವಿ ಪುರುಷನ ಹಿಂದೆಯೂ ಒಬ್ಬ ಸ್ತ್ರೀಯ ತ್ಯಾಗದ ಬಲವಿದೆ' ಎಂಬ ಮಾತು ಇಲ್ಲಿ ಅಕ್ಷರಶಃ ಸತ್ಯವೆನ್ನಿಸುತ್ತದೆ.

ಇದೀಗ ಐವತ್ತೊಂದನ್ನು ಪೂರೈಸುತ್ತಿರುವ



'ಪಿತಾ-ಗುರು'ವಿನ ಪದತಲದಲ್ಲಿ ಪತ್ನಿ-ಪುತ್ರರೊಟ್ಟಿಗೆ

ಅಮ್ಜದ್ ಅಲಿ ಕಳೆದ ಸುಮಾರು ನಾಲ್ಕು ದಶಕಗಳಿಂದಲೂ ಸರೋದ್ ಸಾಂಗತ್ಯದಲ್ಲಿರುವವರು. ಆ ತಂತಿಯ ನಿನಾದದಿಂದ ಸ್ವಲ್ಪ ಹೊತ್ತಾದರೂ ಕೇಳುಗರ ಚಿಂತೆಯನ್ನು ಮರೆಸಿ ಅವರನ್ನು ಅನನ್ಯವಾದೊಂದು ಅನುಭವವಲಯಕ್ಕೆ ತಳ್ಳಿಬಿಡುವ ಮಾಂತ್ರಿಕ ಅಮ್ಜದ್ ಅಲಿ. ಅಂತೆಯೆ 'ಸರೋದ್ ಸಮ್ರಾಟ್', 'ಸರೋದ್ ಮಾಂತ್ರಿಕ' ಎಂದೆಲ್ಲಾ ಅವರಿಗೆ ಅಭಿಮಾನಿಗಳಿಂದ ಉಪಾಧಿಗಳು. ಇನ್ನು ಸಂಗೀತದ ಕುರಿತು ಏನೇನೂ ಗೊತ್ತಿಲ್ಲದವರು ಕೂಡ ಅವರು ಸರೋದ್ ನುಡಿಸುತ್ತಿರುವುದನ್ನು ನೋಡುತ್ತಲಿದ್ದರೆ 'ಇವರ ಬೆರಳುಗಳಿಂದಲೂ ಸಂಗೀತ ಸ್ಫುರಿಸುತ್ತದೆ' ಎಂದುಕೊಳ್ಳುವುದು ಖಂಡಿತ.

ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಖ್ಯಾತಿಯ ಈ ದಿನಗಳಲ್ಲೂ ಅಮ್ಜದ್ ಇಂದಿಗೂ ರಿಯಾಜ್‌ನಿಂದ ವಿಮುಖನಾಗಿಲ್ಲ. "ನಿತ್ಯ ಅಭ್ಯಾಸ ನಮ್ಮ ಸತ್ವವನ್ನು ಹೆಚ್ಚಿಸುತ್ತದೆ"ಎಂಬ ದೃಢ ನಂಬಿಕೆ ಅವರದು. ಹೊಸ ಹೊಸ ರಾಗಗಳ ಸೃಷ್ಟಿಯಲ್ಲಂತೂ ಅಮ್ಜದ್‌ಗೆ ಎಲ್ಲಿಲ್ಲದ ಆಸಕ್ತಿ.

ಹನ್ನೆರಡನೆಯ ವಯಸ್ಸಿಗೆಯೇ ಸರೋದ್ ಅನ್ನು ಸ್ಪರ್ಶಿಸಿ ಅದರ ನಿನಾದದಿಂದ ಪುಳಕಿತಗೊಂಡ ಅಮ್ಜದ್ (ಜನನ: ೧೯೪೫, ಅಕ್ಟೋಬರ್) ಆ ತಂತುವಾದ್ಯದೊಂದಿಗೆ ಅತ್ಯಂತ ಆತ್ಮೀಯತೆಯನ್ನು ಬೆಳೆಸಿಕೊಂಡರು. ತಾನಸೇನನ ನಗರಿ ಗ್ವಾಲಿಯರಿನಲ್ಲಿ ಹುಟ್ಟಿದ ಅಮ್ಜದ್ ಅಲಿ ಸರೋದ್ ಕಲಿಯಲು ಬೇರೆಲ್ಲೂ ಹೋಗಬೇಕಾಗಲಿಲ್ಲ. ಮನೆಯೆ ಅವರಿಗೆ ಪಾಠಶಾಲೆ, ಸಂಗೀತಶಾಲೆ ಎಲ್ಲ. ಅಪ್ಪನೇ ಗುರು. ತಂದೆ ಉಸ್ತಾದ್ ಹಾಫೀಜ್ ಅಲಿ ಖಾನ್ ಸ್ವತಃ ಪ್ರತಿಷ್ಠಿತ ಸರೋದ್ ವಾದಕ. ಸೇನಿಯಾ ಘರಾಣೆಯ ಐದನೆಯ ತಲೆಮಾರಿನವರು ಅವರು. ಆ ಪರಂಪರೆಯನ್ನೀಗ ಅಮ್ಜದ್‌ರ ಮಕ್ಕಳಾದ ಅಮಾನ್ ಅಲಿ ಮತ್ತು ಅಯಾನ್ ಅಲಿ ಸಮರ್ಥವಾಗಿ ಮುಂದುವರಿಸಿಕೊಂಡು ಹೊರಟಿದ್ದಾರೆ.

ಕೆಲವು ತಿಂಗಳುಗಳ ಹಿಂದಷ್ಟೆ ಅಮ್ಜದ್ ಅಲಿಯವರಿಗೆ ಅಂತಾರಾಷ್ಟ್ರೀಯ ಗೌರವವೊಂದು ಪ್ರಾಪ್ತವಾಯಿತು. ಇದು ಪ್ರತಿಯೊಬ್ಬ ಭಾರತೀಯನೂ ಹೆಮ್ಮೆ ಪಡುವಂಥ ಸಮ್ಮಾನ. ಇಂಗ್ಲೆಂಡಿನಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಕ್ಕೆ ಸಮನಾದಂಥ ಯಾರ್ಕ್ ವಿಶ್ವವಿದ್ಯಾಲಯವೂ ಇದೆ. ಸಂಗೀತದ ಶಿಕ್ಷಣ-ದೀಕ್ಷೆಗಳಿಗೆ ಸಂಬಂಧಿಸಿದ ಹಾಗೆ ಈ ವಿಶ್ವವಿದ್ಯಾಲಯ ಜಗದ್ವಿಖ್ಯಾತ. ಯುರೋಪಿನ ಶಾಸ್ತ್ರೀಯ ಸಂಗೀತದ ಇತಿಹಾಸದಲ್ಲಿ ಮೊಟ್ಟ ಮೊದಲ ಬಾರಿಗೆ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತಕ್ಕೆ ಇಲ್ಲಿ ಅಧಿಕೃತ ಮಾನ್ಯತೆ ದೊರೆತಿದೆ.

ಯಾರ್ಕ್ ವಿಶ್ವವಿದ್ಯಾಲಯವು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತಕ್ಕಾಗಿ ಒಂದು ಪ್ರತ್ಯೇಕ ಪೀಠವನ್ನೇ ಪ್ರಾರಂಭಿಸಿ ಅದಕ್ಕೆ ಮೊಟ್ಟ ಮೊದಲ ಸಂದರ್ಶಕ ಪ್ರಾಧ್ಯಾಪಕನನ್ನಾಗಿ ಅಮ್ಜದ್ ಅಲಿಯವರನ್ನೇ ಆಯ್ದುಕೊಂಡಿತು. ಪೂರ್ತಿ ಒಂದು ತಿಂಗಳು ಅಲ್ಲಿ ಅಮ್ಜದ್ ತಮ್ಮ ಶಿಷ್ಯರಿಗೆ ಕಲಿಸಿದುದನ್ನೆಲ್ಲಾ ಚಿತ್ರೀಕರಿಸಿಕೊಂಡು ಅದನ್ನು ಮೂವತ್ತು ಗಂಟೆಗಳ ಅವಧಿಯ ಸಾಕ್ಷ್ಯಚಿತ್ರವನ್ನಾಗಿ ಪರಿವರ್ತಿಸಲಾಯಿತು. ಸರೋದ್ ಕುರಿತ ಅಧಿಕೃತ ಪುರಾವೆಯಾಗಿರುವಂತೆಯೇ, ಸರೋದ್ ಬಗೆಗೆ ವಿದೇಶೀಯರಲ್ಲಿ ಮೋಹ ಹುಟ್ಟಿಸುವ ದಿಶೆಯಲ್ಲೂ ಒಂದು ಅಪೂರ್ವ ಸಾಧನವಾಗಿಯೂ ಈ ಸಾಕ್ಷ್ಯಚಿತ್ರ ನೆರವಾಗುತ್ತಿದೆ.

ಅಮ್ಜದ್ ಇಂಗ್ಲೆಂಡಿನಲ್ಲಿರುವ ಸಮಯದಲ್ಲೇ ರಾಜಕುಮಾರ ಚಾರ್ಲ್ಸ್ ಈ ಮಹಾನ್ ಕಲಾವಿದನ ಗೌರವಾರ್ಥ ಭೋಜನ ಕೂಟವೊಂದನ್ನು ಏರ್ಪಡಿಸಿದರು. ಈ ಸಂದರ್ಭದಲ್ಲಿ ಅಮ್ಜದರೊಂದಿಗೆ ಸರೋದ್ ನುಡಿಸಿದವರು ಮಕ್ಕಳಾದ ಅಮಾನ್ ಅಲಿ ಬಂಗಶ್ ಮತ್ತು ಅಯಾನ್ ಅಲಿ ಬಂಗಶ್. ಚಾರ್ಲ್ಸ್ ಮಟ್ಟಿಗೆ ಸರೋದ್‌ವಾದನವನ್ನು ಆಲಿಸುವುದು ಮೊದಲ ಸಂದರ್ಭವಾಗಿರಬೇಕು. ಆದರೆ ಅಮ್ಜದ್‌ರ ಸರೋದ್ ಗುಂಜನದಿಂದ ರೋಮಾಂಚಗೊಳ್ಳದ ಸಭಾಭವನಗಳೇ ಜಗತ್ತಿನಲ್ಲಿಲ್ಲವೆನ್ನಬೇಕು.

"ಈಗ ಶಾಸ್ತ್ರೀಯ ಸಂಗೀತದ ಅಭಿರುಚಿ ಬೆಳೆದಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಮೂರು-ಮೂರುವರೆ ದಶಕಗಳ ಹಿಂದೆ ಶಾಸ್ತ್ರೀಯ



"ಯಶೋಲಕ್ಷ್ಮೀಯಾಗಿ ಬಂದಳು ಭಾಗ್ಯಲಕ್ಷ್ಮಿ"



ಬೆರಳುಗಳಲ್ಲೂ ಸಂಗೀತ ಸ್ಫುರಣೆ!

ಸಂಗೀತವನ್ನು ಜನ ನಶೆಯಲ್ಲಿ ಆಲಿಸುತ್ತಿದ್ದರು. ಇಂದು ತುಂಬ ಎಚ್ಚರಿಕೆಯಿಂದ ಕೇಳುವ ವರ್ಗ ಬೆಳೆದು ನಿಂತಿದೆ. ಇದು ಒಳ್ಳೆಯ ಬೆಳವಣಿಗೆ ಅಲ್ಲವೇ?" ಎಂದು ಕೇಳುವ ಅಮ್ಜದ್ ಅಲಿಯವರಿಗೆ ಕೇವಲ ಶಾಸ್ತ್ರೀಯ ಗಾಯನವಷ್ಟೇ ಅಲ್ಲ, ಶಾಸ್ತ್ರೀಯ ವಾದ್ಯ ಸಂಗೀತವೂ ಜನಕ್ಕೆ ಅಪ್ಯಾಯಮಾನವೆನ್ನಿಸುವುದರ ಕುರಿತು ಸಮಾಧಾನವಿದೆ.

"ಸರೋದ್ ಹುಚ್ಚು ಹಿಡಿಸಿಕೊಳ್ಳುತ್ತಿರುವವರು ಎಲ್ಲೆಲ್ಲೂ ಹೆಚ್ಚುತ್ತಿದ್ದಾರೆ. ಒಂದು ಕಾಲಕ್ಕೆ ಇದನ್ನೊಂದು ಕರ್ಕಶವಾದ್ಯ ಎಂದು ಕರೆದವರೂ ಇದ್ದರು. ಆದರೆ ಅದರೊಳಗಿನ ನವಿರನ್ನು ಅರಿಯುವ ಮನಸ್ಸಿನವರೀಗ ಜಾಸ್ತಿಯಾಗಿದ್ದಾರಲ್ಲ! ನೇರವಾಗಿ ಸರೋದ್‌ವಾದನ ಕಛೇರಿಗೆ ಹೋಗುವ ಅವಕಾಶದೊರೆಯುವುದು ತೀರ ಅಪರೂಪ. ಅದಕ್ಕಾಗಿ ಕ್ಯಾಸೆಟ್ಟುಗಳ ಮೊರೆ ಹೋದವರು ಕೋಟ್ಯಂತರ ಜನ. ನನ್ನ ಶಿಷ್ಯಂದಿರು ಎಡೆಬಿಡದ ಕಾರ್ಯಕ್ರಮಗಳ ದೆಸೆಯಿಂದಾಗಿ ದೇಶ-ವಿದೇಶಗಳಲ್ಲಿ ಸುತ್ತುತ್ತಿರುವುದು ಏನನ್ನು ತೋರಿಸುತ್ತದೆ? ಸರೋದ್ ಬಗೆಗಿನ ಜನರ ಪ್ರೀತಿಯನ್ನಲ್ಲವೇ?" ಅವರು ಪ್ರಶ್ನಿಸುತ್ತಲೇ, ಉತ್ತರ ವಿವರಿಸುತ್ತಲೇ ಸಾಗುತ್ತಾರೆ. ಅವರ ಮೃದು ಮಾತನ್ನಾಲಿಸುತ್ತಿದ್ದರೆ ಒಂದು ರೀತಿಯ ಮೋಡಿಗೆ ಒಳಗಾಗಿ ಬಿಡುತ್ತೀರಿ ನೀವು.

"ನನ್ನ ತಂದೆ ಹಣ ಗಳಿಸಲಿಲ್ಲ. ಜನರ ಹೃದಯಗಳನ್ನು ಗೆದ್ದರು. ಮಾನವೀಯ ಮೌಲ್ಯಗಳನ್ನು ಅರಿವ ಪಾಠವನ್ನು ಅವರು ನನಗೆ ಸರೋದ್‌ವಾದನ ಪಾಠದ ಜತೆ ಜತೆಗೆಯೇ ತಿಳಿಸಿಕೊಟ್ಟರು. ನನಗದುವೆ ಬಾಳಬುತ್ತಿ. ಸಂಗೀತಗಾರರ ಪರಿವಾರಗಳಲ್ಲಿನ ಈ ವರೆಗಿನ ಇತಿಹಾಸ 'ಬಂಡವಾಳದ ವಿನಾ ಸಂಗೀತದಲ್ಲಿ ಬೇರೇನೂ ಇಲ್ಲ' ಎಂಬುದನ್ನೇ ಸಾರಿದೆ. ಇಲ್ಲಿ

ಬಂಡವಾಳವೆಂದರೆ ವಾಣಿಜ್ಯಾರ್ಥ್ಯದ ಬಂಡವಾಳ ಅಲ್ಲ. ಕಲಾವಿದನೊಬ್ಬನ ಪ್ರತಿಭೆಯ ಶ್ರೀಮಂತಿಕೆ ಅದು. ಅದನ್ನೇ ತನ್ನ ಆಸಕ್ತ ಮಕ್ಕಳಿಗೆ ಧಾರೆಯೆರೆದು ಕೊಡುವುದರ ಮೂಲಕ ಪರಂಪರೆಯನ್ನು ಜೀವಂತವಾಗಿಡುತ್ತಾನೆ ಒಬ್ಬ ಕಲಾವಿದ. ಒಂದು ವೇಳೆ ಅಂಥ ಆಸಕ್ತಿ ಮಕ್ಕಳಲ್ಲಿಲ್ಲದೆ ಹೋದರೆ ತಕ್ಕ ಶಿಷ್ಯನನ್ನು ಅರಸತೊಡಗುತ್ತಾನೆ ಗುರುವಾದಾತ. ಒಬ್ಬ ಯೋಗ್ಯ ಗುರುವಿಗೆ ಯೋಗ್ಯ ಶಿಷ್ಯ ಸಿಕ್ಕುವುದು ಒಂದು ಯೋಗಾ ಯೋಗವೆ. ಅದೊಂದು ರೀತಿ ಬೆಟ್ಟದ ನೆಲ್ಲೀಕಾಯಿ, ಸಮುದ್ರದ ಉಪ್ಪುಗಳ ನಡುವಿನ ಸಂಬಂಧ. ಅನುಬಂಧವೆನ್ನಿ ಬೇಕಾದರೆ. ಹೀಗೆ ಬೆಟ್ಟದ ನೆಲ್ಲೀಕಾಯಿಗೆ



ಸಿತಾರ್‌ಪಟುವಿನೊಂದಿಗೆ ಸರೋದ್‌ಪಟು

ಸಮುದ್ರದ ಉಪ್ಪು ಸಿಕ್ಕುವ ಹಾಗೆ ಗುರು-ಶಿಷ್ಯರು ಒಂದುಗೂಡುತ್ತಾರೆ. ಒಂದು ಪರಂಪರೆಯನ್ನು ಮುಂದುವರಿಸಲು ಅವರಿಬ್ಬರು ಜತೆಯತ್ತ ನಡೆಸುತ್ತಾರೆ."- ಅಮ್ಜದ್ ಅಲಿ ವಿಶ್ಲೇಷಿಸುತ್ತಾರೆ.

"ನನಗೆ ಯಶೋಲಕ್ಷ್ಮಿ ಒಲಿದು ಬಂದದ್ದು ಎಲ್ಲರಿಗೂ ತಿಳಿದ ಸಂಗತಿ. ಆದರೆ ಈ ಯಶೋಲಕ್ಷ್ಮಿ ಹಾಗೇ ಒಲಿದು ಬರಲಿಲ್ಲ. ಅದಕ್ಕೆ ನನ್ನ ಅರ್ಧಾಂಗಿ ಭಾಗ್ಯಲಕ್ಷ್ಮಿಯ ಸಹನೆ-ತ್ಯಾಗಗಳ ಬಲವಾದ ಕಾರಣವಿದೆ. ಆಕೆ ನನ್ನ ಹಾಗೂ ನನ್ನ ಮಕ್ಕಳು ಅಮಾನ್-ಅಯಾನ್‌ರ ಸಾಧನೆಗೋಸ್ಕರ ತನ್ನ ಭರತನಾಟ್ಯದ ಅಭ್ಯಾಸಕ್ಕೆ ತಿಲಾಂಜಲಿಯಿತ್ತಳಲ್ಲ! ಇಲ್ಲದಿದ್ದರೆ ಇವೊತ್ತು ನನ್ನ ಭಾಗ್ಯಲಕ್ಷ್ಮಿ ಜಗತ್‌ಪ್ರಸಿದ್ಧ ನೃತ್ಯಾಂಗನೆಯಾಗಿರುತ್ತಿದ್ದಳು. ಭಾರತದಲ್ಲಿ ಮಾತ್ರ ಇದೊಂದು ವಿಶೇಷ ಅಂಶ. ಇಲ್ಲಿಯ ಮಹಿಳೆ ತನ್ನ ಮನೆ ಹಾಗೂ ಮನೆಯವರಿಗೋಸ್ಕರ ತನ್ನಲ್ಲಿರುವನ ಪ್ರತಿಭೆ-ಹವ್ಯಾಸ-ಆಸಕ್ತಿಗಳನ್ನು ಬದಿಗೆತ್ತಿಡುತ್ತಾಳೆ. ಅದಕ್ಕಾಗಿ ಒಂದಿನಿತೂ ಆಕೆ ವ್ಯಸನಪಡುವುದಿಲ್ಲ; ಕೊರಗುವುದಿಲ್ಲ; ಶಪಿಸುವುದಿಲ್ಲ. ಗಂಡ-ಮಕ್ಕಳ ಪ್ರತಿಭಾ ವಿಕಸನಕ್ಕೆ, ಪ್ರತಿಭಾ ಪ್ರಕಾಶನಕ್ಕೆ ಆಕೆ ತನ್ನ ಹೃತ್ಪೂರ್ವಕ ನೆರವು ನೀಡುತ್ತಾಳೆ. ಅನ್ಯ ದೇಶಗಳಲ್ಲೆಲ್ಲೂ ಕಾಣಲಾರದ ಸಂಗತಿಯಿದು." ಎಂದು ತುಂಬ ಗೌರವದಿಂದ ನುಡಿಯುವ ಅಮ್ಜದ್ ಅಲಿ ಇಂಥ ತ್ಯಾಗಮಯಿ ಮಹಿಳೆಯರ ನೆನಪಿಗೆಂದು ತಾವು ಸೃಜಿಸಿದ ರಾಗಕ್ಕೆ 'ರಾಗ ಶುಭಲಕ್ಷ್ಮೀ' ಎಂದು ಹೆಸರಿಟ್ಟರು.

ಉಸ್ತಾದ್ ಅಮ್ಜದ್ ಅಲಿ ಅಂಥಿಂಥ ಆಶ್ರಯ ಪಡೆಯುವ ಗೋಜಿಗೆ ಹೋಗದೆ ತಾನಸೇನರ ಶುದ್ಧ ಮತ್ತು ಪವಿತ್ರ ಸಂಗೀತ ಪರಂಪರೆಯನ್ನು ಸಜೀವವಾಗಿರಿಸಲು ನಿರಂತರ ಪ್ರಯತ್ನರತರು. ಅವರ ಅಸಂಖ್ಯಾತ ಕ್ಯಾಸೆಟ್‌ಗಳು ಮತ್ತು ರೆಕಾರ್ಡ್‌ಗಳು ಅಮ್ಜದ್ ಅಲಿಯವರ ಈ ಪರಂಪರಾ ನಿಷ್ಠತೆಗೆ ಸಾಕ್ಷಿಯಾಗಿವೆ. ಈ ಪರಂಪರಾಪ್ರಿಯತೆಗೆ ಸಂಬಂಧಿಸಿದ ಇನ್ನೊಂದು ಸಂಗತಿ ಅವರಿಗೆ ಸಂತಸ-ನೆಮ್ಮದಿಗಳನ್ನು ತಂದಿತ್ತಿದೆ. ಅದೆಂದರೆ ಗ್ವಾಲಿಯರ್‌ನಲ್ಲಿರುವ ಅವರ ಪುರಾತನ ಮನೆ ಒಂದು ಸಂಗೀತ ಸಂಗ್ರಹಾಲಯವಾಗಿ ಮಾರ್ಪಟ್ಟದ್ದು. ಈ ಸಂಗ್ರಹಾಲಯದಲ್ಲಿ ಸೇನಿಯಾ ಘರಾಣೆಯ ಐತಿಹಾಸಿಕ ಮಹತ್ವದ ವಸ್ತುಗಳಿವೆ. ಸರೋದ್‌ನ ಆವಿಷ್ಕಾರ ಮತ್ತು ವಿಕಾಸದ ಪ್ರತಿಯೊಂದು ಹಂತವನ್ನು ತೋರಿಸುವ ಪರಿಕರಗಳು ಇಲ್ಲಿರುವುದು ವಿಶೇಷ.

ಶ್ರೀಸಾಮಾನ್ಯನಿಗೆ ಸುಪ್ರಸಿದ್ಧ ಕಲಾವಿದರನ್ನು ಕಾಣುವುದು ನಿಜಕ್ಕೂ ದುಸ್ತರವೆ ಎಂಬ ಭಾವನೆ ಬೇರೂರಿರುವುದು ಸಾಮಾನ್ಯ. ಆದರೆ ಅಮ್ಜದ್ ಅಲಿಯವರ ವಿಷಯದಲ್ಲಿ ಈ ಮಾತು ಅಪ್ಪಟ ಸುಳ್ಳು ಎಂದೆನಿಸಿದೆ. ಒಮ್ಮೆ ಕಂಡ ಮುಖವನ್ನು ಅವರು ಹತ್ತು ವರ್ಷಗಳಾದರೂ ಮರೆಯುವುದಿಲ್ಲ. ಅಷ್ಟೇ ಅಲ್ಲ ಎಂದೂ ಪೊಳ್ಳು ಗಾಂಭೀರ್ಯವನ್ನು ಅಮ್ಜದ್ ಮೆರೆಯುವುದಿಲ್ಲ. "ಮುಖ ನೆನಪಿದೆ. ಎಲ್ಲಿ ಭೇಟಿಯಾಗಿದ್ದವೆಂಬುದಾಗಲಿ, ನಿಮ್ಮ ಹೆಸರೇನೆಂಬುದಾಗಲಿ ನೆನಪಿಗೆ ಬರುತ್ತಿಲ್ಲ. ದಯವಿಟ್ಟು ಹೇಳಿ. ಈ ಸಲ ಅದು ಖಂಡಿತವಾಗಿ ಮನಸ್ಸಿನಲ್ಲಿ ಗಟ್ಟಿ ಉಳಿಯುತ್ತದೆ" ಎಂದು ಅವರು ವಿನಮ್ರತೆಯಿಂದ ಹೇಳಿಬಿಡುತ್ತಾರೆ. ಮತ್ತು ಹಾಗೆ ಪುನರಪಿ ಹೇಳಿಸಿಕೊಂಡ ಹೆಸರನ್ನು ಮಾತ್ರ ಮತ್ತೆಂದಿಗೂ ಅವರು ಮರೆಯುವುದೇ ಇಲ್ಲ.

ಸಾರ್ವಜನಿಕ ಜೀವನದಲ್ಲಿ ಅವರೆಷ್ಟು ಸರಳರೋ ಅಷ್ಟೇ ಶಿಸ್ತು-ಸಂಯಮವನ್ನವರು ವೈಯಕ್ತಿಕ ಬದುಕಿನಲ್ಲೂ ಅಳವಡಿಸಿಕೊಂಡಿದ್ದಾರೆ. ದಕ್ಷಿಣ ದಿಲ್ಲಿಯ ಸಂಭ್ರಾಂತ ಬಡಾವಣೆ 'ಸಾಧನಾ ಎನ್‌ಕ್ಲೇವ್'ನಲ್ಲಿ ಅಚ್ಚ ಹಸುರಿನ ಪಾರ್ಕ್ ಎದುರಿಗೆ ಅಮ್ಜದ್‌ರ ನಿವಾಸವಿದೆ. ಈ ದುಮ್ಮಜಲಿನ ಭವ್ಯ ಬಂಗಲೆ ಹೊರನೋಟಕ್ಕೆ ಯಾವುದೊ ಉದ್ಯಮಿಯ ನಿವಾಸವೆಂಬಂತೆ, ಆತ್ಮೀಯತೆಯ ಗಂಧಗಾಳಿಯೂ ಸೋಕದ ಮನೆಯಂತೆ ಕಂಡು ಬಂದರೂ ಒಳಗೆ ಅಪಾರ ಮಾನವೀಯ ಕಾಳಜಿಯೆ ಸುಳಿದಾಡುತ್ತಿರುವುದು ಅಲ್ಲಿ ಪ್ರವೇಶಿಸಿದವರಿಗೆ ಮಾತ್ರ ಅನುಭವಕ್ಕೆ ಬರುವಂಥದು. ಅಲ್ಲಿ ಗುರು-ಶಿಷ್ಯ ಪರಂಪರೆಯ ಜ್ಯೋತಿ ನಿರಂತರ ಪ್ರಜ್ವಲಿಸುತ್ತಲೇ ಇರುತ್ತದೆ. ಪ್ರಶಾಂತವಾದ ಜ್ಯೋತಿ ಅದು.

ಶುಭ್ರ ಬಿಳಿ ಅಮೃತಶಿಲೆಯ ನೆಲ ಹಾಸಿನ ವಿಶಾಲ ಹಾಲ್‌ನ ಒಂದೆಡೆ ಗೋಡೆಯ ತುಂಬೆಲ್ಲಾ ಹಿರಿಯ ಕಲಾವಿದರ ಚಿತ್ರಗಳು. ಮತ್ತೊಂದೆಡೆ ಪಿತಾ-ಗುರು ಹಾಫೀಜ್ ಅಲಿ ಖಾನ್‌ರ ದೊಡ್ಡ ತೈಲವರ್ಣ ಚಿತ್ರ. ಅದರ ಕೆಳಗಡೆಯೇ ಅಮ್ಜದ್ ಕೂತುಕೊಳ್ಳುವುದು. ಅಲ್ಲಿ ಕೂತರೆಂದರೆ ಅಪ್ಪನೆದುರಿನ ಪುಟ್ಟ ಮಗನಂಥ ಭಯ-ಭಕ್ತಿ ಅವರ ಮೈಯಲ್ಲಿ ತುಂಬಿ ತುಳುಕಾಡತೊಡಗುತ್ತದೆ.

ಅವರೆದುರು ಕೂತ ಶಿಷ್ಯರು, ಎಡಗಡೆ ಆಸೀನರಾಗುವ ಶುಭಲಕ್ಷ್ಮಿ ಮತ್ತು ತಬಲಾಪಟುಗಳ ಸಹಿತದ ರಿಯಾಜ್ ಸುರುವಾಗುತ್ತದೆ. ಹೊರಗಿಂದ ಹೊಸ್ತಿಲು ದಾಟಿ ಒಳ ಬಂದವರಿಗೆ ಒಮ್ಮಿಂದೊಮ್ಮೆಲೆ ಮೊಗಲರ ಕಾಲಕ್ಕೆ ಮರಳಿದ ಅನುಭವವಾಗುವುದಂತೂ ದಿಟ. ಔತ್ತರೇಯ ಮತ್ತು ದಾಕ್ಷಿಣಾತ್ಯ ವಾಸ್ತುಶಿಲ್ಪಗಳ ಸಮಿಶ್ರಣದ ಮಾದರಿಯಾಗಿರುವ ಈ ಮನೆ ಸ್ವರಾಲಯ, ಸುಸ್ವರಾಲಯ, ಶ್ರುತಾಲಯವಾಗಿರುವ ಹಾಗೆಯೇ ಸುಶ್ರುತಾಲಯವೂ ಹೌದು.

ಅಲ್ಲಿಗೆ ಬರುವವರು ಪಂ.ರವಿಶಂಕರರೇ ಆಗಿರಲಿ ಅಥವಾ ಗಾನಗುಂಜನದಲ್ಲಿ ತೇಲಿ ಹೋಗುವ ಸಾಮಾನ್ಯ ಶ್ರೋತೃವೇ ಆಗಿರಲಿ ಪಡೆಯುವುದು ಒಂದೇ ರೀತಿಯ ಆತಿಥ್ಯವನ್ನು. ●

ಪಾಕಿಸ್ತಾನದ ನಗೆಹನಿಗಳು

ಎಲ್ಲಿದೆ ?

ಒಬ್ಬ ಹುಡುಗ ರೇಲ್ವೆ ಟಿಕೆಟ್ ಕೌಂಟರಿನೊಳಗೆ ಕೈಹಾಕಿ "ಬಾಬಾಜಾನ್‌ಗೆ ಒಂದು ಟಿಕೆಟ್ ಕೊಡಿ," ಅಂದ.

ಟಿಕೆಟ್ ಕೊಡುವವ ರೇಲ್ವೆ ಸ್ಟೇಷನ್ನುಗಳ ಹೆಸರುಗಳನ್ನೆಲ್ಲಾ ಸೂಚಿಯಲ್ಲಿ ಪರೀಕ್ಷಿಸಿದರೂ 'ಬಾಬಾಜಾನ್'ರೇಲ್ವೆ ನಿಲ್ದಾಣದ ಹೆಸರು ಕಾಣಿಸಲಿಲ್ಲ. ಕುಪಿತನಾಗಿ ಆತ ಕಿರುಚಿದ, "ಬಾಬಾಜಾನ್ ಎಲ್ಲಿದೆ?"

"ಸಾರ್, ಅವರು ನೀರು ಕುಡಿಯಲು ಹೋಗಿದ್ದಾರೆ" ಎಂದ ಆ ಹುಡುಗ.

ಹಳೇದೇನಾದ್ರೂ ಇದೆಯೆ ?

ಹಳೆ ಸಾಮಾನು ಕೊಳ್ಳುವವನೊಬ್ಬ ಮನೆ ಮುಂದೆ ನಿಂತು ಅಲ್ಲಿ ಕೂತಿದ್ದ ಯಜಮಾನರನ್ನು ನೋಡಿ, "ಸಾರ್, ಏನಾದರೂ ಹಳೇ ಸಾಮಾನಿದೆಯೆ?" ಅಂದ.

"ನನ್ನಾಕೆ ಮನೆಯಲಿಲ್ಲ," ಅಂದ ಮನೆಯ ಯಜಮಾನ.

ಪ್ರಾರಂಭ

ಪರ್ಯಟಕನೊಬ್ಬ ಅಮೇರಿಕಕ್ಕೆ ಹೋದಾಗ ಮದುವೆ ನಡೆಯುತ್ತಿದ್ದುದನ್ನು ನೋಡಿದ. ಆದರೆ ಸಮಾರಂಭ ಯಾವುದೆಂದು ತಿಳಿಯದೆ ಈ ಜನರು ಏನು ಮಾಡುತ್ತಿದ್ದಾರೆ?" ಎಂದು ಗೈಡನ್ನು ಕೇಳಿದ.

"ಇವರು ಡೈವೋರ್ಸ್ ಪ್ರಾರಂಭಿಸುತ್ತಿದ್ದಾರೆ," ಗೈಡ್ ಉತ್ತರಿಸಿದ.

ವಿಶ್ರಾಂತಿ

ಡಾಕ್ಟರ್: ನಿನ್ನ ಪತಿಗೆ ಸಂಪೂರ್ಣ ವಿಶ್ರಾಂತಿಯ ಅವಶ್ಯಕತೆಯಿದೆ. ಆದ್ದರಿಂದ ಈ ನಿದ್ದೆ ಗುಳಿಗೆಗಳನ್ನು ಉಪಯೋಗಿಸು.

ರೋಗಿಯ ಪತ್ನಿ: ಈ ಗುಳಿಗೆಗಳನ್ನು ಅವರಿಗೆ ಎಷ್ಟು ಹೊತ್ತಿಗೆ ಕೊಡಲಿ?

ಡಾಕ್ಟರ್: ಗುಳಿಗೆ ಅವರಿಗಲ್ಲ, ನಿನಗೆ. ಯಾಕೆಂದರೆ ಅವರಿಗೆ ವಿಶ್ರಾಂತಿಯ ಅವಶ್ಯಕತೆಯಿದೆ.

ಸಂಗ್ರಹ: **ಟೇಕಲ್ ಗೋಪಾಲಕೃಷ್ಣ**






ಮಚ್ಚೆಗಳು ಏನನ್ನು ಸೂಚಿಸುತ್ತವೆ?

ಲಕ್ಷಣ ಶಾಸ್ತ್ರ





- ಟ.ಬಿ. ಗುರುನಂಜಯ್ಯ

ತಾರೆ ರೇಖಾಳ ಎಡಮೇಲ್ತುಟಿಯ ತುದಿಗೊಂದು ತಿಲಗಾತ್ರದ ಮಚ್ಚೆಯಿದೆ. ಜಯಪ್ರದಾಳ ಮೂಗಿನ, ಮೇಲೆಯೂ, ಭಾರತಿಯ ಕೊರಳ ಬಳಿಯೂ ಮಚ್ಚೆಗಳಿವೆ. ಇವು ಈ ತಾರೆಯರ ಅಂದಕ್ಕೆ ಮೆರಗು ತಂದಿರುವಂತೆಯೆ ಅವರ ಪಾಲಿಗೆ ಅದೃಷ್ಟದ ಸಂಕೇತಗಳೂ ಆಗಿವೆಯಂತೆ. ಮಚ್ಚೆಗಳಲ್ಲೆ ಅತ್ಯಂತ ದೊಡ್ಡದಾದದ್ದನ್ನು ನೀವು ನೋಡಿಯೇ ಇದ್ದೀರಿ. ಅದೇ ಮಾಜಿ ಸೋವಿಯತ್ ಒಕ್ಕೂಟದ ಮಾಜಿ ಅಧ್ಯಕ್ಷ ಗೊರ್ಬಚೇವ್‌ರ ತಲೆಯ ಮೇಲೆ ಯಾವುದೋ ದೇಶದ ನಕ್ಷೆಯಂತೆ ಗೋಚರಿಸುವ ಮಚ್ಚೆ. ಕೆಲವರಿಗೆ ಇವು ಗುರುತಿನ ಚಿನ್ಹೆಗಳು. ಇನ್ನು ಕೆಲವರ ಪಾಲಿಗೆ ಇವು 'ಮುಖದ ಅಂದವನ್ನೇ ಕೆಡಿಸಿಬಿಟ್ಟವೆ' ಎಂಬ ಕೊರಗಿಗೆ ಕಾರಣಗಳು. ಅಂಗರಚನಾ ಶಾಸ್ತ್ರದ ಅಚ್ಚರಿಗಳಲ್ಲೊಂದಾದ ಈ ಮಚ್ಚೆಗಳ ಕುರಿತು ಎಷ್ಟೆಲ್ಲಾ ಕತೆಗಳು, ಏನೆಲ್ಲಾ ನಂಬಿಕೆಗಳು! ಲೇಖಕರು ಇಲ್ಲಿ ಜ್ಯೋತಿಷ್ಯದ ದೃಷ್ಟಿಯಿಂದ ತಮ್ಮ ಅಭಿಪ್ರಾಯಗಳನ್ನು ನೀಡಿದ್ದಾರೆ.

- ಸಂಪಾದಕ

ಪ್ರತಿಯೊಬ್ಬನ ದೇಹದ ಮೇಲೆ ಜನ್ಮಪ್ರಾರಭ್ಯ ಒಂದಲ್ಲ ಒಂದು ಕಡೆ ವಿವಿಧ ಆಕಾರದ ಮಚ್ಚೆಗಳು ಕಾಣಬರುತ್ತವೆ. ಲಾಕ್ಷಣಿಕವಾಗಿ ಈ ಮಚ್ಚೆಗಳು ನಿಮ್ಮ ನಡತೆ, ಚಾರಿತ್ರ್ಯ ಮತ್ತು ಬದುಕಿನ ದಾರಿಗಳ ಸೂಚಕವಾಗಿರುತ್ತವೆ. ಅವು ನಿಮ್ಮ ಬಗ್ಗೆ ಏನು ಸೂಚಿಸುತ್ತವೆ ಎಂಬುದನ್ನು ಓದಿ ತಿಳಿದುಕೊಳ್ಳಿ.

ಮಚ್ಚೆಗಳ ಆಕಾರಗಳು ಮತ್ತು ಅವುಗಳ ಸಂಕೇತಗಳು

ದುಂಡನೆಯ ಮಚ್ಚೆಗಳು ವ್ಯಕ್ತಿಗೆ ಶುಭದಾಯಕ. ಅವು ಒಳ್ಳೆಯ ಗುಣಗಳ ಪ್ರತೀಕ.

ಚೌಕಾಕಾರದ ಮಚ್ಚೆಗಳು ಆಸ್ತಿ ಸಂಪಾದನೆಯ ಸೂಚಕ.

ಕೋಣಾಕಾರದ ಮಚ್ಚೆಗಳು ಸಂತಸ-ದುಃಖಗಳೆರಡರ ಮಿಶ್ರಫಲಗಳ ಸೂಚಕ.

ತಿಳಿ ಬಣ್ಣಗಳ ಮಚ್ಚೆಗಳನ್ನು ಹೊಂದಿರುವವರು ಅದೃಷ್ಟವಂತರು. ಕಡುಗಪ್ಪು ಬಣ್ಣದ ಮಚ್ಚೆಗಳು ಕಷ್ಟಗಳ ಸೂಚಕ.

ಮಧು ವರ್ಣದ ಮಚ್ಚೆಗಳು ಶುಭದಾಯಕ.

ಗಂಡಸಿಗೆ ಬಲಭಾಗದಲ್ಲಿ ಕಾಣಬರುವ ಮಚ್ಚೆಗಳು ಶುಭ ತಂದರೆ ಹೆಂಗಸಿಗೆ ಎಡಭಾಗದ ಮೇಲೆ ಕಾಣಬರುವ ಮಚ್ಚೆಗಳು ಶುಭವುಂಟು ಮಾಡುತ್ತವೆ.

ಯಾವ ಭಾಗದ ಮಚ್ಚೆಯು ಏನನ್ನು ಸೂಚಿಸುತ್ತದೆ?

ಹಣೆಯ ಮಧ್ಯಭಾಗದಲ್ಲಿ ಕಾಣಬರುವ ಮಚ್ಚೆಗಳು ಗೌರವ, ಐಶ್ವರ್ಯ, ಸುಖ ಸುಸಂಸ್ಕಾರದ ಸಂಕೇತವಾಗಿರುತ್ತವೆ. ಹಣೆಯ ಬಲಭಾಗದಲ್ಲಿದ್ದರೆ ಆತ ನಾಯಕನಾಗುತ್ತಾನೆ. ಆದರೆ ಹಣೆಯ ಎಡ ಭಾಗದಲ್ಲಿದ್ದರೆ ಆತನಿಗೆ ಹಣ ಬಂದಷ್ಟೂ ಪೋಲಾಗುತ್ತದೆ. ಹಣೆಯ ಮುಂಭಾಗದಲ್ಲಿ (ಹುಬ್ಬಿನ ಮಧ್ಯೆ) ಮಚ್ಚೆ ಇದ್ದರೆ ಆ ವ್ಯಕ್ತಿ ಅತೀಂದ್ರಿಯ ಶಕ್ತಿ ಪಡೆಯಲು ಅರ್ಹನಾಗಿರುತ್ತಾನೆ.

ಕೆನ್ನೆಗಳ ಮೇಲೆ ಮಚ್ಚೆ ಕಂಡು ಬಂದರೆ ಭೋಗಾಸಕ್ತನಾಗಿದ್ದರೂ ವ್ಯಕ್ತಿ ಕರ್ತವ್ಯಶೀಲನಾಗಿರುತ್ತಾನೆ. ಇಂಥವರು ಬದುಕಿನ ವೈಪರೀತ್ಯಗಳಿಂದ ದೂರವಾಗಬಯಸಿ ಮಧ್ಯಮಾರ್ಗ ಹಿಡಿದು ಸುಖವಾಗಿರಲು ಯತ್ನಿಸುತ್ತಾರೆ. ಅಲ್ಲದೆ ಬದುಕಿನಲ್ಲಿ ಐಶ್ವರ್ಯವೇ ಮುಖ್ಯ ಎಂದು ನಂಬಿದವರಲ್ಲ. ಅದಕ್ಕಿಂತಲೂ ಮಿಗಿಲಾದುದನ್ನು ಹುಡುಕುವ ಪ್ರಯತ್ನದಲ್ಲಿರುತ್ತಾರೆ. ಇವರು ತೀರ ಬಡತನದಿಂದ ನರಳದಿದ್ದರೂ ತೀರ ಶ್ರೀಮಂತರೂ ಆಗಲಾರರರು.

ಗದ್ದದ ಮೇಲೆ ಮಚ್ಚೆಯಿರುವ ವ್ಯಕ್ತಿಗಳು

ಮತ್ಸರ ಬುದ್ಧಿಯುವರಾಗಿರುತ್ತಾರೆ. ಆದರೆ ಇವರು ಹೊಣೆಗಾರರಾಗಿಯೂ ಕಾರ್ಯನಿರ್ವಹಿಸುತ್ತಿದ್ದು ಜನಾನುರಾಗಿಯೂ ಆಗಿರುತ್ತಾರೆ. ನಿಷ್ಕಪಟ ಹಾಗೂ ಧಾರಾಳ ಮನಸ್ಸಿನವರೂ ಹೌದು. ಕಾರ್ಯ ನಿರ್ವಹಣೆಯಲ್ಲಿ ಅಚ್ಚುಕಟ್ಟು. ಪ್ರಯಾಣವೆಂದರೆ ಇವರಿಗೆ ಪಂಚಪ್ರಾಣ. ಗಲ್ಲದ ಮೇಲೆ ಮಚ್ಚೆಯಿರುವವರು ಸುಂದರರಾಗಿರುವ ಸಂಭವ ಹೆಚ್ಚು.

ಕಿವಿಗಳ ಮೇಲೆ ಮಚ್ಚೆ ಕಾಣಬರುವುದು ಬಹಳ ಅಪರೂಪ. ಒಂದು ವೇಳೆ ಕಂಡುಬಂದಲ್ಲಿ ಆ ವ್ಯಕ್ತಿಗಳಿಗೆ ಅವರ ಊಹೆಗೂ ಮೀರಿ ಐಶ್ವರ್ಯ ಪ್ರಾಪ್ತಿಯಾಗುತ್ತದೆ. ಎಡಗಿವಿಯಲ್ಲಿ ಮಚ್ಚೆಯಿದ್ದರೆ ಹುಟ್ಟುವ ಮೊದಲನೆಯ ಮಗು ಗಂಡಾಗಿರುವ ಸಂಭವ ಹೆಚ್ಚು.

ಬಲಗಣ್ಣಿನ ಹುಬ್ಬಿನ ಮೇಲೆ ಮಚ್ಚೆ ಇರುವವರು ದೃಢ ಮನಸ್ಸಿನ ವ್ಯಕ್ತಿಯಾಗಿ ಸದಾ ಚಟುವಟಿಕೆಯಿಂದಿದ್ದು, ಸಾರ್ಥಕ ಜೀವನ ನಡೆಸುತ್ತಾರೆ. ಎಡ ಹುಬ್ಬಿನ ಮೇಲೆ ಮಚ್ಚೆಯಿದ್ದರೆ ಅದು ಅಶುಭದ ಸಂಕೇತ. ನಿರಾಶೆ, ಸ್ವಾರ್ಥ, ಹಠ, ಬಡತನ ಇವುಗಳಿಂದ ಇಂಥವರು ಬಳಲುತ್ತಾರೆ.

ಮಚ್ಚೆಯು ಕಣ್ಣಿನ ಮೇಲಿದ್ದರೆ ಎಷ್ಟೇ ಪ್ರತಿಭಾವಂತ ವ್ಯಕ್ತಿಗಳಾದರೂ ಬಡತನದಿಂದ ನರಳುತ್ತಾರೆ. ಕಣ್ಣಿನ ಮೂಲೆಯ ಹೊರಭಾಗದಲ್ಲಿ ಮಚ್ಚೆಯು ಕಂಡುಬಂದಲ್ಲಿ ಅವರು ಪ್ರಾಮಾಣಿಕ ವ್ಯಕ್ತಿಗಳಾಗಿದ್ದರೂ ಬದುಕಿನಲ್ಲಿ ಪ್ರೀತಿ, ವಿಶ್ವಾಸ ಮತ್ತು ಹೊಗಳಿಕೆಗಳಿಗಾಗಿ ಸದಾ ಹಂಬಲಿಸುತ್ತಿರುತ್ತಾರೆ. ಬಲಭಾಗದಲ್ಲಿ ಮಚ್ಚೆಯು ಕಂಡುಬಂದರೆ ಅದ್ಭುತವಾದ ಗಮನ ಸೆಳೆಯುವ ಶಕ್ತಿ ಪಡೆದಿರುತ್ತಾರೆ. ಎಡಕಣ್ಣಿನ ಮೇಲೆ ಮಚ್ಚೆಯು ಕಾಣಬರುವ ವ್ಯಕ್ತಿ ಆತುರದವರೂ ತಾಳ್ಮೆಗೇಡಿಗಳೂ ಆಗಿರುತ್ತಾರೆ.

ತುಟಿಗಳ ಮೇಲೆ ಮಚ್ಚೆಯಿದ್ದರೆ ಆ ವ್ಯಕ್ತಿ ಅಸ್ಥಿರ ಹಾಗೂ ದ್ವಂದ್ವ ಭಾವನೆಗಳಿಂದ ನರಳುತ್ತಿರುತ್ತಾನೆ. ಯಾರೂ ಈ ವ್ಯಕ್ತಿಯನ್ನು ನಂಬುವುದಿಲ್ಲ. ಇಂಥ ವ್ಯಕ್ತಿಗಳು ಆಸೆಬುರುಕರಾಗಿರುತ್ತಾರೆ. ಮೇಲ್ತುಟಿಯಲ್ಲಿ ಮಚ್ಚೆ ಇರುವಂಥವರು ಸದಾ ಧನಲಾಭ ಪಡೆಯುತ್ತಲಿದ್ದರೂ ಧಾರಾಳಿಗಳೂ ಆಗಿರುತ್ತಾರೆ. ಕೆಳದುಟಿಯಲ್ಲಿ ಮಚ್ಚೆ ಕಂಡುಬಂದರೆ ಅದು ಜಿಪುಣತನದ ದ್ಯೋತಕ.

ಮಚ್ಚೆ ಬಾಯಿಯ ಬಲಭಾಗದಲ್ಲಿದ್ದರೆ ಅದು ಐಶ್ವರ್ಯ ಮತ್ತು ಸಂತೋಷಗಳ ಸಂಕೇತವಾಗಿರುತ್ತದೆ. ಅದೇ ಎಡಭಾಗದಲ್ಲಿದ್ದರೆ ಪಾಲುದಾರಿಕೆ ವ್ಯವಹಾರದಲ್ಲಿ ನಷ್ಟ ಸೂಚಕ.

ಮೂಗಿನ ಮೇಲೆ ಮಚ್ಚೆ ಇರುವಾತ ಒಳ್ಳೆ ಸ್ನೇಹಿತನಾಗಬಲ್ಲ, ಮಧುರ ವೈವಾಹಿಕ ಜೀವನ ನಡೆಸಬಲ್ಲ. ಮೂಗಿನ ಎಲುಬಿನ ಮೇಲೆ ಮಚ್ಚೆ ಕಂಡು ಬಂದಲ್ಲಿ ಆತ ಜ್ಞಾನಿಯಾಗಿರುತ್ತಾನೆ. ಮೂಗಿನ ತುದಿಯಲ್ಲಿ ಮಚ್ಚೆ ಇರುವಾತನಿಗೆ ಸುಗಂಧ ದ್ರವ್ಯಗಳೆಂದರೆ ಬಹಳ ಇಷ್ಟ.

ಮಚ್ಚೆಯು ಕುತ್ತಿಗೆಯ ಮುಂಭಾಗದಲ್ಲಿ ಕಂಡುಬಂದಲ್ಲಿ ಆತನಿಗೆ ಆಕಸ್ಮಿಕ ಧನ ಲಾಭಗಳಾಗುವುದುಂಟು. ಇವರು ಅದೃಷ್ಟಶಾಲಿಗಳು. ಕತ್ತಿನ ಹಿಂಭಾಗದಲ್ಲಿ ಮಚ್ಚೆಯಿರುವುದು ಜಲಭಯದ ಸಂಕೇತ.

ಕಂಠದ ಮೇಲೆ ಮಚ್ಚೆ ಕಂಡು ಬಂದಲ್ಲಿ ಅಂಥ ವ್ಯಕ್ತಿ ಬುದ್ಧಿವಂತಿಕೆಯಿಂದ ಐಶ್ವರ್ಯ ಸಂಪಾದನೆ ಮಾಡಬಲ್ಲರು. ಇವರು ವ್ಯವಹಾರಚತುರರು.

ಸ್ತನಗಳ ತೊಟ್ಟಿನ ಮೇಲೆ ಮಚ್ಚೆ ಇರುವ ಗಂಡಸರು ಚಂಚಲರು ಹಾಗೂ ವಿಲಾಸಪ್ರಿಯರು. ಅದೇ ಭಾಗದಲ್ಲಿ ಮಚ್ಚೆಯಿರುವ ಹೆಣ್ಣು ಸಮಾಜ ಸೇವಕಿಯಾಗಿರುತ್ತಾಳೆ.

ಬಲಭುಜದಲ್ಲಿ ಮಚ್ಚೆಯಿರುವ ಗಂಡಸು ಜ್ಞಾನಿಯೂ ವಿದ್ವಾಂಸನೂ ಆಗುತ್ತಾನೆ. ಎಡಭುಜದಲ್ಲಿ ಮಚ್ಚೆ ಕಂಡುಬಂದರೆ ಅದು ಬುದ್ಧಿಮಾಂದ್ಯದ ಸಂಕೇತ.

ಮಚ್ಚೆಯು ಗಂಡಸಿನ ತೋಳುಗಳ ಮೇಲಿದ್ದರೆ ಅಂಥವನು ಸಭ್ಯನೂ ನಿರಂತರ ದುಡಿಮೆಯಲ್ಲಿ ತೊಡಗಿರುವಂಥವನೂ ಆಗಿರುತ್ತಾನೆ. ಇವರದು ಸಂತಸಮಯ ಭೋಗಜೀವನ.

ಮೊಳಕೈ ತುದಿಯಲ್ಲಿ ಮಚ್ಚೆಯಿದ್ದರೆ ಅದು ಹೋರಾಟಭಾವದ ಸಂಕೇತ. ಇಂಥ ವ್ಯಕ್ತಿ ಬೇಗ ವಿಧುರ/ವಿಧವೆ ಆಗುವ ಸಾಧ್ಯತೆ ಹೆಚ್ಚು. ಅದೇ ಹೊತ್ತಿಗೆ ಇದು ದೀರ್ಘಾಯುಸ್ಸಿನ ಸಂಕೇತವೂ ಹೌದು. ಇವರು ಪ್ರಯಾಣಪ್ರಿಯರು. ಧನಸಂಪಾದನೆಗೆ ಅವಕಾಶ ಅಥವಾ ಶಕ್ತಿ ಇದ್ದರೂ ಆ ಬಗ್ಗೆ ಅಸಡ್ಡೆ ತೋರಿಸುತ್ತಾರೆ.

ಮುಂಗೈಯಲ್ಲಿ ಮಚ್ಚೆಯಿರುವುದು ರತ್ನಾಭರಣಗಳ ಲಭ್ಯತೆಯ ಸೂಚಕ. ಅಂಗೈಯಲ್ಲಿರುವ ಮಚ್ಚೆ ಐಶ್ವರ್ಯಪ್ರಾಪ್ತಿಯುಂಟು ಮಾಡುತ್ತದೆ.

ಹೆಬ್ಬೆರಳಲ್ಲಿ ಮಚ್ಚೆ ಕಂಡು ಬಂದರೆ ಅದು ಧನಸಂಪಾದನೆಯ ಸಂಕೇತ. ಇಂಥ ವ್ಯಕ್ತಿಗಳು ಈರ್ಷ್ಯಾಸೂಯೆಯುಳ್ಳವರು. ಮಧ್ಯದ ಬೆರಳಿನಲ್ಲಿ ಮಚ್ಚೆ ಇರುವಾತ ಸದಾ ಸಂತಸಮಯ ಬದುಕನ್ನು ನಡೆಸುತ್ತಾನೆ. ಉಂಗುರ ಬೆರಳಿನಲ್ಲಿ (ಕಿರುಬೆರಳಿನ ಪಕ್ಕದ್ದು) ಮಚ್ಚೆ ಇರುವುದು ಸಂತಾನಭಾಗ್ಯದ ಜೊತೆಗೆ ಐಶ್ವರ್ಯಪ್ರಾಪ್ತಿಯ ಲಕ್ಷಣ.

ಕಂಕುಳಲ್ಲಿ ಮಚ್ಚೆ ಇರುವವರು ಬಾಲ್ಯದಲ್ಲಿ ದುರ್ಭರ ಜೀವನ ನಡೆಸಿದರೂ ನಂತರ ಸಾಕಷ್ಟು ಐಶ್ವರ್ಯವನ್ನು ಸಂಪಾದಿಸಿ ಸುಖದ ದಿನಗಳನ್ನು ಕಾಣುತ್ತಾರೆ.

ಬೆನ್ನಿನ ಮೇಲೆ ಮಚ್ಚೆಯಿರುವುದು ಅಶುಭದ ಸಂಕೇತ. ಈ ವ್ಯಕ್ತಿಗಳು ಯಾವುದೇ ವ್ಯವಹಾರದ ಸಂಬಂಧದಲ್ಲಿ ಹೊರಟರೂ ಸಂಪೂರ್ಣ ಸಿದ್ಧತೆಯೊಂದಿಗೇ ಹೊರಡುವುದು ಉತ್ತಮ. ಇವರು ಲೈಂಗಿಕವಾಗಿ ತುಂಬ ಅತೃಪ್ತರು.

ಹೊಟ್ಟೆಯ ಮೇಲೆ ಮಚ್ಚೆ ಕಂಡುಬಂದರೆ ಅಂಥವರು ಸ್ವಾರ್ಥಿಗಳೂ ಹೊಟ್ಟೆಬಾಕರೂ ಆಗಿರುತ್ತಾರೆ. ಈ ವ್ಯಕ್ತಿಗಳು ತಮ್ಮ ಹಣಕಾಸಿನ ವಿಷಯದಲ್ಲಿ ನಿಗಾವಹಿಸುವುದು ಉತ್ತಮ.

ನಾಭಿಯ ಮೇಲಿನ ಮಚ್ಚೆ ಪುರುಷರಲ್ಲಿ ಒಂಟಿತನದ ಸಂಕೇತವಾದರೆ ಸ್ತ್ರೀಯರಲ್ಲಿ ಬಹು ಸಂತಾನದ ಕುರಿತು ಚಿಂತೆ ಹೆಚ್ಚಿಸುತ್ತದೆ. ವಕ್ಷಸ್ಥಳದ ಬಲಭಾಗದಲ್ಲಿ ಕಪ್ಪು ಮಚ್ಚೆ ಇದ್ದವರು ಮೈಗಳ್ಳರಾಗಿ ಅಸ್ಥಿರತೆಯಿಂದ ನರಳುತ್ತಾರೆ. ಕೋಪ-ತಾಪಗಳಿಂದಾಗಿ ತಮ್ಮ ಸುಖವನ್ನು ಹಾಳು ಮಾಡಿಕೊಳ್ಳುವುದರ ಸಂಗಡ ಇತರ ವ್ಯಕ್ತಿಗಳ ಸುಖವನ್ನೂ ಇವರು ಹಾಳುಗೆಡವುತ್ತಾರೆ.

ಹೆಣ್ಣಿನ ಬಲಭಾಗದಲ್ಲಿ ಮಧುವರ್ಣದ ಮಚ್ಚೆ ಕಂಡುಬಂದರೆ, ಆಕೆ ಸದಾ ಸಂಶಯಪಡುವಂಥವಳಾಗಿರುತ್ತಾಳೆ. ಯಾರನ್ನೂ ನಂಬಲಾರಳು. ಪತಿ ಆಕೆಗೆ ಅನುವರ್ತಿಯಾಗಿರುತ್ತಾರೆ. ಇಂಥವಳಿಗೆ ಐಶ್ವರ್ಯಕ್ಕೆಂದೂ ಕೊರತೆಯೇ ಇರದು. ಅದೇ ಎಡಭಾಗದಲ್ಲಿ ಮಧುವರ್ಣದ ಮಚ್ಚೆಯಿದ್ದರೆ ಆಕೆಗೆ ಗಂಡು ಸಂತಾನಯೋಗವಿದೆ ಎಂದರ್ಥ. ಎಡವಕ್ಷದಲ್ಲಿ ಕಡುಕಪ್ಪು ಬಣ್ಣದ ಮಚ್ಚೆಯಿರುವವರು ಹೆಚ್ಚೆಚ್ಚು ದುಃಖದ ಪ್ರಸಂಗಗಳನ್ನು ಎದುರಿಸಬೇಕಾಗುತ್ತದೆ. ಸಾಕಷ್ಟು ಶಿಸ್ತು, ಸಂಯಮ ಮತ್ತು ದೃಢಮನಸ್ಕಳಾಗಿ ದುಡಿದಲ್ಲಿ ಆಕೆ ಬದುಕಿನಲ್ಲಿ ಮಕ್ಕಳಿಂದ ಮಮತೆ ಮತ್ತು ಆಸರೆಗಳನ್ನು ಪಡೆಯಬಹುದು.

ಪೃಷ್ಠದ ಮೇಲೆ ಮಚ್ಚೆ ಇರುವವರದು ನಿರಾಸಕ್ತ ಜೀವನ. ಯಾವುದರಲ್ಲೂ ಆಸಕ್ತಿ ತೋರಿಸದೆ ಇವರು ಸನ್ಯಾಸಿಗಳಂತೆ ಬದುಕು ನಡೆಸುತ್ತಾರೆ. ಬಡತನದಿಂದಲೂ ಬಳಲುತ್ತಾರೆ.

ತೊಡೆ ಸಂದುಗಳಲ್ಲಿ ಮಚ್ಚೆ ಕಂಡು ಬಂದರೆ ಅಂಥವರು ಸಾಕಷ್ಟು ಐಶ್ವರ್ಯವಿದ್ದರೂ ಅನಾರೋಗ್ಯದಿಂದ ನರಳುತ್ತಿರುತ್ತಾರೆ. ತೊಡೆಯ ಎಡ ಭಾಗದಲ್ಲಿ ಮಚ್ಚೆ ಇರುವವರು ಬಲಹೀನತೆಯಲ್ಲೂ ಸಮೃದ್ಧಿಯನ್ನು ಕಾಣುತ್ತಾರೆ. ಬಲತೊಡೆಯ ಮೇಲೆ ಮಚ್ಚೆಯಿದ್ದಾತ ಸದಾ ಸಂಚಾರಿ.

ಮಚ್ಚೆಯು ಎದೆಯಲ್ಲಿದ್ದರೆ ಅವರು ಜಗಳಗಂಟರೂ ಸೋಮಾರಿಗಳೂ ಆಗಿರುತ್ತಾರೆ. ಅಸ್ಥಿರ ಮನಸ್ಕರಾಗಿ ಬದುಕಿನಲ್ಲಿ ಯಾವುದೇ ಗುರಿ ಹೊಂದದೆ ಬರಡು ಜೀವನ ನಡೆಸುತ್ತಾರೆ.

ಹೃದಯಭಾಗದ ಬಳಿ ಮಚ್ಚೆಯಿರುವವರು ಅದೃಷ್ಟಶಾಲಿ ಪ್ರೇಮಿಗಳು. ಪ್ರೇಮದ ವಿಷಯದಲ್ಲಿವರಿಗೆ ಸದಾ ಜಯ.

ಪಕ್ಕೆಲುವಿನ ಮೇಲೆ ಮಚ್ಚೆಯುಳ್ಳವರು. ಕಷ್ಟಜೀವಿಗಳಾಗಿ, ಬಹು ದಿನಗಳ ಮೇಲೆ ಏಳ್ಗೆ ಹೊಂದುತ್ತಾರೆ.

ಕೈಗಳ ಮೇಲೆ ಮಚ್ಚೆ ಕಂಡುಬಂದರೆ ಅದು ಸಮೃದ್ಧ ಬದುಕಿನ ಸಂಕೇತ. ಇಂಥವರಿಗೆ ಯಾವುದಕ್ಕೂ ಕೊರತೆ ಕಾಣಬರದು. ಬಲಗೈ ಮೇಲೆ ಮಚ್ಚೆಯಿರುವವ ಕೌಶಲದ ವ್ಯಕ್ತಿಯಾಗುತ್ತಾನೆ. ಎಡಗೈ ಮೇಲೆ ಮಚ್ಚೆ ಇರುವಾತ ಕರ್ಮಜೀವಿ ಮತ್ತು ಧನ ವಿನಿಯೋಗ ಮಾಡುವಂಥವ. ಮಣಿಕಟ್ಟಿನ ಮೇಲಿನ ಮಚ್ಚೆ ದ್ವಿಕಳತ್ರಯೋಗದ ಸಂಕೇತ. ಎಡಮಣಿಕಟ್ಟಿನಲ್ಲಿ ಮಚ್ಚೆ ಇರುವವ ಕ್ರಿಯಾತ್ಮಕ ವ್ಯಕ್ತಿಯಾದರೂ ನಾಚಿಕೆ ಸ್ವಭಾವದವನಾಗಿ ಸದಾ ವಿಶ್ರಾಂತಿ ಬಯಸುವಂಥವ. ಆದರೆ ವ್ಯವಹಾರ

ಚತುರ.

ಸೊಂಟದ ಮೇಲೆ ಮಚ್ಚೆ ಕಂಡುಬಂದಲ್ಲಿ ಅಂಥವರು ತೃಪ್ತಿಕರ, ಸಂತಸಮಯ ದಾಂಪತ್ಯ ನಡೆಸುತ್ತಾರೆ.

ಕಿಬ್ಬೊಟ್ಟೆಯ ಮೇಲಿನ ಮಚ್ಚೆ ಪುರುಷರಲ್ಲಿ ಒಂಟಿತನವನ್ನೂ ಸ್ತ್ರೀಯರಲ್ಲಿ ಬಹು ಮಕ್ಕಳ ಬಗೆಗಿನ ಚಿಂತೆಯನ್ನೂ ಹೆಚ್ಚಿಸುತ್ತದೆ.

ಕಾಲುಗಳಲ್ಲಿ ಮಚ್ಚೆ ಇದ್ದವರಿಗೆ ಪ್ರಾರಂಭದ ದಿನಗಳು ಕಷ್ಟಮಯವಾಗಿರುತ್ತವೆ. ಆದರೆ ಇವರ ಧೈರ್ಯ ಹಾಗೂ ಸಾಹಸಪ್ರವೃತ್ತಿ ಇಂಥವರನ್ನು ಮೇಲಕ್ಕೇರಿಸುತ್ತದೆ. ಬಲಗಾಲಲ್ಲಿ ಮಚ್ಚೆ ಕಂಡಲ್ಲಿ ಅದು ಆರೋಗ್ಯದ ಸಂಕೇತ. ವಾಹನಯೋಗವೂ ಇಂಥವರಿಗಿರುತ್ತದೆ.

ಮಚ್ಚೆಯು ಬಲಮಂಡಿಯಲ್ಲಿದ್ದರೆ ಅದು ಅದೃಷ್ಟದ ಸಂಕೇತ. ಯಾವುದೇ ಅಡೆತಡೆಗಳಿಲ್ಲದೆ ಇವರ ಜೀವನ ಸಾಗುತ್ತದೆ. ಎಡ ಮಂಡಿಯಲ್ಲಿರುವ ಮಚ್ಚೆ ದುಡುಕು ಪ್ರವೃತ್ತಿಯ ಲಕ್ಷಣ.

ಹಿಮ್ಮಡಿಯಲ್ಲಿ ಮಚ್ಚೆಯಿದ್ದವರು ಮಾನಸಿಕ ಹಾಗೂ ದೈಹಿಕ ಚಟುವಟಿಕೆ ಉಳ್ಳವರಾಗಿರುತ್ತಾರೆ. ಆಸ್ತಿ ಸಂಪಾದನೆ ತೃಪ್ತಿಕರವಾಗಿರುತ್ತದಾದರೂ ಇಂಥವರಿಗೆ ಶತ್ರುಗಳ ಕಾಟ ಮಾತ್ರ ತಪ್ಪಿದ್ದಲ್ಲ.

ಪಾದಗಳಲ್ಲಿ ಮಚ್ಚೆಯಿರುವುದು ಜ್ಞಾನಿಯ ಲಕ್ಷಣ. ಬಲಪಾದದಲ್ಲಿದ್ದರೆ ಸದಾ ಪ್ರಯಾಣದಲ್ಲೇ ಬದುಕು ಸಾಗುತ್ತದೆ.

ಕಾಲ್ಬೆರಳಿನ ಹಿಂಭಾಗದಲ್ಲಿ ಮಚ್ಚೆ ಇರುವುದು ಧೈರ್ಯ ಸಾಹಸಗಳ ಸಂಕೇತ. ಪಾದದ ಕೀಲುಗಳಲ್ಲಿ ಮಚ್ಚೆ ಪುರುಷರಿಗೆ ಬಡತನದ ಹಾಗೂ ಸ್ತ್ರೀಯರಿಗೆ ಹಾಸ್ಯಪ್ರವೃತ್ತಿಯ ಲಕ್ಷಣ. ಅಲ್ಲದೆ ಸ್ತ್ರೀಯರಲ್ಲಿ ಧೈರ್ಯ ಸೂಚಕವೂ ಹೌದು. ಇಂತಹ ನಾರಿಯರು ತಮ್ಮ ಪ್ರೀತಿ ಮತ್ತು ಪ್ರಾಪಂಚಿಕ ಸುಖ-ಸಂಪತ್ತುಗಳನ್ನು ತಾವು ಪ್ರೀತಿಸಿದವರ ಸಂಗಡ ಹಂಚಿಕೊಂಡು ಬದುಕುತ್ತಾರೆ. ಹೀಗಾಗಿ ಇಂಥ ಸ್ತ್ರೀಯರ ಇನಿಯನಾದವ ಪುಣ್ಯವಂತನೇ ಸರಿ.

ಯಾವುದೇ ಅಂಗಾಂಗದಲ್ಲಿ ಜೋಡಿ ಮಚ್ಚೆ ಕಂಡು ಬಂದರೆ ಅವುಗಳನ್ನು 'ಮಿಥುನ ಮಚ್ಚೆಗಳು' ಎನ್ನುತ್ತಾರೆ. ಇದು ಸಹ ದ್ವಿಕಳತ್ರಯೋಗದ ಸಂಕೇತ. ●

ಶ್ರೀಮಂತಿಕೆಯ ಗುಟ್ಟು

ಒಮ್ಮೆ ಹೈದರಾಬಾದಿನ ನಿಜಾಮರು ಹಣವನ್ನು ಎಣಿಸುತ್ತಿದ್ದಾಗ ಒಂದು ನಾಣ್ಯ ಅವರ ಕೈಯಿಂದ ಜಾರಿ ಕೆಳಗೆ ಬಿದ್ದು ಹೋಯಿತು. ಅಲ್ಲೇ ಕೂತಿದ್ದ ನಿಜಾಮರ ಮಗ ಅದನ್ನು ಎತ್ತಿಕೊಳ್ಳಲಿಲ್ಲ. ಅದನ್ನು ನೋಡುತ್ತಿದ್ದ ಒಬ್ಬರು ರಾಜಕುಮಾರನನ್ನು ಕುರಿತು, "ಅದನ್ನೇಕೆ ಎತ್ತಿಕೊಳ್ಳಲಿಲ್ಲ?" ಎಂದು ವಿಚಾರಿಸಿದಾಗ ಅದಕ್ಕೆ ಅವನು, "ನಾನು ನಿಜಾಮರ ಮಗ, ಅಂಥಾ ಜುಜುಬಿಗೆಲ್ಲಾ ಕೈಹಾಕುವುದಿಲ್ಲ" ಎಂದ ಆಗ ನಿಜಾಮರು ನೆಲದೆಡೆ ಬಗ್ಗಿ ಆ ನಾಣ್ಯವನ್ನೆತ್ತಿಕೊಂಡರು. ಪ್ರಪಂಚದಲ್ಲೇ ಅತ್ಯಂತ ಶ್ರೀಮಂತರೆಂದು ಪರಿಗಣಿಸಲ್ಪಟ್ಟಿದ್ದ ನಿಜಾಮರಿಗೆ ಒಂದು ನಾಣ್ಯದ ಬೆಲೆ ಚೆನ್ನಾಗಿ ಗೊತ್ತಿತ್ತು!

- ಡಿ. ಗುಂಡೂರಾವ್

ತೆಗೆಯಲಾಗದ ಬೀಗ

ಸ್ವೀಡನ್ನಿನ ಕ್ರಿಸ್ಟೋಫರ್ ಪೆಲ್‌ಹ್ಯಾಂ ಒಂದು ಕೀಲಿಯನ್ನು ನಿರ್ಮಿಸಿ 'ಈ ಬೀಗವನ್ನು ಕೀಲಿಯ ಕೈ ಸಹಾಯವಿಲ್ಲದೆ ತೆಗೆದರೆ ಅವನಿಗೆ ೬೦೦ ಡಾಲರ್ ನೀಡುತ್ತೇನೆ' ಎಂದು ಸವಾಲು ಎಸೆದ. ಇದೇನು ಮಹಾ ಅನ್ನುತ್ತೀರಾ?

ಅವನು ಸವಾಲೆಸೆದ ವರ್ಷ ೧೭೫೦. ಅಂದಿನಿಂದ ೨೪೬ನೇ ವರ್ಷಕ್ಕೆ ಕಾಲಿಡುತ್ತಿರುವ ಇಂದಿಗೂ ಆ ಬೀಗವನ್ನು ತೆಗೆದು ೬೦೦ ಡಾಲರ್ ಪಾರಿತೋಷಕ ಪಡೆಯುವ ಒಬ್ಬ ಕಳ್ಳನೂ ಹುಟ್ಟಿಲ್ಲ.

- ಮಧು ಎಸ್. ಹಿರೇಮನಿ

ಮತ್ತೆ ಹುಯ್ದ ಮೊದಲ ಮಳೆ


ವರ್ಷದ ಮೊದಲ ಮಳೆ! ಬ್ಯಾಂಡ್, ಬಾಜಾ-ಬಜಂತ್ರಿಯೊಡಗೂಡಿ ಬಂದಿತ್ತು ಹೊಸ ಮದುಮಗನಂತೆ. ತನಗಾಗಿ ಕಾತರಿಸಿ ನಿಂತ ಜನ ಸ್ತೋಮವನ್ನ ನೋಡಿ ನಾಚಿ, ಮುಗಿಲಿನೆಜ್ಜೆಯಲ್ಲೇ ನಿಂತು ಮುಗುಳ್ನಕ್ಕು ಮರೆಯಾಗಿಬಿಡುವ ಕಣ್ಣುಮುಚ್ಚಾಲೆಯಾಟ ನಾಲ್ಕಾರು ದಿನದಿಂದ ಸಾಗಿತ್ತು.

"ಅಮ್ಮ ಮಳೆ ಇವತ್ತು ಬಂದೇ ಬರುತ್ತೆ ಅಲ್ವಾ?" ಎನ್ನುವ ನೀತಾಳಿಗೆ ಹೋದವರ್ಷ ಮೊದಲ ಮಳೆಯಲ್ಲಿ ಅಮ್ಮನ ಜೊತೆ ತೋಯ್ದ ನೆನಪಿನ ಉಮೇದಿಯಾದರೆ, "ಅಮ್ಮ ಬೇಗ ಬರೋಕ್ ಹೇಳಮ್ಮ" ಎಂದು ಮಳೆಗೇ ಅಮ್ಮನ ಕಡೆಯಿಂದ ವಶೀಲಿ ಹಚ್ಚುವ ಪ್ರಯತ್ನದಲ್ಲಿದ್ದ ಚಿಕ್ಕ ತೇಜೂಗೆ ಮಳೆಕಂಡ ನೆನಪಿಲ್ಲವಾದರೂ ಅಕ್ಕನ ಮಾತುಗಳಲ್ಲಿ ಅಗಾಧ ನಂಬಿಕೆ. ಆಗಲೇ ಅವರಿಬ್ಬರ ಕನಸಿನ ಕಛೇರಿಯ ದ್ವಂದ್ವಮೇಳ ಪ್ರಾರಂಭವಾಗಿತ್ತು.

ಸರಿಸುಮಾರು ಒಂದು ತಿಂಗಳಿನಿಂದ ಈ ಮದುಮಗನ ನಿರೀಕ್ಷೆಯಲ್ಲಿ ವಸುಂಧರೆ ಭಗೀರಥ ತಪಸ್ಸಿಗೆ ತೊಡಗಿದ್ದಳು. ಅವಳ ಮೈಯ ಕಣಕಣವೂ ಮಳೆರಾಯನ ಮೃದುಸ್ಪರ್ಶಕ್ಕಾಗಿ ಕಾತರಿಸಿ ಕಾಯ್ದಿತ್ತು. ಛಪ್ಪರ ಜುಟ್ಟಿಗೂ ಭುಗಿಲ್ಲನೇ ಹತ್ತಿಬಿಡಬಹುದಾದ ಸುಡು ಬೆಂಕಿ ಸೂರ್ಯನದ್ದು. ಆ ತಾಪಕ್ಕೆ ಗಿಡಗಳೆಲ್ಲ ಉರಿದುರಿದು ಕರಕಾಗಿದ್ದವು. ಇದ್ದೊಂದು ಬಾವಿಗೆ ಇನ್ನಿಲ್ಲದಷ್ಟು ಕೊಡಪಾನಗಳ ಮುತ್ತಿಗೆ. ಬೆಳಗಿನ ಒಂಬತ್ತರೊಳಗೇ ಹೊಳೆತ್ತುವ

- ಶೈಲಜಾ ಗೋರನ್ಮನೆ

ಅಗತ್ಯವೂ ಇಲ್ಲದಂತೆ ಬಾವಿ ಬರಿದು. "ಇದೆಂತ ಕಲಿಗಾಲ, ನಮ್ಮೂರ್ರ ಬಾವಿನೂ ಬತ್ತೋದಾ!?" ನೀರಿನ ಬರವನ್ನೇ ಕಂಡರಿಯದ ಜನರ ಉದ್ಗಾರ! ಒಮ್ಮೊಮ್ಮೆ ನೀರು ಕೇಳಿದ ನೆಂಟರಿಗೂ ಕಣ್ಣೀರನ್ನು ತುಂಬಿ ಕಳಿಸುವಂಥ ಪರಿಸ್ಥಿತಿ. ಕಾದ ಛಾವಣಿಯಡಿ ಕುದ್ದು ಕಮರಿದ ಜನರದ್ದು, ಒಂದೇ ಒಂದು ಮಳೆ ತರಬಲ್ಲ ಸುಖನಿದ್ದೆಗಾಗಿ ಅವಿರತ ಧ್ಯಾನ. ಊರ ಮೂಲೆ ಮೂಲೆಗಳಿಂದ ತುಂಬಿ ತಂದ ನೀರು ಪರ್ಜನ್ಯದ ದಾರಿಯಲ್ಲಿ ಕೆರೆ ಸೇರುವ ಮೊದಲೇ ಇಂಗಿಹೋಗಿತ್ತು.



ದಿನವೂ ಮಳೆರಾಯನ ಸೋಗಲಾಡಿತನವನ್ನು ಕಂಡು, "ನಿನ್ನೆಯೂ ಹೀಗೇ ಆಗಿತ್ತಲ್ಲ, ಇಂದೇನು ಮಹಾ?" ಎನ್ನುತ್ತ ಬಾಗಿಲಿಕ್ಕಿ ಕೈಬೀಸಿ ಲುಟುಲುಟುನೆ ನಡೆಯುತ್ತಿದ್ದ ಮಯ್ಯ ನಿಂತ ಒಂದು ಕ್ಷಣ. ಕತ್ತೆತ್ತಿ ಮುಂಗೈ ಉದ್ದಿಕೊಂಡ. ಇದ್ದಕ್ಕಿದ್ದಂತೆ "ಹೋ ಮಳೆ ಬಂತು, ಬಂದೇಬಿಡ್ತು ಮಳೆ!" ಮುಕಾಬಲಾ ಮಾದರಿಯಲ್ಲಿ ಹೆಜ್ಜೆ ಹಾಕತೊಡಗಿದ. ತಪಸ್ಸಿಗೆ ಒಲಿದ ಭಾಗೀರಥಿ ಹರನ ಜಡೆಯಿಂದ, ಶಿವನ ಮುಡಿಯಿಂದ ಇಳಿದು ಬಂದಳು! ಕ್ಷಣಾರ್ಧದಲ್ಲಿ ಬಾಗಿಲುಗಳೆಲ್ಲ ತೆರೆದು, ಚಿಳ್ಳೆ-ಪಿಳ್ಳೆ, ಡಾಣ-ಡಬ್ಬಾಗಳೆಲ್ಲಾ ಹೇಗಿದ್ದವೋ ಹಾಗೆ ಅಂಗಳಕ್ಕಿಳಿದಿದ್ದವು.

ಅಬ್ಬ! ಅಂತೂ ಬಿತ್ತು ಮಳೆ! ಮಧ್ಯಾಹ್ನದಿಂದ ಸಂಭ್ರಮ ನಡೆಸಿ ಮುಚ್ಚಂಜೆಯಲ್ಲಿ ಹನಿಯತೊಡಗಿತು. ಬಿದ್ದ ಹನಿ ಒಂದು ಎರಡಾಗಿ, ಎರಡು ನೂರಾಗಿ, ನೂರು ನೂಪುರವಾಗಿ ಗುಡುಗಿನ ಪಕ್ಕವಾದ್ಯದಲ್ಲಿ ಗಾಳಿಯ ತಾಳಕ್ಕೆ ನರ್ತಿಸತೊಡಗಿತು.

ಹನಿ ಎಷ್ಟಾದರೇನು? ಹೇಗಿದ್ದರೇನು? ಅದು ಆಕಾಶ ರಾಜನ ಒಸಗೆಯೊಂದಿಗೆ ಮೇಲಿಂದ ಬಂದು, ಮಣ್ಣಿನ ಹೊಸಕಂಪ ಹರಡಿ ಗುಡುಗಿನ ಪುಳಕದೊಂದಿಗೆ ತಂಪಿನ ಅನುಭವವನ್ನು ಒಂದು ಕ್ಷಣ ಸಮೃದ್ಧಾಗಿಸಿದ್ದು ಸುಳ್ಳಲ್ಲ.

ಆ ಒಂದೇ ಒಂದು ಕ್ಷಣದಲ್ಲೇ ಎಷ್ಟೊಂದು ಬದಲಾವಣೆ ಮೂರು ತಿಂಗಳಿಂದ ಬಿಸಿಲನ್ನೇ ಕುಡಿದು ಬೆಂಕಿಯನ್ನೇ ತಿಂದು ಕರಕಲಾದ ಈ ಇಡೀ ಪರಿಸರದಲ್ಲಿ! ಕಪ್ಪಡರಿದ ಮುಚ್ಚಂಜೆ, ಬೀಸುವದನ್ನೇ ಮರೆತಿದ್ದ ಗಾಳಿಯ ಮೊರೆತ. ಅದೂ ತಂಪು ತಂಪಾಗಿ! ಸಳಕ್ಕನೇ ಒಳನುಗ್ಗಿದ ಮಿಂಚು ಉರಿಯುತ್ತಿದ್ದ ವಿದ್ಯುತ್ತನ್ನು ಕೈಗೆತ್ತಿಕೊಂಡು ಮರೆಯಾಯ್ತು.

ಹೊರಗೆ ಸುರಿಯುವ ಮಳೆಯಲ್ಲಿ ತೊಯ್ದು ಕುಣಿದು ಕುಪ್ಪಳಿಸಲು ಸೆರಗ್ಗಿಡಿದು ಒತ್ತಾಯಿಸುತ್ತಿದ್ದ ಮಕ್ಕಳಿಬ್ಬರೂ ರಪ್ಪೆಂದು ಬಾಗಿಲಿಕ್ಕಿ ಅತ್ತಿತ್ತ ಸುತ್ತಿಕೊಂಡು ನಿಂತವು. ಗವ್ವೆನ್ನುವ ಕತ್ತಲೆ. ದೀಪವನ್ನಾದರೂ ಹಚ್ಚೋಣವೆಂದರೆ, ಹೆಜ್ಜೆ ಎತ್ತಿಡಲೂ ಬಿಡದೆ ಸುತ್ತಿ ತೊಡರಿಕೊಂಡ ಮಕ್ಕಳನ್ನು ಕೂಡ್ರಿಸಿಕೊಂಡು ಅಲ್ಲೇ ಕುಳಿತೆ.

ಮಿಂಚಿನ ಬೆಳಕಲ್ಲಿ ಗಾಳಿಗೆ ನರ್ತಿಸುವ ತೆಂಗಿನ ಗರಿಗಳ ನರ್ತನವನ್ನ ನೋಡುತ್ತಿದ್ದಂತೆ, ಮಳೆತಂದ ಸಹಜ ವಿಸ್ಮೃತಿ ಆವರಿಸಿಬಿಟ್ಟಿತು. ಅದು, ಮೊದಲ ಮಳೆಗೆ ಭೂಮಿಯೊಳಗಿನ ಕಾವು ಮಣ್ಣಿನ ಕಂಪಿನೊಂದಿಗೆ ಹೊರಬಂದಂತೆ ಬರುವ, ಮನದೊಳಗೆ ಬೆಚ್ಚಗೆ ನಿದ್ದೆಹೋಗಿದ್ದ ನೂರೆಂಟು ಅನುಭವಗಳ ನವಿರುಕಂಪು. ವರ್ಷಾನುವರ್ಷ ಒಳಗೊಳಗೇ ಮುದುಡಿ ಕುಳಿತ ಬೀಜ, ಮೊದಲ ಹನಿಗೆ ಮೈಯರಳಿಸಿದ ಭೂದೇವಿಯ ಹಿತಮಿತಕಾವಿಗೆ ಮೆಲ್ಲಗೆ ಅರಳಿ ಹೊಸ ಸೃಷ್ಟಿಯೊಂದಕ್ಕೆ ನಾಂದಿಯಾಗುವಂತೆ ಈ ಮಳೆಯ ಮೇಳದಲ್ಲಿ ಕನಸಿನ ಕಣ್ಣು ತೆರೆದು ಬದುಕು ಹೊಸ ಕಸುವನ್ನ ತುಂಬಿಕೊಳ್ಳತೊಡಗಿತು.

ಅಂತರ್ಮನ "ಮತ್ತೆ ಮಳೆ ಹುಯ್ಯುತಿದೆ, ಎಲ್ಲ ನೆನಪಾಗುತಿದೆ" ಎಂದು ಗುನುಗತೊಡಗಿತು. ಮಲೆನಾಡ ಮಳೆಯ "ಜುರ್ರೋ" ಎಂಬ ಸದ್ದಿಗೆ ಒಗ್ಗಿದ ಕಿವಿ ತಟಪಟನೆನ್ನುತ್ತಾ ಕೆಳಗೆ ಬಾರದೇ ಮೇಲೇ ಇಂಗಿಹೋಗುವ ಹನಿಗಳ ಅಮೂರ್ತತೆಯ ಬಗ್ಗೆ ಯೋಚಿಸುತ್ತ ಯೋಚಿಸುತ್ತ ಅಂತರ್ಮುಖತೆಯ ಬಯಲು ಸಂಚಾರ ಕೈಗೊಂಡಿತು.


ಈ ಮಹರಾಯ ಬಂದು ಗಟ್ಟಿ ನೆಲೆಗೊಳ್ಳುವ

ಮೊದಲು ಮಾಡಿಕೊಳ್ಳಬೇಕಾದ ಪೂರ್ವತಯಾರಿಗಳು ಎಷ್ಟೊಂದು?! ಮಳೆ ಪ್ರಾರಂಭವಾಗುವದರೊಳಗೆ ಆಯಿತು. ಹಪ್ಪಳ-ಸಂಡಿಗೆ, ಕಾಳು-ಕಡಿ, ಉಪ್ಪಿನಕಾಯಿ ಎಲ್ಲ ಗಟ್ಟಿ ಒಣಗಿ ಭದ್ರವಾಗಿ ಅಟ್ಟ ಸೇರಬೇಕಿತ್ತು. ಅಪ್ಪನಿಗೋ ಮಳೆಗಾಲದ ಕೆಲಸ ಒಂದೇ ಎರಡೇ? ಅಡಿಕೆ ಅಟ್ಟ ತೆಗೆದು ದಬ್ಬೆಗಳು ನೆನೆಯದಂತೆ ಸೋಗೆಯಡಿ ಮುಚ್ಚಿಡುವದು, ಮಾಡಿನ ಕಸಕಡ್ಡಿ ಹೊಡೆದು ಹಂಚುಗಳನ್ನೆಲ್ಲಾ ಸರಿಪಡಿಸಿ ಅದರ ಮೇಲೆ ಜಡಿಮಳೆಯ ಬಿರುಸನ್ನ ತಡೆಯಲು ಸೋಗೆಯನ್ನೋ ಗೋಣಿಪಾಟನ್ನೋ ಹೊದ್ದಿಸುವದು, ಸಿಡಿದು ಬರುವ ಇಡಿಚಿನಿ (ಇರಚಲು) ಯಿಂದ ಬಚಾವಾಗಲು ಮನೆಯ ಸುತ್ತ ಸೋಗೆ ಇಲ್ಲ, ತೆಂಗಿನಮಡಿಲ ಜಡಿಯನ್ನ ಕಟ್ಟುವದು. ಗದ್ದೆಯ ನಾಟಿಗೆ ಬೇಕಾಗುವ ತಯಾರಿ....

ಮಕ್ಕಳಿಗೋ ಮಳೆಗಾಲ ಬರುವದೆಂದರೆ ಮಜವೋ ಮಜ. ಜಡಿ ಕಟ್ಟಿಸಿಕೊಂಡು ಪಿರಮಿಡ್ಡಿನಂತಾಗುವ ಮನೆಯಲ್ಲಿ ಹೊರಗೆ ಹುಯ್ಯುವ ಮಳೆ ನೋಡುತ್ತ ಹೊಡಚಲ ಬೆಂಕಿಯಲ್ಲಿ ಗೇರುಬೀಜ, ಹಲಸಿನಬೇಳೆ ಸುಡುವದೆಂತಹ ಮಜ! ಗದ್ದೆಯಿಂದ ಬಂದ ಗಣಪ, ಒದ್ದೆಮುದ್ದೆಯಾದ ಕಂಬಳಿಯನ್ನ ಸೊಂಯ್‌ಸೊಂಯ್ ಎಂದು ತೂಗಿ ತೂಗಿ ಕೊಡವಿ ಹೊಡಚಲ ಅಟ್ಟಕ್ಕೆ ಹರವಿ, ಸೊಂಟಕ್ಕಿದ್ದ ಅಂಡುಗೊಕ್ಕೆ ಬಿಚ್ಚಿಟ್ಟು, ತೋಯ್ದ ಮೈಯಲ್ಲಿ ಗಡಗಡ ನಡುಗುತ್ತ ಕಟಗುಡುವ ಧ್ವನಿಯಲ್ಲಿ "ಸ್ವಲೂಪ ಸರೀನಿ ಒಡ್ಯಾ" ಎನ್ನುತ್ತ ಬೆಂಕಿಯೆದುರು ಕುಳಿತು ಮೈಗೆ ಹತ್ತಿದ್ದ ಉಂಬುಳಗಳನ್ನು (ಲೀಚಸ್) ಒಂದೊಂದಾಗಿ ತೆಗೆದು ಬೆಂಕಿಗೆ ಹಾಕುತ್ತಿದ್ದರೆ, ಲೆಕ್ಕವಿಡುವ ಗಣಿತಜ್ಞರ ಸಾಲುಸಾಲು.

ಹೊಡಚಲ ಕಾವಿಗೆ ಒಣಗುತ್ತಿರುವ ಕಂಬಳಿಯ ಮುಗ್ಗಲುವಾಸನೆಯೊಂದಿಗೆ ಉಂಬುಳ ಸುಡುವ ಕಮರುವಾಸನೆಯ ಚಟಪಟ ಸದ್ದು. ಹೊರಬಿದ್ದ ಕೊಳ್ಳಿಯೊಂದನ್ನು ಮುನ್ನೂಕುತ್ತ "ಏ ಗಣಪ ಮಾಸ್ತಿಹೊಳೆ ತುಂಬಕಣ್ತಾನ?" ಎಂಬ ಪ್ರಶ್ನೆಯಲ್ಲಿರುವ ನಿರೀಕ್ಷೆಗಳು ಒಂದೆರಡಲ್ಲ?! ಹೊಳೆಯೊಂದು ತುಂಬಿಕೊಂಡುಬಿಟ್ಟರೆ ಆಚೆ ದಡದಲ್ಲಿದ್ದ ಸ್ಕೂಲಿನತ್ತ ಮುಖ ಮಾಡುವ ಹಾಗಿಲ್ಲ. ಪಾಠದ ಹಂಗಿಲ್ಲ, ಬೆತ್ತದ ಭಯವಿಲ್ಲ, ಅರಾಂ ಆಗಿ ಮಳೆಯಲ್ಲಿ ನೆನೆಯುತ್ತ ಎಲ್ಲರ ಕಣ್ತಪ್ಪಿಸಿ ತೋಟದ ಮಂಡಗಾಲಿಗೆಯಲ್ಲಿ ಹೊಂಬಾಳೆಯ ದೋಣಿಯಾಟವನ್ನಾಡಬಹುದು. ಇಲ್ಲ ಬಾಳೆಕುಂಡಿಗೆಯ ಕೆಂಪು ದೊನ್ನೆಯಲ್ಲಿ ಮಳೆಯ ನೀರನ್ನ ಹಿಡಿದರೂ ಆದೀತು. ಅದೂ ಬೇಡವೆಂದರೆ ಮಳೆಗಾಲದಲ್ಲಿ ಮಾತ್ರ ತುಂಬಿ ಬೋರೆನ್ನುವ ತೆಪ್ಪಗುಂಡಿಯ ಸರ್ವೆ ಮಾಡಬಹುದು. ಇಲ್ಲ, ಗಣಪನಿಗೆ ಮಸ್ಕ ಹೊಡೆದು ಹೊಂಚಿಕೋಣದ ಮೇಲೆ ಕುಳಿತು "ಎಮ್ಮೆ ನಿನಗೆ ಸಾಟಿಯಿಲ್ಲ" ಎಂದು ಹಾಡಬಹುದು.

ಇದೆಲ್ಲ ಬೇಡವೆಂದರೆ ಇಡೀ ಪಟಾಲಮ್ಮು ಮನೆಯ ಅಟ್ಟದಮೇಲೆ ಸೇರಿ ಮಳೆಗಾಲದಲ್ಲಿ ಜಾರಕೂಡದೆಂದು ಮನೆಯಂಗಳಕ್ಕೆ ಹುಲ್ಲುಹಾಸಿ ಅದರ ಮೇಲೆ ಹಾಕಿದ ಅಡಿಕೆದಬ್ಬೆಯ ಸಾರದ ಮೇಲೆ, ಪೇಟೆಯಿಂದ ಬರುವ ಮಲೇರಿಯಾ ಡಾಕ್ಟ್ರು ಸರ್ಕಸ್ಸು ಮಾಡುತ್ತಾ ನಡೆದುಬರುವದನ್ನು ಒಂದೊಂದು ಸ್ಟೈಲಿನಲ್ಲಿ ಅಭಿನಯಿಸಿ ತೋರಿಸಲಾ



ಗುತ್ತಿತ್ತು ಅಥವಾ ಶಾಲೆಯಲ್ಲಿ ನಾಯ್ಕಮಾಸ್ತರಿಂದ ಹೊಡೆತ ತಿಂದ ಉರಿಗೆ, ಅವರು ಕ್ಲಾಸಿನಲ್ಲಿ ಮತ್ತೆ ಮತ್ತೆ ಮೇಲೆಳೆದುಕೊಳ್ಳುವ ಪ್ಯಾಂಟಿನ ಬಗ್ಗೆ ಟೀಕಿಸಬಹುದಿತ್ತು. ಅದೂ ಬೇಸರ ಬಂದರೆ, ಅಲ್ಲೇ ಮುರಿದು ಅಟ್ಟ ಸೇರಿದ್ದ ಕಡಗೋಲನ್ನ ಹಿಡಿದು ಭೀಮ-ಕೌರವರ ಗದಾಯುದ್ಧವನ್ನು, ತಾಮ್ರದ ಹಂಡೆಯನ್ನೇ ಚಂಡೆಯಂತೆ ಬಡಿಯುತ್ತಾ, ಅಭಿನಯಿಸಬಹುದಿತ್ತು. ಇಲ್ಲದ ನೆವಹೇಳಿ ಮನೆಯಿಂದ ಹೊರಬಂದು ಓಡುವ ಅಬ್ಬರದಲ್ಲಿ ಪಾಚಿಗಟ್ಟಿದ ನೆಲದಮೇಲೆ ದೊಪ್ಪನೆ ಜಾರಿಬಿದ್ದು, ತಕ್ಷಣ ಆಚೀಚೆ ನೋಡಿ ಯಾರೂ ಗಮನಿಸಿಲ್ಲ ಎಂಬುದನ್ನು ಖಾತ್ರಿಪಡಿಸಿಕೊಂಡು ತಟ್ಟನೆದ್ದು, ಮಳೆಗಾಲದಲ್ಲಿ ಹುಟ್ಟಿಕೊಳ್ಳುವ ಒರತೆಗಳನ್ನು ಹುಡುಕಿ ನಮ್ಮದೆಂದು ಘೋಷಿಸಿಕೊಳ್ಳುವ ಸಂಭ್ರಮ....

ಇದ್ದಕ್ಕಿದ್ದಂತೆ ಪ್ರಸ್ತುತಕ್ಕೆ ಮರಳಿದ ಮನಸು ಸಿಮೆಂಟಿನ ಮೇಲ್ಛಾವಣಿಯನ್ನು ನೋಡಿ ನಿಟ್ಟುಸಿರಿಬಿಟ್ಟಿತು. ಹಿಂದೆಯೇ ಮಳೆಗಾಲಕ್ಕಾಗಿ ನನ್ನ ತಯಾರಿ ಏನೂ ಆಗಿಲ್ಲ ಎನ್ನುವದು ಜ್ಞಾಪಕಕ್ಕೆ ಬಂತು. ಮನೆ ಸಾಮಾನುಗಳನ್ನು ಖರೀದಿಸಿ ಒಣಗಿಸಿಟ್ಟುಕೊಳ್ಳದಿದ್ದರೆ ಹುಳು ಹಿಡಿದೀತು ಎಂಬ ಭಯಕ್ಕಿಂತ, ಸುರಿಯುವ ಮಳೆಯಲ್ಲಿ ಅಂಗಡಿ ಅಂಗಡಿ ತಿರುಗಿ ವಸ್ತುಗಳನ್ನು ಖರೀದಿಸಿ ಎರಡೂ ಕೈಗೂ ತಗಲಿಸಿಕೊಂಡು ಜಾರುವ ಸೀರೆ, ಹಾರುವ ಛತ್ರಿ ಎರಡನ್ನೂ ಸಮಸಮವಾಗಿ ನಿಭಾಯಿಸುತ್ತ ಆಟೋಕ್ಕಾಗಿ ಕಾಯುವ ಬವಣೆ ಯಾರಿಗೆ ಬೇಕೆಂಬ ಮುನ್ನೆಚ್ಚರ ನನ್ನದು.

ಆಟೋಗಳೋ... ಮೊದಲ ಮಳೆಯೊಂದು ಬಿತ್ತೆಂದರೆ ಸಾಕು ಮಲೆನಾಡ ಭಾರೀ ಮಳೆಯ ಇರಚಲು ಒಳನುಗ್ಗದಂತೆ ಎರಡೂಕಡೆ ತಟ್ಟಿಕಟ್ಟಿಸಿಕೊಂಡು ತಟ್ಟೀರಾಯರಾಗಿಬಿಡುತ್ತವೆ. ಅಡ್ರೆಸ್ ಹೇಳಿ ಒಳಕುಳಿತ ಗಿರಾಕಿಯದೋ ಒಳ್ಳೆ ಕತ್ತಲ ಗುಹೆಯಲ್ಲಿನ ಸಮಾಧಿಸ್ಥಿತಿಯಲ್ಲಿ ನಗರಪ್ರದಕ್ಷಿಣೆ. ಜೊತೆಗೆ ನಾದಬ್ರಹ್ಮ ಮಳೆರಾಯನ ಕರ್ಣಾನಂದಕರ ಏಕತಾನ! ಕತ್ತೊಂದೇ ಕಾಣುವ ಡ್ರೈವರ್‌ನ ಆಚೀಚೆಗಿರುವ ಬೆಳಕಿನ ಕಿಂಡಿಯಿಂದ ವರ್ಷಾಭಿಷೇಕ! ಮೈಯೆಲ್ಲ ಒದ್ದೆಮುದ್ದೆ. ಈ ಆಕಾಶ-ಭೂಮಿಯ ನಡುವಣ ಮಳೆಯ ಚಪ್ಪರದಲ್ಲಿ ಬಯಲು ಆಲಯವಾಗಿ ಆಲಯವೇ ಬಯಲಾಗಿ ಆಮೇಲಾಮೇಲೆ ಅವೆರಡೂ ಒಂದೇ ಎಂಬಂತೆ ತೋರಿಸಿಬಿಡುವ ಕೈಚಳಕ ಮಳೆಯ ಮಾಟಗಾರನದ್ದು....

ಸೆರಗಲ್ಲಿ ಬಚ್ಚಿಟ್ಟುಕೊಂಡ ತೇಜು ಕೇಳುತ್ತಿದ್ದಳು, "ಅಮ್ಮ ಅದೆಂತದ ಗುಡುಗುಡು?" ಧನವಿದ್ಯುತ್, ಋಣವಿದ್ಯುತ್ ಅಂಶಗಳ ಬಗ್ಗೆ ಪಾಠ ಹೇಳಲು ರೆಡಿಯಾಗುತ್ತಿದ್ದೆ, ಅಷ್ಟರಲ್ಲಿ "ಅದೂ ಗೊತ್ತಾಗಲ್ವೇನೆ? ಅಲ್ಲಿ ಮೇಲೆ ಮೋಡ-ಮೋಡ ಜಗಳಾಡ್ತಿವೆ, ಅದರದ್ದೇ ಸದ್ದು ಇದು" ಅಕ್ಕನ ಸಮಜಾಯಿಷಿ ತಂಗಿಗೆ!

ಹೀಗೇ ನಮಗೂ ಅಜ್ಜ ಹೇಳುತ್ತಿದ್ದ "ಮಕ್ಳಾ, ಗುಡುಗೆಂದ್ರೆ ಸಾಮಾನ್ಯದ್ದಲ್ಲ, ಯುದ್ಧಕ್ಕೆ ಬಂದ ರಾಕ್ಷಸರನ್ನೆಲ್ಲಾ ಓಡ್ಸಿದ್‌ದೇವರು ಊದುತ್ತಿರೋ ವಿಜಯದ ಕಹಳೆ ಅದು" ಎಂದು. ಅಜ್ಜನೊಂದಿಗೆ ಸಹಮತವೇ ಸಾಧ್ಯವಾಗಿರದ ಅಜ್ಜಿ ಹೂಬತ್ತಿ ಹೊಸೆಯುತ್ತಲೇ ಅಡ್ಡಬಾಯಿ ಹಾಕುತ್ತಿದ್ದಳು, "ಅದು ಹಾಗಲ್ಲ ಕಣ್ರೋ, ಅಲ್ಲಿ ದೇವತೆಗಳು ರಾಕ್ಷಸರೊಂದಿಗೆ ಇನ್ನೂ ಯುದ್ಧ ಮಾಡ್ತಿದ್ದಾರೆ, ಅದಕ್ಕೇ ಈ ಪಾಟಿ ಆರ್ಭಟ!"

ನಿಜ, ರಾತ್ರಿಯೆಲ್ಲ ಕುಳಿತು ಇಡಗುಂಜಿ ಮೇಳದ, ಅರ್ಧಚಂದ್ರಾಕೃತಿಯಲ್ಲಿ ರಚಿತವಾದ

ರಂಗಮಂಟಪದಲ್ಲಿ ಯಕ್ಷಗಾನ ನೋಡುತ್ತಿರುವಾಗ ಆ ಚಂಡೆ-ಮದ್ದಲೆಗಳ ಜುಗಲ್‌ಬಂದಿಯಲ್ಲಿ, ದೇವ ವೇಷಧಾರಿ ರಕ್ಕಸ ಪಾತ್ರಧಾರಿಯನ್ನ ಚಂಡಾಡುವಾಗಿನ ಆ ಆರ್ಭಟ, ಪಕಪಕನೇ ಹೊತ್ತಿ ಆರುವ ಲೈಟಿನ ಮಿಂಚುಬೆಳಕಲ್ಲಿ ಹೊಳೆಯುವ ಆಭರಣಗಳ ಪಳಪಳ ಹೊಳಪು, ಹಿಮ್ಮೇಳದ ಗಟ್ಟಿಗರ್ಜನೆಗಳ ನಡುವೆ ಕುಸಿದುಬೀಳುವ ಆ ದೊಡ್ಡ ಪಗಡೆಯ ರಾಕ್ಷಸ.... ಅಬ್ಬಬ್ಬ! ನಮಗೋ ಅಜ್ಜಿಯ ಸೆರಗೇ ಶ್ರೀರಕ್ಷೆ, ಆ ನಂಬಿಕೆ ಅಂತಾದ್ದು.

* * * * * * *

ಭರ್‍ರನೆ ಬಂದು ಸರ್‍ರನೆ ಸಾಗಿಬಿಡುವ ಈ ಮೊದಲ ಮಳೆಯಲ್ಲಿ ಕುಣಿದು ಕುಪ್ಪಳಿಸಲು ಯಾರಿಗೆ ಆಸೆಯಾಗದು ಹೇಳಿ, ಅದೂ ಮಕ್ಕಳಿಗೆ?

ಹಲಸಿನ ಹಣ್ಣಿನ ಕಡಬು ಉಗಿಯಲ್ಲಿ ಬೆಂದಂತೆ ಬಿಸಿಲಿಗೆ ಬೆಂದ ಮೈಯನ್ನು ಮಳೆಹನಿಗೆ ಒಡ್ಡಿ ತಂಪಾಗುವ ಅನುಭವ ವರ್ಷಕ್ಕೊಂದು ಬಾರಿ ಮಾತ್ರ ಸಿಗುವಂತಾದ್ದು.

ಮೊದಲ ಮಳೆ ಬೀಳುವಾಗ ಅದರ ಜೊತೆ ಬೀಳುವ ಆಲಿಕಲ್ಲುಗಳು! ಎಂತಹ ಆಕರ್ಷಣೆ ಅವಕ್ಕೆ! ತುಟಿಗಿಡುವ ಮೊದಲೇ ಕರಗಿ ನೀರಾಗಿಬಿಡುತ್ತಿದ್ದರೂ ಕೈಯಲ್ಲಿ ತಟ್ಟೆಹಿಡಿದು ಆರಿಸಿ ತುಂಬಿಟ್ಟುಕೊಳ್ಳುವ ಆತುರ. ಲೆಕ್ಕವಿಟ್ಟು ಗೆಲ್ಲುವ ಹುಚ್ಚು ಉಮೇದು. ಎಲ್ಲ ಮಳೆಯ ಜೊತೆಗೂ ಬಿದ್ದಿದ್ದರೆ ಇದರ ಗಂಟೇನು ಹೋಗುತ್ತಿತ್ತು ಎಂಬ ಕೋಪ. ಈ ಮಧ್ಯೆ "ತೋಟವೆಲ್ಲ ನುಚ್ಚುನೂರಾಯ್ತು ಒಂದೇ ಆಲಿ ಕಲ್ಲಿನ ಮಳೆಗೆ"ಎಂದು ಸಂಕಟಪಡುವ ಹಿರಿಯರು ಅರ್ಥವಾದಾರೇ?

ಮಳೆಯ ಸೊಬಗಲ್ಲಿ ಮೀಯುತ್ತ ಒಂದೊಂದೇ ಹನಿಯನ್ನು ಅಂಗೈಲಿ ಹಿಡಿದು ಮುಚ್ಚಿಟ್ಟು ಮುತ್ತಾಯ್ತೆಂದು ಕುಣಿದು ಎಲೆಯಮೇಲೆ ಬಿದ್ದ ಹನಿಯನ್ನೆಲ್ಲ ಮೆಲ್ಲಗೆ ಕೆನ್ನೆಗೊತ್ತಿಕೊಳ್ಳುವ ಸಂತಸ ಇನ್ನೆಲ್ಲಿ ಸಿಕ್ಕೀತು? ಮೇಲಿಂದ ಸುರಿವ ನಿರ್ಮಲವಾದ ಆ ಮಳೆ ಇಂಚು ಇಂಚಾಗಿ ಮೈಯನ್ನು ತೋಯಿಸುತ್ತಿದ್ದರೆ ಹೊಸ ಉತ್ಸಾಹ ಹೊಸ ಅನುಭವಕ್ಕಾಗಿ ತೆರೆದುಕೊಳ್ಳುವ ಮನಸು....

ಈ ಮೊದಲು ಮಳೆಗೆ ಅದೆಂತಹ ಮಾಂತ್ರಿಕ ಶಕ್ತಿಯಿದೆ! ಇಂದು ಇಲ್ಲಿ ಹುಯ್ಯುವ ಮಳೆ ಅಂದಿನ ನೆನಪ ಕದ ತಟ್ಟುತ್ತಿರುವದೆಂತು ಸೊಗಸು! ಆ ಎಲ್ಲ ಪುಟ್ಟ ಪುಟ್ಟ ಅನುಭವಗಳ ಜೀವ ಶಕ್ತಿಯಿಂದ ತಾನೇ ಇಂದು ಇಲ್ಲಿ ಕುಳಿತೂ ಸ್ಪಂದಿಸಲು ಸಾಧ್ಯವಾದದ್ದು!

ಇಂದು ಮಧು ಬೆಳ್ಳಿತೆರೆಯಲ್ಲಿ "ಚಿನ್ನ ಚಿನ್ನ ಆಸೆ" ಎಂದು ನರ್ತಿಸುತ್ತಿದ್ದರೆ ಅದನ್ನ ನಮ್ಮದೇ ಎಂಬಂತೆ ಸ್ವೀಕರಿಸಿ ಹೆಜ್ಜೆ ಹಾಕುತ್ತೇವೆ, ಏಕೆ? ಅಲ್ಲಿ ಏನನ್ನ ಕಂಡು ಮಾರುಹೋಗುತ್ತೇವೆ? ಯೋಚಿಸಿದರೆ ಬಹುಶಃ ನಮ್ಮ ಅರಿವಿಗೆ ಬರುವ ಉತ್ತರ, ಏನೆಲ್ಲವನ್ನೂ ಮೀರಿದ, ಒಂದು ಕಾಲದಲ್ಲಿ ನಮ್ಮನ್ನ ತೀವ್ರವಾಗಿ ತೊಡಗಿಸಿಕೊಂಡ, ನಮ್ಮದೇ ಆಪ್ತ ಅನುಭವಕ್ಕಾಗಿ ಎಂದಲ್ಲವಾ?

ಹೆಜ್ಜೆ ಇಟ್ಟ ಹಾಗೆಲ್ಲ ತೆರೆದುಕೊಂಬ ಬದುಕಿಗೆ ಮಳೆಯೊಂದು ಜೀವ ಜಲ. ಈ ಮಳೆ, ಒಳಗೆಲ್ಲೋ ಪ್ರವಹಿಸುತ್ತಿರುವ ಮಧುರ ಅನುಭವದ ಸುಪ್ತಗಾಮಿನಿಯನ್ನ ಜೋರುಧಾರೆಯ ಪ್ರವಾಹದಲ್ಲಿ ಮೇಲೆತ್ತಿ ದಡಕ್ಕೆ ತಂದುಬಿಡುತ್ತದೆ. ಇಂದಿನ ಎಲ್ಲ ಭಾವಗಳೂ ಆ ನೆನಪಿನ ನಿಧಿಯಿಂದಾಗಿ ಇನ್ನಷ್ಟು ಶ್ರೀಮಂತಿಕೆಯನ್ನ ಪಡೆಯುತ್ತವೆ. ಮರಳಿ ಮರಳಿ ಬರುವ ಯುಗಾದಿ 'ಸಕಲ ಜೀವಜಾತಕೂ ಹೊಸ ಹರ್ಷವನ್ನು ತಂದು ನಮ್ಮನಷ್ಟೇ ಮರೆತಿದೆ' ಎಂದು ಬೇಂದ್ರೆ ನೊಂದು ನುಡಿದಿದ್ದರು. ಆದರೆ ಹೊಸ ಮಳೆ ಹಾಗಲ್ಲ, ಅದು ಮನುಕುಲದ ಯುಗಾದಿ ಹೊಸ ಜಗದ ಬುನಾದಿ.

ಬೋಸ್ ಹೇಳಿದ ಸ್ವಾತಂತ್ರ್ಯದ ಬೆಲೆ

ನಿಮಗೆ ಅರಳಿದ ಗುಲಾಬಿಯ ವಾಸನೆ ಬೇಕೆ? ಹಾಗಿದ್ದರೆ ಮುಳ್ಳಿನ ನೋವನ್ನು ಸಹಿಸಿ. ನೀವು ಅರುಣೋದಯದ ಸೊಬಗನ್ನು ಸವಿಯಬೇಕೆ? ಹಾಗಿದ್ದರೆ ರಾತ್ರಿಯ ಕತ್ತಲೆಯನ್ನು ಸಹಿಸಿ. ನಿಮಗೆ ಸ್ವಾತಂತ್ರ್ಯ ಬೇಕೆ? ಬಿಡುಗಡೆ ಬೇಕೆ? ಹಾಗಿದ್ದರೆ ಅದಕ್ಕೆ ಬೇಕಾದ ತ್ಯಾಗ, ಬಲಿದಾನಗಳಿಗೆ ಸಿದ್ಧರಾಗಿ.

ಸಂಗ್ರಹ: ಡಿ. ಗುಂಡೂರಾವ್

ವೀರಗಾಥೆ

ಭಗವತೀ ಚರಣರ ಅಪೂರ್ವ ಬಲಿದಾನ

-ಕೆ.ಎಸ್. ಕುಲಕರ್ಣಿ

೧೯೨೯ರ ಏಪ್ರಿಲ್ ತಿಂಗಳ ಎಂಟನೆಯ ತಾರೀಖು ದೆಹಲಿಯ ಶಾಸನ ಸಭೆಯಲ್ಲಿ ಬ್ರಿಟಿಶ್ ಸರಕಾರ ಸಾರ್ವಜನಿಕ ಸುರಕ್ಷಾ ಮಸೂದೆ ಮತ್ತು ಔದ್ಯೋಗಿಕ ತಂಟೆ ಮಸೂದೆಗಳನ್ನು ವ್ಹಾಯಿಸ್‌ರಾಯರ ಪ್ರತಿಷೇಧಾಧಿಕಾರವನ್ನು ಉಪಯೋಗಿಸಿ ಪಾಸು ಮಾಡಿಕೊಳ್ಳುವ 'ಹುನ್ನಾರ' ನಡೆಸಿತ್ತು. ಶಾಸನ ಸಭೆಯ ಕಾರ್ಯಕಲಾಪಗಳು ಪ್ರಾರಂಭವಾದವು. ಸರಕಾರದ ವತಿಯಿಂದ ಜಾನ್ ಶ್ಯುಷ್ಟರ್ ಎಂಬ ಅಧಿಕಾರಿ ಮಸೂದೆಗಳಿಗೆ ವ್ಹಾಯಿಸರಾಯರ ಅನುಮತಿಯನ್ನು ಸಾರಲೆಂದು ಎದ್ದುನಿಂತ. ಅಷ್ಟರಲ್ಲಿ ಪ್ರೇಕ್ಷಕರ ಗ್ಯಾಲರಿಯಿಂದ ಬಾಂಬೊಂದು ಹಾರಿ ಬಂದು ಅವನ ಹಿಂಬದಿಗಿದ್ದ ಪೀಠೋಪಕರಣಗಳಿಗೆ ಬಡಿದು ಸ್ಫೋಟಗೊಂಡಿತು. ಬಾಂಬ್ ಎಸೆದವರು 'ಹಿಂದುಸ್ತಾನಿ ಸಮಾಜವಾದಿ ಪ್ರಜಾತಂತ್ರ ಸೇನೆ'ಯ ಸದಸ್ಯರಾಗಿದ್ದ ಭಗತ್‌ಸಿಂಗ್ ಮತ್ತು ಬಟುಕೇಶ್ವರದತ್ತರೆಂಬ ಯುವಕರು. ಮುಖದ ಮೇಲೆ ಕುಡಿಮೀಸೆಯೊಡನೆ ಈ ಯುವಕರು ಬಾಂಬ್ ಎಸೆದು ಓಡಿ ಹೋಗಲಿಲ್ಲ. ಬದಲು ಧೈರ್ಯದಿಂದ ಎದೆಯುಬ್ಬಿಸಿ ನಿಂತಿದ್ದರು. ಸ್ಥಳದಲ್ಲಿಯೇ ಅವರು ಸ್ವಇಚ್ಛೆಯಿಂದ ಬಂಧನಕ್ಕೆ ಒಳಗಾದರು. ಇತ್ತ ಕ್ರಾಂತಿಕಾರೀ ದಳದ ಇತರ ಸದಸ್ಯರು ಅವರನ್ನು ಸೆರೆಮನೆಯಿಂದ ಪಾರುಮಾಡಲು ಯೋಜನೆಯನ್ನು ಹೆಣೆಯತೊಡಗಿದರು. ಇವರಲ್ಲಿ ಚಂದ್ರಶೇಖರ ಆಜಾದ್, ಭಗವತೀಚರಣ ವೋಹರಾ, ಸುಖದೇವರಾಜ್, ಯಶಪಾಲ್ ಪ್ರಮುಖರು. ಈ ಯೋಜನೆಯಲ್ಲಿ ಕಾರ್ಯರತರಾಗಿರುವಾಗ ಸಂಭವಿಸಿದ ಭೀಕರ ಅಪಘಾತದಲ್ಲಿ ಭಗವತೀಚರಣ ವೋಹರಾರು ದಾರುಣರೀತಿಯಿಂದ ಬಲಿಯಾದರು. ಅವರ ಈ ಅಪೂರ್ವ ಬಲಿದಾನದ ಸನ್ನಿವೇಶದಲ್ಲಿ ಪ್ರತ್ಯಕ್ಷಭಾಗಿಗಳಾಗಿದ್ದ ಹಿಂದಿಯ ಲೇಖಕರೂ ಸ್ವತಃ ಕ್ರಾಂತಿಕಾರಿಗಳೂ ಆದ ಯಶಪಾಲರು ಆ ಘಟನೆಯನ್ನು ಚಿತ್ತವೇಧಕವಾಗಿ ವಿವರಿಸಿದ್ದಾರೆ.

ಅಂದು, ೧೯೨೯ರ ಮೇ ತಿಂಗಳು ೭ನೆಯ ತಾರೀಖು ಚಂದ್ರಶೇಖರ ಆಜಾದರು ಭಗವತೀಭಾಯಿ ಮತ್ತು ನನ್ನನ್ನು ಎದುರಿಗೆ ಕೂಡಿಸಿಕೊಂಡು ವಿಚಾರವಿನಿಮಯ ನಡೆಸಿದರು. ಭಗತ್‌ಸಿಂಗ್ ಮತ್ತು ಬಟುಕೇಶ್ವರದತ್ತರನ್ನು ಸೆರೆಮನೆಯಿಂದ ಪಾರು ಮಾಡಲು ಭಗತ್‌ಸಿಂಗನ ಸಲಹೆಯನ್ನು ಅನುಸರಿಸಬೇಕೋ ಅಥವಾ ನನ್ನ ಸಲಹೆಯನ್ನು ಅನುಸರಿಸಬೇಕೋ ಎಂಬುದೇ ನಮ್ಮ ಚರ್ಚೆಯ ವಿಷಯವಾಗಿತ್ತು. ಅವರಿಬ್ಬರನ್ನೂ ಸೆಂಟ್ರಲ್ ಜೈಲಿನಲ್ಲಿಡಲಾಗಿತ್ತು. ಅಲ್ಲಿಂದ ಅವರನ್ನು ಬೋರ್ಸ್ಟಲ್ ಜೈಲಿಗೆ ಕರೆದುಕೊಂಡು ಹೋಗುವವರಿದ್ದರು. ಹೀಗೆ ಅವರನ್ನು ಕರೆದುಕೊಂಡು ಬರುವಾಗ ಸೆಂಟ್ರಲ್ ಜೈಲಿನ ಬಾಗಿಲಲ್ಲಿಯೇ ಆಕ್ರಮಣ ಮಾಡಬೇಕೆಂದು ನನ್ನ ವಿಚಾರವಾಗಿತ್ತು. ಆದರೆ ಬೋರ್ಸ್ಟಲ್ ಜೈಲಿನಿಂದ ಮರಳಿ ಬರುವಾಗ ತಮ್ಮನ್ನು ಲಾರಿಗೆ ಹತ್ತಿಸುತ್ತಿರುವಾಗ ಆಕ್ರಮಣಮಾಡುವದು ಒಳ್ಳೆಯದು ಎಂದು ಭಗತ್‌ಸಿಂಗ್ ಗುಪ್ತಸಂದೇಶ ಕಳಿಸಿದ್ದ. ಈ ಎರಡೂ ಸಲಹೆಗಳ

ಸಾಧಕಬಾಧಕಗಳನ್ನು ತೂಗಿ ನೋಡಿದ ಆಜಾದ್, 'ನೋಡು ಯಶಪಾಲ್, ಭಗತ್‌ಸಿಂಗನ ಸೂಚನೆಯನ್ನು ಅನುಸರಿಸುವದೇ ಒಳ್ಳೆಯದು. ಯಾಕೆಂದರೆ ಸೆಂಟ್ರಲ್ ಜೇಲಿನ ಬಳಿ ಭದ್ರತಾ ವ್ಯವಸ್ಥೆ ಬಹಳ ಬಿಗಿಯಾಗಿದೆ. ಅಲ್ಲದೆ "ಶೇರ್ ದಿಲ್ ಪೋಲೀಸ್" ಎಂಬ ವಿಶೇಷ ಪಡೆಯನ್ನೂ ಅಲ್ಲಿ ನಿಯಮಿಸಲಾಗಿದೆ. ಆದ್ದರಿಂದ ಸೆಂಟ್ರಲ್ ಜೈಲಿನ ಬಳಿ ಆಕ್ರಮಣ ಮಾಡಿ ಸಫಲರಾಗುವುದು ದುಷ್ಕರ. ಬೋರ್ಸ್ಟಲ್ ಜೈಲಿನ ಬಳಿ ಬರೀ ಆರುಜನ ಸಶಸ್ತ್ರ ಪೊಲೀಸರು ಕಾವಲಿರುತ್ತಾರೆ. ಆದ್ದರಿಂದ ಬೋರ್ಸ್ಟಲ್ ಜೈಲಿನಿಂದ ಮರಳಿ ಬರುತ್ತಿರುವ ವೇಳೆಯಲ್ಲಿ ಆಕ್ರಮಣ ಮಾಡುವುದು

> **ಭಗವತೀ ಭಾಯಿ ಅಂಗಾತ ಬಿದ್ದಿದ್ದರು. ಅವರ ಒಂದು ಹಸ್ತ ಪೂರ್ತಿ ಹಾರಿಹೋಗಿತ್ತು. ಇನ್ನೊಂದು ಹಸ್ತಕ್ಕೆ ಬೆರಳುಗಳೇ ಇರಲಿಲ್ಲ! ಕರುಳು ಹೊರಗೆ ಬಿದ್ದಿತ್ತು...**

ಸುಲಭವೆನಿಸುವದಿಲ್ಲವೇ?' ಎಂದರು. ಭಗವತೀಭಾಯಿಗೂ ಈ ಸಲಹೆ ಸರಿ ಎನಿಸಿತು. ಕೊನೆಗೆ ಬೋರ್ಸ್ಟಲ್ ಜೈಲಿನಿಂದ ಅವರನ್ನು ಸೆಂಟ್ರಲ್ ಜೈಲಿಗೆ ಮರಳಿತರುವಾಗ ಆಕ್ರಮಣ ಮಾಡುವುದೆಂದು ತೀರ್ಮಾನಿಸಿದೆವು.

ಮರುದಿನ ಮೇ ತಿಂಗಳ ೨೮ನೆಯ ದಿನಾಂಕದಂದು ಮುಂಜಾನೆ ಭಗವತಿಭಾಯೀ ನನ್ನನ್ನು ಕರೆದು, "ಯಶಪಾಲ, ಬಾಂಬಿನಲ್ಲಿ ಸ್ಫೋಟಕ ತುಂಬಿ ಸಿದ್ಧಪಡಿಸಿಡು, ಅವುಗಳನ್ನು ಪ್ರಯೋಗಿಸಿ ನೋಡೋಣ;" ಎಂದರು.

ಈ ಮೊದಲೇ ರೋಹಟಕ್‌ದಲ್ಲಿ ನಾನು ತಯಾರಿಸಿದ ಸ್ಫೋಟಕ ದ್ರವ್ಯದಲ್ಲಿ ಸ್ವಲ್ಪ ಉಳಿದಿತ್ತು. ಆಜಾದಭೈಯ್ಯಾ ಕಾನಪುರದಲ್ಲಿ ಬಾಂಬಿಗೆ ಅವಶ್ಯವಿದ್ದ ಲೋಹದ ಟೊಳ್ಳುಕವಚಗಳನ್ನು ಮಾಡಿಸಿ ಮೂರು ಕವಚಗಳನ್ನು ತೆಗೆದುಕೊಂಡು ಬಂದಿದ್ದರು. ನಾನು ಅವುಗಳನ್ನು ಪರಿಶೀಲಿಸಿದೆ. ಅವುಗಳಲ್ಲಿ ಒಂದರ ಟ್ರಿಗರ್ ಸಡಿಲಾಗಿತ್ತು. ಸ್ಕ್ರೂಡ್ರಾಯವರ್‌ದಿಂದ ಅದನ್ನು ಬಿಗಿ ಮಾಡಬೇಕೆಂದು ಯೋಚಿಸಿದೆ. ಈ ಸಂಗತಿಯನ್ನು ಅಲ್ಲಿದ್ದವರೆಲ್ಲರಿಗೂ ತಿಳಿಸಿದರು.

ಬಾಂಬುಗಳ ಕವಚಗಳ ಒಳಭಾಗವನ್ನು ಸ್ವಚ್ಛಗೊಳಿಸಿ ರೋಗನ್ ಎಂಬ ದ್ರವ್ಯವನ್ನು ಲೇಪಿಸುತ್ತಾರೆ. ಹೀಗೆ ರೋಗನ್ ಬಳಿದು ಅದನ್ನು ಸಾವಕಾಶವಾಗಿ ಒಣಗಿಸುತ್ತಾರೆ. ಇಲ್ಲದಿದ್ದರೆ ಲೋಹದ ಕವಚ ಮತ್ತು ಬಾಂಬಿನ ರಾಸಾಯನಿಕ ದ್ರವ್ಯವಾದ ಪಿಕ್ರಿಕ್ ಆಸಿಡ್ ಇವುಗಳಲ್ಲಿ ರಾಸಾಯನಿಕ ಕ್ರಿಯೆ ನಡೆದು ಶಾಖ ಬಿಡುಗಡೆಗೊಳ್ಳುತ್ತದೆ. ಶಾಖದ ಪ್ರಮಾಣ ಒಂದು ಮಿತಿಗಿಂತ ಹೆಚ್ಚಾದರೆ ಬಾಂಬು ತನ್ನಷ್ಟಕ್ಕೆ ತಾನೆ ಸ್ಫೋಟಗೊಳ್ಳುವ ಸಂಭವವಿರುತ್ತದೆ.

ನಾನು ಆ ಮೂರೂ ಕವಚಗಳಿಗೆ ಜಪಾನೀ ಬ್ಲ್ಯಾಕ್ ರೋಗನ್ನನ್ನು ಬಳಿದು ಒಣಗಲು ಇರಿಸಿದೆ. ಏಳೆಂಟು ಗಂಟೆಗಳಾದ ಮೇಲೆ ಪಿಕ್ರಿಕ್ ಆಸಿಡ್ ತುಂಬುವುದಕ್ಕಿಂತ ಮೊದಲು ಟ್ರಿಗರ್‌ಅನ್ನು ಸ್ಕ್ರೂ ಡ್ರೈವರ್‌ದಿಂದ ಬಿಗಿಗೊಳಿಸಿದರಾಯಿತೆಂದು ಹಾಗೆಯೇ ಇಟ್ಟು ಹೊರಗೆ ಹೋದೆ. ಮಾಡಿ ಮುಗಿಸಲು ಇನ್ನೂ ಎಷ್ಟೋ ಕೆಲಸಗಳಿದ್ದವು. ಬೋರ್ಸ್ಟಲ್ ಜೈಲಿನ ನೆರೆಯಲ್ಲಿ ನಾವೆಲ್ಲ ಅಡಗಿ ಕುಳಿತುಕೊಳ್ಳಲು ಗುಪ್ತ ಸ್ಥಾನಗಳನ್ನು ಹುಡುಕಬೇಕಾಗಿತ್ತು. ಅವರಿಬ್ಬರನ್ನೂ ಕರೆತರುವ ಮೋಟಾರನ್ನು ಜೈಲಿನ ಬಳಿ ತೆಗೆದುಕೊಂಡು ಹೋಗಿ ಮರಳಿ ಬರುವ ಕಾರ್ಯಕ್ರಮದ ಟ್ರಯಲ್ ಮಾಡಬೇಕಾಗಿತ್ತು. ಈ ಕಾರ್ಯಕ್ಕೆಂದೇ ಲೇಖಾರಾಮ ಮತ್ತು ಧನ್ವಂತರಿ ಇವರು ಕರೆತಂದಿದ್ದ ಈರ್ವರು ಡ್ರೈವರರಲ್ಲಿ ಯೋಗ್ಯನಾದವ ಯಾರೆಂದು ಪರೀಕ್ಷಿಸಿ ಆಯ್ದುಕೊಳ್ಳಬೇಕಿತ್ತು. ಹೀಗೆ ಇಂತಹ ಇನ್ನೂ ಅನೇಕ ಕೆಲಸಗಳಿಗಾಗಿ ನಾನು ಮನೆಯಿಂದ ಹೊರಬಿದ್ದು ಸೈಕಲ್ ಏರಿ ಹೊರಟೆ.

ಮೇ ತಿಂಗಳ ಬಿಸಿಲು ಚುರುಗುಟ್ಟುತ್ತಿತ್ತು. ಬಿಸಿಲಲ್ಲಿ ಅಲೆದಾಡಿ ಮಧ್ಯಾಹ್ನ ಮೂರು ಗಂಟೆಯ ಸುಮಾರಿಗೆ ಮನೆಗೆ ಮರಳಿ ಬಂದೆ. ನನಗಾಗಿಟ್ಟ ಆರಿ ತಣ್ಣಗಾಗಿದ್ದ ಖಿಚಡಿಯನ್ನು ಮುಗಿಸಿದೆ. ಹಸಿದವನಿಗೆ ಹಳಸಿದನ್ನವೂ ಅಮೃತವಂತೆ! ಮನೆಯಲ್ಲಿ ಭಾಭೀ (ಭಗವತೀಚರಣ ವೋಹರಾರ ಪತ್ನಿ 'ದುರ್ಗಾದೇವಿ'ಯನ್ನು ಎಲ್ಲರೂ ಪ್ರೀತಿಯಿಂದ 'ಭಾಭೀ' ಎಂದೇ ಕರೆಯುತ್ತಿದ್ದರು) ಸುಶೀಲಾ ದೀದಿ, ಛೈಲ್‌ಬಿಹಾರಿ ಮತ್ತು ಮದನಗೋಪಾಲ್ ಈ ನಾಲ್ವರಿದ್ದರು.

"ಆಜಾದ್‌ಭಯ್ಯಾ ಎಲ್ಲಿ?" ನಾನು ಕೇಳಿದೆ.

"ಅವರು ಕಾರ್ಯಾಚರಣೆಗೆ ಮೋಟರ ಗಾಡಿ ನೋಡಲು ಹೋಗಿದ್ದಾರೆ," ಎಂದುತ್ತರ ಬಂದಿತು.

"ಮತ್ತೆ ಭಗವತೀ ಭಯ್ಯಾ, ಬಚ್ಚನ್ ಮತ್ತು ಸುಖದೇವರಾಜ್?"

"ಅವರು ಬಾಂಬನ್ನು ಪ್ರಯೋಗಿಸಿ ಪರೀಕ್ಷಿಸಲು ನದಿಯ ಬಳಿಗೆ ಹೋಗಿದ್ದಾರೆ."

ಇದನ್ನು ಕೇಳುತ್ತಲೇ ನಾನು ಬೆಚ್ಚಿಬಿದ್ದೆ.

"ಬಾಂಬಿನಲ್ಲಿ ಪಿಕ್ರಿಕ್ ಆಸಿಡ್ ಯಾರು ತುಂಬಿದರು? ಬಾಂಬಿನ ಕವಚಗಳು ಚೆನ್ನಾಗಿ ಒಣಗಿದ್ದವೋ ಇಲ್ಲವೋ? ಅವುಗಳಲ್ಲಿ ಒಂದರ ಟ್ರಿಗರ್ ಸಡಿಲಾಗಿತ್ತು. ಅದನ್ನೇನು ಮಾಡಿದರು?" ನಾನು ಭಯಚಕಿತತನಾಗಿ ಕೇಳಿದೆ.


"ಬಾಂಬಿನ ಕವಚಗಳನ್ನು ಬಿಸಿಲಿನಲ್ಲಿ ಒಣಗಿಸಿದರು. ಭಗವತೀಭಾಯಿ ಮತ್ತು ಸುಖದೇವರಾಜರೇ ಪಿಕ್ರಿಕ್ ಆಸಿಡ್ ತುಂಬಿದರು. ಟ್ರಿಗರನ್ನು ಅವರೇ ಏನೋ ಮಾಡಿದರು" ಎಂದುತ್ತರ ಬಂದಿತು.

ಅಷ್ಟರಲ್ಲಿ ಮನೆಯ ಹೊರಗೆ ಟಾಂಗಾ ಬಂದು ನಿಂತ ಸದ್ದು ಕೇಳಿಸಿತು. ಹೊರಗೆ ನೋಡಿದಾಗ ಟಾಂಗಾದಲ್ಲಿ ಸುಖದೇವರಾಜ ಕಂಡ. "ನನ್ನನ್ನು ಇಳಿಸಿಕೊಳ್ಳಿರೋ..." ಎಂದು ನೋವಿನಿಂದ ಆತ ಚೀರಿದ. ನಾನು, ಛೈಲ್ ಬಿಹಾರಿ ಮತ್ತು ಮದನಗೋಪಾಲ ಮೂವರೂ ಒಂದೇ ಹಾರಿಕೆಗೆ ರಸ್ತೆಗಿಳಿದೆವು. ಅವನನ್ನು ಇಳಿಸಿಕೊಂಡು ಮನೆಯೊಳಗೆ ಎತ್ತಿಕೊಂಡು ಬಂದೆವು. ಕಾಲಿಗೆ ಬಿಗಿದಿದ್ದ ಬಟ್ಟೆಯೊಳಗಿಂದ ನೆತ್ತರು ತೊಟ್ಟಿಕ್ಕುತ್ತಿತ್ತು. ನಡೆಯಬಾರದುದೇನೋ ನಡೆದಿದೆಯೆಂದು ನನ್ನ ಹೃದಯ ಚೀರಿತು.

"ಕಾಲಿಗೇನಾಯಿತು?" ಎಂದು ಕೇಳಿದೆ.

"ಬಾಂಬೆಸೆದು ಸ್ಫೋಟಗೊಳ್ಳುವುದೋ ಇಲ್ಲವೋ ಎಂಬುದನ್ನು ಪರೀಕ್ಷಿಸುವುದಕ್ಕಾಗಿ ಭಗವತೀ ಚರಣರು ಕೈಯಲ್ಲಿ ಬಾಂಬ್ ಹಿಡಿದು ಎಸೆಯುವಷ್ಟರಲ್ಲಿಯೇ ಅದು ಸ್ಫೋಟಗೊಂಡಿತು. ಅವರು ಬಹಳ ಗಾಯಗೊಂಡರು. ನನ್ನ ಕಾಲಿಗೂ ಪೆಟ್ಟು ಬಿದ್ದಿದೆ. ಬಚ್ಚನ್ ನನ್ನ ಹಿಂದೆ ಇದ್ದುದರಿಂದ ಬಚಾವಾದ. ಅವನನ್ನು ಭಗವತೀ ಭಯ್ಯಾರ ಹತ್ತಿರ ಬಿಟ್ಟು ಬಂದಿದ್ದೇನೆ," ಎಂದು ನೋವಿನಿಂದ ತುಟಿಕಚ್ಚಿ ತಡೆ ತಡೆದು ಹೇಳಿದ.

ಅವನ ಮಾತನ್ನು ಕೇಳಿದಕೂಡಲೆ ನಾನು ಮತ್ತು ಛೈಲ್‌ಬಿಹಾರಿ ಮಾಲರೋಡಿನ ಮೇಲೆ ಚಾರಿಂಗ್ ಕ್ರಾಸಿನತ್ತ ಓಡತೊಡಗಿದೆವು. ಚೌರಿಂಗ್ ಕ್ರಾಸಿಗೆ ಬಂದು ಟ್ಯಾಕ್ಸಿಯೊಂದನ್ನು ಬಾಡಿಗೆಗೆ ಪಡೆದು ರಾವಿ ನದಿಯ ಕಡೆಗೆ ವೇಗವಾಗಿ ಸಾಗಿದೆವು. ಟ್ಯಾಕ್ಸಿಗೆ ಮುಂದೆ ಹೋಗಲು ದಾರಿಯಿಲ್ಲದ್ದರಿಂದ ಮರಳಿನ ಬಯಲಿನಲ್ಲಿ ಕಾಲುನಡಿಗೆಯಿಂದ ಸಾಗಿ ಕಾಡನ್ನು ಹೊಕ್ಕೆವು. ಬಚ್ಚನ್‌ನ ಹೆಸರು ಹಿಡಿದು ಕೂಗುತ್ತ ಮುಂದೆ ಸಾಗಿದೆವು. ನಾವು ಕೂಗಿದಾಗಲೆಲ್ಲ ಮಾರುತ್ತರವಾಗಿ ಅವನೂ ಕೂಗುತ್ತಿದ್ದ. ಅವನ ಧ್ವನಿಯ ಜಾಡನ್ನು ಹಿಡಿದು ಘಟನಾಸ್ಥಳವನ್ನು ತಲುಪಿದಾಗ ಕಂಡ ದೃಶ್ಯ ಭಯಾನಕವಾಗಿತ್ತು. ನಮ್ಮ ಹೃದಯ ಒಂದು ಕ್ಷಣ ನಿಂತಂತಾಯಿತು. ಭಗವತೀ ಭಾಯಿ ಅಂಗಾತ ಬಿದ್ದಿದ್ದರು. ಅವರ ಒಂದು ಹಸ್ತ ಪೂರ್ತಿಯಾಗಿ ಹಾರಿಹೋಗಿತ್ತು. ಇನ್ನೊಂದು ಹಸ್ತಕ್ಕೆ ಬೆರಳುಗಳೇ ಇರಲಿಲ್ಲ! ಮುಖದ ಮೇಲೆ, ಹೊಟ್ಟೆಯ ಬಲಗಡೆ ಆಳವಾದ ಗಾಯವಾಗಿತ್ತು. ಎಡಭಾಗ ಹರಿದು ಕರುಳು ಹೊರಬಿದ್ದಿತ್ತು. ಬಚ್ಚನ್ ತನ್ನ ಅಂಗ ವಸ್ತ್ರವನ್ನು ನದಿಯಲ್ಲಿ ತೋಯಿಸಿ ತಂದು ಅವರ ಬಾಯಿಯಲ್ಲಿ ಹನಿ-ಹನಿಯಾಗಿ ನೀರು ಬೀಳುವಂತೆ ಹಿಂಡುತ್ತಿದ್ದ. ನಮ್ಮನ್ನು ಕಾಣುತ್ತಲೆ, "ನೀವೆಲ್ಲ ಬಂದಿರಾ! ಒಳ್ಳೇದಾಯಿತು. ಆಜಾದನೂ ಬಂದಿದ್ದರೆ ಆತನನ್ನೂ ಕಣ್ತುಂಬಾ ನೋಡುತ್ತಿದ್ದೆ."



"'B'ಯಿಂದ Zವರೆಗಿನ ಫಿಲ್ಮ್‌ಗಳೇ ಲ್ಲಪ್ಪಾ?"

ನಿಚ್ಚಳವಾದ ಧ್ವನಿಯಲ್ಲಿ ಭಗವತಿ ಭಯ್ಯಾ ನುಡಿದರು.

"ಆಜಾದ್ ಭಯ್ಯಾ ಮನೆಯಲ್ಲಿರಲಿಲ್ಲ. ಇದ್ದಿದ್ದರೆ ಅವರೂ ಬರುತ್ತಿದ್ದರು," ನಾನು ನೆಲನೋಡುತ್ತ ಬಿಗಿದ ಕಂಠದಿಂದ ಹೇಳಿದೆ.

"ಇರಲಿ, ನೀವು ನನಗಾಗಿ ಚಿಂತಿಸಬೇಡಿರಿ. ನಿಮ್ಮ ಕರ್ತವ್ಯ ಮಾಡಿರಿ," ಆ ನೋವಿನಲ್ಲೂ ಅವರು ಶಾಂತರಾಗಿ ನುಡಿದರು.

ಹಿಂದೆ ಸ್ಕೌಟ್ ಕ್ಯಾಂಪಿನಲ್ಲಿ ಪಡೆದ ತರಬೇತಿ ಈ ಸಂದರ್ಭದಲ್ಲಿ ಉಪಯೋಗಕ್ಕೆ ಬರಬಹುದೆಂದು ಯೋಚಿಸಿ ನಾವು ಒಬ್ಬರಿಗೊಬ್ಬರು ಎದುರು-ಬದುರಾಗಿ ಚಿಪ್ಪುಗೈ ಕಟ್ಟಿ ಅವರನ್ನು ಎತ್ತಿಕೊಂಡು ಕಾಡಿನ ಹೊರಗೆ ಗಾಡಿಯ ಬಳಿ ಸಾಗಿಸಬೇಕೆಂದು ಅವರ ದೇಹವನ್ನು ಕದಲಿಸಲು ಯತ್ನಿಸಿದೆವು. ದೇಹಕ್ಕೆ ಕೈ ಹಚ್ಚುತ್ತಲೇ ಅಸಾಧ್ಯ ನೋವಿನಿಂದ ಅವರು ಚೀರಿಕೊಂಡರು. ಬಾಂಬಿನ ಹೊಡೆತದಿಂದ ಛಿದ್ರ-ಛಿದ್ರವಾದ ಆ ದೇಹವನ್ನು ಸ್ಟ್ರೆಚರ್ ಇಲ್ಲವೆ ಹೊರಸಿನಲ್ಲಲ್ಲದೆ ಸಾಗಿಸಲು ಸಾಧ್ಯವಿಲ್ಲವೆಂಬ ಸಂಗತಿ ನಮಗೆ ಮನವರಿಕೆಯಾಯಿತು. ಅವರನ್ನು ನೆಲದ ಮೇಲೆ ಹಾಗೆಯೇ ಒರಗಿಸಿ ಒತ್ತಿ ಬರುತ್ತಿದ್ದ ದುಃಖವನ್ನು ಬಲವಂತದಿಂದ ತಡೆಹಿಡಿದು, "ಭಗವತೀ ಬಾಬೂ, ನಾವು ಈಗಲೆ ಮನೆಗೆ ಹೋಗಿ ಸ್ಟ್ರೆಚರ್ ಅಥವಾ ಹೊರಸನ್ನು ತೆಗೆದುಕೊಂಡು ಬಂದು ನಿಮ್ಮನ್ನು ಮನೆಗೆ ಕರೆದುಕೊಂಡು ಹೋಗುತ್ತೇವೆ. ನೀವೇನೂ ಹೆದರಬೇಡಿ," ಎಂದು ಕಣ್ತುಂಬಾ ನೀರು ತುಂಬಿಕೊಂಡು ನಾವು ಹೇಳಿದೆವು.

"ಹೆದರುವುದೆ? ಅದೂ ನಾನು! ಯಾವುದಕ್ಕೆ? ಸಾವಿಗೆ? ಅದಕ್ಕೇಕೆ ಹೆದರಲಿ? ಭಗತ್‌ಸಿಂಗ್ ಮತ್ತು ಬಟುಕೇಶ್ವರರನ್ನು ಬಿಡಿಸುವ ಕಾರ್ಯಾಚರಣೆಯಲ್ಲಿ ಸಕ್ರಿಯವಾಗಿ ಭಾಗಿಯಾಗಲು ಸಾಧ್ಯವಾಗದುದಕ್ಕಾಗಿ ದುಃಖಿಸುತ್ತಿದ್ದೇನೆಯೆ ಹೊರತು ಸಾಯಲು ಅಂಜಿಯಲ್ಲ. ಇದೇ ಸಾವು ಇನ್ನೊಂದೆರಡು ದಿನ ಬಿಟ್ಟು ಬರಬಾರದಿತ್ತೆ!" ಆ ನೋವಿನಲ್ಲೂ ಆತನ ಗಾಢ ದೇಶಭಕ್ತಿಯನ್ನರಿತು ನಾವೆಲ್ಲ ಮೂಕರಾದೆವು.

"ಊರಿಗೆ ಹೋಗಿ ಅವರನ್ನು ಸಾಗಿಸಲು ಅನುಕೂಲವಾದ ಅವಶ್ಯಕ ಸಾಮಗ್ರಿಗಳೊಂದಿಗೆ ಮರಳಿ ಬರುತ್ತೇವೆ," ಎಂದು ಹೇಳಿದಾಗ,

"ಯಶಪಾಲ, ಹಾಗೆ ಮಾಡಬೇಡ. ಬಾಂಬು ಭಾರೀ ಸಪ್ಪಳದೊಂದಿಗೆ ಸಿಡಿದಿದೆ! ಆ ಸಪ್ಪಳದ ಜಾಡು ಹಿಡಿದು ಪೊಲೀಸರೇನಾದರೂ ಇಲ್ಲಿಗೆ ಬಂದರೆ ನೀವೆಲ್ಲ ಸಿಕ್ಕಿಬೀಳುತ್ತೀರಿ. ಆಗ ಮುಂದಿನ ಕಾರ್ಯಾಚರಣೆ ನಿಂತುಹೋಗುತ್ತದೆ. ನನ್ನ ಕೈಗಳು ನೆಟ್ಟಗಿದ್ದಿದ್ದರೆ ಒಂದು ರಿವಲ್ವರ್ ಕೊಟ್ಟು ಹೋಗು, ಆ ಪೊಲೀಸರಿಗೆ ನನ್ನ ಕೈತೋರಿಸುತ್ತೇನೆಂದು ಹೇಳುತ್ತಿದ್ದೆ. ಆದರೇನು ಮಾಡುವುದು? ಯಾವ ಕಾರಣಕ್ಕೂ ಮುಂದಿನ ಕಾರ್ಯಾಚರಣೆ ನಿಲ್ಲಬಾರದು. ಭಗತ್‌ಸಿಂಗ್ ಮತ್ತು ಬಟುಕೇಶ್ವರರು ಕತ್ತಲೆ ಕೋಣೆಯಿಂದ ಪಾರಾಗಬೇಕು," ತಡೆ ತಡೆದು ಇಂಗ್ಲೀಷಿನಲ್ಲಿ ಅವರು ಮಾತನಾಡುತ್ತಿದ್ದರು. ಅವರ ತೊದಲು ನುಡಿಗಳನ್ನು ಕೇಳಿ ಮೈಯಲ್ಲಿ ಮಿಂಚು ಹರಿದಂತಾಯಿತು! ಆ ದೇಶಭಕ್ತನ ದೇಹ

ಮಾತೃಭೂಮಿಗೆ ನೆತ್ತರಿನ ಸ್ನಾನ ಮಾಡಿಸಿತ್ತು! ಅವರ ಮೈ ದುರ್ಬಲಗೊಂಡಿತ್ತು, ಕೈಕಾಲುಗಳ ಶಕ್ತಿ ಉಡುಗತೊಡಗಿತ್ತು. ಆದರೆ ಮಿದುಳು ಮಾತ್ರ ಇನ್ನೂ ತೀಕ್ಷ್ಣವಾಗಿತ್ತು! ತಮ್ಮ ಶಾರೀರಕ ಸ್ಥಿತಿಯ ಕಲ್ಪನೆ ಅವರಿಗೆ ನಿಚ್ಚಳವಾಗಿ ಅರಿವಿಗೆ ಬರುತ್ತಲಿತ್ತು. ಮೂತ್ರ ಶಂಕೆಯುಂಟಾದರೂ ಮೂತ್ರಮಾಡಲು ಆಗುತ್ತಿಲ್ಲವೆಂದೂ ಬಹುಶಃ ಮೂತ್ರಕೋಶದಲ್ಲಿ ಬಾಂಬಿನ ಚೂರೊಂದು ಒಳಹೊಕ್ಕಿರಬಹುದೆಂದೂ ಅವರು ಹೇಳಿದರು. ಅವರ ಧ್ವನಿಯಲ್ಲಿ ಭಯವಾಗಲಿ, ತಾನು ಯಾರೂ ಇಲ್ಲದ ಈ ಕಟ್ಟಡವಿಯಲ್ಲಿ ಸಾಯಬೇಕಾಯಿತಲ್ಲ! ಎಂಬ ಭಾವನೆಯಾಗಲಿ ಸ್ವಲ್ಪವೂ ಇಣುಕಿಹಾಕಿರಲಿಲ್ಲ! ಒಬ್ಬ ಪರಿಣತ ರೋಗಶಾಸ್ತ್ರಜ್ಞ ಇನ್ನೊಬ್ಬ ರೋಗಿಯ ದೇಹಸ್ಥಿತಿಯ ಬಗ್ಗೆ ಮಾತನಾಡುವಂತಿತ್ತು ಅವರ ವರ್ತನೆ.

ಭಗವತೀಬಾಬುಗಳ ಬಳಿ ಛೈಲ್ ಬಿಹಾರಿಯನ್ನು ಬಿಟ್ಟು ಬಚ್ಚನ್‌ನನ್ನು ಕರೆದುಕೊಂಡು ಮರಳಿ ಬಂದೆ. ಅವಶ್ಯಕವಸ್ತುಗಳನ್ನು ಸಂಗ್ರಹಿಸಲು ಕ್ರಿಶ್ಚಿಯನ್ ಕಾಲೇಜಿನ ಬೋರ್ಡಿಂಗಿಗೆ ಹೋದೆವು. ಅಲ್ಲಿಯೇ ಶ್ರೀ ದೇವರಾಜ ಶೇಠಿ ಮತ್ತು ಸಚ್ಚಿದಾನಂದ ಹೀರಾನಂದ ವಾತ್ಸ್ಯಾಯನ (ಮುಂದೆ ಇವರು 'ಅಜ್ಞೇಯ' ಎಂಬ ಕಾವ್ಯನಾಮದಿಂದ ಹಿಂದಿಯ ಖ್ಯಾತ ಲೇಖಕರೆಂದು ಪ್ರಸಿದ್ಧರಾದರು). ಇವರಿಬ್ಬರ ಪರಿಚಯವಾಯಿತು. ಇವರೀರ್ವರೂ ದಷ್ಟಪುಷ್ಟ ಯುವಕರಾಗಿದ್ದರು. ಭಗವತೀಚರಣರನ್ನು ಎತ್ತಿಕೊಂಡು ಸುಲಭವಾಗಿ ಕರೆತರಲು ಇವರಿಂದ ಸಹಾಯವಾಗುವುದೆಂದು ಯೋಚಿಸಿ ಅವರನ್ನೂ ಜೊತೆಗೆ ಕರೆದುಕೊಂಡು ಹೋಗಲು ತೀರ್ಮಾನಿಸಿದೆವು. ಎರಡು ಹೊದ್ದಿಕೆ, ಒಂದು ಹೊರಸನ್ನು ತೆಗೆದುಕೊಂಡು ಹೊರಟೆವು. ಗಾಯಗಳನ್ನು ಹೀರಲು ಬರ್ಫವನ್ನು ತೆಗೆದುಕೊಂಡು. ಭಗವತೀಚರಣರಿದ್ದಲ್ಲಿಗೆ ನಡೆದೆವು.

ಕಗ್ಗತ್ತಲೆ ಕವಿದಿತ್ತು, ಟಾರ್ಚಿನ ಬೆಳಕಿನಲ್ಲಿ ದಾರಿ ಹುಡುಕುತ್ತ ಸಾಗಿದೆವು. ಕತ್ತಲೆಯಲ್ಲಿ ದಾರಿಸಿಕ್ಕದೆ ಛೈಲಬಿಹಾರಿಯನ್ನು ಕೂಗಿಕೂಗಿ ಕರೆಯತೊಡಗಿದೆವು. ನಮ್ಮ ಕೂಗಿಗೆ ಮಾರುತ್ತರ ಬರಲಿಲ್ಲ. ಟಾರ್ಚಿನ ಬೆಳಕಿಗೆ, ನಮ್ಮ ಕೂಗಿಗೆ ಅಂಜಿದ ಕಾಡಿನ ಹಕ್ಕಿಗಳು ರೆಕ್ಕೆ ಬಡಿದು ಕತ್ತಲಲ್ಲೇ ಹಾರಲೆತ್ನಿಸಿದವು. ಮುಂಗಾಣದೆ ಸಿಕ್ಕ-ಸಿಕ್ಕ ಮರದ ಟೊಂಗೆಗಳ ಮೇಲೆ ಕುಳಿತುಬಿಡುತ್ತಿದ್ದವು. ಇಷ್ಟಾದರೂ ಛೈಲ್ ಬಿಹಾರಿಯಿಂದ ಮಾರುತ್ತರ ಬರಲೇ ಇಲ್ಲ! ಮುಂದೆ ಬಂದಾಗ ಮರಗಳ ಟೊಂಗೆಗಳಿಗೆ ಅರಿವೆಯ ತುಂಡುಗಳನ್ನು ಕಟ್ಟಿ ದಾರಿ ತೋರಲು ಸಿಗ್ನಲ್‌ಗಳಂತೆ ಜೋತು ಬಿಟ್ಟಿರುವುದು ಕಂಡಿತು. ಅದೇ ಜಾಡಿನಲ್ಲಿ ಮುಂದೆ ಬಂದಾಗ ಭಗವತೀಚರಣರೊಬ್ಬರೇ ನೆಲದ ಮೇಲೆ ಒರಗಿರುವುದು ಕಂಡಿತು. ಹತ್ತಿರ ಬಂದು ನೋಡಿದಾಗ ಅವರ ಪ್ರಾಣಪಕ್ಷಿ ಹಾರಿಹೋಗಿರುವುದು ತಿಳಿಯಿತು.


ಅವರು ಪ್ರಾಣಬಿಟ್ಟಮೇಲೆ ಭಯದಿಂದಲೋ ನಮಗೆ ಸುದ್ದಿತಿಳಿಸಲೆಂದೋ ಛೈಲ್‌ಬಿಹಾರಿ ಅಲ್ಲಿಂದ ಹೊರಟುಹೋಗಿರಬೇಕು! ಹೃದಯ ಬಾಯಿಗೆ ಬಂದಂತಾಯಿತು. ಒತ್ತರಿಸಿ ಬರುತ್ತಿದ್ದ ಅಳುವನ್ನು ಬಲವಂತದಿಂದ ತುಟಿಕಚ್ಚಿ ತಡೆದು ಅತ್ಯಂತ ಕಷ್ಟದಿಂದ ನನ್ನನ್ನು ನಾನೇ ನಿಯಂತ್ರಿಸಿಕೊಂಡೆ. ಬಚ್ಚನ್ ಬಿಕ್ಕಿ-ಬಿಕ್ಕಿ ಅಳುತ್ತಿದ್ದ. ಏನು ತಾನೆ ಮಾಡಲು ಸಾಧ್ಯ! ಶವವನ್ನು ಮನೆಗೆ ಸಾಗಿಸಿದರೆ ಅದನ್ನು ಅಂತ್ಯಕ್ರಿಯೆಗೆ ಅಲ್ಲಿಂದ ಹೊರತರುವುದೆಂತು? ಹಾಗೆಮಾಡಿದರೆ ಭೂಗತರಾದ ನಾವೆಲ್ಲ ಸಿಕ್ಕಿ ಬೀಳುವುದಿಲ್ಲವೆ? ಸಿಕ್ಕಿಬಿದ್ದರೆ ನಮ್ಮ ಮುಂದಿನ ಯೋಜನೆಯ ಗತಿ? ಒಂದುಕ್ಷಣ ಯೋಚಿಸಿ ನಮ್ಮೊಂದಿಗೆ ಒಯ್ದಿದ್ದ ಹೊದ್ದಿಕೆಗಳಲ್ಲಿ ಒಂದನ್ನು ಶವದ ಮೇಲೆ ಹೊದಿಸಿದೆವು.

"ನಾವೆಲ್ಲ ನಮ್ಮ ಅಗಲಿದ ನಾಯಕನಿಗೆ ಅಂತಿಮ ಶ್ರದ್ಧಾಂಜಲಿ ಸಲ್ಲಿಸೋಣ. ತಮಾಮ್ ನಮಸ್ತೇ!" ಎಂದು ನಾನು ಆಜ್ಞೆವಿಧಿಸಿದ ಕೂಡಲೆ ಎಲ್ಲರೂ ಶವದ ಸುತ್ತಲೂ ನಿಂತುಕೊಂಡು ಸೈನಿಕ ಶಿಸ್ತಿನಿಂದ ಸೆಲ್ಯೂಟ್ ಸಲ್ಲಿಸಿದೆವು. ಶವಕ್ಕೆ ಹೊದಿಸಿದ ಹೊದ್ದಿಕೆಯ ಅಂಚಿನ ಮೇಲೆ ದೊಡ್ಡ-ದೊಡ್ಡ ಕಲ್ಲುಗಳನ್ನು ಹೇರಿ ಪ್ರಾಣಿಗಳು ಶವವನ್ನು ಕೆದಕದಂತೆ ವ್ಯವಸ್ಥೆಮಾಡಿ ಊರಿಗೆ ಮರಳಿದೆವು. ನನ್ನ

ಕಾಲುಗಳು ನರಸತ್ತಂತೆ ದುರ್ಬಲವಾಗಿದ್ದವು. ಹೆಜ್ಜೆ ಎತ್ತಿಡಲೂ ಶಕ್ತಿಯಿರಲಿಲ್ಲ. ದಿನವೊಂದರಲ್ಲಿ ಅರವತ್ನಾಲ್ಕು ಮೈಲುಗಳಷ್ಟು ದೂರವನ್ನು ಎಲ್ಲಿಯೂ ನಿಲ್ಲಸಂತೆ ಸವೆಸಿದರೂ ದಣಿಯದಿದ್ದ ನನ್ನ ಕಾಲುಗಳು ಈಗ, ಹಳೆಯ ಅರಿವೆಯಂತೆ ದುರ್ಬಲವಾಗಿದ್ದವು. ದೇವರಾಜ ಮತ್ತು ವಾತ್ಸ್ಯಾಯನರು ಬೋರ್ಡಿಂಗಿಗೆ ಮರಳಿದರು. ನಾನು ಮತ್ತು ಬಚ್ಚನ್ ಭಾರವಾದ ಹೃದಯವನ್ನು ಹೊತ್ತು ಮನೆಯೊಳಗೆ ಕಾಲಿಟ್ಟೆವು. ನಮ್ಮ ಬರವಿಗಾಗಿ ಎಲ್ಲರೂ ನಡುಮನೆಯಲ್ಲಿ ಆತುರದಿಂದ ಕಾದಿದ್ದರು. ನಮ್ಮನ್ನು ನೋಡುತ್ತಲೆ ಎಲ್ಲರೂ ನಿಟ್ಟುಸಿರು ಬಿಟ್ಟರು. ತಮ್ಮ-ತಮ್ಮ ಕಣ್ಣುಗಳಿಂದಲೇ ಆತುರ-ಕಾತರಗಳನ್ನು ತುಳುಕಿಸುತ್ತ 'ಏನಾಯಿತು?' ಎಂದು ಕೇಳಿದರು. ಅವರ ದೃಷ್ಟಿ ಭಾಷೆಗೆ ಕೈಭಾಷೆಯಿಂದಲೇ ನಾವು 'ಎಲ್ಲಾ ನಾಶವಾಯಿತು, ಎಂದು ತ್ತರಿಸಿದೆವು. ಮಾತಿಗೆ ಮೀರಿದ ಮೌನ ಹೃದಯ ಸಂವಾದಕ್ಕೆ ಮಧ್ಯವರ್ತಿ ಭಾಷೆಯಾಗಿ ತಲುಪಿಸಬೇಕಾದುದನ್ನು ತಲುಪಿಸಿಯಾಗಿತ್ತು! ಬಚ್ಚನ್‌ನ ಬಾಯಿಂದ ಅಳು ಸ್ಫೋಟಗೊಂಡಿತು. ದುರ್ಗಾಭಾಭಿಯಂತೂ ಬಿಡುಗಣ್ಣು, ಬಿಟ್ಟಬಾಯಿಗಳಿಂದ ನೆಲಕ್ಕೆ ನಿಶ್ಚೇಷ್ಟಿತರಾಗಿ ಒರಗಿದರು. ಸುಶೀಲಾದೀದಿ ಅವರನ್ನು ತಮ್ಮ ತೆಕ್ಕೆಯಲ್ಲಿ ಅಪ್ಪಿಕೊಂಡರು. ಅಜಾದಭಯ್ಯಾ ನಿಶ್ಚೇಷ್ಟಿತನಂತೆ ನೆಲನೋಡುತ್ತ ಮೌನವಾಗಿ ಶೋಕಿಸುತ್ತ ನಿಂತುಬಿಟ್ಟ. ಮದನ ಗೋಪಾಲ ಕಲ್ಲಿನಲ್ಲಿ ಕೆತ್ತಿದ ಮೂರ್ತಿಯಂತೆ ನಿಶ್ಚಲನಾಗಿ ಗರಬಡಿದವನಂತೆ ನಿಂತುಕೊಂಡ. ಮಾತು ಮೌನವಾಗಿ ಅಳು ನಿಶಬ್ದವಾಯಿತು. ಅದೇ ವೇಳೆಗೆ ಅಲ್ಲಿ ಛೈಲ್ ಬಿಹಾರಿ ಕಾಣಿಸಿಕೊಂಡ. ಅವನನ್ನು ಕಾಣುತ್ತಲೇ ನನ್ನ ಪಿತ್ತ ನೆತ್ತಿಗೇರಿತು. ಸಿಟ್ಟು ತುಂಬಿದ್ದರೂ ಗಟ್ಟಿಯಾಗಿ ಮಾತನಾಡುವ ಸ್ವಾತಂತ್ರ್ಯವಿರಲಿಲ್ಲ.

"ಆ ಶರೀರವನ್ನು ಆ ಸ್ಥಿತಿಯಲ್ಲಿ ಬಿಟ್ಟು ನೀನೆಲ್ಲಿಗೆ ಹೋಗಿದ್ದೆ? ನಾವು ನಿನ್ನ ಹೆಸರು ಹಿಡಿದು ಕೂಗಿಯೇ ಕೂಗಿದೆವು. ನಿನ್ನಿಂದ ಉತ್ತರವೇ ಇಲ್ಲ!" ಎಂದು ಮೆಲುದನಿಯಲ್ಲಿ ಜಬರಿಸಿದೆ.

"ಮರಣ ಸಂಭವಿಸುವವರೆಗೂ ನಾನಲ್ಲಿಯೇ ಇದ್ದೆ. ಆ ನಂತರವೇ ನಾನು ಆ ಜಾಗ ಬಿಟ್ಟದ್ದು'



ಎಂದು ತನ್ನ ಅಸಹಾಯಕತೆಯನ್ನು ಹೊರ ಹಾಕಿದ.

"ನಿನಗೆ ಅಲ್ಲೇ ಇರಲು ಹೇಳಿರಲಿಲ್ಲವೇ? ಮತ್ತೇಕೆ ಆ ಜಾಗ ಬಿಟ್ಟು ಬಂದೆ?" ಏರಿದ ನನ್ನ ಸಿಟ್ಟು ಇನ್ನೂ ಇಳಿದಿರಲಿಲ್ಲ.

"ನಿನಗೆ ದಾರಿ ತಿಳಿಯಲೆಂದೇ ನಾನು ಮರದ ಟೊಂಗೆಗಳಿಗೆ ದಾರಿಯುದ್ದಕ್ಕೂ ಅರಿವೆಯ ತುಂಡುಗಳನ್ನು ಕಟ್ಟುತ್ತಾ ಬಂದೆ. ನಿಮಗೆ ಸುದ್ದಿಯನ್ನಾದರೂ ತಿಳಿಸೋಣವೆಂಬುದೇ ನನ್ನ ಉದ್ದೇಶವಾಗಿತ್ತು" ಛೈಲ್ ಬಿಹಾರಿ ನಿಷ್ಕಪಟತೆಯಿಂದ ನುಡಿದ.

"ಅದೆಲ್ಲಾ ಸರಿ: ಆದರೆ ಅಂಥ ಅಡವಿಯಲ್ಲಿ ಆ ದೇಹವನ್ನು ಬಿಟ್ಟು ನೀನು ಹೇಗೆತಾನೆ ಬಂದೆ?" ಕ್ರೋಧದಿಂದ ಆಜಾದ್ ಭೈಯ್ಯಾ ನುಡಿದರು. ಆದರೆ ಕ್ರೋಧದಿಂದ ಈಗೇನೂ ಪ್ರಯೋಜನವಿಲ್ಲವೆಂದು ತಮ್ಮನ್ನು ತಾವೇ ನಿಯಂತ್ರಿಸಿಕೊಂಡರು. ಎಲ್ಲೆಡೆಗೂ ಸ್ತಬ್ಧತೆ ವ್ಯಾಪಿಸಿತು. ಬಹಳ ಹೊತ್ತಿನವರೆಗೂ ಯಾರೂ ತುಟಿಯೆರಡು ಮಾಡಲಿಲ್ಲ. ಕೊನೆಗೆ ಆಜಾದ್ ಭಯ್ಯಾನೇ, "ಈಗೇನೂ ಮಾಡುವಂತಿಲ್ಲ; ನೀವೆಲ್ಲ ಮೇಲೇಳಿ," ಎಂದು ನುಡಿದರು.


ಅವರು ದುರ್ಗಾಭಾಭಿಯತ್ತ ತಿರುಗಿ "ಅಮ್ಮಾ ನೀನು ನಮ್ಮನ್ನೆಲ್ಲಾ ತಾಯಿ ಮತ್ತು ಸೋದರಿಯಾಗಿ ಸಲಹಿರುವಿ, ನಮ್ಮೆಲ್ಲರ ಮೇಲೆ ಅನಂತ ಉಪಕಾರ ಮಾಡಿರುವಿ. ದೇಶಕ್ಕೆ ಮತ್ತು ನಮ್ಮ ಸಂಘಕ್ಕೆ ನೀನು ಸರ್ವಸ್ವವನ್ನು ಧಾರೆ ಎರೆದ ತ್ಯಾಗಮಯಿ. ನಿನ್ನ ಬಗ್ಗೆ ನಮ್ಮ ಕರ್ತವ್ಯವನ್ನು ನಾವೆಂದೂ ಮರೆಯಲಾರೆವು," ಎಂದು ನುಡಿದರು. ದುಃಖಭಾರದಿಂದ ಅವರ ಧ್ವನಿ ನಡುಗುತ್ತಿತ್ತು. ಆಜಾದ್‌ಭಯ್ಯಾ ಮತ್ತು ಬಚ್ಚನ್ ಇಬ್ಬರೂ ಸೇರಿ ಭಾಭಿಯನ್ನು ಎತ್ತಿ ಪಲ್ಲಂಗದ ಮೇಲೆ ಮಲಗಿಸಿದರು. ಭಾಭಿಯ ಕಣ್ಣುಗಳಲ್ಲಿ ನೀರಿರಲಿಲ್ಲ, ತುಟಿಗಳಲ್ಲಿ ಚಲನೆಯಿರಲಿಲ್ಲ, ದೃಷ್ಟಿಯಲ್ಲಿ ಶೂನ್ಯತೆ ಮಡುವುಗಟ್ಟಿತ್ತು. ಎದೆ ಬಿರಿಯುವ ಆಘಾತಕ್ಕೆ ಗಟ್ಟಿಯಾಗಿ ಅತ್ತು, ಚೀರಿ, ಭೋರಾಡುವ ಸ್ವಾತಂತ್ರ್ಯವೂ ಆಕೆಗಿರಲಿಲ್ಲ! ಭೂಗತರರಾಗಿ ಅಲ್ಲಿದ್ದ ನಮ್ಮೆಲ್ಲರ ಸುರಕ್ಷಿತತೆ ಆಕೆಯ ಆತ್ಮನಿಯಂತ್ರಣದ ಮೇಲೆ ಅವಲಂಬಿಸಿತ್ತು! ಆಕೆ ಮಲಗಿದಂತೆಯೇ ಮಲಗಿದರು; ನಿಷ್ಪಂದ! ನಿಶ್ಶಬ್ದ!! ನಿಶ್ಚಲ!!! ಆಜಾದ್‌ಭಯ್ಯಾ ಸುಶೀಲಾದೀದಿಗೂ ಸಾಂತ್ವನ ಹೇಳಿ ಇನ್ನೊಂದು ಪಲ್ಲಂಗದ ಮೇಲೆ ಮಲಗಿಸಿದರು. ನಾನು ನಿಶ್ಚೇಷ್ಟಿತನಂತೆ ಒಂದು ಸೋಫಾದ ಮೇಲೆ ಒರಗಿದ್ದೆ. ರಾತ್ರಿ ಹನ್ನೊಂದು ಹೊಡೆದಿರಬಹುದು.. ಆಜಾದಭಯ್ಯಾ ನನ್ನ ಭುಜಗಳನ್ನು ಹಿಡಿದು ಅಲುಗಿಸಿ ಎಚ್ಚರಿಸಿ, "ನಡೆ, ಸ್ವಲ್ಪ ಹೊತ್ತು ಹೊರಗೆ ತಿರುಗಾಡಿ ಬರೋಣ," ಎಂದರು. ನಾನೂ ಅವರೊಂದಿಗೆ ಮನಬಿಚ್ಚಿ ಮಾತನಾಡಿ, ಹೃದಯ ಹಗುರ ಮಾಡಿಕೊಳ್ಳಬೇಕೆಂದು ಹೊರಟೆ. ಇಬ್ಬರೂ ಹೊರ ಬಂದೆವು. ದಾರಿಯಲ್ಲಿ ನಡೆಯುತ್ತ "ಶವವನ್ನು ಯಾವ ಸ್ಥಿತಿಯಲ್ಲಿ ಬಿಟ್ಟು ಬಂದಿರುವಿರಿ?" ಎಂದು ಕೇಳಿದರು. ಅಂತಹ ವಿಷಮಸ್ಥಿತಿಯಲ್ಲಿಯೂ ಆಜಾದರ ಪ್ರಜ್ಞಾವಂತಿಕೆಯನ್ನು ಕಂಡು ನಾನು ಮೂಕನಾದೆ. ದೇಶಪ್ರೇಮಿಯೊಬ್ಬ ಹುತಾತ್ಮನಾದರೆ ಆತನ ಶವಕ್ಕೆ ಗೌರವೋಚಿತ ಸಂಸ್ಕಾರವನ್ನು ಸಲ್ಲಿಸಬೇಕೆಂಬುದು ಅವರ ದೃಢ ನಿಲುವಾಗಿತ್ತು.

"ಕತ್ತಲೆ ಕವಿದಿತ್ತು. ಮೇಲಾಗಿ ಆ ಸ್ಥಳ ನಮಗೆ ಸಂಪೂರ್ಣ ಅಪರಿಚಿತ; ಹೀಗಾಗಿ ಬೇರೇನೂ ಮಾಡಲಾಗದೆ ಶವದ ಮೇಲೊಂದು ಹೊದಿಕೆ ಹೊದಿಸಿ ಬಂದಿದ್ದೇವೆ," ಎಂದು ನಾನು ಹೇಳಿದೆ.

"ನರಿ, ತೋಳ, ಕಿರುಬಗಳಂತಹ ಕಾಡು ಪ್ರಾಣಿಗಳು ಅದನ್ನು ಎಳೆದಾಡಿ ಕೆಡಿಸಬಾರದಲ್ಲ! ಬೆಳಕು ಹರಿಯುವ ಮೊದಲೇ ಅಲ್ಲಿಗೆ ಹೋಗಿ ಅಂತಿಮ ಸಂಸ್ಕಾರ ಮಾಡೋಣ," ಎಂದು ನುಡಿದು ಭಗವತೀಚರಣರಿಗಾದ ಗಾಯಗಳ ಬಗ್ಗೆ ವಿಚಾರಿಸಿದರು. ನಾನು ಕಂಡುದನ್ನೆಲ್ಲಾ ಕಂಡಂತೆ ಹೇಳಿದೆ.

"ಈಗೇನು ಮಾಡೋದು? ನಮ್ಮ ದಳದ ಸದಸ್ಯರಲ್ಲಿ ಇಬ್ಬರು ಕಡಿಮೆಯಾದರು. ಕಾರ್ಯಾಚರಣೆಯನ್ನು ಮುಂದುವರಿಸಲಾದೀತೆ?" ಎಂದು ಕೇಳಿದರು.

"ಕಾರ್ಯಾಚರಣೆಯನ್ನು ಮುಂದುವರಿಸಲೇಬೇಕು. ಅದೇ ಅವರ ಕೊನೆಯಾಸೆಯಾಗಿತ್ತು. ಅದನ್ನವರು ನನ್ನ ಮುಂದೆ ಬಾಯಿಬಿಟ್ಟು ಹೇಳಿದ್ದಾರೆ. ಅವರ ಅಂತಿಮ ಆಸೆಯನ್ನು ನೆರವೇರಿಸು



"ನಾವು ಸಣ್ಣವರಿರುವಾಗಲೂ 'ಕಳ್ಳ-ಪೊಲೀಸ್' ಆಟವನ್ನು ಆಡಿದವರೇ.. ಈಗಲೂ ಅಷ್ಟೇ.."

ವದೇ ಅವರಿಗೆ ನಾವು ಸಲ್ಲಿಸಬಹುದಾದ ಗೌರವ," ನಾನು ಆವೇಶದಿಂದ ನುಡಿದೆ.

ಮರುದಿನ ಬೆಳಗಿನ ಜಾವದಲ್ಲಿ ಇನ್ನೂ ಕತ್ತಲಿರುವಾಗಲೇ ಆಜಾದರು ನನ್ನನ್ನೆಬ್ಬಿಸಿದರು. "ನಡೆ, ಈಗಲೇ ಅಲ್ಲಿಗೇ ಹೋಗೋಣ," ಎಂದು ನುಡಿದರು. ಮೇಲೆದ್ದು ಮುಖ ತೊಳೆದು ಸೈಕಲ್‌ಗಳನ್ನು ತಂದು ಹೊರಗಿಟ್ಟೆ. ಆಜಾದ್‌ಭಯ್ಯಾ, ಭಾಭೀ ಮತ್ತು ಸುಶೀಲಾದೀದಿಯವರಿಗೆ ನಾವು ಹೋಗುವ ಸಂಗತಿಯನ್ನು ತಿಳಿಸಲು ಒಳಗೆ ಹೋದರು. ಸುಶೀಲಾದೀದಿ ಅಂತಿಮ ದರ್ಶನಕ್ಕೆ ತಾನೂ ಬರುವದಾಗಿ ಆಗ್ರಹ ತೊಟ್ಟರು. ನಾನು ಅದಕ್ಕೆ ಒಪ್ಪಲಿಲ್ಲ. ಆದರೆ ಆಕೆ ಇನ್ನೂ ಆಗ್ರಹಪಡಿಸಿದರು. ಆಜಾದ್‌ಭಯ್ಯಾ "ಕರೆದುಕೊಂಡು ಹೋದರೆ ಏನು ತಪ್ಪು?" ಎಂದು ನನ್ನನ್ನೇ ಕೇಳಿದರು.

ಆ ಕಾಲದಲ್ಲಿ ಲಾಹೋರದ ಬೀದಿಗಳಲ್ಲಿ ಸ್ತ್ರೀಯರು ಪುರುಷರ ಹಿಂದೆ ಸೈಕಲ್ ಮೇಲೆ ಕುಳಿತುಕೊಂಡು ಹೋಗುವದು ಲೋಕಾಪವಾದಕ್ಕೆ ಗುರಿಯಾಗುವದಕ್ಕೆ ಒಂದು ದಾರಿಯಾಗಿತ್ತು. ಜನರು ಅವರ ಶೀಲ-ಚಾರಿತ್ರ್ಯದ ಬಗ್ಗೆ ಕತೆಗಳನ್ನು ಕಟ್ಟಿ ಹಾರಿಬಿಡುತ್ತಿದ್ದರು. ದುರ್ಗಾಭಾಭಿ ನಮ್ಮನ್ನು ಕಾಣಲು ಧರ್ಮಪಾಲ ಅಥವಾ ಧನ್ವಂತರಿಯೊಂದಿಗೆ ಸೈಕಲ್ ಮೇಲೆ ಕುಳಿತುಕೊಂಡು ಬಂದುದನ್ನು ನೋಡಿದ ಜನರು ಆಕೆಗೆ 'ಗಯ್ಯಾಳಿ' ಪಟ್ಟವನ್ನು ಕಟ್ಟಿ ಬಿಟ್ಟಿದ್ದರು. ಇದನ್ನೆಲ್ಲಾ ನೆನಸಿಕೊಂಡು ನಾನು, "ಬೀದಿ ದೀಪಗಳಿನ್ನೂ ಉರಿಯುತ್ತಿವೆ. ಅಲ್ಲಲ್ಲಿ ಪೊಲೀಸರು ಗಸ್ತು ತಿರುಗುತ್ತಿದ್ದಾರೆ. ಇಂತಹ ಅವೇಳೆಯಲ್ಲಿ ಮಹಿಳೆಯೊಬ್ಬಳು ಸೈಕಲ್ ಮೇಲೆ ಪುರುಷನ ಹಿಂದೆ ಕುಳಿತುಕೊಂಡು ಹೋಗುತ್ತಿರುವದನ್ನು ನೋಡಿದ ಜನರು ಏನಂದಾರು? ಅದೂ ಹೋಗಲಿ; ಈ ದೃಶ್ಯದಿಂದ ನಮ್ಮ ಮೇಲೆ ಸಂದೇಹವುಂಟಾದರೇನು ಮಾಡುವದು? ಅದಕ್ಕೇ ನಾನು 'ಬೇಡ' ಎಂದುದು," ಎಂದು ಹೇಳಿದೆ. ನನ್ನ ವಿವರಣೆಯಿಂದ ಸುಶೀಲಾದೀದಿಗೆ ಸಮಾಧಾನವಾಯಿತು. ಆಕೆ ತನ್ನ ಆಗ್ರಹವನ್ನು ಹಿಂದೆಗೆದುಕೊಂಡಳು. ದುರ್ಗಾಭಾಭಿ ಇನ್ನೂ ನಿಶ್ಚೇಷ್ಟಿತರಾಗಿಯೇ ಬಿದ್ದಿದ್ದರು. ನಾನು, ಆಜಾದ್ ಮತ್ತು ಬಚ್ಚನ್ ಮೂವರೂ ಸೇರಿ ಸೈಕಲ್ಲೇರಿ ಹೊರಟೆವು. ಬೆಳಕು ಮೂಡಣ ದಿಕ್ಕನ್ನು ಹರಿದು ಇಣುಕತೊಡಗಿತ್ತು. ಅಲ್ಲೊಂದು ಇಲ್ಲೊಂದು ಕಾಗೆ 'ಕಾ-ಕಾ' ಎಂದು ಕೂಗತೊಡಗಿದ್ದತ್ತು. ಲಾಹೋರದ ಕಾಗೆಗಳಿಗೆಲ್ಲ ಆ ಅಡವಿಯೇ ರಾತ್ರಿಯ ವಸತಿಗೃಹವಾಗಿತ್ತು. ನಮ್ಮ ಹೆಜ್ಜೆಗಳ ಸಪ್ಪಳದಿಂದ ಅವುಗಳಿಗೆ ನಿದ್ರಾಭಂಗ ಉಂಟಾಗಿರಬೇಕು. ಈಗ ಒಂದರ ನಂತರ ಒಂದು ಎದ್ದು ಕಾ-ಕಾ ಎಂದು ತಮ್ಮ ಬಳಗವನ್ನೆಲ್ಲಾ ಕರೆಯತೊಡಗಿದವು. ಅನತಿ ದೂರದಲ್ಲಿಯೇ ಭಗವತೀಚರಣರ ಮೃತದೇಹ ಬಿಳಿಯ ಹೊದ್ದಿಕೆಯಡಿಯಲ್ಲಿ ಅಡಗಿತ್ತು. ಕಾಡು ಪ್ರಾಣಿಗಳು ಅದನ್ನು ಎಳೆದಾಡಿದ ಕುರುಹುಗಳು ಕಂಡುಬರಲಿಲ್ಲ. ಹೊದಿಕೆಯ ಅಂಚಿನ ಮೇಲೆ ನಾವು ನಿನ್ನೆ ಹೇರಿದ ಕಲ್ಲುಗಳು ಹೇರಿದಂತೆಯೇ ಇದ್ದವು. ರಕ್ತದ ವಾಸನೆಯಿಂದ ಆಕರ್ಷಿತವಾದ ಕಟ್ಟಿರುವೆಗಳು ಹೊದಿಕೆಯ ಮೇಲೆ ಹರಿದಾಡುತ್ತಿದ್ದವು. ಅವುಗಳು ಶರೀರಕ್ಕೆ ಇನ್ನೂ ಮುತ್ತಿರಲಿಲ್ಲ. ಶವ ಸಂಸ್ಕಾರಕ್ಕೆ ಸೂಕ್ತ ಸ್ಥಳಕ್ಕಾಗಿ ನಾವು ಅತ್ತಿತ್ತ ಪರಿಶೀಲಿಸಿದೆವು.

ಸ್ಥಳಾವಕಾಶವೇನೋ ಸಾಕಷ್ಟಿತ್ತು. ಆದರೆ ಅಗೆದು ಕುಣಿ ತೋಡಲು ನಮ್ಮ ಬಳಿ ಸಲಿಕೆ-ಗುದ್ದಲಿಗಳು ಇರಲಿಲ್ಲ. ಸಲಕರಣೆಗಳಿದ್ದಿದ್ದರೆ ಆ ವೀರಯೋಧನ ಶವವನ್ನು ಸಮಾಧಿಗೊಳಿಸಬಹುದಿತ್ತು. ಅಲ್ಲಿಂದ ಕೇವಲ ಐವತ್ತು ಅರವತ್ತು ಗಜಗಳ ದೂರದಲ್ಲಿ ರಾವೀ ನದಿಯ ಟಿಸಿಲೊಂದು ಹರಿಯುತ್ತಿತ್ತು. ಆದರಲ್ಲಿ ನೀರು ಸಾಕಷ್ಟು ಆಳವಾಗಿತ್ತು. ಬೇರೆ ದಾರಿ

ಕಾಣದೆ ಶವವನ್ನು ಜಲಸಮಾಧಿ ಮಾಡಲು ನಾವು ತೀರ್ಮಾನಿಸಿದೆವು. ಮೇಲೆ ಹೊದಿಸಿದ ಹೊದಿಕೆಯನ್ನು ಹಾಸಿ ಅದರ ಮೇಲೆ ಶವವನ್ನು ಕುಳಿತ ಭಂಗಿಯಲ್ಲಿಟ್ಟೆವು. ಅಂಗಾಂಗಗಳು ಆಗಲೆ ಸೆಟೆಯ ತೊಡಗಿದ್ದರಿಂದ ಹಾಗೆ ಮಾಡಲು ತುಂಬಾ ತೊಂದರೆಯಾಯಿತು. ಶವದೊಂದಿಗೆ ಭಾರವಾದ ಕಲ್ಲುಗಳನ್ನೂ ಇರಿಸಿದೆವು. ಬಚ್ಚನ್ ಕಿಸೆಯಿಂದ ಕಿರುಗತ್ತರಿಯನ್ನು ತೆಗೆದು ಶವದ ತಲೆಗೂದಲನ್ನು ಕತ್ತರಿಸಿದ. ನಾವೆಲ್ಲರೂ ಆ ಕೂದಲಿನ ಸ್ವಲ್ಪ ಭಾಗವನ್ನು ಭಗವತೀ ಬಾಬುಗಳ ನೆನಪಿಗಾಗಿ ನಮ್ಮ ಬಳಿ ಇಟ್ಟುಕೊಂಡೆವು. ಹೊದಿಕೆಯಿಂದ ಬಿಗಿಯಾಗಿ ಗಂಟು ಕಟ್ಟಿ ಶವವನ್ನು ರಾವೀನದಿಯಲ್ಲಿ ಮುಳುಗಿಸಿ, ಭಾರವಾದ ಹೃದಯವನ್ನು ಹೊತ್ತು ಮನೆಯ ಹಾದಿ ಹಿಡಿದೆವು.

ಶೋಕದ ಕರಾಳ ನೆರಳು ಮನೆ ತುಂಬಾ ಮುಸುಕಿತ್ತು. ನಿಶ್ಶಬ್ದತೆ ತಾನೇ ತಾನಾಗಿ ಮೆರೆಯುತ್ತಿತ್ತು. ಊಟ-ಉಡುಗೆಯ ಮಾತಂತೂ ದೂರ; ಮಾತನಾಡುವ ಶಕ್ತಿಯು ಯಾರಲ್ಲಿಯೂ ಇರಲಿಲ್ಲ. ಆಜಾದರೊಬ್ಬರು ಮಾತ್ರ ಜೂನ್ ಒಂದರಂದು ನಡೆಸುವ ಕಾರ್ಯಾಚರಣೆಯ ಬಗ್ಗೆ ಮಾತನಾಡುತ್ತಿದ್ದರು.

ನಾನು ಉನ್ಮಾದಗೊಂಡಂತೆ, "ಕಾರ್ಯಾಚರಣೆ ಮಾಡಲೇಬೇಕು... ಮಾಡಲೇಬೇಕು... ಮಾಡಲೇಬೇಕು," ಎಂದು ಆಗಾಗ ಬಡಬಡಿಸುತ್ತಿದ್ದೆ. ಸುಶೀಲಾದೀದಿ ದುರ್ಗಾಭಾಭೀಯನ್ನು ಕಣ್ಣೀರು ಒರೆಸಿಕೊಳ್ಳುತ್ತಾ ಸಮಾಧಾನಪಡಿಸಲು ಯತ್ನಿಸುತ್ತಿದ್ದರು. ಆದರೆ ಮೌನವೇ ಅವರ ಪ್ರತಿಕ್ರಿಯೆಯಾಗಿತ್ತು. ಅವರ ಶರೀರ ನಿಶ್ಚಲ, ನಿಷ್ಪಂದವಾಗಿ ಬಿದ್ದಿರುತ್ತಿತ್ತು. ಮಿಸುಕದ ಕಣ್‌ರೆಪ್ಪೆಗಳು! ಶೂನ್ಯದಲ್ಲಿ ಸ್ಥಿರವಾಗಿ ನೆಟ್ಟ ದೃಷ್ಟಿ; ಚಲಿಸದಂತೆ ಹೊಲಿದ ಬಿಗಿತುಟಿಗಳು! ಆಜಾದರು ಅವರ ಬಳಿ ಕುಳಿತುಕೊಂಡು ಕ್ರಾಂತಿದಳಕ್ಕೆ ಅವರಿಂದಾದ ಉಪಕಾರವನ್ನೂ ದಳದ ಸದಸ್ಯರೆಲ್ಲ ಅವರ ಬಗ್ಗೆ ತಾಳಿದ ಗೌರವವನ್ನೂ ಹೇಳಿ ತಾವೆಲ್ಲಾ ಭಗವತೀಭಯ್ಯಾರ ಅಂತಿಮ ಆಸೆಯನ್ನು ಈಡೇರಿಸಿಯೇ ತೀರುತ್ತೇವೆಂದು ಅವರಿಗೆ ಭರವಸೆಕೊಡುತ್ತಿದ್ದರು. ಆದರೆ ಮೌನವೇ ಅವರ ಉತ್ತರವಾಗಿರುತ್ತಿತ್ತು! ಬಚ್ಚನ್ ಅವರ ಬಳಿ ಬಂದು ಬಿಕ್ಕಿ ಬಿಕ್ಕಿ ಅಳತೊಡಗಿದಾಗ ಮಾತ್ರ ಅವರ ಬಲಗೈ ಮೇಲೆದ್ದು ಅವನ ನೆತ್ತಿಯ ಮೇಲೆ ಮೆಲ್ಲಗೆ ಚಲಿಸಿ ಸಾಂತ್ವನಗೊಳಿಸಲು ಯತ್ನಿಸುತ್ತಿತ್ತು. ಬಚ್ಚನ್‌ಗೆ ಆಜಾದ್‌ಭಯ್ಯಾ ಮತ್ತು ಭಗವತೀಬಾಬುಗಳ ಬಗೆಗೆ ಅಪರಿಮಿತ ಪ್ರೀತಿ ಮತ್ತು ಗೌರವಗಳಿದ್ದವು. ಅವನು "ಆಜಾದ್ ಭಯ್ಯಾ ನನ್ನ ಹೃದಯದಲ್ಲಿ ಕ್ರಾಂತಿ ಕಿಡಿಯನ್ನೆಬ್ಬಿಸಿದರೆ, ಆ ಕಿಡಿಯನ್ನು ಜ್ವಾಲೆಯಾಗಿ ಬೆಳಗುವಂತೆ ಬೆಳೆಸಿದವರು ಭಗವತೀ ಬಾಬು. ಅವರನ್ನು ನಾನು ಹೇಗೆತಾನೆ ಮರೆಯಲಿ!" ಎಂದು ಗೋಳಾಡುತ್ತಿದ್ದ.

ಆ ದುರ್ಘಟನೆಯ ವಿವರಗಳು ಬಚ್ಚನ್‌ನಿಂದ ನಿಚ್ಚಳವಾಗಿ ತಿಳಿದು ಬಂದವು. ನಾನು ಬಾಂಬುಗಳ ಕವಚಗಳಿಗೆ ರೋಗನ್ ಲೇಪಿಸಿ ಒಣಗಲು ಇಟ್ಟ ನಂತರ ಸುಖದೇವರಾಜ ಬಂದು ಅವಸರಪಡಿಸಿ ಬೇಗನೇ ಒಣಗಿಸಬೇಕೆಂದು ಬಿಸಿಲಲ್ಲಿ ಇಟ್ಟ. ಬಿಸಲಲ್ಲಿಟ್ಟರೆ ರೋಗನ್ ಬೇಗನೇ ಒಣಗಿ ಹೋಗುತ್ತದೆಂದು · ಆತನ ಲೆಕ್ಕಾಚಾರ! ಒಂದೆರಡು ಗಂಟೆಗಳಾಗುತ್ತಲೆ ಪಿಕ್ರಿಕ್ ಆಸಿಡ್ ತುಂಬಲು ಅವಸರಪಡಿಸತೊಡಗಿದ. ಅವನ ಆತುರಕ್ಕೆ ಮಣಿದ ಭಗವತೀಬಾಬುಗಳು ಪಿಕ್ರಿಕ್ ಆಸಿಡ್ ತುಂಬಿದರು.

"ಅವುಗಳಲ್ಲಿ ಒಂದರ ಟ್ರಿಗರ್ ಸಡಿಲಾಗಿದೆಯೆಂದು ನಾನು ಎಚ್ಚರಿಸಿರಲಿಲ್ಲವೇ?" ಅವನ ಮಾತಿನ ಮಧ್ಯ ಬಾಯಿಹಾಕಿದೆ.

"ನಾನು ನೋಡಿದಾಗ ನನಗೇನೂ ಅನಿಸಲಿಲ್ಲ" ಎಂದುತ್ತರ ಕೊಟ್ಟ ಬಚ್ಚನ್ ತನ್ನ ವಿವರಣೆಯನ್ನು ಮುಂದುವರಿಸಿದ-

"ಬಾಂಬಿನಲ್ಲಿ ಪಿಕ್ರಿಕ್ ಆಸಿಡ್ ತುಂಬಿದ ನಂತರ ನಾವು ಮೂವರೂ ಅವುಗಳನ್ನು ಪ್ರಯೋಗಿಸಿ ನೋಡಬೇಕೆಂದು ಸೈಕಲ್ ಮೇಲೆ ರಾವೀ ನದಿಯತ್ತ ಸಾಗಿದೆವು. ನದಿ ದಂಡೆಯ ಮೇಲೆ ಸೈಕಲ್‌ಗಳನ್ನಿಟ್ಟು ಕಾಡಿನೊಳಗೆ ಹೊಕ್ಕೆವು. ನಿರ್ಜನ ಪ್ರದೇಶದಲ್ಲಿ ಭಗವತೀಬಾಬು ಬಾಂಬೆಸೆಯಲು ಸಿದ್ಧರಾದರು. ಒಂದು ಬಾಂಬನ್ನು ತೆಗೆದುಕೊಂಡು ಟ್ರಿಗರ್ ಏರಿಸುವಾಗ, 'ಇದರ ಟ್ರಿಗರ್ ಸಡಿಲಾಗಿದೆ. ಇದನ್ನು

ಹಾಗೆಯೇ ಇಡೋಣ; ಇನ್ನೊಂದನ್ನು ಎಸೆಯೋಣ' ಎಂದರು. ಸುಖದೇವರಾಜ, 'ನಿಮಗೆ ಅದನ್ನು ಪ್ರಯೋಗಿಸಲು ಭಯವಾಗುತ್ತಿದೆಯೆ? ಅದನ್ನಿಲ್ಲಿ ಕೊಡಿರಿ; ನಾನೇ ಎಸೆಯುತ್ತೇನೆ," ಎಂದರು.

ಭಗವತೀಬಾಬೂ ನಗುತ್ತಾ, 'ಹೀಗೋ, ನಿನ ಗಾದುದೇ ನನಗಾಗುತ್ತದೆ. ಅದಕ್ಕೇಕೆ ಅಂಜಿಕೆ?' ಎಂದು ನುಡಿದು ಅದೇ ಬಾಂಬನ್ನು ಕೈಯಲ್ಲಿ ಹಿಡಿದು ಎಸೆಯುವಷ್ಟರಲ್ಲಿಯೇ "ಢಂ... ಢಂ...ಢಡಂ" ಎಂದು ಬಾಂಬು ಸ್ಫೋಟಗೊಂಡಿತು. ನೋಡಲಸಾಧ್ಯವಾದ ನೋಟ ಅಲ್ಲಿ ನಿರ್ಮಾಣ ಗೊಂಡಿತ್ತು! ಭಗವತೀ ಬಾಬು ನೆತ್ತರಿನ ಹೊಂಡ ದಲ್ಲಿ ಮುಳುಗಿದ್ದರು. ಸುಖದೇವರಾಜನ ಕಾಲಿಗೂ ಭಯಂಕರ ಗಾಯವಾಗಿತ್ತು!" ಎಂದು ಬಿಕ್ಕುತ್ತಾ ಉಕ್ಕಿ ಬರುತ್ತಿದ್ದ ಅಳುವನ್ನು ಹತ್ತಿಕ್ಕುತ್ತಾ ತಡೆ-ತಡೆದು ಹೇಳಿ ಮುಗಿಸಿದ.

"ಒಂದು ವೇಳೆ ಬಾಂಬಿನ ಟ್ರಿಗರ್ ಬಿಗಿಯಾ ಗಿದ್ದರೆ..."

'ಟ್ರಿಗರ್ ಸಡಿಲಾದ ಆ ಬಾಂಬಿನ ಕವಚವೇ ಅವರಿಗೆ ಸಿಗದ್ದರೆ...'

'ನಾನು ನೋಡಿದಾಗಲೇ ಅದನ್ನು ಸರಿಪಡಿಸಿ ಇಟ್ಟಿದ್ದರೆ....'ಇಂತಹ ಅನೇಕ 'ರೆ'ಗಳ ಸುಳಿಯಲ್ಲಿ ಸಿಕ್ಕ ನನ್ನ ಮನಸ್ಸು ಆತ್ಮಗ್ಲಾನಿಗೆ ಒಳಗಾಯಿತು. ಭಗವತೀ ಭಾಯಿಯ ನೋವಿಗೆ, ಅವರ ಸಾವಿಗೆ ಪರೋಕ್ಷವಾಗಿ ನಾನೇ ಕಾರಣನೆನಿಸತೊಡಗಿತು. ಆತ್ಮಗ್ಲಾನಿಯಲ್ಲಿ ಮುಳುಗಿ ಕುತ್ತುಸುರು ಬಿಡುತ್ತಿದ್ದ ನನಗೆ ದುರ್ಗಾಭಾಬೀಯನ್ನು ಸಾಂತ್ವನಗೊಳಿಸಲು ಬಾಯಿಯೇ ಬರಲಿಲ್ಲ. ದುರ್ಭರ ದುಃಖಕ್ಕೆ ಸಿಲುಕಿದ ಆಕೆಗೆ ನಾಲ್ಕು ಸಾಂತ್ವನದ ಮಾತುಗಳನ್ನು ಬಿಟ್ಟು ಬೇರೇನನ್ನೂ ನಾನು ಕೊಡಲಾರೆನೆಂಬ ಅಲ್ಪ ಸಂಗ ತಿಯೂ ನನ್ನ ಜಡಮತಿಗೆ ಆಗ ಹೊಳೆಯದೆ ಹೋಯಿತಲ್ಲ! ನಮ್ಮ ಕ್ರಾಂತಿದಳದ ಸದಸ್ಯರಲ್ಲಿ ಅವರ ಸಂಪರ್ಕ ನನಗೆ ಎಲ್ಲರಿಗಿಂತ ಮೊದಲು ದೊರೆಯಿತು. ಹೀಗಿದ್ದರೂ ನಾನು ಅವರೊಂದಿಗೆ ಉಸಿರೆತ್ತಲಿಲ್ಲ! ಬಹುಶಃ ಭಗವತೀಭಾಯಿಯ ಮರ ಣದಿಂದ ನನಗೆ ಎಲ್ಲರಿಗಿಂತ ಹೆಚ್ಚು ಹಾನಿಯಾಗಿದೆ ಯೆಂದು ನನ್ನಷ್ಟಕ್ಕೆ ನಾನೇ ಭಾವಿಸಿಕೊಂಡದ್ದೇ ಇದಕ್ಕೆ ಕಾರಣವಿರಬಹುದು! ಅಷ್ಟೇ ಅಲ್ಲ, ದುರ್ಗಾಭಾ ಭಿಯ ದುಃಖಕ್ಕಿಂತಲೂ ನನ್ನ ದುಃಖವೇ ಹೆಚ್ಚಿನ ದೆಂದು ನಾನು ಭಾವಿಸಿದ್ದೆ. ಒಂದೇ ಒಂದು ಬಾರಿಯಾದರೂ ಅವರ ಬಳಿ ಸಾರಿ ಒಂದೆರಡು ಸಾಂತ್ವನದ ಮಾತುಗಳನ್ನಾಡುವ ಸಾಹಸವನ್ನೂ ನಾನು ಮಾಡಿರಲಿಲ್ಲ! ಬಹಳ ದಿನಗಳ ನಂತರ ನನಗೆ ನನ್ನ ತಪ್ಪಿನ ಅರಿವಾಯಿತು. ನಮ್ಮ ಹಾನಿ ಮತ್ತು ದುಃಖಗಳಿಂತ, ಬೇರೆಯವರಿಗಾದ ಹಾನಿ ದುಃಖಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕೆಂಬ ಸರಳ ಸಂಗತಿಯನ್ನೂ ತಿಳಿದುಕೊಳ್ಳದಿರುವದೇ ಮಾನವನ ಸ್ವಾರ್ಥ್ಯದ ಮೂಲವೆಂದು ನಾನು ಬಹಳ ತಡವಾಗಿ ಅರಿತೆ.

(ಯಶಪಾಲರ್ 'ಫಾಂಸಿ ಕೆ ಫಂದೆ ತಕ್' ಪುಸ್ತಕದಿಂದ)

ದಾಖಲೆ ಸ್ಥಾಪಿಸಲು ಗಾಳಿಯ ನೆರವು

ಫೆಬ್ರವರಿ ೧೭, ೧೯೭೪ರಂದು ನಡೆದ ಫುಟ್‌ಬಾಲ್ ಆಟದ ವೇಳೆಯಲ್ಲಿ ೨೩ ವರ್ಷದ ರಾಬರ್ಟ್ ಸ್ಮಿತ್ ಎಂಬ ಆಟಗಾರ ತನ್ನ ಬಳಿಗೆ ಹಾರಿಬಂದ ಚೆಂಡನ್ನು ಒದ್ದರು. ಮೊದಲ ಒದೆತಕ್ಕೇ ಚೆಂಡು ೨೧೨ ಅಡಿ ದೂರಕ್ಕೆ ಹೋಯಿತು!

ಅದೇ ರೀತಿಯಲ್ಲಿ ಹಿಂದೊಮ್ಮೆ ಅಂದರೆ ೧೯೬೭ರಲ್ಲಿ ೧೯ ವರ್ಷದ ರೋಜರ್ ಡಿ. ವಿಲಿಯಮ್ಸ್ ಎಂಬ ಲಂಡನ್ ಆಟಗಾರ, ಚೆಂಡನ್ನು ಒದ್ದು ೨೨೦ ಅಡಿ ದೂರಕ್ಕೆ ಕಳುಹಿಸಿದ್ದರು. ಅದೊಂದು ದಾಖಲೆ. ಆಗ ಅವರಿಬ್ಬರೂ ಧರಿಸಿದ್ದು ಸಾಮಾನ್ಯ ದರ್ಜೆಯ ಶೂಗಳೇ. ನಿಜವಾಗಿಯೆಂದರೆ ಆ ದಿಕ್ಕಿಗೆ ಬೀಸಿದ ಗಾಳಿ ಅವರಿಗೆ ನೆರವಾಯಿತು ಅಂದರು ವೀಕ್ಷಕರು. ಈ ದಾಖಲೆಯನ್ನು ಇಲ್ಲಿಯವರಿಗೂ ಯಾರೂ ಮುರಿದಿಲ್ಲ.

- ಮಧು ಎಸ್. ಹಿರೇಮನಿ

ದಕ್ಷಿಣದಲ್ಲಿ ಸ್ವಾತಂತ್ರ್ಯ ಸಮರ



ಗಾಝಿಯೋಂ ಮೆ ಬೂರಹೇಗಿ ಜಬ ತಲಕ ಈ ಮಾನಕಿ ತಬತಕತೋ ಲಂಡನತಕ ಚಲೇಗಿ ತೇಗ ಹಿಂದುಸ್ಥಾನ ಕಿ

(ಸ್ವಾತಂತ್ರ್ಯ ಯೋಧರಲ್ಲಿ ಧರ್ಮದ ಬಗೆಗೆ ಆಸ್ಥೆಯಿರುವವರೆಗೂ ಭಾರತದ ಖಡ್ಗ ಲಂಡನ್ನಿನ ವರೆಗೂ ಝಳಪಿಸುವುದು.)

ಮೇ ೧೦, ೧೮೫೭ ರಂದು ರವಿವಾರದ ದಿವಸ ಮೀರತ್ ಪಟ್ಟಣದಲ್ಲಿ ಸಿಡಿದೆದ್ದ ಬಂಡಾಯದಿಂದ ಭಾರತದ ಪ್ರಥಮ ಸ್ವಾತಂತ್ರ್ಯ ಸಮರ ಪ್ರಾರಂಭವಾಯಿತು.

ಭಾರತೀಯರಲ್ಲಿ ಕ್ರಾಂತಿಭಾವನೆಯನ್ನು ಪುನರುಜ್ಜೀವಿಸಲು ಮೀರತ್‌ನ ಬಂಡಾಯ ನಡೆದ ಐವತ್ತು ವರ್ಷಗಳ ನಂತರ ಲಂಡನ್ನಿನಲ್ಲಿ ಉಚ್ಚ ಶಿಕ್ಷಣವನ್ನು ಪಡೆಯುತ್ತಿದ್ದ ಇಪ್ಪತ್ತನಾಲ್ಕು ವರ್ಷದ ಯುವಕ ಬ್ಯಾರಿಸ್ಟರ್ ವೀರ ಸಾವರಕರರು ಸುಮಾರು ನಾಲ್ಕುನೂರು ಪುಟಗಳಷ್ಟು ವಿಸ್ತಾರವಾದ ಗ್ರಂಥವೊಂದನ್ನು ಸಿದ್ಧಪಡಿಸಿದರು. ಮೊಗಲರ ಕೊನೆಯ ಅರಸನಾದ ಬಹಾದ್ದೂರ ಶಾಹನು ರಚಿಸಿದ, ಮೇಲೆ ಉಲ್ಲೇಖಿಸಿದ ಗಝಲದೊಂದಿಗೆ ಸಾವರಕರರು ತಮ್ಮ ಗ್ರಂಥವನ್ನು ಕೊನೆಗೊಳಿಸಿದ್ದಾರೆ. ಅವರು ಲಂಡನ್ನಿಗೆ ಹೋದದ್ದು, ಅಲ್ಲಿ ಕ್ರಾಂತಿ ಸಮ್ಮೇಳನಗಳನ್ನು ನಡೆಸಿದ್ದು 'ತಬತೋ ಲಂಡನ್ ತಕ್ ಚಲೇಗಿ ತೇಗ ಹಿಂದುಸ್ತಾನ ಕೀ' ಎಂಬಂತೆ ಇತ್ತು ಎಂದು ಹೇಳಬಹುದು.

೧೮೫೭ರ ಈ ಯುದ್ಧವು ಉತ್ತರ ಭಾರತಕ್ಕೆ ಮಾತ್ರ ಸೀಮಿತವಾಗಿತ್ತೆಂದು ಮತ್ತು ಇದು ಸಿಪಾಯಿಗಳ ದಂಗೆಯಾಗಿತ್ತೆಂಬ ತಪ್ಪು ತಿಳಿವಳಿಕೆ ಇಂದಿಗೂ ಪ್ರಚಾರದಲ್ಲಿದೆ. ಸ್ವತಃ ಸಾವರಕರರೂ ತಮ್ಮ ನಾಲ್ಕುನೂರು ಪುಟಗಳ ಗ್ರಂಥದಲ್ಲಿ ದಕ್ಷಿಣ ದಿಕ್ಕಿನಲ್ಲಿ ಕೊಲ್ಲಾಪುರ, ಸಾತಾರಾ, ಬೆಳಗಾಂವ, ಮುಂಬಯಿ, ಹೈದ್ರಾಬಾದ್, ಸುರಪುರ, ನರಗುಂದ,

ಲಭ್ಯ ದಾಖಲೆಗಳಲ್ಲಿ ದಕ್ಷಿಣ ಭಾರತದ ಅನೇಕ ಕಡೆ ಸ್ವಾತಂತ್ರ್ಯ ಸಂಗ್ರಾಮದ ಜ್ವಾಲೆ ಹಬ್ಬಿದ್ದು ಕಂಡು ಬರುತ್ತದೆ.

ಮೂಲ: ಡಾ. ವಾ.ದ. ದಿವೇಕರ
ಸಂಗ್ರಹಾನುವಾದ: ಎಸ್.ಬಿ.ಎನ್.

('ಕೇಸರಿ' ಪತ್ರಿಕೆಯಿಂದ ಸಾಭಾರ)

ಕೊಪ್ಪಳ, ಸಾವಂತವಾಡಿ ಮುಂತಾದ ಸ್ಥಳಗಳಲ್ಲಿ ನಡೆದ ಘಟನೆಗಳನ್ನು ನಾಲ್ಕೈದು ಪುಟಗಳಲ್ಲಿ ಹೇಳಿ ಮುಗಿಸಿದ್ದಾರೆ. ಇದಕ್ಕೆ ಮುಖ್ಯ ಕಾರಣವೆಂದರೆ ಸಾವರಕರರು ತಮ್ಮ ಗ್ರಂಥವನ್ನು ಲಂಡನ್ನಿನ ಇಂಡಿಯಾ ಆಫೀಸಿನ ಗ್ರಂಥಾಲಯದ ಪ್ರಯೋಜನ ಪಡೆದು ಬರೆದದ್ದು. ಆ ಗ್ರಂಥಾಲಯದಲ್ಲಿ ಕಾಯೆ, ಮೆಲ್‌ಸನ್, ಬಾಬ್ ಕಾಲಿನ್ಸ್, ವಿಲಿಯಮ್ಸ್, ಟ್ರೆವ್ಹೆಲಿಯನ್ ಮುಂತಾದವರ ಗ್ರಂಥಗಳು ಮಾತ್ರ ಉಪಲಬ್ಧವಾಗಿದ್ದವು. ಸ್ವಾತಂತ್ರ್ಯ ಸಮರದ ಮಹತ್ವವನ್ನು ಸಾಧ್ಯವಾದಷ್ಟು ಕಡಿಮೆ ಮಾಡಿ ತೋರಿಸಲು ಮತ್ತು ಅದರ ವ್ಯಾಪ್ತಿಯನ್ನು ಸಂಕುಚಿತಗೊಳಿಸಿ ತೋರಿಸಲು ಈ ಪಾಶ್ಚಾತ್ಯ ಗ್ರಂಥಕರ್ತರು ತಮ್ಮ ಗ್ರಂಥಗಳಲ್ಲಿ ಯತ್ನಿಸಿದ್ದಾರೆ. ಅವರ ಲೇಖನಗಳಲ್ಲಿ ವಸಾಹತುವಾದ ಪ್ರಚ್ಛನ್ನವಾಗಿ ಸೇರಿಕೊಂಡಿತ್ತು. ನಮ್ಮಲ್ಲಿ ತಮ್ಮ ಅಹಮಿಕೆಯನ್ನು ಮೆರೆಸುವ ಅನೇಕ ಭಾರತೀಯ ಲೇಖಕರೂ ಪಾಶ್ಚಾತ್ಯರು ಹಾಕಿಕೊಟ್ಟ ಈ ಧಾಟಿಯಲ್ಲಿಯೇ ತಾವೂ ಹಾಡಿದರು. ಇಂತಹುದರಲ್ಲಿ ಆ ಕಾಲದ ಸ್ವಾತಂತ್ರ್ಯ ಸಮರದ ಬಗೆಗೆ ಸಾಧಾರವಾಗಿ ವಿವರಗಳನ್ನು ಒದಗಿಸಿ ಜನಜಾಗೃತಿಯನ್ನುಂಟು ಮಾಡಲು ಪ್ರಯತ್ನಿಸಿದ್ದು ವೀರ ಸಾವರಕರರ ಘನತೆಯ ಸಂಕೇತವೇ ಆಗಿದೆ. ಅನಂತರದಲ್ಲಿ ನಡೆದ ಸಂಶೋಧನೆಗಳು ಅವರು ಸಾಧಿಸಿದ ತತ್ವಶೋಧನೆಯನ್ನು ಪುಷ್ಟೀಕರಿಸುತ್ತವೆ.

ಈ ದಿಶೆಯಲ್ಲಿ ಸಂಶೋಧನೆ ನಡೆಸುವುದಕ್ಕಾಗಿ ಪುಣೆಯ ಟಿಳಕ ಸ್ಮಾರಕ ಟ್ರಸ್ಟ್ ಈಗ ಕಾರ್ಯೋನ್ಮುಖವಾಗಿದೆ. ತತ್ಕಾಲೀನ ಕಾಗದ ಪತ್ರಗಳನ್ನು, ಪೊಲೀಸ್ ವರದಿಗಳನ್ನು, ನ್ಯಾಯ ನಿರ್ಣಯಗಳನ್ನು, ರಾಜಕೀಯ ಮತ್ತು ಸೈನಿಕ ಕಾರ್ಯಾಚರಣೆಯ ಕಲಾಪಗಳನ್ನು, ವೃತ್ತಪತ್ರಗಳ ವರದಿ-ಲೇಖನಗಳನ್ನು, ಲಾವಣಿಗಳನ್ನು ಅದು ಸಂಗ್ರಹಿಸುತ್ತಿದೆ. ಅದಕ್ಕಾಗಿ ಬೇರೆ ಬೇರೆ ಪತ್ರಾಗಾರ (Archives)ಗಳೊಂದಿಗೆ ಸಂಬಂಧ ಬೆಳೆಸಿಕೊಂಡಿದೆ.

೧೮೫೭ರ ಸ್ವಾತಂತ್ರ್ಯ ಸಮರದಲ್ಲಿ ಮರಣ ಹೊಂದಿದ, ಗಲ್ಲಿಗೇರಿದ, ಆಜನ್ಮ ಶಿಕ್ಷೆಗೆ ಒಳಗಾದ, ಕಪ್ಪು ನೀರಿನ ಶಿಕ್ಷೆ ಅನುಭವಿಸಿದ ನೂರಾರು ಜನರ ಹೆಸರುಗಳನ್ನು ಈಗಾಗಲೇ ಸಂಗ್ರಹಿಸಲಾಗಿದೆ. ಇವರಲ್ಲಿ ಹಿಂದುಗಳಿದ್ದಾರೆ, ಮುಸಲ್ಮಾನರಿದ್ದಾರೆ, ಗೋವೆಯ ಕ್ರಿಶ್ಚಿಯನ್ನರಿದ್ದಾರೆ, ಬ್ರಾಹ್ಮಣರು, ಲಿಂಗಾಯಿತರು, ಬೇಡರು, ಮರಾಠರು, ಕೋಳಿಗಳು, ಭಿಲ್ಲರು, ಅರಸರು, ಸೈನಿಕರು, ಕೃಷಿಕರು, ಕಾರಕೂನರು, ನಾಪಿತ ಮತ್ತು ಸಿಂಪಿಗರು ಹೀಗೆ ವಿವಿಧ ಜಾತಿಯ ಮೂಲಗಳಿಗೆ ಸೇರಿದವರಿದ್ದಾರೆ. ಹೀಗೆ ಸಿದ್ಧವಾದ ಈ ಯಾದಿಯು ದಕ್ಷಿಣ ಭಾರತಕ್ಕೆ ಮಾತ್ರ ಸದ್ಯ ಸೀಮಿತವಾಗಿದೆ. ಉತ್ತರ ಭಾರತದ ಯಾದಿಯ ಸಿದ್ಧತೆ ಮುಂದುವರೆದಿದೆ.

ಲಭ್ಯ ದಾಖಲೆಗಳನ್ನು ಗಮನಿಸಿದಾಗ ದಕ್ಷಿಣ ಭಾರತದ ಮುಚಲೀಪಟ್ಟಣ, ಕಡಪ್ಪ, ನೆಲ್ಲೂರ, ಇಷ್ಟೇ ಏಕೆ, ದೂರ ದಕ್ಷಿಣದಲ್ಲಿಯ ಮದ್ರಾಸ್, ಚೆಂಗಲಪೇಟೆ, ಮೈಸೂರು, ಕೊಯಮತ್ತೂರುಗಳಲ್ಲಿಯೂ ಸ್ವಾತಂತ್ರ್ಯ ಸಂಗ್ರಾಮದ ಜ್ವಾಲೆ ಹಬ್ಬಿದ್ದು ಕಂಡುಬರುತ್ತದೆ. ಆದರೆ ಈ ವಿಪ್ಲವಗಳು ಸುಸಂಘಟಿತವಾಗಿರಲಿಲ್ಲ, ರೊಚ್ಚಿಗೆದ್ದ ಸಾಮಾನ್ಯ ಜನತೆ ಅಲ್ಲಲ್ಲಿ ಪುಟಿದಿದ್ದ ಹೋರಾಟಗಳಾಗಿದ್ದವು. ಕಾಲಾಂತರದಲ್ಲಿ ಬ್ರಿಟಿಷರ ಸುಸಂಘಟಿತವಾದ ಕ್ರೂರವಾದ ದಬ್ಬಾಳಿಕೆಗೆ ಒಳಗಾಗಿ ಆ ಹೋರಾಟಗಳು ನಿಷ್ಕ್ರಿಯವಾದವು ಎನ್ನುವುದೊಂದು ಬೇರೆ ವಿಷಯ. ಆದರೆ ಹೋರಾಟ ದೂರದ ದಕ್ಷಿಣದಲ್ಲಿಯೂ ನಡೆಯಿತು ಎನ್ನುವುದನ್ನು ಅಲಕ್ಷಿಸಲಾಗದು.

ದಕ್ಷಿಣದಲ್ಲಿ ನಡೆದ ಈ ಹೋರಾಟಗಳ ವಿವರಗಳು ಬಹಳ ವಿಸ್ತಾರವಾಗಿದ್ದು, ಅವುಗಳಲ್ಲಿಯ ಕೆಲವೊಂದು ಸಂಗತಿಗಳನ್ನು ಮಾತ್ರ ಕೊಡಲು ಈ ಲೇಖನದಲ್ಲಿ ಯತ್ನಿಸಲಾಗಿದೆ. ಈ ವಿವರಣೆ ಸರ್ವಸಂಗ್ರಾಹಕ ಅಥವಾ ಸರ್ವವ್ಯಾಪಿಯಾಗಿರದೆ ನಿರ್ದೇಶಕ ಮಾತ್ರವಾಗಿದೆ ಎಂಬುದನ್ನು ಮರೆಯುವಂತಿಲ್ಲ.

ತಮಿಳುನಾಡು

೧೮೫೭ರಲ್ಲಿ ಮದ್ರಾಸಿನಲ್ಲಿ ಬ್ರಿಟಿಷರಿಗೆ ವಿರುದ್ಧವಾದ ಭಿತ್ತಿಪತ್ರಗಳನ್ನು ಅಂಟಿಸುತ್ತಿದ್ದುದಕ್ಕಾಗಿ ಇಬ್ಬರನ್ನು ಬಂಧಿಸಲಾಯಿತು. ಬ್ರಿಟಿಷರ ವಿರುದ್ಧ ಇನ್ನಿತರ ಚಟುವಟಿಕೆಗಳು ಬಹಳ ವ್ಯಾಪಕ ಪ್ರಮಾಣದ ಮೇಲೆ ಮದ್ರಾಸ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಡೆದದ್ದರ ಉಲ್ಲೇಖಗಳು ದೊರೆತಿವೆ.

ಆಗ ಭೀಮರಾಯನ ಬಳಿಯಲ್ಲಿ ದಕ್ಷಿಣದ ಕಡೆಯ ಜನತೆಯನ್ನು ಮಾತ್ರ ಉದ್ದೇಶಿಸಿ ಬಾಬಾ ಸಾಹೇಬ ಪೇಶ್ವೆ ಹೊರಡಿಸಿದ ಒಂದು ಪ್ರಕಟಣೆಯ ಹನ್ನೆರಡು ಪುಟಗಳು ಬ್ರಿಟಿಷರಿಗೆ ದೊರೆತವು. ದೇಶದ ಇತರೆಡೆಗಳಲ್ಲಿಯೂ ಇಂತಹ ಪ್ರಕಟಣೆಗಳು ದೊರೆತಿದ್ದವು. ಕೊಪ್ಪಳದ ಭದ್ರಕೋಟೆಯನ್ನು ವಶಪಡಿಸಿಕೊಳ್ಳಬೇಕೆಂಬುದು ಕ್ರಾಂತಿಕಾರಿಗಳ ವಿಸ್ತೃತ ಯೋಜನೆಯ ಒಂದು ಅಂಗವಾಗಿತ್ತು.

ಮುಧೋಳ ಸಂಸ್ಥಾನದ ಹಲಗಲಿಯ ಗ್ರಾಮ ಬೇಡರು ತಮ್ಮ ಸ್ವಾತಂತ್ರ್ಯಪ್ರಿಯತೆಯನ್ನು ವ್ಯಕ್ತಪಡಿಸಿ, ಬ್ರಿಟಿಷ್ ಸೈನ್ಯದೊಂದಿಗೆ ಹೋರಾಡಿ ಅಸುನೀಗಿದ ದುರಂತ ಘಟನೆ ಕರ್ನಾಟಕದ ಲಾವಣಿಗಳಲ್ಲಿ ಇಂದಿಗೂ ಪ್ರತಿಧ್ವನಿಸುತ್ತಿದೆ. ಈ ಘಟನೆ ನಡೆದದ್ದು ೧೮೫೭ರ ನವೆಂಬರ್ ೨೭ ರಿಂದ ೩೦ರ ವರೆಗೆ. ಸುರಪುರದ ಬೇಡರು ಕೂಡ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹಿಂದೆ ಬೀಳಲಿಲ್ಲ. ಅದೇ ವರ್ಷದ ಫೆಬ್ರವರಿ ೭-೮ ರಂದು ಅವರು ಕೂಡ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು. ಸುರಪುರದ ಅರಸನಾದ ವೆಂಕಟಪ್ಪ ನಾಯಕನಿಗೆ ಜೀವಾವಧಿ ಶಿಕ್ಷೆಯನ್ನು ವಿಧಿಸಲಾಯಿತು. ಆದರೆ ಕಾರಾಗೃಹವಾಸಕ್ಕಿಂತ ಮೃತ್ಯುವೇ ಮೇಲೆಂದು ಭಾವಿಸಿದ ಆ ಸ್ವಾಭಿಮಾನಿ ಅರಸ ಅಂದಮಾನಕ್ಕೆ ಸಾಗಿಸಿಕೊಂಡು ಹೊರಟ ದಾರಿಯಲ್ಲಿಯೇ ಪಿಸ್ತೂಲು ಹಾರಿಸಿಕೊಂಡು ಆತ್ಮ ಬಲಿದಾನ ಮಾಡಿದ.

ಹೈದ್ರಾಬಾದ್ ನಿಜಾಮ ೧೮೫೭ರಲ್ಲಿ ಬ್ರಿಟಿಷರಿಗೆ ಅನುಕೂಲನೇ ಆಗಿದ್ದ. ಆದರೆ ಅವನ ರಾಜ್ಯದಲ್ಲಿಯೂ ಅಲ್ಲಲ್ಲಿ ಬ್ರಿಟಿಷರ ವಿರುದ್ಧ ದಂಗೆಗಳು ಎದ್ದವು. ಕೆಲವೊಂದು ದಂಗೆಗಳು ಸೈನಿಕರಿಂದ ಪ್ರಾರಂಭಗೊಂಡಿದ್ದರೆ ಇನ್ನಿತರ ದಂಗೆಗಳನ್ನು ನಾಗರಿಕರೇ ಪ್ರಾರಂಭಿಸಿದ್ದರು. ಮೀರತ್‌ನಲ್ಲಿಯ ಬಂಡಾಯ ೧೮೫೭ರ ಜೂನ್ ೧೨ ರಂದು ನಡೆಯಿತು ಎಂಬುದು ಎಲ್ಲರಿಗೂ ಗೊತ್ತಿದ್ದದ್ದೆ. ಅದು ನಡೆದ ಹನ್ನೆರಡೇ ದಿನಗಳಲ್ಲಿ ಹೈದ್ರಾಬಾದ್ ರಾಜ್ಯದ ಔರಂಗಾಬಾದ್‌ನಲ್ಲಿಯೂ ಇಂಥದೇ ದಂಗೆ ಎದ್ದಿತ್ತು. ಈ ದಂಗೆಗಾರರಿಗೂ ನಾನಾಸಾಹೇಬ ಪೇಶ್ವೆಗೂ ಇದ್ದ ಸಂಬಂಧವನ್ನು ಸಿದ್ಧಪಡಿಸುವ ಸಾಕಷ್ಟು ಕಾಗದಪತ್ರಗಳು ಹೈದ್ರಾಬಾದಿನ ಪತ್ರಾಗಾರದಲ್ಲಿ ಇಂದಿಗೂ ದೊರೆಯುತ್ತವೆ. ಹೈದ್ರಾಬಾದ್ ನಗರದಲ್ಲಿ ವಾಸಿಸುತ್ತಿದ್ದ ಬ್ರಿಟಿಷ್ ಪೊಲಿಟಿಕಲ್ ರೆಸಿಡೆಂಟನ ಕೊಲೆ ಮಾಡಲು ಹಲವಾರು ಯತ್ನಗಳು ನಡೆದವು. ಅಂತಹ ಯತ್ನಗಳಿಗೆ ನಗರದ ನಾಗರಿಕರ ಕ್ರಿಯಾತ್ಮಕ ಬೆಂಬಲವಿತ್ತು.

ಅದೇ ರಾಜ್ಯದ ಈಗಿನ ಗೋದಾವರಿ ಜಿಲ್ಲೆಯಲ್ಲಿ ಕೋಯಾ ಸಮಾಜದ ಜನ ವಾಸಿಸುತ್ತಿದ್ದರು. ಅವರ ಧುರೀಣ ಸುಬ್ಬಾರೆಡ್ಡಿ ಮತ್ತು ಅವನ ಸಂಗಡಿಗರು ನಾನಾ ಸಾಹೇಬ ಪೇಶ್ವೆಯ ಹೆಸರಿನಲ್ಲಿ ತಮ್ಮ ಜನರನ್ನು ಸಂಘಟಿಸಿ ಬ್ರಿಟಿಷರಿಗೆ ಎದೆಗೊಟ್ಟು ನಿಂತರು. ಆದರೆ ಅವರ ಸಾಹಸ ವಿಫಲವಾಯಿತು. ಪರಿಣಾಮವಾಗಿ ೧೮೫೮ರ ಅಕ್ಟೋಬರ್ ೭ ರಂದು ಸುಬ್ಬಾರೆಡ್ಡಿ ಮತ್ತು ಅವನ ಸಂಗಡಿಗರನ್ನು ಸಾರ್ವಜನಿಕವಾಗಿ ಗಲ್ಲಿಗೇರಿಸಲಾಯಿತು.

ಹೀಗೆಯೇ ವಿಶಾಖಪಟ್ಟಣ, ರಾಜಮಹೇಂದ್ರಿ, ಮಚಲಿಪಟ್ಟಣ, ಕಡಪ್ಪ, ನೆಲ್ಲೂರು, ಗುಂಟೂರು, ಕರ್ನೂಲು, ಬಳ್ಳಾರಿ ಹೀಗೆ ಹಲವಾರು ಸ್ಥಳಗಳಲ್ಲಿಯ ಜನತೆ ಬ್ರಿಟಿಷರ ಪರಕೀಯ ಆಡಳಿತದ ವಿರುದ್ಧ ಹೋರಾಡಿದ್ದನ್ನುವುಕ್ಕೆ ಕಾಗದ ಪತ್ರಗಳು ಹೈದ್ರಾಬಾದಿನ ಪತ್ರಾಗಾರದಲ್ಲಿ ಇಂದಿಗೂ ಲಭ್ಯವಾಗಿವೆ.

ದಕ್ಷಿಣ ಭಾರತದಲ್ಲಿಯೂ ೧೮೫೭ರ ಸ್ವಾತಂತ್ರ್ಯ ಸಂಗ್ರಾಮದ ಬಿರುಗಾಳಿ ರಭಸದಿಂದಲೇ ಬೀಸಿತೆನ್ನುವುದು ಟಿಳಕ ಟ್ರಸ್ಟಿನವರು ಇತ್ತೀಚೆಗೆ ಕೈಗೊಂಡ ವ್ಯಾಪಕ ಸಂಶೋಧನೆಗಳಿಂದ ವ್ಯಕ್ತವಾದ ಅಂಶ. ಆ ಕಾಲದಲ್ಲಿ ಸೈನಿಕರು ಹಾಗೂ ನಾಗರಿಕರು ಅಲ್ಲಲ್ಲಿ ದಂಗೆ ಎದ್ದ ಘಟನೆಗಳು ವಿಪುಲವಾಗಿವೆ. ಅಂದಿನ ಕಾಗದ ಪತ್ರಗಳಲ್ಲಿ ಈ ಇತಿಹಾಸವೆಲ್ಲ ಅಡಗಿಕುಳಿತಿದೆ. ಆ ದಿಕ್ಕಿನಲ್ಲಿ ಇನ್ನೂ ಹೆಚ್ಚಿನ ಸಂಶೋಧನೆ ರಾಷ್ಟ್ರಮಟ್ಟದಲ್ಲಿಯೂ ಪ್ರಾದೇಶಿಕ ಮಟ್ಟದಲ್ಲಿಯೂ ನಡೆಯಬೇಕಾದುದು ಅವಶ್ಯವಿದೆ.

ಅವಿಭಾಜ್ಯ ಸಂಖ್ಯೆಗಳು

ದೇವಿ ಪ್ರಶಾಂತ್ ಕಟೀಲು

ಯಾವುದೇ ಒಂದು ಪೂರ್ಣ ಸಂಖ್ಯೆಯನ್ನು ಬೇರೆ ಯಾವುದೇ ಪೂರ್ಣ ಸಂಖ್ಯೆಯಿಂದ ಶೇಷರಹಿತವಾಗಿ ಭಾಗಿಸಲು ಸಾಧ್ಯವಾಗದಿದ್ದರೆ ಅದಕ್ಕೆ ಅವಿಭಾಜ್ಯ ಸಂಖ್ಯೆ (PRIME NUMBER) ಎಂಬ ಹೆಸರು. ಅಂತಹ ಸಂಖ್ಯೆಗಳನ್ನು ೧ ಮತ್ತು ಅದೇ ಸಂಖ್ಯೆಯಿಂದ ಮಾತ್ರ ಪೂರ್ಣವಾಗಿ ಭಾಗಿಸಬಹುದು. ಉದಾ: ೨, ೩, ೫, ೭, ೧೧... ಇತ್ಯಾದಿ.

ಇವುಗಳನ್ನು ಯಾವುದೇ ಎರಡು ಸಂಖ್ಯೆಗಳ (ಒಂದು ಮತ್ತು ಆ ಸಂಖ್ಯೆಯನ್ನು ಹೊರತುಪಡಿಸಿ) ಗುಣಲಬ್ಧವನ್ನಾಗಿ ಬರೆಯಲು ಸಾಧ್ಯವೇ ಇಲ್ಲ. ಆದರೆ ಅವಿಭಾಜ್ಯ ಸಂಖ್ಯೆಯ ನಿರೂಪಣೆಗೆ ಅಪವಾದವಾದ ಸಂಖ್ಯೆಯೆಂದರೆ ಅದೇ ೧, ಇದನ್ನು ೧ ಮತ್ತು ಅದೇ ಸಂಖ್ಯೆಯಿಂದ ಮಾತ್ರ ಭಾಗಿಸಲು ಸಾಧ್ಯವಾದರೂ, ಅದು ಅವಿಭಾಜ್ಯ ಸಂಖ್ಯೆಯಲ್ಲ.

`೨'ನ್ನು ಹೊರತುಪಡಿಸಿ ಉಳಿದೆಲ್ಲಾ ಅವಿಭಾಜ್ಯಗಳೂ ಬೆಸಸಂಖ್ಯೆಗಳು. ಅಂದರೆ ಅವೆಲ್ಲವೂ `೨'ರಿಂದ ಪೂರ್ಣವಾಗಿ ಭಾಗಿಸಲ್ಪಡದ್ದು. ಆದರೆ ಸಂಖ್ಯೆಗಳಿಂದ ಅವಿಭಾಜ್ಯ ಸಂಖ್ಯೆಗಳನ್ನು ಎದ್ದು ಕಾಣುವಂತೆ ಬೇರ್ಪಡಿಸಲು ಮೂಲ ಕಾರಣವಾದ `೨'ಕ್ಕೆ ಸಂಕೀರ್ಣ ಸಂಖ್ಯೆಗಳ ಸರಣಿಯಲ್ಲಿ ಜಾಗ ಸಿಗಲೇ ಇಲ್ಲ. ಅದನ್ನು ಅವಿಭಾಜ್ಯ ಸಂಖ್ಯೆಯೆಂದು ಪರಿಗಣಿಸಲಾಯಿತು.

ಅವಿಭಾಜ್ಯ ಸಂಖ್ಯಾ ಸರಣಿಯಲ್ಲಿ ಕ್ರಮಾಗತವಾದ ಎರಡು ಸಂಖ್ಯೆಗಳು ಕಂಡುಬರುವುದು ಒಂದೇ ಒಂದು ಸಲ. ಅವೆಂದರೆ `೨' ಮತ್ತು `೩'. ಆದರೆ ಎರಡರ ಅಂತರವಿರುವ ಅವಿಭಾಜ್ಯ ಸಂಖ್ಯೆಗಳು ಅನಂತ. ಇವನ್ನು ಅವಳಿ ಅವಿಭಾಜ್ಯ (TWIN PRIMES) ಎಂದು ಕರೆಯಲಾಗುತ್ತದೆ. ಉದಾಹರಣೆಗೆ ಒಂದರಿಂದ ಇಪ್ಪತ್ತರವರೆಗಿನ ಅವಿಭಾಜ್ಯ ಸಂಖ್ಯೆಗಳು ಇಂತಿವೆ. ೨,೩, ೫, ೭, ೧೧, ೧೩, ೧೭, ೧೯. ಇವುಗಳಲ್ಲಿ ಅವಳಿ ಅವಿಭಾಜ್ಯಗಳು (೩,೫), (೫,೭), (೧೧,೧೩), (೧೭,೧೯). ಅವಳಿ ಅವಿಭಾಜ್ಯಗಳು ಅನಂತವೆಂದು ಸಂಪೂರ್ಣವಾಗಿ ಈತನಕ ಸಾಧಿಸಲಾಗಿಲ್ಲ.

ಅಂಕ ಗಣಿತದಲ್ಲಿ ಯಾವುದೇ ಹೇಳಿಕೆಯನ್ನು ಸುಲಭವಾಗಿ ಅರ್ಥೈಸಿಕೊಳ್ಳಬಹುದಾದರೂ ಅದನ್ನು ಸಾಧಿಸಲು ಆಳವಾದ ಜ್ಞಾನ, ಸಹನೆ ಮತ್ತು ಅದೃಷ್ಟವೂ ಅತ್ಯಗತ್ಯ. ಅದಕ್ಕಾಗಿಯೇ ಇರಬೇಕು ಈತನಕ ಯಾವ ಗಣಿತಜ್ಞರಿಗೂ ಅವಿಭಾಜ್ಯ ಸಂಖ್ಯೆಗಳನ್ನು ಕಂಡುಹಿಡಿಯುವ ಸಮರ್ಪಕವಾದ ಸೂತ್ರವೊಂದನ್ನು ಕಂಡುಹಿಡಿಯಲು ಸಾಧ್ಯವಾಗಿಲ್ಲ. ಹಾಗೆಂದ ಮಾತ್ರಕ್ಕೆ ಅದರ ಬಗ್ಗೆ ಸೂತ್ರವೇ ರಚಿಸಲ್ಪಟ್ಟಿಲ್ಲವೆಂದಲ್ಲ. ಈತನಕ ಹಲವಾರು ಸೂತ್ರಗಳು ರಚಿಸಲ್ಪಟ್ಟಿದ್ದರೂ ಅವುಗಳು

ಜ್ಞಾನನಿಧಿ

ಹಲವಾರು ಸಂದರ್ಭಗಳಲ್ಲಿ ಸೋಲುಂಡದ್ದೂ ಇದೆ. ತುಂಬಾ ಬೇಸರದ ಇನ್ನೊಂದು ಸಂಗತಿಯೆಂದರೆ ಒಂದು ವೇಳೆ ಯಾರಾದರೂ ಅದಕ್ಕೆ ಸಮರ್ಪಕವಾದ ಸೂತ್ರವೊಂದನ್ನು ಕಂಡುಹಿಡಿದಿದ್ದೇನೆಂದು ಹೇಳಿದರೂ ಅದು ಸಂಪೂರ್ಣ ದೋಷಮುಕ್ತವೆಂದು ಸಾಧಿಸಲು ನಿಮಗೆ ಬಿಡಿ ಜಗತ್ತಿನೆಲ್ಲಾ ಗಣಿತ ಮೇಧಾವಿಗಳಿಗೆ ಕೂಡ ಸಾಧ್ಯವಾಗಲಿಕ್ಕಿಲ್ಲ. ಯಾಕೆಂದರೆ ಅಂತಹ ಸೂತ್ರವನ್ನು ಒಂದು ಗೊತ್ತಾದ ಅತಿ ದೊಡ್ಡ ಸಂಖ್ಯೆಯವರೆಗೆ ಪರೀಕ್ಷಿಸಬಹುದಾದರೂ, ಅದರ ನಂತರ ಅಂದರೆ ಲಕ್ಷಾಂತರ ಅಂಕಿಗಳುಳ್ಳ ಸಂಖ್ಯೆಗಳಿಗಿಂತಲೂ ದೊಡ್ಡ ಸಂಖ್ಯೆಯನ್ನು ಪರೀಕ್ಷಿಸಲು ನಮ್ಮ ಬಳಿ ಯಾವುದೇ ವಿಧಾನ, ಯಂತ್ರ ಅಥವಾ ತಂತ್ರಗಳಿಲ್ಲ. ಉದಾಹರಣೆಗೆ ಕ್ರಿಶ್ಚಿಯನ್ ಗೋಲ್ಡ್‌ಬ್ಯಾಕ್ ಎಂಬಾತ ಯಾವುದೇ ಎರಡಕ್ಕಿಂತ ದೊಡ್ಡ ಸರಿ ಸಂಖ್ಯೆಯನ್ನು ಎರಡು ಅವಿಭಾಜ್ಯ ಸಂಖ್ಯೆಗಳ ಮೊತ್ತವನ್ನಾಗಿ ಬರೆಯಬಹುದೆಂದಿದ್ದ. ಉದಾ: ೪=೨+೨, ೮=೫+೩, ೧೮=೧೧+೭ ಇತ್ಯಾದಿ. ಇಷ್ಟೊಂದು ಸರಳವಾದ ಹೇಳಿಕೆಯನ್ನು ಸೈದ್ಧಾಂತಿಕವಾಗಿ ಸಾಧಿಸಲು ವಿಫಲರಾದ ಗಣಿತಜ್ಞರುಗಳೆಲ್ಲಾ ಪ್ರಾಯೋಗಿಕವಾಗಿ ಸಾಧಿಸಲು ಮುಂದಾದರು. ಹಲವು ಕೋಟಿಗಳವರೆಗಿನ ಸಂಖ್ಯೆಗಳವರೆಗೂ ಅವನ ಹೇಳಿಕೆಯನ್ನು ಪರೀಕ್ಷಿಸಿ ಅದು ದೋಷಮುಕ್ತವೆಂದು ಮನಗಂಡರು. ಆದರೂ ಅದೊಂದು ಸಾರ್ವತ್ರಿಕವಾಗಿ ಸರಿಯಾದ ಸೂತ್ರವೆಂದು ಹೇಳಲು ಇಂದಿಗೂ ಅವರೆಲ್ಲರೂ ಹಿಂಜರಿಯುತ್ತಿದ್ದಾರೆ. ಯಾಕೆಂದರೆ, ಸಂಖ್ಯೆಗಳು ಅನಂತತೆಯ ಕಡೆ ಧಾವಿಸತೊಡಗಿದಾಗ ಎಲ್ಲಾದರೊಂದು ಕಡೆ ಅದು ತಪ್ಪು ಫಲಿತಾಂಶ ಕೊಟ್ಟೀತೆಂಬ ಭಯ ಅವರಿಗೆ.

ಅವಿಭಾಜ್ಯ ಸಂಖ್ಯೆಗಳನ್ನು ಕಂಡು ಹಿಡಿಯುವ ಸೂತ್ರವನ್ನು ಮೊತ್ತ ಮೊದಲಿಗೆ ರಚಿಸಿದವ 'ಲಿಯೋ೬೭ನಾರ್ಡ್ ಆಯ್ಲರ್' ಎಂಬ ಗಣಿತ ಮೇಧಾವಿ. n^2+n+೪೧ ಎಂಬುದೇ ಅವನು ರಚಿಸಿದ ಸೂತ್ರ. ಇಲ್ಲಿ `n'ನ ಬೆಲೆ ಸೊನ್ನೆ ಎಂದಾದರೆ ಸಿಗುವ ಉತ್ತರ `೪೧', `n'ನ ಬೆಲೆ ಒಂದಾದರೆ `೪೩' ಹೀಗೆ ಮುಂದುವರೆದರೆ `n'ನ ಬೆಲೆ `೩೯' ಎಂದಾಗುವವರೆಗೂ ಸಿಗುವ ಸಂಖ್ಯೆಗಳು ಅವಿಭಾಜ್ಯಗಳೇ. ಆದರೆ `n'ನ ಬೆಲೆ `೪೦' ಎಂದಾದಾಗ ಮೇಲಿನ ಸೂತ್ರ ತಲೆಕೆಳಗಾಯಿತು. ಆ ಸಂದರ್ಭದಲ್ಲಿ ಎಷ್ಟೊಂದು ಹಾಸ್ಯಾಸ್ಪದ ಉತ್ತರ ದೊರೆಯಿತೆಂದರೆ, ಅದೊಂದು ಸಾಮಾನ್ಯ ಸಂಕೀರ್ಣ (ಒಂದು ಮತ್ತು ಅವಿಭಾಜ್ಯವಲ್ಲದ ಇತರ ಸಂಖ್ಯೆಗಳೆಲ್ಲ ಸಂಕೀರ್ಣಗಳು) ಸಂಖ್ಯೆಯಾಗಿರದೆ ತೀರ ಮುಂದುವರೆದ ಸಂಕೀರ್ಣವೆಂದು ಪರಿಗಣಿಸಲ್ಪಟ್ಟಿರುವ ವರ್ಗ ಸಂಖ್ಯೆಯೊಂದಕ್ಕೆ ಅಂದರೆ ಅದು `೪೧' ಎಂಬ ಸಂಖ್ಯೆಯ ವರ್ಗಕ್ಕೆ ಸಮವಾದ ಉತ್ತರವನ್ನು ನೀಡಿತು. `n'ನ ಬೆಲೆ `೪೦'ಕ್ಕಿಂತ ಹೆಚ್ಚಾದಾಗ ಅದು ಮುಂಚಿನ ಹಾಗೆ ಅವಿಭಾಜ್ಯ ಸಂಖ್ಯೆಗಳನ್ನೇ ನೀಡತೊಡಗಿದರೂ ಆಗಾಗ ಸಂಕೀರ್ಣ ಸಂಖ್ಯೆಗಳೂ ಕಾಣಿಸಿಕೊಳ್ಳತೊಡಗಿದವು.

ಆಯ್ಲರ್‌ನ ಸೂತ್ರದಲ್ಲಿ `n'ನ ಬೆಲೆ ನೂರಕ್ಕಿಂತ ಕಡಿಮೆಯಿದ್ದಾಗ ಆ ನೂರು ಸಂದರ್ಭಗಳಲ್ಲಿ ಎಂಭತ್ತಾರು ಅವಿಭಾಜ್ಯಗಳನ್ನು ಕೊಟ್ಟರೂ `n'ನ ಬೆಲೆ

ಜ್ಞಾನನಿಧಿ

ತೀರಾ ಜಾಸ್ತಿಯಾದಂತಲ್ಲ ಅದು ಕೇವಲ ಶೇಕಡಾ ನಾಲ್ವತ್ತೆಂಟರಷ್ಟು ಅವಿಭಾಜ್ಯ ಸಂಖ್ಯೆಗಳನ್ನು ಕೊಡುತ್ತದೆಂದು ಕಂಡುಕೊಳ್ಳಲಾಯಿತು. ಆದ್ದರಿಂದ ನಂತರದ ಗಣಿತಜ್ಞರಾದ ಸ್ಟ್ಯಾನಿಸ್ಲಾವ್ ಉಲಾಮ್ ಮತ್ತು ಅವನ ಸಂಗಡಿರು ಆಯ್ಲರ್‌ನ ಸೂತ್ರವನ್ನು ಮಾರ್ಪಾಟುಗೊಳಿಸಿ $೪n^{೨}+೧೭೦n+೧೮೪೭$ ಮತ್ತು $೪n^{೨}+೪n+೫೯$ ಎಂಬ ಸೂತ್ರಗಳನ್ನು ರಚಿಸಿದರು. ಇವು ಕೆಲವೊಂದು ಸಂದರ್ಭಗಳಲ್ಲಿ ಉತ್ತಮ ಫಲಿತಾಂಶವನ್ನು ಕೊಟ್ಟರೂ ಸಮಗ್ರವಾಗಿ ಇವಕ್ಕೆ ಆಯ್ಲರ್‌ನ ಸೂತ್ರವನ್ನು ಸರಿಗಟ್ಟಲಿಕ್ಕಾಗಲಿಲ್ಲ.

ಇದೇ ರೀತಿ ಗಣಿತಜ್ಞನೊಬ್ಬ $೨^{n}+೧$ ಎಂಬ ರೂಪದ ಯಾವುದೇ ಸಂಖ್ಯೆ ಅವಿಭಾಜ್ಯವಾಗಿರುತ್ತದೆಂದು ಸೂಚಿಸಿದ್ದ. ಆದರೆ ಅವನ ಸೂತ್ರವು `n'ನ ಬೆಲೆ ಐದಾಗುವಷ್ಟರಲ್ಲೇ ನೆಲ ಕಚ್ಚಿತ್ತು.

ಇಷ್ಟೆಲ್ಲ ಆದನಂತರ ಗಣಿತಜ್ಞರು ಸೂತ್ರವನ್ನು ಹುಡುಕುವ ಸಾಹಸವನ್ನು ಬಿಟ್ಟು, ಪ್ರಾಯೋಗಿಕವಾಗಿ ಒಂದರ ನಂತರ ಒಂದರಂತೆ ಅವಿಭಾಜ್ಯ ಸಂಖ್ಯೆಗಳನ್ನು ಹುಡುಕತೊಡಗಿದರು. ಈತನಕ ನಮಗೆ ಗೊತ್ತಿರುವ ಅತಿ ದೊಡ್ಡ ಅವಿಭಾಜ್ಯ ಸಂಖ್ಯೆಗಳು ಸಾವಿರಾರು ಅಂಕಿಗಳದ್ದು ಇಷ್ಟು ದೊಡ್ಡ ಸಂಖ್ಯೆಗಳನ್ನು ಕಂಡುಹಿಡಿಯುವುದು ಬಿಡಿ, ಅದನ್ನು ಅವಿಭಾಜ್ಯವೆಂದು ಸಾಧಿಸಲು ಒಂದು ವೇಳೆ ಯಾರಾದರೂ ಪೆನ್ನು ಮತ್ತು ಪೇಪರನ್ನು ಬಳಸಿ ಪ್ರಯತ್ನಿಸಿದರೆ ಅವರು ಒಂದು ನಿರ್ಧಾರಕ್ಕೆ ಬರುವಷ್ಟರ ಹೊತ್ತಿಗೆ ಮುಪ್ಪು ಅವರನ್ನು ಆವರಿಸಿಬಿಟ್ಟೀತು. ವಾಸ್ತವವಾಗಿ ಆ ಸಂಖ್ಯೆಗಳೆಲ್ಲ ಕಂಪ್ಯೂಟರಿನ ಮೂಲಕ ಕಂಡುಹಿಡಿಯಲ್ಪಟ್ಟವು.

ಯಾವುದೇ ಒಂದು ಸಂಖ್ಯೆಯನ್ನು ಅವಿಭಾಜ್ಯವೆಂದು ನಿರ್ಧರಿಸಲು ಅದು ಎರಡರಿಂದ ಹಿಡಿದು ಆ ಸಂಖ್ಯೆಯ ವರ್ಗ ಮೂಲದವರೆಗಿನ ಅವಿಭಾಜ್ಯ ಸಂಖ್ಯೆಗಳಿಂದ ಪೂರ್ಣವಾಗಿ ಭಾಗಿಸಲು ಅಸಾಧ್ಯವಾಗಿರಬೇಕು.

ಮೊದಮೊದಲು ಅಲ್ಲಲ್ಲಿ ಕಾಣಸಿಗುವ ಅವಿಭಾಜ್ಯ ಸಂಖ್ಯೆಗಳು ಸರಣಿಯಲ್ಲಿ ಸಂಖ್ಯೆಗಳು ಲಕ್ಷಕ್ಕಿಂತಲೂ ಹೆಚ್ಚಾದಂತೆಲ್ಲ ಇನ್ನು ಮುಂದೆ ಅವಿಭಾಜ್ಯ ಸಂಖ್ಯೆಗಳೇ ಇಲ್ಲವೇನೋ ಎಂಬ ರೀತಿಯಲ್ಲಿ ಅಪರೂಪಕ್ಕೊಮ್ಮೆ ಕಾಣಸಿಗುತ್ತವೆ. ಹೀಗಾದರೂ ಅವಿಭಾಜ್ಯ ಸಂಖ್ಯೆಗಳು ಅನಂತವಂತೆ. ಇದನ್ನು ಅತಿ ಸರಳವಾಗಿ ಸಾಧಿಸಿದ ಕೀರ್ತಿ ಯೂಕ್ಲಿಡ್ ಎಂಬ ಅಸಾಮಾನ್ಯ ಗಣಿತಜ್ಞನಿಗೆ ಸಲ್ಲುತ್ತದೆ.

ರೈಲಿನಲ್ಲಿ ಫೋನು

ರೈಲಿನಲ್ಲಿ ಪ್ರಯಾಣ ಮಾಡುವಾಗಲೇ ಫೋನಿನಲ್ಲಿ ಮಾತಾಡುವ ಸೌಲಭ್ಯ ನಮ್ಮ ದೇಶದ ರೈಲುಗಳಲ್ಲಿಯೂ ಸದ್ಯದಲ್ಲೇ ದೊರೆಯಲಿದೆ. ಅನೇಕ ತುರ್ತು ಸಂದರ್ಭಗಳಲ್ಲಿ ಈ ಟೆಲಿಫೋನ್ ನೆರವಾಗುತ್ತದೆ. ಕೃತಕ ಉಪಗ್ರಹದ ಮೂಲಕ ಈ ಸೌಲಭ್ಯ ಸಿಗಲಿದೆ.

- ವಿಜಯ ನ. ಪೂಜಾರಿ

ಜ್ಞಾನನಿಧಿ

ಚಂಗೀಜ್ ಖಾನನ ಇನ್ನೊಂದು ಮುಖ

- ಕೆ. ವೆಂಕಣ್ಣಾಚಾರ್

೧೩ನೇ ಶತಮಾನದಲ್ಲಿ ಶಾಂತ ಸಾಗರದಿಂದ ನೀಪರ್ ನದಿಯವರೆಗೆ ವಿಸ್ತರಿಸಿದ್ದ ಮಂಗೋಲ್ಲಿಯನ್ ಸಾಮ್ರಾಜ್ಯವನ್ನು ಕಟ್ಟಿ ದಕ್ಷತೆಯಿಂದ ಆಳಿದ ಚಂಗೀಜ್ ಖಾನನನ್ನು ಕೆಲವು ಇತಿಹಾಸಕಾರರು ಯುದ್ಧತಂತ್ರನಿಪುಣ, ಚಾಣಾಕ್ಷ ಆಡಳಿತಗಾರ, ರಕ್ತ ಪಿಪಾಸು, ಕ್ರೂರಯುದ್ಧಾಕಾಂಕ್ಷಿ ಎಂದೆಲ್ಲಾ ವರ್ಣಿಸಿದ್ದಾರೆ. ಇನ್ನು ಕೆಲವು ಚರಿತ್ರಕಾರರು ಅವನನ್ನು ಭೂತದಯೆಯುಳ್ಳ ಮಾನವೀಯ ವ್ಯಕ್ತಿ ಎಂದೂ ಬಣ್ಣಿಸಿದ್ದಾರೆ. ಈ ಬರಹ ಅವನ



ಬಾಯಿಯೆ ಹೊಟ್ಟೆ!

ನೀವು ಚಿತ್ರದಲ್ಲಿ ನೋಡುತ್ತಿರುವ ಮೀನು 'ಸ್ಯೂಡೋ ಟ್ರಾಫಿಯಸ್ ಔರಾಟಸ್' ಎಂದು ಕರೆಯಲ್ಪಡುವಂಥದ್ದು. ಈ ಹೆಸರನ್ನು ನೆನಪಿನಲ್ಲಿಟ್ಟುಕೊಳ್ಳುವದು ಸ್ವಲ್ಪ ಕಷ್ಟವೆ. ನೋಡಲಿಕ್ಕೆ ತೀರಾ ಚಿಕ್ಕದಾದ ಇದು ತೀರ ಚುರುಕಾದದ್ದು. ಇದರ ಇನ್ನೊಂದು ವೈಶಿಷ್ಟವೆಂದರೆ ತಾನಿಟ್ಟ ಮೊಟ್ಟೆಗಳನ್ನಿದು ಇತರ ಮೀನುಗಳಿಂದ ರಕ್ಷಿಸಲು ತನ್ನ ಬಾಯಲ್ಲಿ ಇಟ್ಟುಕೊಂಡೇ ಸಂಚರಿಸುತ್ತದೆ. ಹೀಗೊಮ್ಮೆ ಬಾಯಲ್ಲಿ ಮೊಟ್ಟೆಗಳನ್ನು ಇಟ್ಟುಕೊಂಡು ಬಾಯಿ ಮುಚ್ಚಿತೆಂದರೆ ನಂತರ ೧೨ ದಿನಗಳವರೆಗೂ ಅದನ್ನು ತೆರೆಯುವುದೇ ಇಲ್ಲ. ಎಷ್ಟೇ ಹಸಿವಾದರೂ ಸರಿ, ಸಹಿಸಿಕೊಂಡೇ ಇರುತ್ತದೆ.

ಕೆಳದವಡೆಯ ಅಡಿಯಲ್ಲೊಂದು ಚೀಲವನ್ನು ಸೃಷ್ಟಿಸಿಕೊಂಡು ಅದರಲ್ಲಿ ಮೊಟ್ಟೆಗಳನ್ನು ಇರಿಸಿಕೊಳ್ಳುವ ಇದು, ಮೊಟ್ಟೆಗಳು ಅಲ್ಲಿ ಸುರಕ್ಷಿತವಾಗಿವೆಯೆಂದು ಖಾತ್ರಿಯಾಯಿತೆಂದರೆ ಹಸಿವೆಯ ಅನುಭವವೇ ಇದಕ್ಕೆ ಆಗುತ್ತಿರಲಿಕ್ಕಿಲ್ಲ ಎನ್ನುತ್ತಾರೆ ಜೀವಶಾಸ್ತ್ರಜ್ಞರು.

ಜ್ಞಾನನಿಧಿ

ಕೆಲವು ಮಾನವೀಯ ಗುಣಗಳನ್ನು ಎತ್ತಿ ತೋರಿಸುವುದಕ್ಕೆ ಮಾತ್ರ ಸೀಮಿತವಾಗಿದೆ.

ಕ್ರಿ.ಶ. ೧೧೬೨ರಲ್ಲಿ ಮಂಗೋಲಿಯದ ಸಾಮಾನ್ಯ ಕುಟುಂಬವೊಂದರಲ್ಲಿ ಜನಿಸಿದ ಚೆಂಗೀಜ್‌ಖಾನನ ಜನ್ಮನಾಮ ಟಿಮೋಚಿನ್ ಎಂದು. ಯೌವನದಲ್ಲಿ ಅತಿ ಒರಟನೂ ಕ್ರೂರಿಯೂ ಕಷ್ಟಸಹಿಷ್ಣುವೂ ಆಗಿದ್ದ ಆತ ಜನರನ್ನು ಸಂಘಟಿಸುವಲ್ಲಿ ಚತುರನೂ ಆಗಿದ್ದ. ದೈಹಿಕವಾಗಿ ಕಟ್ಟುಮಸ್ತಾಗಿದ್ದ ಅವನು ಮುಂದೊಂದು ದಿನ ಮಂಗೋಲಿಯನ್ ಗುಂಪೊಂದರ ನಾಯಕನೂ ಆದ. ಅನಂತರ ಕ್ರಮೇಣವಾಗಿ ಆತ ಪರಸ್ಪರ ಬಡಿದಾಡುತ್ತಿದ್ದ ಮಂಗೋಲಿಯದ ಬಣಗಳನ್ನು ಒಂದುಗೂಡಿಸಿ ಅವೆಲ್ಲವುಗಳಿಗೆ ಮುಂದಾಳುವೂ ಆದ. ಇದರಿಂದಾಗಿ ಅವನಿಗೆ ಚೆಂಗೀಜ್‌ಖಾನ್ (ಬಣಗಳ ಒಡೆಯ) ಎಂಬ ಹೆಸರು ಪ್ರಾಪ್ತ

ಅಪ್ಪನಿಂದ ಅಮ್ಮನ ಪ್ರೀತಿ

ತಾಯ್ತನಕ್ಕೆ ಎಂಥ ಜವಾಬ್ದಾರಿ! ಹೆರುವವರೆಗೆ ಹೊತ್ತುಕೊಳ್ಳುವುದೆಂದರೆ ಅದು ಒಂದು ತಪಸ್ಸೇ ಸರಿ.

'ಮಣಿ ಮೀನು' ಎಂದು ಗುರುತಿಸಲ್ಪಡುವ ಇದು ಮತ್ಸ್ಯಾಗಾರ (ಅಕ್ವೇರಿಯಂ)ಗಳಲ್ಲಿ ಎಡೆಬಿಡದೆ ಸುತ್ತುತ್ತಿರುತ್ತದೆ. ಪ್ರಜನನ ಸಮಯ ಸಮೀಪಿಸಿದಾಗ ತನಗೆಂದು ಒಂದು ಜಾಗವನ್ನಿದು ಹುಡುಕಿಕೊಳ್ಳುತ್ತದೆ. ಕಲ್ಲೊಂದರ ಮೇಲೆ ಮೊಟ್ಟೆಗಳನ್ನಿರಿಸಿ ಕಾವಲು ಕೂಡುತ್ತದೆ. ಬೇರೆ ಮೀನುಗಳು ಸಮೀಪವೂ ಸುಳಿಯದ ಹಾಗೆ ನೋಡಿಕೊಳ್ಳುತ್ತದೆ. ಊಟದ ವೇಳೆ ಮಾತ್ರ ಸ್ವಲ್ಪ ಹೊತ್ತು ಇದು ಮೊಟ್ಟೆಗಳಿಂದ ದೂರ ಸರಿಯುವುದು. ಆದರೆ ಆಗ ಗಂಡು ಮೀನು (ಪತಿ ?)ಈ ಮೊಟ್ಟೆಗಳನ್ನು ನೋಡಿಕೊಳ್ಳಬೇಕು. ಮೊಟ್ಟೆಗಳಿಗೆ ಈ ಅಪ್ಪ 'ಅಮ್ಮನ ಪ್ರೀತಿ'ಯನ್ನೇ ನೀಡುತ್ತದೆ. ಇದು ಕಾವಲಿದ್ದಾಗ ಬೇರೊಂದು ಪುಂಡ ಮೀನು ಏನಾದರೂ ಸಮೀಪಿಸಿತೋ ಮುಗಿದಂತೆಯೇ ಅದರ ಕಥೆ.



ಜ್ಞಾನನಿಧಿ

ವಾಯಿತು.

ಮುಂದೆ ಅವನು ಸುತ್ತಮುತ್ತಲ ಪ್ರದೇಶಗಳನ್ನು ಒಂದೊಂದಾಗಿ ಗೆದ್ದು ತನ್ನ ಅಧಿಕಾರವನ್ನು ವಿಸ್ತರಿಸಿಕೊಂಡ. ಕ್ರಿ.ಶ. ೧೨೦೬ರ ಸುಮಾರಿಗೆ ಭಾರತ ಉಪಖಂಡದಿಂದ ಕ್ಯಾಸ್ಪಿಯನ್ ಸಮುದ್ರದವರೆಗೆ ವಿಸ್ತರಿಸಿದ್ದ ಮಂಗೋಲಿಯನ್ ಚಕ್ರಾಧಿಪತ್ಯಕ್ಕೆ ಒಡೆಯನಾದ. ಆಗ ಅವನಿಗೆ ಬಡಾಖಾನ್ (ರಾಜ್ಯಗಳ ಒಡೆಯ, ಸಮ್ರಾಟ) ಎಂಬ ಬಿರುದೂ ಅಂಟಿಕೊಂಡಿತು.

ಚಂಗೀಜ್‌ಖಾನ್ ಶತ್ರುಗಳು, ವಂಚಕರು, ಪಂಚಮದಳದವರು ಮೊದಲಾದವರನ್ನು ಕಂಡುಹಿಡಿದು ಅವರನ್ನು ಅತ್ಯಂತ ಕ್ರೂರವಾಗಿ ಶಿಕ್ಷಿಸುತ್ತಿದ್ದನಾದರೂ ನಿರಪರಾಧಿಗಳ ಬಗೆಗೆ ಆತನಿಗೆ ಅಪಾರವಾದ ಕರುಣೆಯಿತ್ತು. ಅವನಿಗೆ ಬಾಲ್ಯದಿಂದಲೂ ಪಶು ಪಕ್ಷಿ ಪ್ರಾಣಿಗಳಂಥ ಮೂಕ ಜಂತುಗಳ ಬಗೆಗೆ ಅತೀವ ಅನುಕಂಪವಿತ್ತು. ಯುದ್ಧ ಕಾಲದಲ್ಲಾಗಲೀ, ಶಾಂತಿಕಾಲದಲ್ಲಾಗಲಿ ವಿನಾಕಾರಣ ಯಾರೂ ಯಾವ ಪ್ರಾಣಿಗೂ ಹಿಂಸೆ ಕೊಡಬಾರದೆಂದು ಆತ ಕಟ್ಟಪ್ಪಣೆ ಮಾಡಿದ್ದ. ರಣಭೂಮಿಯಲ್ಲಿ ಸಂಚರಿಸುವಾಗ ಅಲ್ಲಿನ ಪ್ರಾಣಿಗಳಿಗೆ ವಿಶೇಷವಾಗಿ ರಣ ಹದ್ದುಗಳಿಗೆ ಆಹಾರ ನೀಡುವುದು ಅವನಿಗೆ ಪ್ರಿಯವಾದ ಹವ್ಯಾಸವಾಗಿತ್ತು.

ಖಾನನಿಗೆ ಶ್ರಮಿಕರು, ಕುಶಲ ಕರ್ಮಿಗಳು, ಕಲಾವಿದರು, ಶಿಲ್ಪಿಗಳು, ತಂತ್ರಜ್ಞರು, ಕೃಷಿಕರು, ಕವಿಗಳು, ಪಂಡಿತರು ಮೊದಲಾದವರ ಬಗೆಗೆ ಅತೀವ ಆದರವಿತ್ತು. ಈ ವರ್ಗದ ಜನರಿಗೆ ಯಾರೂ ಕಷ್ಟ ನಷ್ಟಗಳನ್ನು ಉಂಟುಮಾಡಬಾರದೆಂದಾತ ಕಟ್ಟಪ್ಪಣೆ ಮಾಡಿದ್ದ.

ಬರಿಗಣ್ಣಿಗೆ ಕಾಣಿಸದಷ್ಟು ಚಿಕ್ಕದಾದ ಪಕ್ಷಿಯೊಂದು ಇದೆಯೆಂದರೆ ನಂಬುತ್ತೀರಾ? ಅದೇ 'ಬೀ ಹಮಿಂಗ್ ಬರ್ಡ್' ಸೆಕೆಂಡಿಗೆ ೮೦ ಸಲ ರೆಕ್ಕೆಗಳನ್ನು ಬಡಿಯುತ್ತ ಹೂವಿನಿಂದ ಹೂವಿಗೆ ಸುತ್ತುವ ಇದು ದುಂಬಿಯಷ್ಟೆ ಚಿಕ್ಕದು. ಜೇಡರ ಬಲೆಯನ್ನು ಒಟ್ಟುಗೂಡಿಸಿ ಮರದಲ್ಲಿ ಗೂಡನ್ನು ಕಟ್ಟುತ್ತದೆ. ಇದರ ಮೊಟ್ಟೆಗಳು ಕಾಫಿ ಬೀಜಕ್ಕಿಂತ ಚಿಕ್ಕವು. ಕ್ಯೂಬಾದಲ್ಲೆ ಹೆಚ್ಚಾಗಿ ವಾಸಿಸುವ ಇವುಗಳ ಸಂತತಿ ನಿರ್ವಂಶವಾಗುವ ಮಟ್ಟವನ್ನಿಂದು ತಲುಪಿದೆ.

- ಬಿ. ಹನುಮಂತಭಟ್

ಒಂದು ಪ್ರದೇಶದ ಇತಿಹಾಸ, ಕಲೆ, ಸಾಹಿತ್ಯ, ಸಂಸ್ಕೃತಿ, ಪರಂಪರೆ ಮೊದಲಾದುವನ್ನು ಪ್ರತಿನಿಧಿಸುವ ಸ್ಮಾರಕಗಳು, ವಿಸ್ಮಯಕಾರಿ ಇಮಾರತುಗಳು, ಪ್ರಕೃತಿ ಸೌಂದರ್ಯದ ತಾಣಗಳು ಮೊದಲಾದುವುಗಳ ಬಗೆಗೆ ಖಾನನಿಗೆ ಅಪಾರವಾದ ಮುತುವರ್ಜಿಯಿತ್ತು. ಹಾಗೆಂದೇ ಯಾವುದೇ ಕಾರಣದಿಂದ ಇಂತಹ ತಾಣಗಳನ್ನು ವಿರೂಪಗೊಳಿಸುವುದಾಗಲೀ ಹಾಳುಗೆಡಹುವುದಾಗಲೀ ಮಾಡಕೂಡದೆಂದು ಅವನು ತನ್ನ ಸೇನೆ ಹಾಗೂ ಅಧಿಕಾರಿಗಳಿಗೆ ಆದೇಶ ನೀಡಿದ್ದ.

ಚಂಗೀಜ್‌ಖಾನನು ಇಸ್ಲಾಮಿನ ನಿಷ್ಠಾವಂತ ಅನುಯಾಯಿ. ಆದರೆ ಧರ್ಮಾಂಧನಾಗಿರಲಿಲ್ಲವಂತೆ. ಡಾಂಭಿಕ ಭಕ್ತಿ ಹಾಗೂ ಶುಷ್ಕ ಆಚರಣೆಗಳನ್ನು ಸಹಿಸಲೂ ಅವನಿಂದಾಗುತ್ತಿರಲಿಲ್ಲವಂತೆ. ಒಮ್ಮೆ ಸದಾ ಮಕ್ಕಾಕ್ಕೆ ಹೋಗಬೇಕು, ಹಜ್ ಯಾತ್ರೆ ಮಾಡಬೇಕು ಎಂದು ಹಂಬಲಿಸುತ್ತಿದ್ದ ಇಮಾಂ ಒಬ್ಬರಿಗೆ ಅವನು "ಅಲ್ಲಾಹನು ಎಲ್ಲೆಲ್ಲಿಯೂ ಇದ್ದಾನೆ, ಎಲ್ಲದರಲ್ಲಿಯೂ ಇದ್ದಾನೆಂದು ಪವಿತ್ರ

ಜ್ಞಾನನಿಧಿ

ಖುರಾನ್ ಹೇಳುತ್ತದೆ ಎಂದು ಬಲ್ಲವರು ಹೇಳುವಾಗ ಅವನನ್ನು ಕಾಣಲು ಮಕ್ಕಾಕ್ಕೇ ಏಕೆ ಹೋಗಬೇಕು? ಇರುವಲ್ಲಿಯೇ ಅವನನ್ನು ಕಾರಣ ಯತ್ನಿಸಬಾರದೇಕೆ?" ಎಂದು ಕೇಳಿ ಆ ವೃದ್ಧ ರೋಗಿಷ್ಟ ಧರ್ಮಗುರುವನ್ನು ಸಮಾಧಾನ ಪಡಿಸಿದನಂತೆ.

ಖಾನನಿಗೆ ಮರುಭೂಮಿಯ ರಣ ಹದ್ದುಗಳ ಬಗ್ಗೆ ವಿಶೇಷ ಅಕರಾಸ್ತೆ ಇದ್ದುದಕ್ಕೆ ಹಿನ್ನೆಲೆಯಾಗಿ ಕಥೆಯೊಂದನ್ನು ಹೇಳಲಾಗುತ್ತದೆ. ಒಮ್ಮೆ ಮರು ಭೂಮಿಯಲ್ಲಿ ಸಾಗುತ್ತಿದ್ದ ಖಾನ್ ಶತ್ರುಗಳ ಕೈಗೆ ಸಿಕ್ಕುಬಿದ್ದ. ಅವರು ತಪ್ಪಿಸಿಕೊಂಡು ಹೋಗಬಾರದೆಂದು ಖಾನನ ಕೈಕಾಲು-ತಲೆಗಳನ್ನು ಒಂದು ಭಾರವಾದ ಮರದ ಚೌಕಟ್ಟಿಗೆ ಸಿಕ್ಕಿಸಿಬಿಟ್ಟರು. ಇದರಿಂದ ಸಾಕಷ್ಟು ಯಾತನೆ ಅನುಭವಿಸಿದ ಅವನು ಒಂದು ದಿನ ಹೇಗೋ ಬಂಧನದಿಂದ ತಪ್ಪಿಸಿಕೊಂಡು ಮರುಭೂಮಿಯಲ್ಲಿ ಓಡಹತ್ತಿದ. ಸ್ವಲ್ಪ ಸಮಯದಲ್ಲೇ ಹಸಿವು, ಬಾಯಾರಿಕೆ ಹಾಗೂ ಆಯಾಸಗಳಿಂದ ಬಳಲಿ ಕುಸಿದುಬಿದ್ದ.

ಅನತಿಕಾಲದಲ್ಲೇ ಚೇತರಿಸಿಕೊಂಡ ಆತ ಯಾವುದೋ ಪ್ರೇರಣೆಯಿಂದ ಮರುಭೂಮಿಯ ರಣಹದ್ದಿನ ಕೂಗನ್ನು ಅನುಸರಿಸಿ ಧ್ವನಿ ಹೊರಡಿಸ ಹತ್ತಿದ. ಅದನ್ನು ಕೇಳಿ ಅಲ್ಲಿಗೆ ಬಂದ ಹದ್ದೊಂದು ಅವನಿಗೆ ಮಾಂಸದ ತುಂಡುಗಳನ್ನು ತಂದು ಹಾಕಿತು. ನೀರಿರುವ ತಾಣಕ್ಕೆ ತೆರಳಲು ದಾರಿ ತೋರಿಸಿತು. ಸುರಕ್ಷಿತ ತಾಣಕ್ಕೆ ಹೋಗಲು ಮಾರ್ಗದರ್ಶನ ಮಾಡಿತು. ಇವುಗಳಿಂದಾಗಿ ಪ್ರಾಣಾಪಾಯದಿಂದ ಪಾರಾದ ಖಾನ್ ತನ್ನ ಜೀವವಿರುವವರೆಗೂ ರಣ ಹದ್ದುಗಳ ಬಗ್ಗೆ ಕೃತಜ್ಞನಾಗುಳಿದನಂತೆ. (ಸಾಧಾರ)

ಎಲೆಗಳಿಂದ ಕಣ್ಣೀರು

ಆಫ್ರಿಕಾದ ಕಾಡುಗಳಲ್ಲಿ ಬೆಳೆಯುವ 'ರಜೀಬಾ ಕಾರ್ನೆಲಸ್' ಎಂಬ ಗಿಡ ತನ್ನ ಎಲೆಗಳ ಮೂಲಕ ಕಣ್ಣೀರು ಸುರಿಸುತ್ತದೆ. ಈ ಗಿಡದ ಹಸುರೆಲೆಗಳ ಮೇಲೆ ಬಣ್ಣ ಬಣ್ಣದ ಹನಿಗಳು ತಾವಾಗಿಯೇ ಕಾಣಿಸಿಕೊಳ್ಳುತ್ತವೆ. ಆದರೆ ಈ ಗಿಡ ವರ್ಷವಿಡೀ ಕಣ್ಣೀರು ಸುರಿಸುವುದಿಲ್ಲ. ಜನವರಿ ಅಥವಾ ಫೆಬ್ರುವರಿ ತಿಂಗಳು ಮಾತ್ರ ಇದುದ ಅಳುವ ಕಾಲ, ಅದೂ ಕೆಲವೊಮ್ಮೆ ಮಾತ್ರ.

ಸಮುದ್ರದ ಕಾಡುಗಳು

ಭೂಮಿಯ ಮೇಲೆ ಕಾಡುಗಳಿರುವಂತೆಯೇ ಹಾಗೆಯೇ ಸಮುದ್ರದ ಒಳಗೂ ಕಾಡುಗಳಿವೆ, ಪಾಚಿಯ ಕಾಡುಗಳು!

ಫ್ಲೋರಿಡಾ ಮತ್ತು ವೆಸ್ಟ್ ಇಂಡೀಸ್‌ನ ಪೂರ್ವಕ್ಕೆ 'ಸರ್ಗಾಸಂ ನಟನ್ಸ್' ಎಂಬ ಜಾತಿಯ ಸಮುದ್ರ ಕಳೆ ೨೫೦೦೦೦ ಚದರ ಮೈಲು ವಿಸ್ತಾರಕ್ಕೆ ವ್ಯಾಪಿಸಿ ಅರಣ್ಯವನ್ನು ಹೋಲುತ್ತದೆ. ೧೪೯೨ರಲ್ಲಿ ಕೊಲಂಬಸ್ ಈ ಸಮುದ್ರವನ್ನೇ ಹಾದು ಬಂದಿದ್ದು.

-'ಗೌರಿ ಅಭಿ'

ಜ್ಞಾನನಿಧಿ

ಥಟ್ಟನೆ ಉತ್ತರಿಸುವಿರಾ?

೧) ರಮೇಶ ಕಾವಲುಗಾರನಿಗೆ "ನನ್ನನ್ನು ಬೆಳಿಗ್ಗೆ ೫ ಗಂಟೆಗೇ ಎಬ್ಬಿಸು. ೬ ಗಂಟೆಯ ರೈಲಿನಿಂದ ನಾನು ಮುಂಬಯಿಗೆ ಹೋಗಬೇಕಾಗಿದೆ," ಎಂದ. ಅದೇ ರೀತಿ ಕಾವಲುಗಾರ ಬೆಳಿಗ್ಗೆ ೫ ಗಂಟೆಗೇ ಅವನ್ನೆಬ್ಬಿಸಿ, "ನಾನೊಂದು ವಿಷಯ ಹೇಳಬಯಸುತ್ತೇನೆ" ಎಂದ.

"ಏನದು!"

"ರಾತ್ರಿ ನಾನೊಂದು ಕನಸು ಕಂಡೆ. ನೀವು ಪ್ರಯಾಣಿಸುವ ಗಾಡಿ ಮಧ್ಯದಲ್ಲೇ ಅಪಘಾತಕ್ಕೀಡಾಯಿತು. ಆದ್ದರಿಂದ ನೀವು ಈ ಗಾಡಿಯಲ್ಲಿ ಖಂಡಿತ ಹೋಗಬೇಡಿ."

ರಮೇಶ್ ಕಾವಲುಗಾರನ ಮಾತಿಗೊಪ್ಪಿದ. ಆ ಗಾಡಿ ನಿಜಕ್ಕೂ ಅಪಘಾತಕ್ಕೀಡಾಯಿತು. ಆತ ಆನಂದದಿಂದ ಕಾವಲುಗಾರನಿಗೆ ೧೦೦೦ ರೂಪಾಯಿ ಬಹುಮಾನವಿತ್ತ ಮತ್ತು ಅವನನ್ನು ನೌಕರಿಯಿಂದ ವಜಾ ಮಾಡಿದ.

ಏಕೆ?

೨) ಒಂದು ಮರದ ಮೇಲೆ ಕೆಲವು ಹಕ್ಕಿಗಳು ಕುಳಿತಿದ್ದುವು. ಮೊದಲ ಮರದ ಹಕ್ಕಿಗಳು ಎರಡನೇ ಮರದ ಹಕ್ಕಿಗಳೊಡನೆ, "ನಿಮ್ಮಲ್ಲಿಂದ ಒಂದು ಹಕ್ಕಿ ಇತ್ತ ಬಂದರೆ ನಾವು ಸಮ ಸಮ ಆಗುವೆವು," ಎಂದವು.

"ನಿಮ್ಮಲ್ಲಿಯ ಒಂದು ಹಕ್ಕಿ ನಮ್ಮಬಳಿ ಬಂದು ಸೇರಿದರೆ ನಾವು ನಿಮ್ಮ ಇಮ್ಮಡಿಯಾಗುವೆವು," ಎಂದವು ಎರಡನೇ ಮರದ ಹಕ್ಕಿಗಳು. ಹಾಗಿದ್ದರೆ ಆ ಮರಗಳಲ್ಲಿದ್ದ ಹಕ್ಕಿಗಳೆಷ್ಟು?

೩) ಈ ಅಪರಾಧ ಪೂರ್ಣಗೊಂಡರೆ ಪ್ರಪಂಚದ ಯಾವ ಶಕ್ತಿಯೂ ಅಪರಾಧಿಗೆ ಶಿಕ್ಷೆ ವಿಧಿಸಲಾರದು. ಆದರೆ ಅದು ಅಪೂರ್ಣವಾದರೆ ಶಿಕ್ಷೆ ಸಿಗುವುದು. ಅಂಥ ಅಪರಾಧ ಯಾವುದು?

೪) ಒಬ್ಬ ಮುಂಬಯಿಯಲ್ಲಿ ಹುಟ್ಟಿ ಇಂಗ್ಲೆಂಡಿನಲ್ಲಿ ಬೆಳೆದು, ಅಮೆರಿಕದಲ್ಲಿ ಸತ್ತ. ಅವನನ್ನು ಏನೆಂದು ಕರೆಯುವರು?

೫) ನಡೆಯುವ ಹಾಗೂ ಓಡುವ ಕ್ರಿಯೆಯಲ್ಲಿನ ಮುಖ್ಯ ಅಂತರವೇನು?

೬) ಈ ಪ್ರಶ್ನೆಗಳಿಗೆ ಹೌದು ಎಂದು ಯಾರೂ ಉತ್ತರಿಸುವುದಿಲ್ಲ. ಹಾಗೇನಾದರೂ ಹೇಳಿದರೆ ಆತ ಸುಳ್ಳುಗಾರನಾಗುವ. ಅದಾವ ಪ್ರಶ್ನೆಗಳು?

೭) ವಿನೋದ ನಿಷ್ಕಾರಣವಾಗಿ ಟ್ರೇನಿನ ಸರಪಳಿ ಎಳೆದ. ಆದರೂ ಆತನಿಗೆ ಜುಲ್ಮಾನೆ ವಿಧಿಸಲ್ಪಡಲಿಲ್ಲ. ಏಕೆ?

ಉತ್ತರಗಳು:

೧) ರಾತ್ರಿ ಕಾವಲುಗಾರ ನಿದ್ದೆ ಮಾಡಿ ಕನಸು ಕಂಡಿದ್ದ. ಎಂತಲೇ ಆತ ಆ ನೌಕರಿಗೆ ತಕ್ಕವನಲ್ಲವೆಂದು ಅವನನ್ನು ಕೆಲಸದಿಂದ ತೆಗೆದುಹಾಕಲಾಯಿತು.

೨) ೫ ಮತ್ತು ೭.

೩) ಆತ್ಮಹತ್ಯೆ

೪) ದಿವಂಗತ.

೫) ಮನುಷ್ಯ ನಡೆಯುವ ವೇಳೆ ಹಿಮ್ಮಡಿಯನ್ನೆತ್ತುತ್ತಾನೆ. ಓಡುವಾಗ ಕಾಲುಬೆರಳುಗಳನ್ನಷ್ಟೇ ಊರುತ್ತಾನೆ.

೬) ನೀವು ನಿದ್ರಿಸುತ್ತಿದ್ದೀರಾ? ನೀವು ಸತ್ತಿದ್ದೀರಾ?

೭) ಏಕೆಂದರೆ ರೈಲುಗಾಡಿ ನಿಲ್ದಾಣದಲ್ಲಿ ನಿಂತಿತ್ತು!

—"ಸವ್ಯಸಾಚಿ"

ನಿಮ್ಮ ಶಬ್ದಭಾಂಡಾರ ಬೆಳೆಯಲಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಇಲ್ಲಿ ಪ್ರತಿ ತಿಂಗಳು ಕೆಲವು ಶಬ್ದಗಳನ್ನು ಪರಿಚಯ ಮಾಡಿಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥಗಳನ್ನು ವಿವರಿಸಿದೆ.

೧) ಈಷಣ
- ಅ) ಆಸೆ
- ಆ) ನೋಡುವಿಕೆ
- ಇ) ಭಯಂಕರ
- ಈ) ಬಾಣ

೨) ಸಂಖ್ಯಾತ
- ಅ) ತೋಡಿದ
- ಆ) ಪ್ರಸಿದ್ಧ
- ಇ) ಎಣಿಸಲ್ಪಟ್ಟ
- ಈ) ಮಗ

೩) ಗರ್ಹಿತ
- ಅ) ಹೊಗಳಲು ಯೋಗ್ಯವಾದ
- ಆ) ತೆಗಳಲ್ಪಡುವಂಥ
- ಇ) ಕಸಿದುಕೊಂಡ
- ಈ) ತಿಕ್ಕಾಟ

೪) ಸುಘಟಿತ
- ಅ) ಒಳ್ಳೇ ಮುಹೂರ್ತ
- ಆ) ಸವಿಯಾದ ಶಬ್ದ
- ಇ) ಬಲವಾಗಿ ತಾಕಲಾಡಿದ
- ಈ) ಚೆನ್ನಾಗಿ ಜೋಡಿಸಿದ

೫) ಚತುಷ್ಟಯ
- ಅ) ಬುದ್ಧಿಶಾಲಿ
- ಆ) ಮೋಸಗಾರ
- ಇ) ಸಮಾಧಾನವುಳ್ಳ
- ಈ) ನಾಲ್ಕರ ಗುಂಪು

೬) ಚಾರುತ್ವ
- ಅ) ಮನಸ್ಸಿಗೆ ಹಿತವಾಗಿರುವಿಕೆ
- ಆ) ನಾಲ್ಕನೆಯವನಾಗುವುದು
- ಇ) ಮೋಕ್ಷ
- ಈ) ಅಪರೋಕ್ಷ ಜ್ಞಾನ

೭) ಜಿಜೀವಿಷು
- ಅ) ಜಯಶಾಲಿ
- ಆ) ಬದುಕುವ ಆಸೆಯುಳ್ಳವ
- ಇ) ಪ್ರಕಾಶಮಾನ
- ಈ) ಕೊಲ್ಲುವ ಬಾಣ

೮) ಚಟ್ಟೇರು
- ಅ) ದಿನ್ನೆ
- ಆ) ಸ್ಮೃತಿ ಬರು
- ಇ) ಬೇಸರಬರು
- ಈ) ಎಂಜಲು ತಿನ್ನು

೯) ಕುಂಡಲಿತ
- ಅ) ಸುರಳಿಯಾದ
- ಆ) ಹೆರಳು ಕಟ್ಟಿದ
- ಇ) ಹೊಂಡದಂಥ
- ಈ) ಕಾಲು ಬಲವಿಲ್ಲದ

೧೦) ನಿಟ್ಟೋಟ
- ಅ) ತಡೆತಡೆದು ಓಡುವುದು
- ಆ) ಸ್ವಾಮಿಭಕ್ತ
- ಇ) ಹುಲುಸಾದ ತೋಟ
- ಈ) ಬಿಟ್ಟೂ ಬಿಡದೆ ಓಡುವಿಕೆ

೧೧) ಬಾಹುಲ್ಯ
- ಅ) ತೋಳಬಲ
- ಆ) ಹೊರೆ
- ಇ) ಹೆಚ್ಚಾಗಿರುವುದು
- ಈ) ವಾಹನ

೧೨) ವಿಲುಲಿತ
- ಅ) ಆಸೆಬುರುಕ
- ಆ) ಅಸ್ತವ್ಯಸ್ತವಾಗಿ ಹಾರುವ
- ಇ) ಅವಸರಪಡುವ
- ಈ) ತತ್ತರಿಸುವ

'ಶಬ್ದಭಂಡಾರ'ದ ಸರಿಯಾದ ಅರ್ಥಗಳು

೧) ಈಷಣ

ಅ) ಆಸೆ, ಅಭಿಲಾಷೆ, ಬಯಕೆ, ಅಪೇಕ್ಷೆ. ಈಷಣತ್ರಯ ಅಂದರೆ ಹೆಂಡತಿ, ಮಕ್ಕಳು ಮತ್ತು ಸಂಪತ್ತಿನ ಮೂರು ಆಸೆಗಳು (ಸಂ.)

೨) ಸಂಖ್ಯಾತ

ಇ) ಎಣಿಸಲ್ಪಟ್ಟ, ಎಣಿಸಲ್ಪಡುವ. ಅಸಂಖ್ಯಾತ ಎಂದರೆ ಲೆಕ್ಕವಿಲ್ಲದಷ್ಟು. ಉದಾ - ಅವನು ಬುದ್ಧಿವಂತರಲ್ಲಿ ಸಂಖ್ಯಾತನಾಗಿದ್ದಾನೆ. (ಸಂ.)

೩) ಗರ್ಹಿತ

ಆ) ತೆಗಳಲ್ಪಡುವ, ನಿಂದೆಗೆ ಯೋಗ್ಯವಾದ. ಉದಾ - ಅವನ ನಡವಳಿಕೆ ಅತ್ಯಂತ ಗರ್ಹಿತವಾಗಿತ್ತು. (ಸಂ.)

೪) ಸುಘಟಿತ

ಈ) ಚೆನ್ನಾಗಿ ಜೋಡಿಸಿದ, ಸರಿಯಾಗಿ ಕಟ್ಟಿದ ಗಟ್ಟಿಮುಟ್ಟಾದ. ಉದಾ -ಅವನದು ಸುಘಟಿತವಾದ ಶರೀರ (ಸಂ. ಸು = ಚೆನ್ನಾಗಿ, ಘಟಿತ = ಜೋಡಿಸಿದ.)

ಚತುಷ್ಟಯ

ಈ) ನಾಲ್ವರ ಗುಂಪು. ಉದಾ - ಚೋರಚತುಷ್ಟಯ ಅಂದರೆ ನಾಲ್ವರು ಕಳ್ಳರು. (ಸಂ.)

೬) ಚಾರುತ್ವ

ಅ) ಮನಸ್ಸಿಗೆ ಹಿತವಾಗಿರುವಿಕೆ, ಚೆಲುವು, ಅಂದ, ಸುಖಕರವಾಗಿರುವಿಕೆ. ಉದಾ - ಅವಳ ನಡಿಗೆಯಲ್ಲಿ ಒಂದು ಚಾರುತ್ವವಿದೆ. (ಸಂ.)

೭) ಜಿಜೀವಿಷು

ಆ) ಬದುಕುವ ಆಶೆಯುಳ್ಳವ. ಉದಾ - ಆತ ಶತಮಾನ ಜಿಜೀವಿಷು ಅಂದರೆ ನೂರು ವರ್ಷ ಬದುಕಬೇಕೆಂಬಾಸೆಯುಳ್ಳವ. (ಸಂ.)

೮) ಚಟ್ಟೇರು

ಇ) ಬೇಸರ ಬರು, ಸಿಡಿಮಿಡಿಗೊಳ್ಳು, ಜಿಗುಪ್ಸೆಯುಂಟಾಗು. ಉದಾ- ಅವನ ಗೋಳಾಟ ಕೇಳಿ ತಲೆ ಚಿಟ್ಟೇರಿಹೋಯಿತು. ಹುಡುಗರ ಹಟ ತಲೆಗೆ ಚಿಟ್ಟೇರಿಸುತ್ತದೆ. (ಕನ್ನಡ ಚಿಟ್ಟು =ಸಿಡುಕು ?)

೯) ಕುಂಡಲಿತ

ಅ) ಸುರುಳಿಯಾಗಿ ಸುತ್ತಿದ, ದುಂಡಗೆ ಸುತ್ತಿದ. ಉದಾ -ಸರ್ಪ ಕುಂಡಲಿತವಾಗಿ ಮಲಗಿತ್ತು. (ಸಂ.)

೧೦) ನಿಟ್ಟೋಟ

ಈ) ಬಿಟ್ಟುಬಿಡದೆ ಓಡಿಹೋಗುವಿಕೆ, ಧಾವಿಸುವಿಕೆ. ಉದಾ - ಸುದ್ದಿ ತಿಳಿಸಲು ನಿಟ್ಟೋಟದಿಂದ ಹೋದನು. (ಕನ್ನಡ, ನಿಡಿದಾದ ಓಟ.)

೧೧) ಬಾಹುಲ್ಯ

ಇ) ಹೆಚ್ಚಾಗಿರುವಿಕೆ, ಆಧಿಕ್ಯ. ಉದಾ - ಅವನ ಲೇಖನದಲ್ಲಿ ಶಬ್ದಬಾಹುಲ್ಯ, ವಿಚಾರದಾರಿದ್ರ್ಯ ಕಾಣಿಸುತ್ತಿದೆ. (ಸಂ. ಬಹುಲ = ಹೆಚ್ಚು.)

೧೨) ವಿಲುಲಿತ

ಅ) ಅಸ್ತವ್ಯಸ್ತ, ಅಸ್ಯವ್ಯಸ್ತವಾಗಿ ಹಾರಾಡುವ, ಜೋತಾಡುವ. ಉದಾ - ಅವಳ ವಿಲುಲಿತ ಕೇಶಗಳು ಅವಳ ದುಃಖಕ್ಕೆ ಸಾಕ್ಷಿಯಾಗಿದ್ದವು. (ಸಂ. ವಿ = ಹೆಚ್ಚಾಗಿ, ಲುಲಿತ = ಜೋತಾಡುವ)

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಆರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೬-೮ ಸರಿಯಿದ್ದರೆ .... ಸಾಧಾರಣ

೯-೧೦ ಸರಿಯಿದ್ದರೆ .... ಉತ್ತಮ

೧೧-೧೨ ಸರಿಯಿದ್ದರೆ .... ಅತ್ಯುತ್ತಮ

ಆಕಸ್ಮಿಕದಿಂದ ಅದ್ಭುತ ಸಂಶೋಧನೆಯತ್ತ....

ಡಾಕ್ಟರ್ ಡೈರಿ

• ಡಾ. ಸ.ಜ. ನಾಗಲೋಟಿಮಠ

ಸುಮಾರು ೧೯೮೫ರಲ್ಲಿರಬಹುದು. ನಾನು ನನ್ನ ವಿಭಾಗದಲ್ಲಿ ಓದುತ್ತ ಕುಳಿತಿದ್ದೆ. ಸಂಜೆ ೬-೩೦ ಆಗಿರಬಹುದು. ಮುಚ್ಚಿದ ಬಾಗಿಲನ್ನು ಯಾರೋ ತಟ್ಟಿದರು. ಓದುವುದನ್ನು ಬಿಟ್ಟು ಬಾಗಿಲು ತೆರೆಯಲು ಹೋದೆ. ಬಾಗಿಲು ತೆರೆದಾಗ ನನಗೆ ಪ್ರಾಥಮಿಕ ಶಾಲೆಯಲ್ಲಿ ಕಲಿಸಿದ ಗುರುಗಳು ನಿಂತಿದ್ದರು. ಆನಂದ ಆಶ್ಚರ್ಯ ಎರಡೂ ಏಕಕಾಲದಲ್ಲಿ ಆದವು. ಆದರದಿಂದ ಒಳಗೆ ಕರೆದು ಕೂಡ್ರಿಸಿ, ಏನು ವಿಶೇಷವೆಂದು ಕೇಳಿದೆ. ಅವರು ಗಳಗಳನೆ ಅಳಹತ್ತಿದರು. ನನಗೋ ಗಾಬರಿ. ಮತ್ತೆ ಕೇಳಿದೆ. ಅವರು ತಾವು ತಂದಿದ್ದ ಚೀಲವನ್ನು ಬಿಚ್ಚಿ, ಸಣ್ಣ ಬಾಟಲಿಯನ್ನು ನನ್ನ ಟೇಬಲ್ಲಿನ ಮೇಲೆ ಇಟ್ಟರು. ತೆಗೆದುಕೊಂಡು ನೋಡಿದೆ. ಅದರ ಮೇಲೆ ಅವರ ಹೆಂಡತಿಯ ಹೆಸರು ಬರೆದಿತ್ತು. ಅದರ ಕೆಳಗೆ 'ನಾಲಿಗೆಯ ಬಯಾಪ್ಸಿ' ಎಂದು ಬರೆಯಲಾಗಿತ್ತು. ಅವರ ಹೆಂಡತಿಯ ನಾಲಿಗೆಗೆ ಹುಣ್ಣಾಗಿದೆ. ಅದನ್ನು ಸ್ಥಳೀಯ ವೈದ್ಯರಿಗೆ ತೋರಿಸಿದಾಗ ಅದು ಕ್ಯಾನ್ಸರ್ ಇರಬಹುದೆಂದು ಸಂಶಯಪಟ್ಟು ಬಯಾಪ್ಸಿ ತೆಗೆದಿರುವರೆಂಬುದು ತಿಳಿಯಿತು.

"ಯಾರು ಆಪರೇಷನ್ ಮಾಡಿದರು?" ಎಂದು ಕೇಳಿದೆ. ಮಾಡಿದವರ ಹೆಸರು ಹೇಳಿದರು. ನಾನು ಬಾಟಲಿಯನ್ನು ಮಗ್ಗುಲಲ್ಲಿ ಇಟ್ಟುಕೊಂಡು ನಾಲ್ಕು ದಿನಗಳಾದ ಮೇಲೆ ಉತ್ತರ ಬರೆಯುವೆನೆಂದು ಹೇಳಿದೆ. ಅದಕ್ಕೆ ಅವರು ಒಪ್ಪಲಿಲ್ಲ. ತಕ್ಷಣವೇ ಹೇಳಬೇಕೆಂದು ಪಟ್ಟುಹಿಡಿದರು.

ನಾನು ಹೇಳಿದೆ, "ಗುರುಗಳೇ ಅದನ್ನು ಯಂತ್ರದಲ್ಲಿ ಹಾಕಿ ಎರಡು ದಿನ ಬಿಡಬೇಕು. ನಂತರ ಕತ್ತರಿಸಿ ಬಣ್ಣಕೊಡಬೇಕು. ಆಮೇಲೆ ಅದನ್ನು ಸೂಕ್ಷ್ಮದರ್ಶಕದಲ್ಲಿ ಪರೀಕ್ಷಿಸಬೇಕು. ಆಗ ಅದು ಕ್ಯಾನ್ಸರ್ ಹೌದೋ ಅಲ್ಲವೋ ಎಂಬುದು ತಿಳಿಯುತ್ತದೆ" ಎಂದು. ಅವರು ಅದನ್ನು ನಂಬಲಿಲ್ಲ.

"ನೀನು ಕ್ಯಾನ್ಸರ್ ಪತ್ತೆಹಚ್ಚುವಲ್ಲಿ ಬಹಳ ಪ್ರವೀಣನೆಂದು ನಿನ್ನ ಕೈಯಲ್ಲಿ ಕಲಿತ ಡಾಕ್ಟರರು ಹೇಳಿದ್ದಾರೆ. ನೋಡಿದ ತಕ್ಷಣ ಅದು ಇಂಥದೇ ಎಂದು ಹೇಳುತ್ತೀಯಂತೆ. ಈಗ ನನ್ನ ಹೆಂಡತಿಯ ನಾಲಿಗೆಯ ಭಾಗವನ್ನು ತಂದಿರುವೆ. ನೋಡಿ ಬೇಗನೇ ಹೇಳು. ನಾನು ಬೇಗ ಊರಿಗೆ ಹೋಗಬೇಕು. ಅವಳು ಅಳುತ್ತಾ ಮಲಗಿರುವಳು. ನಾನು ಊರಿಗೆ ಹೋಗದಿದ್ದರೆ ಗಾಬರಿಯಾಗುವಳು" ಎಂದು ಹೇಳುತ್ತಾ ಮತ್ತೆ ಅಳತೊಡಗಿದರು. ಅದನ್ನು ಸೂಕ್ಷ್ಮದರ್ಶಕದಲ್ಲಿ ಹಾಕಿಯೇ ನೋಡಿ ಹೇಳಬೇಕೆಂದರೆ ಕೇಳಲಿಲ್ಲ.

"ನಿನಗೆ ಹಣ ಬೇಕಾದರೆ ಕೊಡುವೆ" ಎಂದು ಹೇಳಹತ್ತಿದರು. ಗುರುಗಳಿಗೆ ಉತ್ತರ ಹೇಳದಿದ್ದರೆ ಗಡಿಬಿಡಿ ಆಗುವುದೆಂದು ಅನಿಸಿತು. ಆದರೆ ಹೇಳುವುದು ಸುಳ್ಳು ಉತ್ತರವೇ. ಏಕೆಂದರೆ ಅವರು ತಂದ ಅಂಗಾಂಶವನ್ನು

ಫಾರ್ಮಾಲಿನ್ ದ್ರಾವಣದಲ್ಲಿ ಹಾಕಿದಾಗ ಅದರ ಅಂಚು ಹಾಗೂ ದಂಡೆಗಳಿಂದ ಸಾವಿರಾರು ಜೀವಕಣಗಳು ಸಡಿಲುಗೊಂಡು ದ್ರವದಲ್ಲಿ ಬೀಳುವವು. ಹೀಗೆ ಬಿದ್ದ ಕಣಗಳನ್ನು ಪರೀಕ್ಷಿಸಿದರೆ ಅವುಗಳ ಲಕ್ಷಣಗಳ ಮೇಲೆ ಅವು ಕ್ಯಾನ್ಸರ್ ಕಣಗಳು ಹೌದೋ ಅಲ್ಲವೋ ಎಂಬುದನ್ನು ಅಂದಾಜಿಸಬಹುದು. ಈ ವಿಧಾನದಿಂದ ರೋಗ ನಿದಾನ ಕೇವಲ ೩೦ ಮಿನಿಟುಗಳಲ್ಲಿ ಆಗುತ್ತದೆ. ಮಾಮೂಲಿನಂತೆ ಅಂಗಾಂಶವನ್ನು ಪರೀಕ್ಷಿಸಿ ರೋಗ ನಿದಾನಿಸ



ಬೇಕಾದರೆ ೪೮ರಿಂದ ೭೨ ತಾಸುಗಳಾದರೂ ಬೇಕು.

ಸೆಡಿಮೆಂಟ್ ಸೈಟಾಲಜಿ..

ಪರೀಕ್ಷೆಗೆ ಬಂದ ಚಿಕ್ಕಪುಟ್ಟ ಅಂಗಾಂಶಗಳನ್ನು ಈ ತಂತ್ರದಿಂದ ಪರೀಕ್ಷಿಸತೊಡಗಿದೆ. 'ಸೆಡಿಮೆಂಟ್ ಸೈಟಾಲಜಿ'ಯಿಂದ ಬಂದ ನಿದಾನವನ್ನು ಒಂದು ಕಡೆಗೆ ಬರೆದು ಇಡತೊಡಗಿದೆ. ಎರಡು ದಿನಗಳ ನಂತರ ಹಿಸ್ಟೊಪ್ಯಾಥೊಲಜಿ ಅಭ್ಯಸಿಸಿದ ಮೇಲೆ ನಂತರ ಬರುವ ನಿದಾನವನ್ನು ಬರೆದು ಹೋಲಿಸತೊಡಗಿದೆ. ಸುಮಾರು ಶೇ. ತೊಂಭತ್ತರಷ್ಟು ನಿದಾನಗಳು ಸರಿ ಎಂಬುದು ಖಚಿತವಾಯಿತು. ಈ ಅಧ್ಯಯನದ ಲಾಭವನ್ನು ನನ್ನ ವಿದ್ಯಾರ್ಥಿಗಳಿಗೆ ಕೊಡಬೇಕೆಂದು ಇಬ್ಬರು-ಮೂವರಿಗೆ ಈ ವಿಷಯವನ್ನು ಅವರ ಎಂ.ಡಿ. ಪದವಿಗೆ ಸಂಶೋಧನ ಪ್ರಬಂಧಕ್ಕೆ ಆರಿಸಿಕೊಳ್ಳಲು ಸೂಚಿಸಿದೆ. ನನ್ನೆದುರಿಗೆ ಸರಿ ಎಂದು ಹೇಳಿ ಹೊರಗೆ ಹೋಗುತ್ತಿದ್ದರು. ಆದರೆ ಒಂದು ವಾರದೊಳಗೆ ಬಂದು ಈ ವಿಷಯ ತಮ್ಮ ಸಂಶೋಧನಾ ಪ್ರಬಂಧಕ್ಕೆ ಬೇಡವೆಂದು ಜಾರಿಕೊಳ್ಳುತ್ತಿದ್ದರು. ಹೀಗೇಕೆಂದು ನನಗೆ ಹೊಳೆಯುತ್ತಲೇ ಇರಲಿಲ್ಲ. ಕೊನೆಗೆ ವಿಷಯವೇನೆಂದು ವಿಚಾರಿಸಿದಾಗ ಸ್ವಲ್ಪ ಸ್ವಲ್ಪವಾಗಿ ಮಾಹಿತಿ ದೊರೆಯಿತು. ಸ್ನಾತಕೋತ್ತರ ವಿದ್ಯಾರ್ಥಿಗಳು ಸಂಶೋಧನಾ ಪ್ರಬಂಧವನ್ನು ಆರಿಸಿಕೊಳ್ಳುವಾಗ ಉಳಿದ ಶಿಕ್ಷಕರನ್ನು ವಿಚಾರಿಸುವುದು ರೂಢಿ. ಅದು ಒಳ್ಳೆಯದೂ ಹೌದು. ವಿದ್ಯಾರ್ಥಿಗಳು ನನ್ನ ಸಹೋದ್ಯೋಗಿಗಳಲ್ಲಿ ವಿಚಾರ ಕೇಳುತ್ತಿದ್ದರಂತೆ. ನನ್ನ ಸಹೋದ್ಯೋಗಿಗಳಲ್ಲಿಯೂ ಬಹುಪಾಲು ಜನ ನನ್ನ ವಿದ್ಯಾರ್ಥಿಗಳೇ. ಅವರಿಗೆ ಸೆಡಿಮೆಂಟ್ ಸೈಟಾಲಜಿ ವಿಷಯ ತೀರಾ ಹೊಸದು. ಅದಕ್ಕೆ ಯಾವ ಹೆಸರಿಡಬೇಕು ಎಂಬುದನ್ನೇ ನಾವು ಆಗ ನಿರ್ಧರಿಸಿರಲಿಲ್ಲ. ಅದರ ಬಗ್ಗೆ ಎಲ್ಲಿಯೂ ಉಲ್ಲೇಖವಿಲ್ಲ. ಓದಬೇಕೆಂದರೆ ಪುಸ್ತಕಗಳಿಲ್ಲ. ಬೇರೆ ಯಾವ ತಜ್ಞರೂ ಅದರ ಮೇಲೆ ಲೇಖನಗಳನ್ನು ಪ್ರಕಟಿಸಿಲ್ಲ. ಇಂಥ ವಿಷಯದ ಮೇಲೆ ಪ್ರಬಂಧವನ್ನು ಬರೆದರೆ ಪರೀಕ್ಷಕರು ಅದನ್ನು ಒಪ್ಪಲಿಕ್ಕಿಲ್ಲ ಎಂಬ ಸಂಶಯ. ಕಾರಣ ಅವರು ಪಿಸುಮಾತಿನಲ್ಲಿ "ನೀವು ಪ್ರೊಫೆಸರನ್ನು ನಂಬಿದರೆ ಮುಳುಗುಹೋಗುವಿರಿ. ಬೇರೆ ವಿಷಯ ತೆಗೆದುಕೊಳ್ಳಿರಿ. ವಿಷಯ ಸುಲಭವಾಗಿರಲಿ. ಹಲವಾರು ಜನರು ಅದರ ಮೇಲೆ ಸಂಶೋಧನೆಗಳನ್ನು ನಡೆಸಿ ಒಂದು ನಿಶ್ಚಿತ ರೂಪ ಪಡೆದಿರಬೇಕು. ಅಂದರೆ ನಿಮಗೆ ತೊಂದರೆ ಆಗಲಿಕ್ಕಿಲ್ಲ" ಎಂದು ಹೇಳುತ್ತಿದ್ದರು.

ಅವರ ಸೂಚನೆ ಸತ್ಯವಾಗಿತ್ತು. ನನಗೂ ಅದು ಸರಿಯೆನ್ನಿಸಿ ಯಾರ ಮೇಲೆಯೂ ಒತ್ತಾಯದಿಂದ ಅದರ ಹೊರೆ ಹೇರಬಾರದೆಂದು ನಿರ್ಧರಿಸಿದ್ದೆ. ಬದಲು ನಾನೇ ಆ ಕಾರ್ಯ ಮಾಡುತ್ತಾ ನಡೆದಿದ್ದೆ.

ಕೊನೆಗೆ ಡಾ. ನೀತಾ ಪೈ ಎಂಬಾಕೆ ಈ ವಿಷಯವನ್ನು ತೆಗೆದುಕೊಳ್ಳುವ ಧೈರ್ಯ

ಪರೀಕ್ಷಿಸಿಯೇ ಇಲ್ಲ. ಕೊನೆಗೆ ಬಾಟಲಿಯನ್ನು ತೆಗೆದುಕೊಂಡು ವಿಭಾಗದ ಲ್ಯಾಬೊರೇಟರಿಗೆ ಹೋಗಿ ಅವರೆದುರಿಗೆ ಬಾಟಲಿಯಲ್ಲಿಯ ತುಂಡನ್ನು ಚಿಮ್ಮಟಿಕೆಯಿಂದ ಹಿಡಿದು ಬೇರೆ ಬಾಟಳಿಯಲ್ಲಿ ಹಾಕಿ ಅದನ್ನು ಪರೀಕ್ಷಿಸಿದಂತೆ ಮಾಡಿದೆ. ಮತ್ತೆ ಅದಕ್ಕೆ ಫಾರ್ಮಾಲಿನ್ ದ್ರಾವಣ ಹಾಕಿ ಇಟ್ಟೆ. ಅವರು ತಂದ ಬಾಟಲಿಯನ್ನು ತೆಗೆದುಕೊಂಡು ಮೆಲ್ಲಗೆ ಅಲುಗಾಡಿಸಿದೆ. ಅದರ ತಳದಿಂದ ಸಣ್ಣನೆಯ ಮೋಡವೊಂದು ಎದ್ದಂತೆ ಕಂಡಿತು. ತಕ್ಷಣ ವಿಚಿತ್ರ ಅನುಭವವಾಯಿತು. ಬೇಗನೆ ಒಂದು ನಳಿಕೆಯಿಂದ ಬಾಟಲಿಯ ತಳದಲ್ಲಿದ್ದ ಹುಡಿಯಂಥ ಪದಾರ್ಥವನ್ನು ಶೇಖರಿಸಿ ಸ್ಲೈಡ್ ಮೇಲೆ ಹಾಕಿದೆ. ಅದಕ್ಕೆ ಒಂದು ಹನಿ ಟೊಲ್ಯುಡಿನ್ ನೀಲಿಯನ್ನು ಕೂಡಿಸಿ ಸೂಕ್ಷ್ಮದರ್ಶಕದಲ್ಲಿ ಪರೀಕ್ಷಿಸಿದೆ. ನನಗೆ ಬಹಳ ಸಂತೋಷವಾಯಿತು. ಅಲ್ಲಿ ನೂರಾರು ಜೀವಕಣಗಳು ಇದ್ದವು. ಅವುಗಳಲ್ಲಿ ಬಹಳಷ್ಟು ಜೀವಕಣಗಳು ತೇಲುತ್ತಿದ್ದವು. ಆ ಪೈಕಿ ಬಹಳಷ್ಟು ನಾಲಿಗೆಯ ಲೋಳ್ಪರೆಯವಾಗಿದ್ದವು.

ಉಳಿದವುಗಳು ರಕ್ತಗೋಲಕಗಳಾಗಿದ್ದವು. ನಾಲಿಗೆಯ ಲೋಳ್ಪರೆಯ ಜೀವಕಣಗಳು ಎಂಥದೇ ಕ್ಯಾನ್ಸರ್ ಸ್ವರೂಪವನ್ನು ತೋರಿಸುತ್ತಿದ್ದಿಲ್ಲ. ನೋಡಲು ಸಾಮಾನ್ಯ ರ[illegible]ಷಡಿದಿದ್ದವು. ನಿಟ್ಟುಸಿರುಬಿಟ್ಟು ಕುಳಿತೆ. ಗುರುಗಳು ಎದುರಿಗೆ ಕುಳಿತಿದ್ದರು. ಇದ್ದಬಿದ್ದ ಧೈರ್ಯವನ್ನೆಲ್ಲ ಕೂಡಿಸಿ, "ನಾಲಿಗೆಯ ಹುಣ್ಣು ಕ್ಯಾನ್ಸರ್ ಅಲ್ಲ"ವೆಂದು ಹೇಳಿದೆ. ಗುರುಗಳು ಎದ್ದುನಿಂತರು. "ಶಾಬ್ಬಾಸ್, ನನಗೆ ಗೊತ್ತಿತ್ತು. ನೀನು ಇಷ್ಟು ಜಾಣನೆಂದು. ಕರ್ನಾಟಕದಲ್ಲಿ ನಿನ್ನಂಥವರು ಇಲ್ಲವೆಂದು ಕೇಳಿದ್ದೆ. ಇಂದು ಅದನ್ನು ಪ್ರತ್ಯಕ್ಷ ಕಂಡೆ. ನಿನಗೆ ದೇವರ ಆಶೀರ್ವಾದ ಇರಲಿ" ಎಂದು ಎದ್ದರು. ನನಗೋ ಬೆವರು ಬಿಟ್ಟಿತ್ತು. ಏನು ಮಾಡಿರುವೆನೋ ಏನೋ ಎಂಬ ಭಯ. ಮತ್ತಾರಾದರೂ ಬಂದಿದ್ದರೆ ಚೆನ್ನಾಗಿ ಬೈಯ್ದು ಓಡಿಸುತ್ತಿದ್ದೆ. ಆದರೆ ಮುಗ್ಧ ಗುರುಗಳು ಒಂದು ಅಂಗಾಂಶದ ಬಗ್ಗೆ ನಿರ್ಣಯಿಸಬೇಕಾದರೆ ಸುಮಾರು ಮೂರು ದಿನ ಬೇಕು ಎಂಬ ಅಂಶವನ್ನು ಅರಿಯದವರು. ದೊಡ್ಡ ದೊಡ್ಡ ಅಂಗಾಂಶ ನೋಡಿ, ಇಡೀ ದುರ್ಮಾಂಸ ವರ್ಣಿಸಿ, ಅದು ಕ್ಯಾನ್ಸರ್ ಎಂದು ಸ್ತನ, ಪುಪ್ಪುಸ ಯಕೃತ್ತು, ಜಠರ, ಕರುಳು, ಎಲುಬು ಮುಂತಾದವುಗಳಲ್ಲಿ ಹೇಳಬಹುದು. ಆದರೆ ಸಣ್ಣ ತುಂಡು ನೋಡಿ ಹೇಳಲಾಗದು ಎಂಬ ಮಾತು ನನ್ನ ಗುರುಗಳಿಗೆ ತಿಳಿಯದು. ಅವರ ಮನಸ್ಸಿನ ಸಮಾಧಾನಕ್ಕೆಂದು ಏನೋ ಒಂದು ಸುಳ್ಳು ಹೇಳಿದ್ದೆ. ಆದರೆ ತಪ್ಪಿ ಅದು ಕ್ಯಾನ್ಸರ್ ಆಗಿದ್ದರೆ ಹೇಗೆ? ಎಂಬ ಅಂಜಿಕೆ. ಒಂದೇ ಸಮಾಧಾನವೆಂದರೆ ಬಾಟಲಿಯ ತಳದಲ್ಲಿ ಕಂಡ ಒಂದು ಜೀವಕಣವೂ ಕ್ಯಾನ್ಸರ್ ಲಕ್ಷಣ ತೋರಿಸಿದ್ದಿಲ್ಲ. ಮೂರು ದಿನಗಳಾದ ಮೇಲೆ ಅಂಗಾಂಶವನ್ನು ಪರೀಕ್ಷಿಸಿದೆ. ಕ್ಯಾನ್ಸರ್ ಇದ್ದಿಲ್ಲ. ಮೈಮೇಲಿನ ಭಾರ ಕಳೆಯಿತು. ಎದ್ದು ಅಡ್ಡಾಡಿ ಬಂದೆ. ಬದುಕಿದೆ ಎಂದು ಮನಸ್ಸಿನಲ್ಲೇ ದೇವರಿಗೆ ಕೈಮುಗಿದೆ.

ಆದರೆ ಗುರುಗಳು ತಮ್ಮ ಮುಗ್ಧತೆಯಿಂದ ನನಗೊಂದು ಹೊಸ ಹಾದಿಯನ್ನೇ ತೋರಿದ್ದರು. ನಾನು ನನ್ನ ವಿಭಾಗದಲ್ಲಿ ಇಪ್ಪತ್ತು ವರ್ಷಗಳಿಂದ ಕೆಲಸ ಮಾಡಿದ್ದರೂ ಒಂದು ದಿನವೂ ಇಂಥದನ್ನು ಮಾಡಬೇಕೆಂಬ ವಿಚಾರ ನನಗೆ ಹೊಳೆದಿರಲಿಲ್ಲ. ಅಂದಿನವರೆಗೆ ಯಾವ ಲ್ಯಾಬೊರೇಟರಿಯವರೂ ಇದನ್ನು ಮಾಡಿರಲಿಲ್ಲ. ಯಾವ ಪುಸ್ತಕವೂ ವಿವರಿಸಿರಲಿಲ್ಲ. ಆದರೆ ನಾನು ಪರಿಸ್ಥಿತಿಯ ಒತ್ತಡಕ್ಕೆ ಕಟ್ಟುಬಿದ್ದು ಅಂಥದನ್ನು ಮಾಡಿದ್ದೆ. ಅದೇ ವಿಚಾರ ಒಂದು ವಾರದವರೆಗೂ ಮನಸ್ಸಿನಲ್ಲಿ ಗುಂಯ್‌ಗುಡುತ್ತಿತ್ತು. ಕೊನೆಗೆ ಒಂದು ದಿನ ಪ್ರತಿಯೊಂದು ಅಂಗಾಂಶಕ್ಕೂ ಅದೇ ವಿಧಾನ ಬಳಸಿ ತಕ್ಷಣ ತಾತ್ಕಾಲಿಕ ನಿದಾನವನ್ನು ಕೊಡಬಾರದೇಕೆ? ಎಂದು ವಿಚಾರಿಸಿ ಪ್ರಾರಂಭಿಸಿಬಿಟ್ಟೆ. 'ಕಟ್ ಬಯಾಪ್ಸಿ ಸೆಡಿಮೆಂಟ್ ಸೈಟಾಲಜಿ' (Cut Biopsy Sediment Cytology) ಎಂದು ಅದಕ್ಕೊಂದು ಹೆಸರನ್ನೂ ಇಟ್ಟೆ. ಇದರ ಅರ್ಥ ಇಷ್ಟೇ: ಒಂದು ಅಂಗಾಂಶವನ್ನು ಕೊಯ್ದು, ತುಂಡು ತೆಗೆದು,

ತೋರಿಸಿದಳು. ಇದು ಒಂದು ರೀತಿಯ ಜೂಜು. ಗೆದ್ದರೆ ದೊಡ್ಡ ಲಾಭ. ಸೋತರೆ ಸೋಲು ಎಂದು ಪ್ರಾರಂಭದಲ್ಲೇ ಹೇಳಿದ್ದೆ. ಆದರೂ ಆಕೆ ಸಂಶೋಧನೆ ಮಾಡಲು ಮುಂದಾದಳು. ಮಾಡಿ ಮುಗಿಸಿದಳು. ಮುಂದೆ ಅದೇ ವಿಷಯದ ಮೇಲೆ ವಿದೇಶಗಳಲ್ಲಿ ಹಾಗೂ ಭಾರತದಲ್ಲಿ ಆಕೆಯ ಪ್ರಬಂಧಗಳು ಪ್ರಕಟವಾದವು. ಅವಳು ಎರಡು ವರ್ಷಗಳಲ್ಲಿ ದೊಡ್ಡ ಹೆಸರನ್ನು ಮಾಡಿದಳು. ಇಂದು ಆ ವಿಷಯ ಎಲ್ಲಾ ಕಡೆಗೂ ಪ್ರಸಿದ್ಧವಾಗಿದೆ. ಹಲವಾರು ವಿಶ್ವವಿದ್ಯಾಲಯಗಳಲ್ಲಿ ಅದರ ಮೇಲೆ ಕಾರ್ಯ ನಡೆದಿದೆ. ಕೆಲವು ವಿದ್ಯಾರ್ಥಿಗಳಿಗೆ ಪಾರಿತೋಷಕಗಳೂ ದೊರೆತಿವೆ. ನನಗೆ ಅನೇಕ ಅಭಿನಂದನಾ ಪತ್ರಗಳೂ ಬಂದಿವೆ. ಇಂದು ಈ ವಿಧಾನ 'ಸೆಡಿಮೆಂಟ್ ಸ್ಟೆಟಾಲಜಿ' ಎಂದೇ ಪ್ರಸಿದ್ಧವಾಗಿದೆ.

ನನ್ನ ಪ್ರಾಥಮಿಕ ಶಾಲೆಯ ಗುರುಗಳ ಅನುಗ್ರಹದಿಂದ ಸೆಡಿಮೆಂಟ್ ಸ್ಟೆಟಾಲಜಿ ವಿಷಯವನ್ನು ಬೆಳಕಿಗೆ ತಂದ ಸಂತೋಷ ಮನಸ್ಸಿನಲ್ಲಿ ಇನ್ನೂ ಇತ್ತು. ಈ ವಿಷಯವನ್ನು ಬೇರೆ ಪ್ರಮೇಯಗಳಲ್ಲಿ ಬಳಸಿ ಅದರ ಲಾಭ ಪಡೆಯಬೇಕೆಂದು ಯತ್ನಿಸುತ್ತಿದ್ದೆ. ಒಂದು ಪ್ರಮೇಯ ಬಹಳ ದಿನಗಳಿಂದ ಬಿಡಿಸಲಾಗದೇ ಉಳಿದುಕೊಂಡಿತ್ತು. ಅದೆಂದರೆ ಎಲುವುಗಳ ಕ್ಯಾನ್ಸರಿನ ತ್ವರಿತ ನಿದಾನ. ಮೃದು ಅಂಗಾಂಶಗಳನ್ನು ಹಿಮವಾಗಿಸಿ ಕೊಯ್ದು ರೋಗ ನಿದಾನಿಸಬಹುದು. ಆದರೆ ಎಲುವುಗಳಲ್ಲಿ ಈ ಸಾಧ್ಯತೆ ಇಲ್ಲ. ಅಷ್ಟು ಬಿರುಸಾದ ಅಂಗಾಂಶವನ್ನು ತ್ವರಿತವಾಗಿ ಮೆದು ಮಾಡಿ ಕತ್ತರಿಸುವ ವಿಧಾನಗಳು ಸದ್ಯಕ್ಕಂತೂ ಇಲ್ಲ. ಎಲುವಿನ ಮೇಲೆ ಪರೀಕ್ಷೆ ನಡೆಸಿ ನಿದಾನಿಸಬೇಕಾದರೆ ಮೊದಲು ಅದನ್ನು ಮೃದುಗೊಳಿಸಬೇಕು. ನಂತರ ಹದಗೊಳಿಸಬೇಕು. ಆಮೇಲೆ ತೆಳುವಾಗಿ ಕೊಯ್ದು ಬಣ್ಣವಿತ್ತು ಪರೀಕ್ಷಿಸಬೇಕು. ಇಷ್ಟೆಲ್ಲ ಜರುಗಲು ಕನಿಷ್ಠ ಒಂದು ವಾರದಿಂದ ೧೦ ದಿನಗಳಾದರೂ ಬೇಕು. ಇದನ್ನೇ ನಾವು ಸೆಡಿಮೆಂಟ್ ಸ್ಟೆಟಾಲಜಿ ವಿಧಾನದಿಂದ ಪರೀಕ್ಷಿಸಿದರೆ ಕೇವಲ ೩೦ ಮಿನಿಟುಗಳಲ್ಲಿ ಪರಿಣಾಮ ದೊರೆಯಬಹುದು. ಇದರಿಂದ ರೋಗಿಗಳಿಗೂ ವೈದ್ಯರಿಗೂ ಎಷ್ಟು ಅನುಕೂಲ ಎಂಬುದನ್ನು ವಿಚಾರಿಸಿದರೆ ಅದರ ಮಹತ್ವ ಗೊತ್ತಾಗುವುದು.

ಇದೇ ಗುರಿಯನ್ನು ಮುಂದಿಟ್ಟುಕೊಂಡು ಈ ಸಂಶೋಧನೆಗೆ ಕೈಹಾಕಿದೆ. ಇದರಲ್ಲೂ ಒಳ್ಳೆಯ ಯಶಸ್ಸು ದೊರೆಯಿತು. ಇದರ ಮೇಲಿನ ಪ್ರಬಂಧಗಳು ದೇಶ-ವಿದೇಶಗಳಲ್ಲಿ ಪ್ರಕಟವಾಗಿವೆ. ನಮ್ಮ ಸಂಸ್ಥೆಗೆ ದೊಡ್ಡ ಹೆಸರನ್ನು ತಂದುಕೊಟ್ಟಿವೆ.

ಒಂದು ಸಲ ಒಮ್ಮೆಯೇ ನಾಲ್ಕು ರಜೆಗಳು ಕೂಡಿಕೊಂಡು ಬಂದವು. ಕಾರಣ ರಜೆ ಮುಗಿದ ಮೇಲೆ ಅಂಗಾಂಶ ಪರೀಕ್ಷೆಗೆ ಮತ್ತೆ ಮೂರು ದಿನ ಬೇಕು. ಅಷ್ಟು ದಿನ ರೋಗಿಗೆ ತಡೆಯಲು ಸಾಧ್ಯವಿದ್ದಿಲ್ಲ. ಅವನ ವೃಷಣದ ಜೇದುಂಡೆ ಪರೀಕ್ಷೆ ಮಾಡಲು ಕಳುಹಿಸಿದ್ದರು. ಫಲಿತಾಂಶವನ್ನು ಒಂದೇ ದಿನದಲ್ಲಿ ಕೊಡಬೇಕಾಗಿತ್ತು. ಮಾಮೂಲಿನಂತೆ ಇದು ಅಸಾಧ್ಯವಾಗಿತ್ತು. ಕಾರಣ ನಾನು ಇಲ್ಲಿಯೂ ಸೆಡಿಮೆಂಟ್ ಸ್ಟೆಟಾಲಜಿ ಪ್ರಯೋಗ ಮಾಡಿದೆ. ಉಳಿದೆಲ್ಲ ಪ್ರಯತ್ನಗಳಿಗಿಂತ ಇಲ್ಲಿ ಫಲಿತಾಂಶಗಳು ಬಹಳೇ ಉತ್ತಮಮಟ್ಟದ್ದಾಗಿದ್ದವು. ಎಲುಬಿನ ಜೇದುಂಡೆ ಪರೀಕ್ಷೆಯಂತೆ ವೃಷಣದ ಜೇದುಂಡೆ ಪರೀಕ್ಷೆಯೂ ಬಹಳ ಉಪಯುಕ್ತವೆನಿಸಿದೆ ಹಾಗೂ ಪ್ರಸಿದ್ಧಿ ಪಡೆದಿದೆ ✪


ಸುಮ್ಮನೆ ಕುಳಿತರೂ

"ಸುಮ್ಮನೆ ಕುಳಿತರೆ ಯಾವ ಕೆಲಸವೂ ಆಗುವುದಿಲ್ಲ ತಿಳಿಯಿತೇನು?" ಎಂದರು ಮಾಸ್ತರ್.

"ತತ್ತಿಯ ಮೇಲೆ ಕೋಳಿ ಸುಮ್ಮನೆ ಕುಳಿತರೂ ಮರಿಯಾಗುತ್ತಲ್ಲ ಸಾರ್!" ನಾಗುವಿನ ಉತ್ತರ ಸಿದ್ಧವಾಗಿಯೇ ಇತ್ತು.

–'ವೀರಪ್ಪನ್'

ನೆನಪು



ಕಾವ್ಯ ಮೋಹದ ಭಾಷಾ ವಿಜ್ಞಾನಿ:

ಡಾ. ಎಚ್.ಎಸ್. ಬಿಳಿಗಿರಿ

ಡಾ. ಎಚ್.ಎಸ್.ಬಿಳಿಗಿರಿಯವರು ಮೇ ೧೦ನೇ ದಿನಾಂಕದಂದು (೧೯೨೪-೧೯೯೮) ಬೆಳಿಗ್ಗೆ ದೆಹಲಿಯಲ್ಲಿ ತೀರಿಕೊಂಡರೆಂದು ವರ್ತಮಾನ ಬಂದಾಗ ಅವರನ್ನು ಬಲ್ಲವರಿಗೆ ತೀವ್ರ ಆತಂಕವಾಯಿತು. ಹತ್ತುದಿನಗಳ ಹಿಂದೆಯಷ್ಟೆ ಅವರು ಬೆಂಗಳೂರಿನ ತಮ್ಮ ತಂಗಿಯ ಮನೆಯಿಂದ ದಿಲ್ಲಿಯಲ್ಲಿರುವ ಮಗಳ ಮನೆಗೆ ಹೋಗಿದ್ದರು. ಅವರ ಹತ್ತಿರದ ಬಂಧು, ಹಿಂದೆ 'ಕೊರವಂಜಿ'ಯಲ್ಲಿ ಬರೆಯುತ್ತಿದ್ದ ಎನ್. ರಾಮಾನುಜ (ಈಗ ಎಚ್.ಎಂ.ಟಿ.ಯಲ್ಲಿದ್ದಾರೆ.) ನನಗೆ ಫೋನು ಮಾಡಿ ತಿಳಿಸಿದರು. ದಿಲ್ಲಿಯಲ್ಲಿ ಸಂಪರ್ಕಿಸಲು ಫೋನು ನಂಬರ್ ನೀಡದರು. ಅಕ್ಷಣಾ, ಛೆ, ಇಷ್ಟು ಬೇಗ ಹೀಗಾಗಬಾರದಿತ್ತು ಅನಿಸಿತು. ಚುನಾವಣೆಯ ಬಿಸಿ ಬಿಸಿ ವಾರ್ತೆಗಳ ನಡುವೆಯೂ ಮರುದಿನದ ಕನ್ನಡ ಪತ್ರಿಕೆಗಳ ಮುಖಪುಟದಲ್ಲಿ ಬಿಳಿಗಿರಿ ಅವರ ನಿಧನದ ವಾರ್ತೆ, ಫೋಟೋ ಅಚ್ಚಾಯಿತು. ನನಗೆ ಒಳಗೊಳಗೇ ಏನೆಂದು ಹೇಳಲಾರದ ಆಪ್ತರೊಬ್ಬರನ್ನು ಕಳಕೊಂಡ ನೋವು. ಬಿಳಿಗಿರಿಯವರನ್ನು ನಾನು ಕೆಲವು ಸಲ ಕಂಡು ಮಾತಾಡಿದ್ದೆ ಆ ಪ್ರತಿಯೊಂದು ಭೇಟಿಯೂ ಆತ್ಮೀಯವಾದ ಆಹ್ಲಾದದ ನೆನಪು.

ನಾನು ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ಅಕ್ಷ

ಎಸ್.ಆರ್.ವಿಜಯಶಂಕರ

ಪ್ರಕಾಶನದವರು ಬಿಳಿಗಿರಿಯವರ 'ನಾಯಿಕೊಡೆ' ಕವನ ಸಂಕಲನ ಪ್ರಕಟಿಸಿದ್ದರು. ಆ ಸಮಯ ಅಡಿಗರ ಸಂಪಾದಕತ್ವದ 'ಸಾಕ್ಷಿ' ತ್ರೈಮಾಸಿಕದ ಬಿಳಿಗಿರಿಯವರು ಎಲ್.ಎಸ್.ಡಿ. ಸೇವಿಸಿದಾ ಪಡೆದ ತಮ್ಮ ಅನುಭವವನ್ನು ಬರೆದಿದ್ದರು. ಅದನ ಓದಿ ಎಲ್.ಎಸ್.ಡಿ. ಏನೆಂದು ತಿಳಿಯದ ನಾನ

ಅದೇನೆಂದು ನನ್ನ ತಂದೆಯವರಲ್ಲಿ ಕೇಳಿದೆ. ಏನೋ ಒಂದು ಮಾದಕ ದ್ರವ್ಯ ಇರಬೇಕು ಎಂದ ಅವರು, "ಬಿಳಿಗಿರಿಯ ಇನ್ನೊಂದು ಪುಸ್ತಕ ಓದು" ಎಂದು 'ನಾಯಿಕೊಡೆ' ಕವನ ಸಂಕಲನ ಕೊಟ್ಟರು. ಅದರ ಒಂದು ಚರಣ ನೆನಪಲ್ಲಿ ಕುಳಿತು ಬಿಳಿಗಿರಿಯವರನ್ನು ಎಂದೂ ಮರೆಯದ ಹಾಗೆ ಮಾಡಿತು:

ನನ್ನಯ ಹೆಸರೇ? ಎಚ್.ಎಸ್.ಬಿಳಿಗಿರಿ
ಕೇಳಿಲ್ಲವೆ? ಈಗಾದರೂ ಕೇಳಿರಿ!
ಎಚ್ ಎಂದರೆ ನಾ ಹುಟ್ಟಿದ ಹೆಮ್ಮೆಗೆ
ಎಸ್ ಎಂಬುದು ಆ ತಂದೆಗೆ
ಬಿಳಿಗಿರಿ ಎಂಬುದು ನನ್ನಯ ಹೆಸರು
ಎಂತಹ ಹೆಸರು ಬಾಯಿಗೆ ಮೊಸರು!!
ಬೀ ಐ ಎಲ್ ಐ ಜೀ ಐ ಆರ್ಐ
ಶಿವನಿಗೆ ಮೂರ್ಐ! ನನಗೋ ನಾಲ್ಕ್ಐ!
ಐಗಳೆ ನನ್ನ ಹೆಸರಿನ ತುಂಬ
ಆದುದರಿಂದಲೆ ನನಗೀ ಜಂಬ....
ಹೆಸರೊಳೆ ಅಡಗಿರೆ ಇಷ್ಟೊಂದರ್ಥ
ವ್ಯಕ್ತಿಯ ಪರಿಚಯ ಆಗದು ವ್ಯರ್ಥ!!

ಎಂಜನಿಯರಿಂಗ್ ಕಾಲೇಜು ಸೇರಿ, ಅದು ಹಿಡಸದೆ ಮಹಾರಾಜಾ ಕಾಲೇಜು ಮೈಸೂರಲ್ಲಿ ಬಿ.ಎ. ಆನರ್ಸ್ ಓದಿ, ಕನ್ನಡ ಎಂ.ಎ. ಪದವಿ ಪಡೆದು, ಭಾಷಾ ವಿಜ್ಞಾನದ ಹೆಚ್ಚಿನ ಅಧ್ಯಯನಕ್ಕೆ ಡೆಕ್ಕನ್ ಕಾಲೇಜು ಪೂನಾಕ್ಕೆ ಹೋಗಿ, ರಾಕ್‌ಫೆಲ್ಲರ್ ಸ್ಕಾಲರ್‌ಷಿಪ್‌ನಲ್ಲಿ ಅಮೆರಿಕಾದ ಬರ್ಕ್ಲಿಯಲ್ಲಿ ಅಧ್ಯಯನ ಮಾಡಿ, ಇಂಡಿಯಾಕ್ಕೆ ಬಂದು ಪಿಎಚ್.ಡಿ. ಪಡೆದು, ಪೂನಾದ ಡೆಕ್ಕನ್ ಕಾಲೇಜಲ್ಲಿ ಭಾಷಾ ಶಾಸ್ತ್ರದ ಪ್ರೊಫೆಸರ್ ಆದವರು ಬಿಳಿಗಿರಿ.

ನನ್ನ ತಂದೆಯವರು ಅವರನ್ನೊಮ್ಮೆ ಮೈಸೂರಲ್ಲಿ ತ.ರಾ.ಸು. ಜತೆ ಕಂಡಿದ್ದಾಗಿ ಹೇಳಿದ್ದರು. ಆ ಪ್ರಾಯದಿಂದ ಇಂದಿನವರೆಗೆ ನನಗೆ ಅವರ ಭಾಷಾ ಶಾಸ್ತ್ರ, ಛಂದಸ್ಸು ಇತ್ಯಾದಿಗಳ ಅಧ್ಯಯನದ ಬಗ್ಗೆ ಅಂತಹ ಆಸಕ್ತಿ ಕೆರಳಲಿಲ್ಲ, ಆದರೆ ಅವರ ಕವನಗಳನ್ನು ಮಾತ್ರ ಮರೆಯಲಿಕ್ಕಾಗುವುದಿಲ್ಲ.

ಬಿಳಿಗಿರಿ ಅವರ ಕವನಗಳಲ್ಲಿ ಒಂದು ಮಾದಕತೆ ಇದೆ. ಅದರ ವಿಡಂಬನೆ, ರಂಗುಗಳು ಮೊದಲ ನೋಟದ ಹಿಗ್ಗು ಮಾತ್ರ, ಅದರ ಆಚೆಗೆ ಅಲ್ಲಿನ ಎಲ್ಲಾ ಕವನಗಳಲ್ಲೂ ನಶ್ವರದ ಬದುಕಲ್ಲಿ ಇರಬಹುದಾದ ಅನಂತ ಈಶ್ವರದ ಬಗೆಗಿನ ಒಂದು ತಳಮಳದ ಹುಡುಕಾಟ ಇದೆ. ಉಲ್ಲಾ ಮಾಡುವ ವಿಡಂಬನೆ ಬದುಕನ್ನು ತಲೆಕೆಳಗಾಗಿಯೂ ಕಂಡು ಪರೀಕ್ಷಿಸುವ ವಿಧಾನ ಮಾತ್ರ. ಕ್ರಿಕೆಟ್, ಟೆನ್ನಿಸ್, ಸಂಗೀತ, ಚರಿತ್ರೆ, ಜೀವನ ಚರಿತ್ರೆಗಳು, ಜೋಕುಗಳು, ಕಾಡು ಹರಟೆ, ಸೆಕ್ಸ್ ವಿಚಾರ-ಹೀಗೆ ಅವರ ಆಸಕ್ತಿಗಳೂ ಅನೇಕ. ಲೈಂಗಿಕ ವಿಚಾರಗಳ ಆಸಕ್ತಿಯೂ ಅವರಿಗೆ ಬದುಕನ್ನು ಶೋಧಿಸುವ ಒಂದು ಗಂಭೀರ ರೂಪವೇ. ಅವರ ಹೆಸರು ಹಾಕದೆ ಪ್ರಕಟಿಸಿದ 'ಸುಭಗಾನೀವೀ' ಎಂಬ ಕವನ ಗುಚ್ಛದ ಒಂದು ಕಂದ ಪದ್ಯ:

ಸುರತಾದಿಯೊಳಂ ದ್ವೈತಂ
ಸುರತಾಂತ್ಯದೊಳಂ ಕಠೋರ ತತ್ವಂ ದ್ವೈತಂ
ಸುರತಾಂತರದ ದ್ವೈತಂ
ಪರಿಕಿಸಿ ನೋಡಲ್ ವಿಶಿಷ್ಟಮೆ ವಲಂ ಸುಭಗೇ

ಮಾನವ ಸಂಬಂಧಗಳನ್ನು ಗುರುತಿಸಲು ಅದನ್ನು ಅರ್ಥ ಮಾಡಿಕೊಳ್ಳಲು ಅವರಿಗೆ ಅನೇಕ ದಾರಿಗಳಿವೆ. 'ನಿಗುರಿ ನಿಂತರೆ ನಾಲಗೆ' ಸಂಕಲನದ 'ಮಾಲಿನಿ' ಕವನ ಹೀಗೆ ಕೊನೆಗೊಳ್ಳುತ್ತದೆ:

ಒಂದು ಗಳಿಗೆಯಲ್ಲಿ ಗೆಳತಿ
ಒಂದು ಗಳಿಗೆಯಲ್ಲಿ ಮಗಳು
ಒಂದು ಗಳಿಗೆಯಲ್ಲಿ ನಲ್ಲೆ
ಹೀಗೆ ಗಳಿಗೆಗಳಿಗೆಗೊನು
ಬೇರೆ ಬೇರೆ ತೋರದೆ
ಎಲ್ಲಗಳಿಗೆ ಎಲ್ಲವಾದ
ಪುಟ್ಟ ಹುಡುಗಿ ಮಾಲಿನಿ

ಅವರು ಇನ್ನು ಕೆಲವು ಕನ್ನಡ ಪ್ರಸಿದ್ಧ ಸಾಲುಗಳನ್ನು ವಿಡಂಬನೆಗೆ ಒಳಪಡಿಸಿದರೂ ಅದು ಬೇರೆ ನೆಲೆಗಳಲ್ಲಿ ಅರ್ಥವಿಸ್ತಾರವನ್ನು ಪಡೆದುಕೊಳ್ಳುವಂತೆ ಮಾಡುತ್ತದೆ. ಅಂತರ್ಗತವಾಗಿರುವ ಅರ್ಥವನ್ನು ಸ್ಫೋಟಿಸಿಬಿಡುತ್ತದೆ. ಈ ಕೆಳಗಿನ ಸಾಲುಗಳಲ್ಲಿ ಬೇಂದ್ರೆ ನೆನಪಿಗೆ ಬಂದರೆ ಅರ್ಥ ವಿಸ್ತಾರ ಹೆಚ್ಚಾಗುತ್ತದೆ.

ನಿನ್ನ ಕಿವಿಯ
ತೆರೆದು ಕವಿಯ
ನುಡಿ ಕೇಳಲೊ ಬೆಪ್ಪೆ:
ರಸವೇ ಸಿಹಿ
ವಿರಸವೇ ಕಹಿ
ಸಮರಸವೇ ಸಪ್ಪೆ.

ಅವರ 'ನಂದನ,' 'ನಾಯಿಕೊಡೆ','ನಿಗುರಿ

ನಿಂತರೆ ನಾಲಗೆ' (ಅಚ್ಚಿನಲ್ಲಿ) ಕವನ ಸಂಕಲನಗಳು ಜನರ ಮನ ಗೆದ್ದಿವೆ. ನನ್ನಂತಹ ಕಾವ್ಯಪ್ರಿಯರಿಗೆ ಅದರ ನೆನಪೇ ಹೆಚ್ಚು. ಅವರ ಭಾಷಾ ವಿಜ್ಞಾನ, ಛಂದಶ್ಶಾಸ್ತ್ರ, ವ್ಯಾಕರಣ ಪಾಂಡಿತ್ಯಗಳನ್ನು ಹೊರ ಸೂಸುವ, ಕೇಶಿರಾಜನ 'ಶಬ್ದ ಮಣಿ ದರ್ಪಣ'ಕ್ಕೆ ಅವರು ಬರೆದ ವ್ಯಾಖ್ಯಾನ ರೂಪದ ಕೃತಿ 'ಆ ಲೋಕ', 'ವರ್ಣನಾತ್ಮಕ ವ್ಯಾಕರಣದ ಮೂಲ ತತ್ವಗಳು' ಮತ್ತು 'ವರಸೆ' ಪಾಂಡಿತ್ಯಪೂರ್ಣ ಬರಹದ ಇನ್ನೆರಡು ಕೃತಿಗಳು.


ಈಗ್ಗೆ ಕೆಲವು ವರುಷಗಳ ಹಿಂದೆ ನಾನು ಒಂದು ದಿನ ಬೆಳಗ್ಗೆ ಬಿಳಿಗಿರಿಯವರನ್ನು ಕಿ.ರಂ.ನಾಗರಾಜರ ಮನೆಯಲ್ಲಿ ಭೇಟಿಯಾದೆ. ಅದೊಂದು ಆಕಸ್ಮಿಕವಾದ ಮೊದಲ ಭೇಟಿ. ಅದು ಇದು ಮಾತಾಡುತ್ತಾ ವಿದ್ವಾನ ಸೇಡಿಯಾಪು ಕೃಷ್ಣಭಟ್ಟರ (ಅಯ್ಯೋ! ಈಗ ಅವರನ್ನೂ ನಾವು ಕಳೆದುಕೊಂಡು ಬಿಟ್ಟೆವಲ್ಲ!) 'ಛಂದಶ್ಶಾಸ್ತ್ರ' ಕುರಿತು ಮಾತು ಬಂತು. ಅನೇಕ ಆಧುನಿಕ ಕಾವ್ಯಗಳನ್ನು ಅವರು ಛಂದಸ್ಸಿನ ಹಿನ್ನೆಲೆಯಲ್ಲಿ ವಿಶ್ಲೇಷಿಸತೊಡಗಿದರು. ಕಿ.ರಂ. ನಾಗರಾಜ ಹಾಗೂ ಬಿಳಿಗಿರಿಯವರಿಗೆ ಕೆಲವು ವಿಚಾರಗಳಲ್ಲಿ ಸಹಮತ. ಇನ್ನು ಕೆಲವು ವಿಚಾರಗಳಲ್ಲಿ ಭಿನ್ನಾಭಿಪ್ರಾಯ. ಜೊತೆಯಲ್ಲಿದ್ದ ನಾವು ಕೆಲವು ಸ್ನೇಹಿತರಿಗೆ ಅದೊಂದು ಮರೆಯಲಾಗದ ವಿದ್ವತ್ ಸಂಘದ ನೆನಪು. ನನ್ನ ಬಾಯಿಗೆ ಬರುತ್ತಿದ್ದ ಬಿಳಿಗಿರಿಯವರ ಕೆಲವು ಕವನಗಳ ಸಾಲುಗಳಿಂದಾಗಿ ಚರ್ಚೆ ಬೇರೆಡೆಗೆ ತಿರುಗಿತು. ಹರಟೆಯ ಮೇಲೆ ಹರಟೆ. "ನನ್ನ ಆರೋಗ್ಯ ಈಗ ಅಷ್ಟು ಚೆನ್ನಾಗಿಲ್ಲ, ಆದರೂ ಎದ್ದು ಹೋಗಲು ಮನಸ್ಸು ಬರುತ್ತಿಲ್ಲ" ಎಂದು ಬಿಳಿಗಿರಿಯವರು ಹುರುಪಿನಿಂದ ಹರಟುತ್ತಾ ಕುಳಿತರು. ಆಗ ಅವರು ಮೈಸೂರಲ್ಲಿ ಇದ್ದರೆಂದು ನೆನಪು.

ಅವರದ್ದು ಸಿಗರೇಟಿನ ಬಗ್ಗೆ ಒಂದು ಸಾಲಿದೆ. ಅಡಿಗರ ಪದ್ಯವೊಂದರ ನೆನಪಾಗಿ ಸಿಗರೇಟು ತಂಬಾಕಿನ ವಿಚಾರ ಬಂತು. ಬಿಳಿಗಿರಿಯವರ ಪದ್ಯ:

> ಕೇಳಿದೆ ಹೊಗೆಯಾಡುವ ಸಿಗರೇಟನು
> 'ನನಗೂ ನಿನಗೂ ಅಂಟದ ನಂಟಿನ
> ಕೊನೆಯನು ಬಲ್ಲವರಾರು?'
> 'ಬಲ್ಲೆನು, ನಾನೇ ಆ ಕೊನೆ' ಎಂದಿತು
> ಹೊಗೆಯನು ಸೋಸುವ ಚೂರು.


ನಾನು ಆ ಸಂದರ್ಭದಲ್ಲಿ ನನ್ನ ಅಜ್ಜ ಹೇಳಿದ್ದ ತಂಬಾಕಿನ ಒಂದು ಕಥೆ ಹೇಳಿದೆ. ಹೊಗೆಸೊಪ್ಪು ಎಂಥವನನ್ನೂ ಕೈಯೊಡ್ಡಿ ಬೇಡುವ ಹಾಗೆ ಮಾಡುತ್ತದೆ ಎಂಬ ಗಾದೆಗೆ ಸಂಬಂಧಪಟ್ಟ ಕಥೆ ಅದು.

ಬಿಳಿಗಿರಿ ಅವರ ಜೊತೆ ಯಾವುದೇ ಮುಜುಗರವಿಲ್ಲದೆ ನೂರಾರು ವಿಚಾರಗಳು ಹರಟೆಯಲ್ಲಿ ಸೇರುತ್ತಿದ್ದವು. ಛಂದಸ್ಸು, ಅವುಗಳಿಗೆ ಸಂಬಂಧಿಸಿದಂತೆ ಅವರು ಮಾಡಿದ 'ಛಂದಃಕ್ವಿಜ್' ವ್ಯಾಕರಣ ಅವರಿಗೆ ಸದಾ ಆಸಕ್ತಿಯ ವಿಷಯ. ಉತ್ತಮ ಕಾವ್ಯದ ಬಗ್ಗೆ ಒಲವು. ಕಳೆದ ವರುಷ ಎಚ್.ಎಂ.ಟಿ. ಕನ್ನಡ ಸಂಪದ ಮೂರು ದಿನಗಳ ಅಧ್ಯಯನ ಕಮ್ಮಟವನ್ನು ನೀನಾಸಂ ಸಹಯೋಗ



ಬಿಳಿಗಿರಿ

ದೊಂದಿಗೆ ಏರ್ಪಡಿಸಿತ್ತು. ಕೆ.ವಿ. ಸುಬ್ಬಣ್ಣ, ಕಿ.ರಂ. ನಾಗರಾಜ, ವೈ.ಎನ್.ಕೆ., ಸಿ.ಆರ್.ಸಿಂಹ, ಬಾ.ಕಿ.ನ., ಶೂದ್ರ, ಗಿರಡ್ಡಿ, ಟಿ.ಪಿ.ಅಶೋಕ, ಕೆ.ಎಚ್.ಶ್ರೀನಿವಾಸ್, ಅಕ್ಷರ ಹಾಗೂ ಇನ್ನೂ ಕೆಲವರನ್ನು ಆಹ್ವಾನಿಸಿ, ಆ ಕಮ್ಮಟದ ಸಂದರ್ಭಲ್ಲಿ ಬಿಳಿಗಿರಿ ಅವರ ಜೊತೆ ಒಂದು ಸಂಜೆ ಕಳೆದು ರಾತ್ರಿಯ ಊಟ ಜೊತೆಯಲ್ಲೆ ಮಾಡಿದೆವು. ಕೆ.ವಿ. ಸುಬ್ಬಣ್ಣ, ಬಿಳಿಗಿರಿ ಮೈಸೂರಿನ ಅನೇಕ ಹಳೆಯ ಸಂದರ್ಭಗಳನ್ನು ನೆನೆಸಿಕೊಂಡು ನಗುನಗುತ್ತಾ ಲವಲವಿಕೆಯಿಂದ ಇದ್ದರು. ಆ ದಿನ, ಬಹುಶಃ ಅವರು ಸಿಂಹ ಕೊಳ್ಳೇಗಾಲ ಅವರ ಮನೆಯಿಂದ ಬಂದಿದ್ದರೆಂದು ನೆನಪು. ಸಾಹಿತಿಗಳ ಜೊತೆ ಬಿಳಿಗಿರಿ ನವುರಾಗಿ ಬಿಚ್ಚಿಕೊಂಡು ನಾನಾ ವಿಚಾರಗಳನ್ನು ಚರ್ಚಿಸುತ್ತಿದ್ದ



ಅವರ ಕವನ ಸಂಗ್ರಹದ ಮುಖಪುಟ ಹಾಗೂ ಒಳಪುಟ

ರೆಂಬ ನೆನಪು ಇನ್ನೂ ಹಸಿರಾಗಿದೆ. ಆ ಬಳಿಕ ಒಮ್ಮೆ ಅಕಾಡೆಮಿಯವರು ಡಾ. ಯು.ಆರ್. ಅನಂತ ಮೂರ್ತಿಯವರ ಬಗ್ಗೆ ಏರ್ಪಡಿಸಿದ ವಿಚಾರ ಸಂಕಿರಣ ಒಂದರಲ್ಲಿ, ಅಪರಾಹ್ನ ನಾನೂ ಒಂದು ಪ್ರಬಂಧ ಮಂಡಿಸುವ ಕಾರ್ಯಕ್ರಮವಿತ್ತು. ಬೆಳಿಗ್ಗೆಯೇ ಬಂದಿದ್ದ ಬಿಳಿಗಿರಿ ಸುಸ್ತಾಗಿದ್ದರೂ "ನಿಮ್ಮ ಮಾತು ಕೇಳಲೇಬೇಕು" ಎಂದು ಕೂತುಬಿಟ್ಟರು. "ನಾನು ಅಂಥ ಹೇಳುವ ವಿಚಾರ ಏನೂ ಇಲ್ಲ ಸರ್. ನೀವು ಮನೆಗೆ ಹೋಗಿ ವಿಶ್ರಾಂತಿ ತೆಗೆದುಕೊಳ್ಳಿ" ಎಂದರೂ ಕೇಳಲಿಲ್ಲ. ಸಂಕಿರಣ ಮುಗಿದ ಬಳಿಕ ಮೆತ್ತಗೆ ಹತ್ತಿರ ಬಂದು, "ಉತ್ತಮ ಒಳನೋಟಗಳುಳ್ಳ ಲೇಖನ. ನೀವು ಚರ್ಚೆಯಲ್ಲಿ ಹೇಳಿದ್ದನ್ನೂ ಸಮಂಜಸವಾಗಿ ಸೇರಿಸಿಕೊಂಡು ಲೇಖನ ಪ್ರಕಟಿಸಿ ಬಿಡಿ" ಎಂದು ಹೋದರು. ಅವರ ಮನೋವೈಶಾಲ್ಯ ಹಾಗೂ ವಿದ್ವತ್ತಿನ ವಿನಯವನ್ನು ನೆನೆದಾಗಲೆಲ್ಲ, ಅವರು ಬೆಂಗಳೂರಲ್ಲಿದ್ದಾಗ ಅವರ ಜೊತೆ ಇನ್ನಷ್ಟು ಹೆಚ್ಚು ಸಮಯ ಕಳೆಯಬೇಕಾಗಿತ್ತು ಅನಿಸುತ್ತದೆ.

ಇತ್ತೀಚೆಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ ನೀಡಿದ ದಿನ ಅವರಿಗೆ ಫೋನು

ಮಾಡಿ ಅಭಿನಂದಿಸಿದೆ. "ಕಳೆದ ವರುಷ ನಾನು ಪ್ರಕಟಿಸಿದ್ದ ಪುಸ್ತಕಕ್ಕೇನಾದರೂ ಕೊಟ್ಟಿದ್ದರೆ, ನಾಲ್ಕು ಜನಕ್ಕಾದರೂ ಅದರ ಬಗ್ಗೆ ತಿಳಿಯುತ್ತಿತ್ತು"ಎಂದರು. ಪ್ರಶಸ್ತಿ, ಜನರ ಮನ್ನಣೆ ಇತ್ಯಾದಿಗಳ ಬಗ್ಗೆ ಅವರು ಎಂದೂ ತಲೆ ಕೆಡಿಸಿಕೊಂಡವರಲ್ಲ. ಅವುಗಳ ಬಗ್ಗೆ ತಿರಸ್ಕಾರವೂ ಇಲ್ಲದ ಆಕರ್ಷಣೆಯೂ ಇರದಿದ್ದ ಒಂದು ನಿರ್ಲಿಪ್ತ ಸ್ಥಿತಿ. ಒಂದು ವಿಡಂಬನೆಯಲ್ಲಿ ಅವರೇ ಹೇಳಿದಂತೆ:

ಮೂರೇ ತಿಂಗಳ ಕಳೆದರೆ ಸಾಕೋ
ತುಂಬಲು ನನಗರವತ್ತಾರು
ಪ್ರಶಸ್ತಿಗಿನ್ನೂ ಎರಡು ದಶಕಗಳು
ಕಾಯುವುದೆಂದರೆ ಬೇಜಾರು.

ವಿಡಂಬನೆ, ಬಿಳಿಗಿರಿಯವರಿಗೆ ಅರಿತು- ಸಿದ್ಧಿಸಿಕೊಳ್ಳುವ ಮಾರ್ಗವೂ ಹೌದು. ನವ್ಯೋತ್ತರ ಕಾವ್ಯ ಸಂದರ್ಭದಲ್ಲಿ ಕಾವ್ಯ ಸೃಷ್ಟಿಯ ಪ್ರಕ್ರಿಯೆಯನ್ನೆ ವಿಡಂಬನೆಗೆ ಒಳಪಡಿಸುವ- 'ಋಜುವಾತು' ಸಂಚಿಕೆಯಲ್ಲಿ ಪ್ರಕಟವಾದ, ಅವರ 'ಐದನೆಯ ಪದ್ಯ'ನನಗೆ ಯಾವತ್ತೂ ನೆನಪಿಗೆ ಬರುವಂಥದು:

ನಿನ್ನ ಅಂಕಿತವಿರುವ ಪದ್ಯವೈದಾದರೂ
ಬರೆದು ಮುಗಿಸದೆ ಅಚ್ಚು ಮನೆಯ ಕಡೆ ಸುಳಿಯೆ
ಎಂದು ಸಂಕಲ್ಪಿಸಿದೆ ನೀ ನನ್ನ ಕೈಯ ಬಿಡೆ
ಎಂಬ ನೆಚ್ಚಿಕೆಯಲ್ಲಿ ಜಗದೀಶ! ಹರಿಯೆ!
ನಾಲ್ಕು ಪದ್ಯಗಳೇನೋ ಬಂದವು ಸಲೀಸಾಗಿ
ಬರಲಿಲ್ಲ ಐದನೆಯದೇತಕೋ ತಿಳಿಯೆ.
ಏನೇನ ಮಾಡಿದರೂಭೃಂಗ ಪೃಷ್ಠವನೇರಿ
ಕಾಯುತ್ತ ಕುಳಿತರೂಬರಲಿಲ್ಲ ಪದ್ಯ.
ನಂಬಿ ಕೆಟ್ಟೆನೋ. ಏನೋ ಎಂದು ಕೊರಗಿದೆನಿನ್ನು
ಬಳಸಬೇಕಾಯ್ತಯ್ಯೋ ಬರಿ ಶುಷ್ಕ ಗದ್ಯ
ಅರೆರೆ! ದೇವರ ದೇವ! ಇದುವರೆಗು ಬರೆದದ್ದು
ಪದ್ಯವೆಂಬುದು ಮರೆತ ನಾನೆಂಥ ಪೆಂಗ!
ಎರಡು ಸಾಲೇ ಬಾಕಿ! ಅದ ಬರೆದೆನಿದೊ ಸಿದ್ಧ
ಐದನೆಯ ಪದ್ಯವಹ! ಬಿಳಿಗಿರಿಯ ರಂಗ!

ಇಲ್ಲಿ ಬೇಂದ್ರೆಯವರ 'ಭೃಂಗದ ಬೆನ್ನೇರಿ', ಅಡಿಗರ 'ಕುಳಿತಿದ್ದೇನೆ ಕಾದು ಕಿವಿ ಕಂಪಿಸುತ್ತ' ನೆನಪಿಗೆ ಬಂದು, ವಿಡಂಬನೆ, ಕಾವ್ಯ ಸೃಷ್ಟಿಯ ಪ್ರಕ್ರಿಯೆಯನ್ನು ಕನ್ನಡ ಕಾವ್ಯದ ಕಾಲಧರ್ಮದಲ್ಲಿ ಹೊಳೆಯಿಸುತ್ತದೆ. ಮೇಲ್ಮೈಯ ಲೇವಡಿಯನ್ನು ಮೀರಿ ಅಂತರಂಗ ಸ್ಫುರಣೆಯಲ್ಲಿ ಹೊಳೆಯಿಸುವ ಶಕ್ತಿಯೆ ಅವರ ಕಾವ್ಯಕ್ಕೆ ಹೆಚ್ಚಿನ ಅರ್ಥವಂತಿಕೆ ನೀಡುತ್ತದೆ. ತಮ್ಮ ಕಾವ್ಯದಲ್ಲಿ ಭಾಷೆಯ ಸೊಗಸು ಹಾಗೂ ಲಯದ ನವುರನ್ನು ಅವರು ಸದಾ ಕಾಪಾಡಿಕೊಳ್ಳುತ್ತಿದ್ದರು.

ಅಪಾರ ವಿದ್ವತ್ತಿನ ಬಿಳಿಗಿರಿ ಮನುಷ್ಯಪ್ರೀತಿಯೆ ಬದುಕಿನ ಮೂಲ ಸೆಲೆ ಎಂದು ನಂಬಿರುವಂತೆ ಅವರೊಡನೆ ಮಾತಾಡಿದಷ್ಟು ಸಲವೂ ನನಗೆ ಅನಿಸುತ್ತಿತ್ತು. ಸಾಹಿತ್ಯ ಅವರಿಗೆ ಬದುಕಿನ ಭಾಗ. ಉತ್ತಮ ಆಹಾರ, ಸಂಗೀತ ಇವುಗಳ ಬಗ್ಗೆ ವಿಶೇಷ ಅಭಿರುಚಿ ಇದ್ದ ಬಿಳಿಗಿರಿಯವರ ಒಡನಾಟ, ಅವರ ಕಾವ್ಯದ ಹಾಗೆ ಹಿತವಾದದ್ದು. ತುಂಬಾ ಜನಪ್ರಿಯವಾದ ಅವರ ಲಿಮರಿಕ್ಕುಗಳನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಕರಿಯ ಹುಡುಗಿಯು ನಗಲು ಕಾಣುವ
ಬಿಳಿಯ ಹಲ್ಲಿನ ಮಿಂಚೊಲು
ಬೆಂಗಳೂರಿನ ಟಾರು ರೋಡೊಳು
ಬೆಣಚುಕಲ್ಲಿನ ಗೊಂಚಲು.

*

ಫೋ ಫೋ ಪೆಪೆ ಹಿಟ್ಲರುಪೆಪೆ
ಹಾಕಿದರೂ ಮಟ್ಟ
ಧೃತಿಗೆಡದಲೆ ಹೊಗೆಯುಗುಳುವ
ಚರ್ಚಿಲ್ಲಿನ ಚುಟ್ಟ.

ತಮ್ಮ 'ಕಾಮ್ರೇಡ್ ವಿಮರ್ಶಕ' ಕವನದಲ್ಲಿ 'ಪುಸ್ತಕ ಓದದೆ ಹೊಗಳುವುದೊಂದು ಮುನ್ನುಡಿ ಓದಿಯೇ ತೆಗಳ್ವದದೊಂದು' ಎಂದು ಬರೆದ ಬಿಳಿಗಿರಿ 'ಮಾನವ'ರೆದೆಯನು ಕಡೆಯುವ ಬಗೆ ಬಗೆ ರಾಗವೆ ಮೆಚ್ಚಿನ ವಸ್ತುವು ನನಗೆ ಎಂದವರು. ಅವರ ಈ ಕೆಳಗಿನ ಸಾಲುಗಳನ್ನು ನೆನಪಿಸಿಕೊಂಡು ಶುದ್ಧ ಮನಸ್ಸಿನ ಮಾನವತಾವಾದಿ ಡಾ. ಎಚ್.ಎಸ್. ಬಿಳಿಗಿರಿ ಅವರಿಗೆ ನನ್ನ ಗೌರವ ಪೂರ್ವಕ ನಮನಗಳು.

"ಬಿಳಿಗಿರಿಯೆಂಬವನಿದ್ದನು ಹಿಂದೆ
ಪರವಾಯಿಲ್ಲವ್ವ" ಎನ್ನುತ ಮುಂದೆ
ಸಾಗಿದರಷ್ಟೇ ಸಾಕೆನ್ನುವೆನು
ತೃಪ್ತಿಯ ನಿಟ್ಟುಸಿರೆಳೆಯುವೆನು!

ಭೂಕಂಪ

ಕೆಲವು ವೈಚಿತ್ರ್ಯಗಳು

• ಈಶ್ವರ್ ಪ್ರಸಾದ್

ಆಗಲೂ ಆಗಸ್ಟ್ ತಿಂಗಳೇ. ಮುಂಜಾನೆ ಎಂಟೂಕಾಲಾಗಿರಬೇಕು. ಪ್ರಶಾಂತವಾದ ವಾತಾವರಣ. ಬಹುತೇಕ ಮನೆಗಳಲ್ಲಿ ಪಾತ್ರೆಗಳಲ್ಲಿ, ಸೌಟುಗಳು ಆಡಿ ಸದ್ದು ಮಾಡುತ್ತಿರುವ ಹೊತ್ತು. ಕಚೇರಿಗಳಿಗೆ ಹೊರಡಲು ಎಲ್ಲರೂ ತರಾತುರಿಯಲ್ಲಿರುವಾಗ ಇಂಥದನ್ನೆಲ್ಲಾ ಯಾರು ತಾನೆ ಗಮನಿಸುತ್ತಾರೆ ಹೇಳಿ?

ತಂಗಿಯೊಂದಿಗೆ ಮಾತಾಡದೇ ಬಹಳ ದಿನಗಳಾದ್ದರಿಂದ ಫೋನಿನಲ್ಲಿ ಸಂಪರ್ಕಿಸಲು ಯತ್ನಿಸಿದೆ. ಎಂಗೇಜು. ಒಂದೈದು ನಿಮಿಷ ತಡೆದು ಮತ್ತೆ ಯತ್ನಿಸಿದರಾಯಿತೆಂದು ಪತ್ರಿಕೆ ಎತ್ತಿಕೊಳ್ಳುವ ಹೊತ್ತಿಗೆ ಶೋಕೇಸಿನ ಗಾಜುಗಳು ತರಗುಟ್ಟಿದವು. ಟೀಪಾಯಿ ಮೇಲಿನ ಟೀ ಕಪ್ಪಿನಲ್ಲಿ ತರಂಗಗಳೆದ್ದವು. ಏನೋ ಒಂದು ವಿಚಿತ್ರ ಸದ್ದು. ಎಲ್ಲಿಂದಲೋ ಶುರುವಾಗಿ, ಪಾದಗಳ ಅಡಿಯಿಂದ ನುಸುಳಿ ಹಾಗೆ ಮುಂದುವರಿದಂತೆ ಅನುಭವ.

ಖಂಡಿತಕ್ಕೂ ಅದು ಭೂಕಂಪವೆ. ಅಂಥ ಅನುಭವ ನನಗೇ. ಹಿಂದೆ ಒಂದೆರಡು ಬಾರಿ ಆಗಿದ್ದರಿಂದ ನಿಸ್ಸಂಶಯವಾಗಿ ಅದು ಭೂಕಂಪವೆ.

ಥಟ್ಟನೆ ಫೋನೆತ್ತಿದೆ. ತಂಗಿ ಎತ್ತಿಕೊಂಡಳು.

"ಈಗಷ್ಟೇ ಭೂಕಂಪವಾಯ್ತು. ಗೊತ್ತಾಯ್ತ?" ಕೇಳಿದೆ.

"ಆಂ?" ಆದದ್ದು ಭೂಕಂಪವಾ? ಯಾವುದೋ ಬುಲ್‌ಡೋಜರೋ ಗಿಲ್‌ಡೋಜರೂ ಸಾಗಿ ಹೋಗಿರಬೇಕೆಂದುಕೊಂಡೆ.

ಭೂಕಂಪವೆಂದಾಕ್ಷಣವೆ ಮೈನಡುಗುವುದುಂಟಲ್ಲವೆ? ಅಂಥ ಪ್ರಳಯದಲ್ಲೂ ಕೆಲವು ಪ್ರಸಂಗಗಳು ವಿಚಿತ್ರ ಎನ್ನಿಸುವ ಮಟ್ಟಿಗೆ ಘಟಿಸುತ್ತವೆ

"ಇಲ್ಲಿಲ್ಲ. ಅದು ಭೂಕಂಪವೆ. ಖಂಡಿ ತಕ್ಕ್ಕ....."

"ಅಯ್ಯೋ, ಎಂಥಾ ಚಾನ್ಸು ಕಳಕೊಂಡೆನಲ್ಲೋ ಅಣ್ಣಾ!"

"ಯಾಕಮ್ಮಾ"

"ಭೂಕಂಪ ಅಂದರೆ ಏನು ಅಂತ ಗೊತ್ತಿಲ್ಲದ್ದೇ ತೊಂದ್ರೆ ಆಯ್ತು. ಇಲ್ದಿದ್ರೆ ಆ ಅನುಭವ ಪಡೀತಿದ್ದೆನಲ್ಲೋ..."

ತಂಗಿಯ ಮಾತು ನನಗೆ ನಗೆ ತರಿಸಲಿಲ್ಲ. ವಾಹವ್ವಾ ಎಂದುಬಿಟ್ಟೆ. ಆದರೆ ಭೂಕಂಪ ಎಂದಾಕ್ಷಣ ಹೀಗೆ ಪ್ರತಿಕ್ರಿಯಿಸುವವರೆಷ್ಟು ಜನ?

ಆದರೆ ಭೂಕಂಪ ಭಯಾವಹವಾದರೂ ಅಂಥ ಸಂದರ್ಭದಲ್ಲೂ ಕೆಲವು ವೈಚಿತ್ರ್ಯಗಳು ಸಂಭವಿಸುತ್ತವೆ. ಅಂಥ ಕೆಲ ವೈಚಿತ್ರ್ಯಗಳಿಲ್ಲಿವೆ.

'ನೆಬುಕಾವಾ' ಎಂಬೊಂದು ರೈಲು ನಿಲ್ದಾಣ. ಸಮುದ್ರ ತೀರದಲ್ಲಿರುವಂಥದು. ಎಂದಿನಂತೆ ಅಂದು ಕೂಡ ಪ್ರವಾಸಿಗರು. 'ಮಾನಾಜರ್' ಎಂಬಲ್ಲಿಂದ ಬರುವ ಟ್ರೇನಿಗಾಗಿ ಆತುರದಿಂದ ಕಾದುಕೊಂಡಿದ್ದರು. ದೂರದಿಂದ ರೈಲಿನ ಸಿಳ್ಳು ಕೇಳಿಸಿ ಅವರೆಲ್ಲಾ ಅದು ಬಂದ ಕೂಡಲೇ ಏರುವ ತಯಾರಿ ಮಾಡಿಕೊಂಡರು. ಗಾಡಿ ಬಂತು. ನಿಂತಿತು. ಜನ ಏರಬೇಕು. ಅಷ್ಟರಲ್ಲೇ ಪರ್ವತಾಕಾರದ ತೆರೆಗಳು ಅಪ್ಪಳಿಸಿ ಅದರಲ್ಲಿ ಎಲ್ಲರೂ ಮಗುಚಿಹೋದರು. ಅಲ್ಲಿಯವರೆಗೆ ಶಾಂತವಾಗಿ ಮಲಗಿದ್ದ ಸಮುದ್ರ ಒಮ್ಮೆಲೆ ಎಚ್ಚೆತ್ತು ಮೈಮುರಿದು ಕೈ ಕಾಲುಗಳನ್ನು ಜಾಡಿಸಿತ್ತು. ಆ ರೌದ್ರ ತೆರೆಗಳೊಂದಿಗೆ ಇನ್ನೂರಕ್ಕೂ ಹೆಚ್ಚು ಜನರ ಸಹಿತದ ಆ ಗಾಡಿಯೂ, ಆ ನಿಲ್ದಾಣವೂ ಜಲಾಘಾತದಿಂದುಂಟಾದ ರಾಡಿಯಲ್ಲಿ ಒಂದಾಗಿಹೋದವು.

ಸಾಗರ ತಳದಲ್ಲಿ ಜರುಗಿದ ಭೂಕಂಪ 'ಸಾಗಾಮಿ ಬೇ'ಯ ತಳದಿಂದ ರಾಡಿಯ ಪ್ರವಾಹಗಳನ್ನು ನೂಕಿತ್ತು.

* * *

ದಟ್ಟವಾದ ಜನವಸತಿಯುಳ್ಳ ಟೋಕಿಯೋದಲ್ಲೇನು ಭೂಕಂಪಗಳಿಗೆ ಬರವೆ? ಹೀಗೊಮ್ಮೆ ಭೂಕಂಪ ಶುರುವಾದಾಗ ಊರ ಜನರೆಲ್ಲಾ ಮನೆ ಮಠಗಳಿಂದಹೊರಗೋಡಿ ಬಂದು ಬಯಲೊಂದರಲ್ಲಿ ಸೇರಿದರು. ಸುಮಾರು ೪೦೦೦೦ ಜನ! ಬೆರಗುಗಣ್ಣುಗಳಿಂದ ತಮ್ಮ ಮನೆ-ಮಠಗಳು ಕತ್ತರಿಸಿ ಬೀಳುವುದನ್ನು ಅವರುನೋಡುತ್ತಲೇ ನಿಂತರು. ಒಂದೆರಡು ಕ್ಷಣದಲ್ಲಿಯೇ ಕಂಪನ ನಿಂತಿತು. ಬಿಗಿ ಹಿಡಿದಉಸಿರು ಬಿಡಬೇಕೆನ್ನುವಷ್ಟರಲ್ಲಿಯೇ ಹಿಂದಿನಿಂದ ಗಾಳಿಯೊಂದಿಗೆ ಗಾಳಿಯಂತೆ ಬಂದಬೆಂಕಿ ಅವರನ್ನೆಲ್ಲಾ ಸವರಿ ಸುಟ್ಟುಹಾಕಿತು.

* * *

ವೆನೆಜುಲಾದ ಕಾರಾಕಸ್ ಪಟ್ಟಣವನ್ನು ಅಲ್ಲಿಯವರು ಬಹು ಶ್ರಮವಹಿಸಿ ಕಟ್ಟಿದ್ದರು. ಅಲ್ಲಿಯ ವಿಶಾಲವಾದ ಚರ್ಚು ಅದಕ್ಕೆ ಶೋಭೆಯನ್ನು ತಂದಿತ್ತು. ೧೮೧೨ರ ಮಾರ್ಚ್ ೨೬ ರಂದು ಎಂದಿನಂತೆ ಚರ್ಚಿನಲ್ಲಿ ಸಾವಿರಾರು ಜನ ಪ್ರಾರ್ಥನೆ ನಡೆಸಿದ್ದರು. ವಾತಾವರಣ ಬಹು ಶಾಂತವಾಗಿತ್ತು. ಆದರೆ ಇದ್ದಕ್ಕಿದ್ದಂತೆ ಚರ್ಚಿನ ಗಂಟೆಗಳು ಬಾರಿಸತೊಡಗಿದವು. ಜನರೆಲ್ಲಾ ಸೋಜಿಗದಿಂದ ಗಂಟೆಗಳತ್ತ ನೋಡಿದರು. ಅದು ದೇವರು ಕಳುಹಿಸಿದ ಶುಭ ಸಂದೇಶವೆಂದು ಬಗೆದಿದ್ದರು ಪಾಪ! ಮುಖ ವರಳಿಸುವಷ್ಟರಲ್ಲಿಯೇ ಸಮುದ್ರದ ತೆರೆಗೆ ಸಿಕ್ಕ ಹಡಗಿನಂತೆ ಚರ್ಚು ಓಲಾಡಿತು. ಗೋಡೆ ಸಿಡಿಯತೊಡಗಿತು. ಜನರೆಲ್ಲಾ ಜೀವದಾಸೆಗೆಂದು ಬಾಗಿಲಿನತ್ತ ಓಡಿದರು. ಆದರೆ ನಿಷ್ಫಲ. ಅಷ್ಟರಲ್ಲಿಯೇ ಇಡೀ ಇಗರ್ಜಿಯೇ ಭೂಗರ್ಭವನ್ನು ಸೇರಿತ್ತು. ಇಷ್ಟೆಲ್ಲಾ ಆದದ್ದು ಒಂದೇ ನಿಮಿಷದಲ್ಲಿ!

* * *

೧೯೪೮ರ ಜುಲೈ ತಿಂಗಳು. ಜಪಾನಿನ ಫಕುಯಿ ಪಟ್ಟಣದಲ್ಲಿ ಭತ್ತದ ಗದ್ದೆಯೊಂದರಲ್ಲಿ ಹೆಣ್ಣು ಮಗಳೊಬ್ಬಳು ಭಯಾನಕವಾಗಿ ಚೀರುತ್ತಿದ್ದುದನ್ನು ಕೇಳಿ ನೆರೆಯವರು ಅತ್ತ ಧಾವಿಸಿದರು. ಅಲ್ಲಿ ಅವರು ಕಂಡದ್ದು ಕುತ್ತಿಗೆವರೆಗೂ ನೆಲದಲ್ಲಿ ಹೂಳಿ ಹೋಗಿ ಮುಖ ಮಾತ್ರವನ್ನು ತೋರಿಸುತ್ತಲಿದ್ದ ಆಕೆಯನ್ನು. ಬಂದವರು ನೋಡ ನೋಡುತ್ತಿದ್ದಂತೆಯೇ ಆ ಮುಖವೂ ಭೂಗತವಾಗಿ ಹೋಯಿತು!

* * *

ಇಂಥದೇ ಸಂಗತಿಯೊಂದು ಕ್ಯಾಲಿಫೋರ್ನಿಯಾ ಮತ್ತು ಸ್ಯಾನ್ ಫ್ರಾನ್ಸಿಸ್ಕೋದ ಭೂಕಂಪ

ದಲ್ಲಿ ಜರುಗಿತು. 'ಭಂವ್' ಎಂಬ ಶಬ್ದದೊಂದಿಗೆ. ಭೂಕಂಪ ಪ್ರಾರಂಭವಾಗಿ ಗುಡ್ಡದೋರೆಯ ಹೊಲ ದಲ್ಲಿ ಬಿರುಕೊಂದು ಕಾಣಿಸಿಕೊಂಡಿತು. ಮೇಯುತ್ತಾ ನಿಂತಿದ್ದ ಆಕಳೊಂದು ಕಂಪನದಿಂದ ತತ್ತರಿಸಿ ಆ ಬಿರುಕಿನಲ್ಲಿ ತಳಕೆಳಗಾಗಿ ಬಿದ್ದುಬಿಟ್ಟಿತು. ಅಷ್ಟೇ. ಕ್ಷಣಾರ್ಧದಲ್ಲಿಯೇ ಭೂಮಿ ಮತ್ತೆ ಆಕುಂಚನ ಹೊಂದಿ ಇಡೀ ಆಕಳಿನ ಶರೀರ ಹೂಳಲ್ಪಟ್ಟು ಬಾಲ ಮಾತ್ರ ಮೇಲೆ ಕಾಣತೊಡಗಿತು!

* * *

ಅದೇ ಸ್ಥಾನದಲ್ಲಿ ಮತ್ತೊಮ್ಮೆ ಭೂಕಂಪವಾಗಿ ಭೂಮಿ ಬಿರಿದಾಗ ಎಷ್ಟೋ ಜನರು ಅದರಲ್ಲಿ ಹೊರಳಿಬಿದ್ದರು. ಭೂಮಿಯ ಬಿರುಕು ಮುಚ್ಚಿಕೊಂಡಿತು. ಅದು ಮುಚ್ಚಿಕೊಂಡಿತೋ ಇಲ್ಲವೋ ತಕ್ಷಣ ನೂರಡಿಯಷ್ಟು ಎತ್ತರಕ್ಕೆ ಬಿಸಿ ನೀರಿನ ದೊಡ್ಡ ಬುಗ್ಗೆಯೊಂದು ಪುಟಿಯಿತು. ಹೂಳಿ ಹೋದ ಜನ ಆ ಪ್ರವಾಹದಿಂದ ಮೇಲೆಸೆಯಲ್ಪಟ್ಟರು. ಸುಟ್ಟ ಬದನೆಕಾಯಿಗಳಾದಂತಿದ್ದ ಅವರೆಲ್ಲಾ ಕೆಳಗೆ ಬಿದ್ದು ನೆಲಕ್ಕೆ ಅಪ್ಪಳಿಸಲ್ಪಟ್ಟರಾದರೂ ಅಂಥದರಲ್ಲೂ ಕೆಲವರು ಬದುಕುಳಿದರು.!

* * *

ಆ ಬಂದರು ಕಟ್ಟೆಯಲ್ಲಿ ಹಡಗೊಂದು ಅದೇ ಲಂಗರು ಹಾಕಿತ್ತು. ಕೂಡಲೇ ವಿಚಿತ್ರವಾದೊಂದು ಧ್ವನಿ ಸಾಗರತಳದಿಂದ ಕೇಳಿಸಿತು. ತಳದಲ್ಲಿ ಜರುಗಿದ ಭೂಕಂಪದಿಂದ ಸಮುದ್ರ ವರ್ಣಿಸಲಾರದಷ್ಟು ಉಕ್ಕೇರಿತು. ಹಡಗು ಕೂಡ ತೆರೆಗಳೊಂದಿಗೆ ನರ್ತಿಸುತ್ತಾ ಮೇಲೇರಿತು. ಮುಂದೆ ಸಮುದ್ರ ಇಳಿದು ತನ್ನ ಮೊದಲಿನ ಪಾತಳಿಗೆ ಬಂದಾಗ ಹಡಗು ಪಟ್ಟಣದ ಮಧ್ಯದಲ್ಲಿ ಬಂದು ನಿಂತಿತ್ತು!

ಇದೇ ರೀತಿ ಮತ್ತೊಂದೆಡೆ ಇನ್ನೊಂದು ಹಡಗು ಸಮುದ್ರದ ತಳದಲ್ಲಿ ಜರುಗಿದ ಭೂಕಂಪಕ್ಕೆ ಗುರಿಯಾಯಿತು. ಸಾಗರ ತೆರೆಗಳೊಂದಿಗೆ ದೊಡ್ಡ ಗುಡ್ಡವನ್ನೇ ಮುಳುಗಿಸಿತು. ಅದರಂತೆ ಪಾತಳಿಗನುಸಾರವಾಗಿ ಹಡಗು ಮೇಲೆ ಹೋಗಿತ್ತು. ಸಮುದ್ರ ತನ್ನ ಮೊದಲಿನ ಸ್ಥಿತಿಗೆ ಬಂದಾಗ ಹಡಗು ಮಾತ್ರ ಗುಡ್ಡದ ತುದಿಯ ಮೇಲೇ ಕುಳಿತಿತ್ತು.

* * *

೧೯೩೦ರ ನವೆಂಬರ್ ೨೬ ರಂದು ಜಪಾನಿನ 'ಇಡೂ'ದಲ್ಲಿ ನಡೆದ ಭೂಕಂಪವನ್ನು ಪ್ರತ್ಯಕ್ಷವಾಗಿ ಅನುಭವಿಸಿದ ಪ್ರೊ. ಡೇವಿಸನ್ನರು ಹೀಗೆ ದಾಖಲಿಸಿದ್ದಾರೆ.

"ಕೂಡಲೇ ಸೂರ್ಯೋದಯದಲ್ಲಿಯಂತೆ ಪ್ರಖರ ಕಿರಣಗಳು ಬಣ್ಣ ಬಣ್ಣಗಳಲ್ಲಿ ಬರತೊಡಗಿದವು. ಕೆಲವು ಸರ್ಚ್‌ಲೈಟಿನಂತೆ ಗೋಚರಿಸಿದವು. ಇನ್ನು ಕೆಲವು ಬೆಂಕಿಯ ಚೆಂಡುಗಳಂತೆ ಹೊರಟ ಪ್ರಕಾಶ ಆಕಾಶದಲ್ಲಿ ಒಂದರ ಹಿಂದೊಂದರಂತೆ ಮಾಯವಾಗುತ್ತಿದ್ದವು. ಅವು ಯಾವತ್ತೂ ಸರಳರೇಷ್ಮೆಯಲ್ಲಿಯೇ ಇರುತ್ತಿದ್ದವು. ಕೆಲ ಬೀಳಿ ವರ್ಣದ ಪ್ರಕಾಶ ಕಿರಣಗಳು ಬೆಳದಿಂಗಳಿಗಿಂತಲೂ ಪ್ರಕಾಶಮಾನವಾಗಿದ್ದವು."

* * *

ಆ ರಾತ್ರಿ ಟೋಕಿಯೋದ ಜನ ಭೂಗರ್ಭದಿಂದ ಹೊರಟ 'ಗ್ರ್‌, ಗ್ರ್‌' ಧ್ವನಿಯನ್ನು ಕೇಳಿ ಮನೆ ಬಿಟ್ಟು ಹೊರಗೆ ಧಾವಿಸಿದರು. ಯಾಕೆಂದರೆ ಮನೆಗಳೆಲ್ಲಾ ಓಲಾಡತೊಡಗಿ, ಗೋಡೆ ಬಿರುಕು ಬಿಡತೊಡಗಿದವು. ಆ ಧ್ವನಿ ನಿಮಿಷಕ್ಕೆ ೧೨ ಸಲದಂತೆ (ಅಂದರೆ ಐದು ಸೆಕೆಂಡಿಗೊಮ್ಮೆ) ಬರುತ್ತಿತ್ತು. ಜನರೆಲ್ಲಾ ದೂರದ ರಸ್ತೆಗಳಲ್ಲಿ ಕೂಡಿದಾಗ ಸ್ವರಗಳ ವೇಗ ಹೆಚ್ಚಾಗತೊಡಗಿತು. ಹಾಗೆ ಭೂತಲದಿಂದ ಉರಿ ಹಾಗೂ ಉಗಿ ಮೇಲೇಳತೊಡಗಿತು. ಮುಂದೆ ಕಂಪನಗಳು ನಿಂತವಾದರೂ ಪಟ್ಟಣಕ್ಕೆ ಪಟ್ಟಣವೇ ಉರಿಯಿಂದ ಸಿಡಿಯತೊಡಗಿತ್ತು. ದಿಕ್ಕೆಟ್ಟ ಜನ 'ಸುಮಿಡಾ' ನದಿಯತ್ತ

ಬಾಲ ಮಾತ್ರ ಮೇಲುಳಿದ ಭೂಗತ ಆಕಳ, ಬೆಟ್ಟ ಹತ್ತಿದ ಹಡಗು, ಭೂತಳ ಸೇರಿದ ರೈಲು ಸಹಿತದ ಸ್ಟೇಶನ್, ಉಗಿ-ಉರಿಯ ನದಿ!

ಓಡಿದಾಗ ಗುಡ್ಡದ ಮೇಲ್ಭಾಗದ ಬಂಡೆಗಳ ಮಧ್ಯ ದಿಂದ ಹೊರಟ ಉಗಿ, ಉರಿ ಮತ್ತು ಕುದಿಯುವ ನೀರು ಅವರಿಗಿಂತ ಮೊದಲೇ ಆ ನದಿಯನ್ನು ತಲುಪಿತ್ತು!

* * *

ಅಸ್ಸಾಮಿನಲ್ಲಿ ಭೂಕಂಪವಾದಾಗ ಅದರಲ್ಲಿ ಉಳಿದು ಓಡಿ ಬಂದ ಪೊಲೀಸ್ ಅಧಿಕಾರಿಯೊಬ್ಬರು ಅದನ್ನು ಹೀಗೆ ವರ್ಣಿಸಿದ್ದಾರೆ:

"ಭೂಮಿಯು ಒಮ್ಮೆಲೆ ಬಿರುಗಾಳಿಯ ಸಮುದ್ರದಂತೆ ತೆರೆ ತೆರೆಯಾಗಿ ತಿರುಗತೊಡಗಿತು. ಒಂದೊಂದು ಪ್ರದೇಶವು ಒಂದೊಂದು ಭಾಗಕ್ಕೆ ಅಪ್ಪಳಿಸಿ ವಿರುದ್ಧ ದಿಶೆಯಲ್ಲಿ ಬೀಳುತ್ತಿತ್ತು. ದೊಡ್ಡ ದೊಡ್ಡ ಅಟ್ಟದ ಇಮಾರತಿಗಳು ಭೀಕರ ತೆರೆಗೆ ಸಿಕ್ಕ ಹಡಗಿನಂತೆ ಭೂಮಿಯಲ್ಲಿ ಮುಳುಗಿ ನಾಶವಾಗ ತೊಡಗಿದವು. ಮುಂದೆ ಇದ್ದಕ್ಕಿದ್ದಂತೆಯೇ ಭೂಮಿ ಬಾಯಿ ಬಿಟ್ಟು ನೀರು, ಉಸುಕು, ಕಲ್ಲುಗಳ ಬುಗ್ಗೆ ಆಕಾಶದೆಡೆ ಚಿಮ್ಮಿತು."

* * *

ಚಿಲಿಯಲ್ಲಿ ವಾಲ್ಪರಾಸೋ ಎಂಬ ಬಂದರು. ಸಮುದ್ರ ದಡದಿಂದ ಸುಮಾರು ಎರಡು ಫರ್ಲಾಂಗ್ ಅಂತರದ ಮೇಲೆ ಹಡಗು ಹೊರಟಿತ್ತು. ಕ್ಷಣಾರ್ಧದಲ್ಲೇ ಭೂಕಂಪ ಪ್ರಾರಂಭವಾಯಿತು. ನೀರು ಝುರ್ರೆಂದು ಕೆಳಗಿಳಿಯತೊಡಗಿತು. ಸಮುದ್ರದ ದಂಡೆಯಲ್ಲಿ ಕೆಳಗೆ ಮುಳುಗಿದ ಬಂಡೆಗಳು ಮೇಲೆತ್ತರಿಸಲ್ಪಟ್ಟವು. ಆ ಬಂಡೆಗಲ್ಲು ಹಾಗೂ ಉಸುಕಿನೊಂದಿಗೆ ಹಡಗೂ ಮೇಲೆತ್ತರಿಸಲ್ಪಟ್ಟಿತ್ತು. ಹಡಗದಿಂದ ತೂರಿಬಿದ್ದ ಜನ ಉಸುಕಿನಲ್ಲಿ ಹೂಳಿ ಹೋಗಿ ಕೆಲವರ ಕಾಲುಗಳು ಮಾತ್ರ ಮೇಲೆ ಕಾಣುತ್ತಿದ್ದವು. ಇಷ್ಟೆಲ್ಲಾ ಜರುಗಿದ್ದು ಮುಂಜಾನೆಯ ೧೧-೪೦ ರಿಂದ ೧೧-೪೫ರ ಅವಧಿಯಲ್ಲಿ.

* * *

ಸರ್ ವಿಲಿಯಂ ಕಾನವೇ ಅವರು, ಭೂಕಂಪದಿಂದಾದ ಭೂಮಿಯ ಜಾರುವಿಕೆಯಿಂದ ಮಧ್ಯ ಹಿಮಾಲಯದಲ್ಲಿ ಗೋಹಾ ಸರೋವರ ಹೇಗೆ ರೂಪಿತವಾಯಿತೆಂಬುದನ್ನು ಹೀಗೆ ಹೇಳಿದ್ದಾರೆ.

"ಪರ್ವತದ ಕೆಳಭಾಗಕ್ಕೆ ನೀರ್ಬುಗ್ಗೆಗಳು ಪುಟಿದು ನದಿಯಂತೆ ಹರಿದು, ಅದನ್ನು ತಡೆಗಟ್ಟಲು ಅಷ್ಟೊಂದು ಆಧಾರಗಳಿರಲಿಲ್ಲ. ಒಮ್ಮೆ ಬಂಡೆಗಲ್ಲಿಗೆ ಸುರಂಗ ಹಚ್ಚಿದಾಗ ವಿಶಿಷ್ಟ ರೀತಿಯಲ್ಲಿ ಭೂಕಂಪ ಜರುಗಿ ಪರ್ವತದ ಮೇಲ್ಭಾಗವೆಲ್ಲಾ ಕಡಿದು ಉರುಳಿ ನದಿಯ ಆಚೆಗೆ ಬಿದ್ದು ಅಣೆಕಟ್ಟಿನಂತೆ ಆಯಿತು. ದೊಡ್ಡ ದೊಡ್ಡ ಬಂಡೆಗಲ್ಲುಗಳು ಮೈಲುಗಟ್ಟಲೆ ಉರುಳಿದವು. ಸುಮಾರು ೪೦ ರಿಂದ ೫೦ ಟನ್ನುಗಳಷ್ಟು ಭಾರದ ಸುಣ್ಣದ ಕಲ್ಲುಗಳು ತೋಪಿನ ಗುಂಡುಗಳಂತೆ ಆಕಾಶದಲ್ಲಿ ಹಾರಿದವು.

★

ಕನ್ನಡದ ಕೈಂಕರ್ಯ

ಬಳ್ಳಾರಿ ಪೇಟೆಯಲ್ಲಿ ಒಂದು ಪುಸ್ತದಂಗಡಿ. ಅಲ್ಲಿ ಇಬ್ಬರು ಸ್ನೇಹಿತರು ಮಾತನಾಡುತ್ತಾ ಕೂತಿದ್ದರು. ಅವರಲ್ಲೊಬ್ಬರು ಕನ್ನಡದ ಕೋಗಿಲೆ ಎಂಬ ಖ್ಯಾತಿಯ ಕಾಳಿಂಗರಾಯರು, ಮತ್ತೊಬ್ಬರು ಹಾಸ್ಯ ಸಾಹಿತಿ ಬೀಚಿಯವರು. ಆಗ ಒಬ್ಬ ಮುದುಕರು ಭಾರವಾದ ಚೀಲವೊಂದನ್ನು ಹೊತ್ತುಕೊಂಡು ಬಂದು ಇವರನ್ನುದ್ದೇಶಿಸಿ, "ಕೆಲವು ಕನ್ನಡ ಪುಸ್ತಕಗಳಿವೆ. ಕೊಂಡುಕೊಳ್ಳುತ್ತೀರಾ"? ಎಂದು ವಿಚಾರಿಸಿದರು. ಅದಕ್ಕೆ ಈ ಗೆಳೆಯರು ಇದಾವುದೋ ಕೆಲಸಕ್ಕೆ ಬಾರದ ರದ್ದೀ ಕಾಗದ ಅಂಗಡಿಗೆ ಹಾಕುವ ಪುಸ್ತಕಗಳೆಂದು ಭಾವಿಸಿ ಬೇಡವೆಂದರು. ಆ ಹಿರಿಯರು ಹತಾಶರಾಗಿ "ಹೋಗಲಿ ಬಿಡಿ ದೇವ್ರು" ಎಂದು ಹೇಳಿ ಪುಸ್ತಕಗಳನ್ನು ಹೊತ್ತುಕೊಂಡು ಬಳ್ಳಾರಿಯ ಆ ಉರಿ ಬಿಸಿಲಿನಲ್ಲಿ ಹೊರಟು ಹೋದರು. ಈ ಗೆಳೆಯರು ಆ ವೃದ್ಧರ ಬಗ್ಗೆ ಅಂಗಡಿಯಲ್ಲಿ ವಿಚಾರಿಸಿದಾಗ ಅವರೇ ಕನ್ನಡ ಕಾದಂಬರಿ ದಿಗ್ಗಜ ಗಳಗನಾಥರೆಂದು ಗೊತ್ತಾಯಿತು. ಪ್ರಾತಃಸ್ಮರಣೀಯರಾದ ಆ ಪೂಜ್ಯರ ಮನನೋಯಿಸಿದ್ದಕ್ಕಾಗಿ ಇಬ್ಬರಿಗೂ ತುಂಬಾ ವ್ಯಥೆಯಾಯಿತು.

- ಡಿ. ಗುಂಡೂರಾವ್

ಮಾತು - ಮಾಣಿಕ್ಯ

೩೨

ಪ್ರತಾಪಶಾಲಿ ವಾಯು

ಈಶ್ವರನಂತೆ ವಾಯುವಿಗೂ ಸರ್ವತ್ರ ವ್ಯಾಪಿಸುವ ಛಲ. ಎಲ್ಲಿಯೇ ಆಗಲಿ, ಒಂದಿನಿತು ಸಂದು ಸಿಕ್ಕರೂ ಸಾಕು. ಒಳಗೆ ತನ್ನನ್ನು ತಾನೇ ತೂರಿಕೊಳ್ಳುತ್ತದೆ. ನೋಡ-ನೋಡುವುದರಲ್ಲಿಯೇ ಅದರ ತುಂಬೆಲ್ಲಾ ಹರಡಿಕೊಳ್ಳುತ್ತದೆ. ನೀರು ತುಂಬಲು ಜಲಾಶಯಕ್ಕೆ ಬಂದವಳನ್ನು ಕಂಡು ವರಕವಿಗಳೇನೊ 'ಬರಿಗೊಡದ ಬಾಲಿ....' ಎಂದು ಮೊದಲಾಗಿ ಹಾಡಿದರು. ಆ ಕೊಡದಲ್ಲಿ ಏನು ತುಂಬಿಕೊಂಡಿದೆ ಎಂಬುದು ಅರಿವಾಗುವುದು ಅದನ್ನು ನೀರಲ್ಲಿ ಮುಳುಗಿಸುತ್ತಿರುವಂತೆ ಗುಡು-ಗುಡು ಸದ್ದು ಮಾಡಿದಾಗಲೆ. ರಾಜಕಾರಣಿಗಳು ತಾವು ಭದ್ರವಾಗಿ ಹಿಡಿದುಕೊಂಡ ಆಸನವನ್ನು ತೆರವು ಮಾಡಲು ಒಡಂಬಡುವುದಿಲ್ಲ. ವಾಯು ಹಾಗಲ್ಲ. ನೀರಿನಂತಹ ಇನ್ನೊಂದು ವಸ್ತುವಿಗೆ ಒಡನೆಯೆ ಎಡೆಮಾಡಿಕೊಡುತ್ತದೆ. ನಮ್ಮ ನಿತ್ಯದ ಪ್ರತಿ ಉಸಿರಾಟಕ್ಕೆ ವಾಯುವೇ ಆಧಾರವಾಗಿದ್ದರೂ ಅದರ ಇಂತಹ ಹಿರಿಯ ಗುಣ ಅದೇಕೆ ನಮ್ಮಲ್ಲಿ ಕಾಲಿರಿಸುವುದಿಲ್ಲವೊ!

ಎತ್ತರದಿಂದ ತಗ್ಗಿನತ್ತ ಹರಿಯುವ ಸ್ವಭಾವ ನೀರಿನದು. ಉಳ್ಳವರ ಸಂಪತ್ತನ್ನು ಇಲ್ಲದವರ ಮಡಿಲಗೆ ಕೊಡಮಾಡುವ ಸಮತಾವಾದಿ ಅದು. ತನ್ನ ಸೋದರನಾದ ನೀರಿನ ಈ ಔದಾರ್ಯ ವಾಯುವಿನಲ್ಲಿಯೂ ಕಂಡು ಬಂದರೆ ಅಚ್ಚರಿಪಡಬೇಕಿಲ್ಲ. ವಾತಾವರಣದಲ್ಲಿ ಕಡಿಮೆ ಒತ್ತಡದ ಪ್ರದೇಶದತ್ತ ಹೆಚ್ಚು ಒತ್ತಡದ ಪ್ರದೇಶದಿಂದ ಚಲಿಸುವ ಚಪಲ ಇದರದು. ಒಂದು ತಾಣದಲ್ಲಿ ಶಕ್ತಿಯು ಅತ್ಯಧಿಕ ಕೇಂದ್ರೀಕೃತವಾಗುವುದು ವಾಯುವಿಗೆ ಸುತರಾಂ ಇಷ್ಟವಿಲ್ಲ. ಇದರಿಂದಾಗಿಯೇ ಮಳೆಯ ಸೆಳಕುಗಳನ್ನು ದೂರ-ದೂರಕ್ಕೆ ಕರೆದೊಯ್ದು ನಾಡಿನಲ್ಲಿ ನಮ್ಮದಿಯ ವಾತಾವರಣವನ್ನು ನಿರ್ಮಿಸುವ ಹಿರಿಯ ಗುಣ ಈ ವಾಯುವಿನದು. ಇದರ ಈ ಕಾರ್ಯ ಮಾನವನಿಗೂ ಅನುಕರಣೀಯವಲ್ಲವೇ?

ವಾಯು ಸ್ವಾತಂತ್ರ್ಯಪ್ರಿಯ. ಸ್ವಚ್ಛಂದವಾಗಿ ವರ್ತಿಸುವಲ್ಲಿ ತತ್ಪರ. ಬಂಧನದ ವಿರುದ್ಧ ಸಿಡಿದೇಳುವ ಗಂಡುಗಲಿ. ಸೈಕಲ್ ಟ್ಯೂಬಿನಲ್ಲಿ ಪ್ರಯತ್ನಪೂರ್ವಕ ಅದನ್ನು ಅದುಮಿ ಇಟ್ಟರೆ, ಬಿಡುಗಡೆಗಾಗಿ ಹಂಬಲಿಸಿ 'ಢಬ್' ಎಂಬ ಸಪ್ಪಳದೊಂದಿಗೆ ಹೊರಬರುವುದನ್ನು ಆಗಾಗ ವಿಶೇಷವಾಗಿ ಬೇಸಿಗೆಯಲ್ಲಿ ಅದಾರು ಕಂಡಿಲ್ಲ? ಹಾಗೆಯೇ ಸಂಚಾರ ಪ್ರಿಯವಾದ ಈ ವಾಯುವು ಅನ್ಯರ ಸಂಚಾರಕ್ಕೂ ಅನುಕೂಲ ಮಾಡಿಕೊಡುತ್ತದೆ. ಟ್ರಕ್-ಬಸ್‌ಗಳಂತಹ ಭಾರಿ ಗಾತ್ರದ ಭಾರವುಳ್ಳ ವಾಹನಗಳು ದೂರ ದೂರಕ್ಕೆ ಸಾಗಲು ಅವುಗಳ ಸಹಾಯಕ್ಕೆ ಬರುವುದು ಈ ವಾಯುವೆ- ಅವುಗಳ ಟ್ಯೂಬುಗಳಲ್ಲಿ ಜಡಿದು ತುಂಬಿಕೊಂಡ ಈ ವಾಯುವೆ! ಇದಿಲ್ಲದಿದ್ದರೆ ಅಂಥ ವಾಹನಗಳು ಗಂಟೆಗಟ್ಟಲೆ ನಿಂತಲ್ಲಿಯೇ ತೂಕಡಿಸಬೇಕು ತಾನೆ!

ಅಗ್ನಿಗೆ 'ಪಾವಕ' ಎಂಬುದು ಹೇಗೊ ಹಾಗೆಯೇ ವಾಯುವಿಗೆ 'ಪವನ' ಎಂಬುದು ಪರ್ಯಾಯ ಪದ. ಪವನ ಸದಾ ಪಾವನ. ಬಿರುಗಾಳಿ ಬೀಸುತ್ತಿರುವಾಗ ಇದರ ತನುವಿಗೆಲ್ಲಾ ಹುಡಿ ಅಡರಿಕೊಂಡಂತೆ ಕಂಡರೂ ಕ್ಷಣಾರ್ಧದಲ್ಲಿ ತನ್ನ ಮೂಲದ ನೈರ್ಮಲ್ಯವನ್ನು ಕಾಪಾಡಿಕೊಳ್ಳುವ ನೈಪುಣ್ಯ ಇದರದು. ಮಳೆ ಸೆಳಕು ಇದರ ಮೈಯನ್ನು ಒದ್ದೆ ಮಾಡಲಾರದು. 'ಅಚ್ಛೇದ್ಯೋ ಯಮದಾಹ್ಯೋ ಯಮಕ್ಲೇದ್ಯೋ ಶೋಷ್ಯ ಏವ ಚ?' (ಇದನ್ನು ತುಂಡರಿಸಲಾಗದು, ಸುಡಲಾಗದು, ಒದ್ದೆ ಮಾಡಲಾಗದು, ಒಣಗಿಸಲಾಗದು) ಎಂಬ ಆತ್ಮನ ವಿಷಯದ ಗೀತೋಕ್ತಿ ವಾಯುವಿನ

ವಿಷಯದಲ್ಲಿ ಅದೆಷ್ಟು ಸಮಂಜಸ.

ವಾಯು ತಾನು ಪರಿಶುದ್ಧವಾಗಿರುವುದಲ್ಲದೆ ಇತರರನ್ನು ಶುಚಿಗೊಳಿಸುವಲ್ಲಿ ಹಿಂದೇಟು ಹಾಕುವುದಿಲ್ಲ. ನಿರ್ಮಲೀಕರಣಕ್ಕಾಗಿ ಬಳಸುವ ವಿದ್ಯುತ್ತಿನ ಉಪಕರಣದ ಮೂಲಕ ರಭಸದಿಂದ ಹುಳು, ಹುಪ್ಪಡಿ, ಜೇಡರ ಬಲೆ ಮುಂತಾದವುಗಳನ್ನು ಒಳಗಡೆಗೆ ಸೆಳೆದುಕೊಂಡು ಕಿಟಕಿ-ಗೋಡೆಗಳನ್ನು ಹಸನುಗೊಳಿಸುವ ಕಾರ್ಯವನ್ನು ನಿರ್ವಹಿಸುವಲ್ಲಿ ವಾಯುವು ತುಂಬಾ ಸಹಾಯಕಾರಿ.

ದೂರ ದೂರದಿಂದ ಬಂದ ಓಲೆಗಳನ್ನು ಅಂಚೆಪೇದೆ ಅವರವರಿಗೆ ತಲುಪಿಸುವಂತೆ, ಶಬ್ದದ ಅಲೆಗಳನ್ನು ಒಂದೆಡೆಯಿಂದ ಇನ್ನೊಂದೆಡೆ ಸಾಗಿಸುವಲ್ಲಿ ವಾಯುವಿನ ಪಾತ್ರ ಹಿರಿದಾದುದು. ಹೀಗೆ ತಾನು ಹೊತ್ತೊಯ್ಯುವ ಧ್ವನಿ ಅನ್ಯರಿಗೆ ಪ್ರಿಯವೋ, ಅಪ್ರಿಯವೋ, ಶುಭವೋ, ಅಶುಭವೋ, ಬೇಕಾದುದೋ, ಬೇಡವಾದುದೋ ಎಂಬ ಯೋಚನೆ ಈ ವಾಯು ಮಹಾಶಯನಿಗಿಲ್ಲ. ಪರಮಾತ್ಮನ ತನುವಾದ ಈ ಮಾರುತನೂ 'ದ್ವೇಷ್ಯಂ ನಾಸ್ತಿ, ಪ್ರಿಯಂ ನಾಸ್ತಿ ಯಸ್ಯನಾಸ್ತಿ ಶುಭಾ ಶುಭಂ' ಎಂಬ ಹೆಗ್ಗಳಿಕೆಗೆ ಪಾತ್ರ.

ವಾಯು ಬೆಲೆ ಇಲ್ಲದೆ ಸುಲಭವಾಗಿ ಸಿಗುವ ಸರಕಿನಂತಿದ್ದರೂ, ಅದರ ಹಿರಿಮೆಯನ್ನು ದಮ್ಮಿನಂತಹ ರೋಗದಿಂದ ಬಳಲುವವನು ಚೆನ್ನಾಗಿಬಲ್ಲ. ನಮ್ಮ ಶರೀರ ಪೋಷಣಕ್ಕೆ, ಪ್ರಾಣ ಧಾರಣಕ್ಕೆ ಅನ್ನ, ನೀರು ವಾಯು ಈ ಮೂರು ಅಗತ್ಯ. ಅನ್ನ-ನೀರು ತೊರೆದು ಕೆಲಕಾಲ ಬದುಕಿರಲು ಶಕ್ಯ. ಆದರೆ, ವಾಯುವಿಲ್ಲದೆ ಒಂದರೆಗಳಿಗೆ ಕೂಡ ಬದುಕಿ ಉಳಿಯಲು ಅಸಾಧ್ಯ. ಆದಿ ಪುರುಷನ ಪ್ರಾಣದಿಂದ ಉದಯಿಸಿ ಬಂದಿತಂತೆ ಈ ವಾಯು ಎಂದು ಋಗ್ವೇದದ ಪುರುಷ ಸೂಕ್ತವು 'ಪ್ರಾಣಾದ್ವಾಯುರಜಾಯತ' ಎಂದು ಸಾರುತ್ತದೆ. ಇದೇ ವಾಯು ಜೀವಿಗಳ ಪ್ರಾಣಕ್ಕೆ ಆಧಾರವೆಂಬುದು ಗಮನಾರ್ಹ. ಶರೀರದ ಒಳಗಡೆಗೆ ಸಂಚರಿಸಿ, ಭಿನ್ನ ಭಿನ್ನ ತಾಣಗಳಲ್ಲಿ ಬಗೆ ಬಗೆಯ ಕಾರ್ಯಗಳನ್ನು ಜರುಗಿಸುವ ವಾಯುವು 'ಪಂಚ ಪ್ರಾಣ'.

'ಹೃದಿ ಪ್ರಾಣೋಽ ಗುದೇಽ ಪಾನಃ ಸಮಾನೋ ನಾಭಿ ಮಂಡಲೇ I
ಉದಾನಃ ಕಂಠದೇಶಃ ಸ್ಯಾದ್ ವ್ಯಾನಃ ಸರ್ವ ಶರೀರಶಃ II'

ಹೃದಯದಲ್ಲಿ ಪ್ರಾಣ, ಗುದದಲ್ಲಿ ಅಪಾನ, ನಾಭಿಯಲ್ಲಿ ಸಮಾನ, ಕಂಠ ಪ್ರದೇಶದಲ್ಲಿ ಉದಾನ ಹಾಗೂ ಶರೀರದಲ್ಲೆಲ್ಲಾ ವ್ಯಾನ ಈ ಪ್ರಕಾರವಾಗಿ ವಾಯುವು ನೆಲೆಸಿರುತ್ತದೆ. ಪ್ರತಿಯೊಂದು ಪ್ರಾಣಿಗೆ ಈ ಪಂಚಪ್ರಾಣ ಅತ್ಯಂತ ಪ್ರಿಯ. ಎಂತಲೇ ಯಾವುದೇ ವಸ್ತು ಇಲ್ಲವೇ ವ್ಯಕ್ತಿಯ ಬಗೆಗೆ ಅತೀವ ಪ್ರೀತಿ ಇದೆ ಎಂಬುದನ್ನು ತೋರಿಸಲು 'ಪಂಚಪ್ರಾಣ' ಎಂಬ ಪದವನ್ನು ಬಳಸುವದು ರೂಢವಾಗಿದೆ. 'ಮಮ ಪ್ರಾಣಾಹ ಪಾಂಡವಾಃ' (ಪಾಂಡವರೆಂದರೆ ನನ್ನ ಪಂಚ ಪ್ರಾಣವೆ ಸೈ) ಎಂಬುದು ಶ್ರೀಕೃಷ್ಣನ ಮಾತಿನಲ್ಲಿ ಪಾಂಡವರ ಬಗೆಗಿನ ಆತನ ಸ್ನೇಹಾತಿಶಯ ಅಭಿವ್ಯಕ್ತವಾಗಿದೆ.

ವಾಯುವಿನ ಮಹಿಮೆ ಮಾತಿಗೆ ನಿಲುಕದಂತಹದು. ಹೀಗಿದ್ದರೂ ಅದು ನೋಡಲಿಕ್ಕೆ ಬಲು ಹಗುರ. ಅದರ ಭಾರ ಎಷ್ಟೆಂಬುದನ್ನು ವಿಜ್ಞಾನಿಗಳು ಅಳೆದು ತೋರಿಸುತ್ತಾರೆ. ನಮ್ಮ ದೇಹದ ಹೊರ ಭಾಗದ ಪ್ರತಿಯೊಂದು ಚದರ ಅಂಗುಲದ ಮೇಲೆ ಅದು ಸುಮಾರು ೧೫ ಪೌಂಡಿನಷ್ಟು ಎಂದರೆ ಆರೂಮುಕ್ಕಾಲು ಕಿಲೋ ಗ್ರಾಂನಷ್ಟು ಎಂದರೆ ಸಾಮಾನ್ಯ ಜನ ಸೋಜಿಗಗೊಂಡಾರು!

ಪರಮಾತ್ಮನಂತೆ ವಾಯುವೂ ಪ್ರತಾಪಶಾಲಿ. ಆತನ ಅನುಗ್ರಹದಿಂದ ಅಂಜನೆಯಲ್ಲಿ ಹನುಮ ಜನಿಸಿದ, ಕುಂತಿಯಲ್ಲಿ ಅತುಲ ಪರಾಕ್ರಮಿ ಭೀಮ ಜನುಮ ತಳೆದ. ದ್ವೈತ ಸಿದ್ಧಾಂತದ ಪ್ರತಿಪಾದಕ ಶ್ರೀಮಧ್ವರು ವಾಯುವಿನ ಮೂರನೆಯ ಅವತಾರವೆಂದೇ ವಿಖ್ಯಾತರು.

ಮಾನವನು ಗೈಯುವ ಕಾರ್ಯಾ-ಕಾರ್ಯಗಳನ್ನೆಲ್ಲಾ ಕಣ್ಣೊಳಗೆ ಕಣ್ಣಿಟ್ಟು ವೀಕ್ಷಿಸುವ ಆದಿತ್ಯ-ಚಂದ್ರ ಮೊದಲಾದ ಹದಿನಾಲ್ಕು ಸಾಕ್ಷಿಗಳಲ್ಲಿ 'ಅನಿಲ' ಎಂದರೆ ವಾಯು ಕೂಡ ಸೇರ್ಪಡೆಯಾಗಿದೆ.

• ಶ್ರೀನಿವಾಸ ತೋಪಖಾನೆ

ಮದನ ಕಾಮನ ಕಥೆಗಳು

೧೨

ಮರು ದಿನವೂ ಅರಮನೆಯಲ್ಲೆಲ್ಲಾ ಮದುವೆಯ ಸಡಗರವೇ ಇದ್ದಿತಾದರೂ ಚಾತುರ್ಯನಿಗೆ ಮಾತ್ರ ಸಮಾಧಾನವಿರಲಿಲ್ಲ. ಆದರೂ ತನ್ನ ಮನಸ್ಸಿನಲ್ಲಿಯ ದುಗುಡ ಇತರರಿಗೆ ತಿಳಿಯದಿರಲೆಂದು ಅವನು ಎಲ್ಲರೊಡನೆಯೂ ಹರಟುತ್ತಾ, ನಗುತ್ತಾ ಆ ದಿನವಿಡೀ ಕಾಲ ಕಳೆದನು. ರಾತ್ರಿಯಾದೊಡನೆ ಮತ್ತೆ ನವ ವಿವಾಹಿತನಿಗೊಪ್ಪುವಂತೆ ಸಿಂಗರಿಸಿಕೊಂಡು ಶಯ್ಯಾಗೃಹಕ್ಕೆ ನಡೆದನು. ಅಲ್ಲಿ ಹಿಂದಿನ ರಾತ್ರಿಯಂತೆಯೇ ಮಂಚದ ಮೇಲೆ ಮಲಗಿ ನಿದ್ರಿಸಲೆತ್ನಿಸಿದನು.

ಇಂದು ಕಿರಿಯ ರಾಜಕುಮಾರಿಯ ಸರದಿಯಾಗಿತ್ತು. ಗಂಧರ್ವ ಕನ್ನಿಕೆಯಂತೆ ಕಂಗೊಳಿಸುತ್ತಿದ್ದ ಆಕೆ ತುಸುವೂ ಸದ್ದಾಗದಂತೆ ಶಯ್ಯಾಗೃಹವನ್ನು ಪ್ರವೇಶಿಸಿ ಅಲ್ಲಿನ ಮಂದ ಪ್ರಕಾಶದಲ್ಲಿ ತನ್ನ ಪತಿ ಶವಡಿಸಿದದನ್ನು ಕಂಡಳು. ಸುಗಂಧ ದ್ರವ್ಯಗಳಿಂದಾಗಿ ಅಲ್ಲಿನ ವಾತಾವರಣ ಮಾದಕವಾಗಿತ್ತು.

ಎರಡನೆಯ ರಾತ್ರಿ

ಚಾತುರ್ಯ ಮಲಗಿದ್ದನಾದರೂ ಅವನಿಗೆ ನಿದ್ರೆ ಹತ್ತುವುದು ಸಾಧ್ಯವೇ ಇರಲಿಲ್ಲ. ಇಂದಿನ ರಾತ್ರಿಯನ್ನೆಂತು ಕಳೆವುದೆಂಬುದೇ ಅವನ ಸಮಸ್ಯೆಯಾಗಿತ್ತು. ಅಪ್ಸರೆಯಂತೆ ಕಂಗೊಳಿಸುತ್ತಿದ್ದ ರಾಜಕುಮಾರಿಯನ್ನು ಅರೆ ತೆರೆದ ಕಣ್ಣುಗಳಿಂದಲೇ ನೋಡಿದಾಗ ಅವನಿಗೆ ರೋಮಾಂಚನವಾಯಿತು. ದೇವತೆಗಳೂ ಮೈಮರೆಯಬಹುದಾದಂಥ ಆ ಕ್ಷಣದಲ್ಲಿ ಚಾತುರ್ಯ ತನ್ನ ಕರ್ತವ್ಯವನ್ನು ನೆನೆದು ತನ್ನನ್ನು ಸ್ಥಿಮಿತದಲ್ಲಿರಿಸಿಕೊಂಡು ಮುಂದೇನು ಮಾಡುವುದೆಂದು ಯೋಚಿಸಹತ್ತಿದನು.

ಚಾತುರ್ಯನ ಮನದಲ್ಲಿ ನಡೆದ ಈ ತುಮುಲದ ಕಲ್ಪನೆ ರಾಜಕುಮಾರಿಗೆ ಎಳ್ಳಷ್ಟೂ ಇರಲಿಲ್ಲ. ಏನೇನೋ ಮಧುರ ಕಲ್ಪನೆಗಳಲ್ಲಿ ವಿಹರಿಸುತ್ತಲಿದ್ದ ಅವಳು ಆಸೆಗಣ್ಣುಗಳಿಂದೊಮ್ಮೆ ತನ್ನ ಪ್ರಿಯಕರನನ್ನು ನೋಡಿದಳು.

ಹಾಲಿನ ಬೆಳ್ಳಿಯ ಪಾತ್ರೆಯನ್ನು ಅವನ ಮಂಚದ ಹತ್ತಿರ ಒಯ್ದು ಪ್ರಿಯಕರನ ಪ್ರತಿಕ್ರಿಯೆಯನ್ನು ಎದುರು ನೋಡಿದಳು. ಆದರೆ ಅವನು ತುಸುವೂ ಕದಲಲಿಲ್ಲ ಕೂಡ. ತುಸು ಬಾಗಿ ನೋಡಿ ಅವನು ನಿದ್ರಿಸುತ್ತಿರುವನೆಂದುಕೊಂಡಳು. ಅದರಿಂದ ಅವಳ ಮುಖ ಗಂಟಿಕ್ಕಿತು. ಆದರೆ ಮರುಕ್ಷಣವೇ ಆಕೆ ಅವನನ್ನೆಚ್ಚರಗೊಳಿಸಲು ಹಿಂದಿನ ರಾತ್ರಿ ತನ್ನ ಅಕ್ಕ ಮಾಡಿದಂತೆಯೇ ಯೋಜನೆಯೊಂದನ್ನು ಮಾಡಿದಳು.

ಹತ್ತಿರವೇ ಇರಿಸಿದ್ದ ವೀಣೆಯನ್ನು ಕೈಗೆತ್ತಿಕೊಂಡು ರತ್ನಗಂಬಳಿಯ ಮೇಲೆ ಕುಳಿತುಕೊಂಡು ಶ್ರುತಿ ಮಾಡಿದಳು. ಅವಳು ಬೆರಳುಗಳನ್ನು ತಂತಿಯ ಮೇಲೆ ಆಡಿಸಿದಂತೆಲ್ಲಾ ಎಂಥ ಕಿವುಡನನ್ನೂ ಮರಳುಗೊಳಿಸುವಂಥ ಸಂಗೀತ ಪ್ರವಹಿಸಲಾರಂಭಿಸಿತು. ಆಗ ನಿದ್ರೆಯನ್ನು ನಟಿಸುತ್ತಿದ್ದ ಚಾತುರ್ಯನ ಗತಿಯೇನಾಗಿರಬೇಡ?!

ಎಷ್ಟೊಂದು ಶಾಂತ ಸ್ವಭಾವದ ಹೆಣ್ಣಿನ ತಾಳ್ಮೆಗೂ ಒಂದು ಮಿತಿಯುಂಟು. ತನ್ನ ವೀಣಾನಾದ ಪತಿಯನ್ನೆಚ್ಚರಿಸಲು ತಪ್ಪಿದಾಗ ಅವಳು ತಾಳ್ಮೆದಪ್ಪಿದಳು. ಅಂತೆಯೇ ಮಧ್ಯದಲ್ಲಿಯೇ ವಾದ್ಯ ನುಡಿಸುವುದನ್ನು ಒಮ್ಮೆಲೆ ನಿಲ್ಲಿಸಿ ನಿಟ್ಟುಸಿರು ಬಿಟ್ಟಳು. ಆದರೆ ಸುದೈವದಿಂದ ಆ ಕ್ಷಣಕ್ಕೆ ಚಾತುರ್ಯ ಚಟ್ಟನೆ ಎದ್ದು ಕುಳಿತ. ಅವನ

ಮುಖದಿಂದ ಆನಂದದ ನಗೆ ಹೊರಹೊಮ್ಮು ತ್ತಿತ್ತು. ತನ್ನ ಯೋಜನೆ ಯಶಸ್ವಿಯಾದುದನ್ನು ಕಂಡು ರಾಜಕುಮಾರಿಗೂ ಹರುಷವಾಗಿತ್ತು. "ನನ್ನ ದೊರೆಯ ಆಯಾಸವಿನ್ನೂ ನಿವಾರಣೆಯಾದಂತೆ ತೋರುವುದಿಲ್ಲವಲ್ಲ" ಎಂದು ನಸುನಗುತ್ತಾ ನುಡಿದಳು.

"ಹಾಗೇನೂ ಇಲ್ಲ! ಆದರೂ ಮದುಮಗನ ಆಯಾಸವೆಂಥದೆಂಬುದು ನಿನಗೆ ಗೊತ್ತೇ ಇರಬೇಕಲ್ಲ!"

"ನಿಮ್ಮ ಆಯಾಸಕ್ಕೆ ನನ್ನಲ್ಲಿ ಔಷಧವಿದೆ!" ಎನ್ನುತ್ತಾ ಮಲ್ಲಿಗೆಯ ಬಳ್ಳಿಯಂತೆ ಬಳುಕುತ್ತಾ ಹಾಲಿನ ಪಾತ್ರೆಯನ್ನು ಚಾತುರ್ಯನೆಡೆಗೆ ಮುಂದೆ ಮಾಡಿದಳು. ಅವನು ತುಸು ಹಾಲು ಸೇವಿಸಿದ ನಂತರ ಅವಳಿತ್ತ ತಾಂಬೂಲದ ರುಚಿಯನ್ನು ಸವಿದನು.

ಸಮಯ ಸರಿದಂತೆ ರಾಜಕುಮಾರಿಯ ಪ್ರೇಮ ದಾಹವೂ ಹೆಚ್ಚಿತು. ಅದರಿಂದ ಚಾತುರ್ಯನಿಗೆ ತುಸು ಭೀತಿಯೇ ಅನಿಸಿತು. ಅಂತೆಯೇ ಹಿಂದಿನ



ರಾತ್ರಿ ಹಿರಿಯ ರಾಜಕುಮಾರಿಯನ್ನು ಹಿಡಿತದಲ್ಲಿರಿಸಿಕೊಳ್ಳಲು ಅನುಸರಿಸಿದ ತಂತ್ರವನ್ನೇ ಉಪಯೋಗಿಸಲು ನಿರ್ಧರಿಸಿದನು.

"ನಮ್ಮ ಭವಿಷ್ಯತ್ತು ಇಷ್ಟೊಂದು ಬೆರೆತುಕೊಂಡಿರುವಾಗ ಪ್ರೇಮಕ್ಕಾಗಿ ಇಷ್ಟೊಂದು ಅವಸರವೇಕೆ? ಬಾವಿಯಲ್ಲಿಯ ನೀರನ್ನು ಯಾರೂ ಅಪಹರಿಸಲಾರರಲ್ಲವೆ? ಇನ್ನೂ ತುಸು ಹೊತ್ತು ಮಾತನಾಡಿ ಒಬ್ಬರನ್ನೊಬ್ಬರು ಅರಿತುಕೊಳ್ಳಲು ಯತ್ನಿಸೋಣ. ನಿನಗೆ ಕತೆಗಳು ಸೇರುವವೇ?" ಎಂದು ಚಾತುರ್ಯ ರಾಜಕುಮಾರಿಯನ್ನು ಮನವೊಲಿಸುವ ರೀತಿಯಲ್ಲಿ ವಿಚಾರಿಸಿದನು.

ಇದರಿಂದ ಮೊದಲು ತುಸು ನಿರಾಸೆಗೊಂಡಿದ್ದ ಅವಳು ಕತೆಯೆಂದೊಡನೆ ಉತ್ಸಾಹದಿಂದ ಪುಲಕಿತಳಾದಳು. ಕತೆ ಕೇಳುವುದರ ಮಟ್ಟಿಗೆ ಆಕೆ ಬೆಳೆದ ಮಗುವೆ ಆಗಿದ್ದಳು.

ಚಾತುರ್ಯ ಅತ್ಯಂತ ಚಾಣಾಕ್ಷತನದಿಂದ ಅವಳ ವಯಸ್ಸಿಗೆ ತಕ್ಕಂಥ ಕತೆಯನ್ನೇ ಆಯ್ದುಕೊಂಡನು.

ಅಲಕಪುರಿಯ ಅರಸನಾದ ಅಲಕೇಶನಿಗೆ ಮದುವೆಯಾದ ಅನೇಕ ವರುಷಗಳ ನಂತರ ಪುತ್ರ ಸಂತಾನವಾಯಿತು. ಸಂತಾನ ಪ್ರಾಪ್ತಿಯಿಂದ ತಂದೆ-ತಾಯಿಗಳ ಮೇಲೆ ಏನಾದರೂ ಪರಿಣಾಮವಾಗುವುದೋ ನನಗಂತೂ ತಿಳಿಯದು. ಆದರೆ ಅಲಕೇಶನ ವಿಷಯದಲ್ಲಿ ಮಾತ್ರ ಹಾಗಾಯಿತು. ಅವನ ಮಗನು ಮೂರು ವರುಷದವನಾಗುವುದರೊಳಗೆ ಅಲಕೇಶ ಮರಣ ಹೊಂದಿದನು. ಆಗ ಚಿಕ್ಕ ಬಾಲಕನ ಪರವಾಗಿ ಅಲಕೇಶನ ತಮ್ಮನು ರಾಜ್ಯ ಸೂತ್ರಗಳನ್ನು ವಹಿಸಿಕೊಂಡು ರಾಜ್ಯಭಾರ ನಡೆಯಿಸಲಾರಂಭಿಸಿದನು. ಆದರೆ ನಂತರ ಕೆಲ ದಿನಗಳಲ್ಲಿಯೇ ಅವನು ರಾಜಕುಮಾರನನ್ನೂ ಅವನ ತಾಯಿಯನ್ನೂ ಅರಮನೆಯಿಂದ ಹೊರಗಟ್ಟಿ ಸಿಂಹಾಸನವನ್ನು ತಾನೇ ಆಕ್ರಮಿಸಿದನು.

ಇಂತು ಹೊರದೂಡಲ್ಪಟ್ಟ ತಾಯಿ-ಮಕ್ಕಳಿಗೆ ಭಿಕ್ಷೆಯೇ ಜೀವನಾಧಾರವಾಗಿ ಪರಿಣಮಿಸಿತು. ಹೀಗೆಯೇ ಕೆಲ ವರುಷಗಳು ಕಳೆದ ನಂತರ ತಾಯಿಗೆ ಮಗನ ಭವಿಷ್ಯತ್ತಿನ ಬಗ್ಗೆ ಚಿಂತೆಯಾಯಿತು. ಅವನಿಗೆ ಒಂದೇನಾದರೂ ದಾರಿ ಮಾಡಿ ಕೊಡಬೇಕೆಂದು ಅವಳು ತನ್ನ ತವರುಮನೆಗೆ ಹೋಗಿ ಅಲ್ಲಿಂದ ಒಂದು ನೂರು ಮೊಹರುಗಳನ್ನು ಸಾಲವಾಗಿ ಪಡೆದುಕೊಳ್ಳುವಲ್ಲಿ ಸಫಲಳಾದಳು. ಅನಂತರ ತನ್ನ ಮಗನನ್ನು ಕರೆದು ಅಷ್ಟನ್ನೂ ಅವನ ಕೈಗಿತ್ತು "ನಾವು ಈ ರೀತಿ ಪರೋಪಜೀವಿಗಳಾಗಿರುವುದು ಸರಿಯಲ್ಲ. ಇಂದಲ್ಲ ನಾಳೆ ಅವರು ನಮ್ಮ ಬಗ್ಗೆ ಬೇಸರಪಟ್ಟುಕೊಂಡರೆ ನಮಗೆ ಮುಂದೆ ಮಾರ್ಗವೇ ಇಲ್ಲದಂತಾಗುವುದು. ಆದ್ದರಿಂದ ನಾನು ತಂದಿರುವ ಈ ಹಣವನ್ನು ಪಡೆದುಕೊಂಡು ಇದರಿಂದ ಏನಾದರೂ ವ್ಯಾಪಾರವನ್ನು ಪ್ರಾರಂಭಿಸು. ವ್ಯಾಪಾರ ಬೆಳೆದರೆ ನಾವು ಮರ್ಯಾದೆವಂತರಾಗಿ ಬಾಳಬಹುದು" ಎಂದು ಉಪದೇಶ ಮಾಡಿದಳು.

"ಹೌದಮ್ಮಾ ನೀನು ಹೇಳುವುದು ಸರಿ. ಇಂದೇ ನಾನು ವ್ಯಾಪಾರ ಪ್ರಾರಂಭಿಸುತ್ತೇನೆ" ಎಂದು ಹೇಳಿ ವ್ಯಾಪಾರಕ್ಕಾಗಿ ಮಾಲು ಖರೀದಿ ಮಾಡಲು ನೆರೆಯೂರಿಗೆ ಹೊರಟನು.

ಅವನು ಅರ್ಧ ದಾರಿ ಕ್ರಮಿಸಿದಾಗ ಎದುರಿಗೆ ಹಳ್ಳಿಗನೊಬ್ಬ ತಲೆಯ ಮೇಲೆ ಚೀಲವೊಂದನ್ನು ಹೊತ್ತುಕೊಂಡು ಬಂದನು.

ಬಡವನಾದ ಆ ಹಳ್ಳಿಗನ ಸಂಸಾರ ದೊಡ್ಡದಿತ್ತು. ಆದರೂ ಪ್ರಯತ್ನಪಟ್ಟು ಮಕ್ಕಳಿಗೆಂದು ಹಾಲು ತಂದಿರುತ್ತಿದ್ದ. ಆದರೆ ಮನೆಯಲ್ಲಿ ಅವನು ಸಾಕಿದ್ದ ಬೆಕ್ಕಿಗೆ ಆರು ಮರಿಗಳಾಗಿದ್ದವು. ಅವೆಲ್ಲಾ ಹಾಲು ಕುಡಿದುಬಿಟ್ಟು ತೊಂದರೆ ಕೊಡುತ್ತಿದ್ದವು. ಅಂತೆಯೇ ಅವನ್ನೆಲ್ಲಾ ದೂರ ಅಡವಿಯಲ್ಲಿ ಒಯ್ದು ಬಿಟ್ಟುಬರಬೇಕೆಂದು ಅವನು ಚೀಲದಲ್ಲಿ ಅವನ್ನಿರಿಸಿಕೊಂಡು ನಡೆದಿದ್ದನು.

ಅದನ್ನು ಕಂಡ ಈ ರಾಜಕುಮಾರ "ನಿಮ್ಮ ತಲೆಯ ಮೇಲಿನ ಚೀಲದಲ್ಲಿರುವುದು ಏನು ಸ್ವಾಮಿ?" ಎಂದು ಕೇಳಿದನು.

"ಅವು ಬೆಕ್ಕಿನ ಮರಿಗಳು"

"ಅವನ್ನೇನಾದರೂ ಮಾರುವವರಿದ್ದೀರೋ?"

ಈ ಯುವಕನ ಮೂರ್ಖತನದ ಪ್ರಶ್ನೆ ಕೇಳಿ ಹಳ್ಳಿಗನಿಗೆ ಮೋಜೆನಿಸಿತು. "ಹೌದು, ಒಂದೊಂದು ಬೆಕ್ಕಿನ ಮರಿಗೂ ಐದುನೂರು ಮೊಹರುಗಳಾಗುತ್ತವೆ" ಎಂದು ನಗುತ್ತಾ ನುಡಿದನು.

"ಆದರೆ ನನ್ನಲ್ಲಿರುವುದು ಒಂದು ನೂರು ಮೊಹರುಗಳು ಮಾತ್ರ. ನನಗಾಗಿ ಅಷ್ಟಕ್ಕೆಯೇ ದಯವಿಟ್ಟು ಕೊಡುವಿರಾ?"

ಈ ಮಾತು ಕೇಳಿ ಹಳ್ಳಿಗನಿಗ ಈ ಬಾಲಕನ ಬಗ್ಗೆ ಮರುಕವೆನಿಸಿತು. ಆದರೂ ಚೇಷ್ಟೆಯಿಂದ ಅವನು "ನಿನ್ನ ಸಲುವಾಗಿ ನಾನು ಅಷ್ಟಕ್ಕೆಯೇ ಕೊಡಬಹುದು. ಆದರೆ ಹಣವೆಲ್ಲಿದೆ?" ಎಂದು ಕೇಳಿದನು.

ರಾಜಕುಮಾರನು ಹಣದ ಥೈಲಿಯನ್ನು ಕೈಯಲ್ಲಿ ಹಿಡಿದು ಝಣತ್ಕರಿಸಿದನು.

ಹಣವನ್ನು ಕಂಡ ಹಳ್ಳಿಗನ ಪ್ರಾಮಾಣಿಕತನವೆಲ್ಲಾ ಅರೆಕ್ಷಣದಲ್ಲಿ ಮಾಯವಾಯಿತು. ಅದೇ ಸದವಕಾಶವೆಂದುಕೊಂಡ ಅವನು ತನ್ನ ಚೀಲವನ್ನು ರಾಜಕುಮಾರನೆದುರಿಟ್ಟು ಅವನಿಂದ ಹಣ ಪಡೆದುಕೊಂಡು ಮನೆಯೆಡೆಗೆ ಆನಂದದಿಂದ ನಡೆದನು.

ಆದರೆ ಚೀಲವನ್ನು ಕೆಳಗಿರಿಸಿದೊಡನೆಯೇ ಅದರೊಳಗಿನ ಮರಿಗಳೆಲ್ಲಾ ಓಡಿಹೋದವಾದರೂ ಒಂದು ಮಾತ್ರ ತಪ್ಪಿಸಿಕೊಳ್ಳಲಾರದೆ ಚೀಲದಲ್ಲಿಯೇ ಉಳಿಯಿತು. ಆಗ ರಾಜಕುಮಾರ ಹಳ್ಳಿಗನನ್ನು ಕರೆದು ಆ ಬಗ್ಗೆ ಕೇಳಿದನು.

"ಇಲ್ಲ, ನಿನಗೆ ಒಂದು ಮರಿ ಒಂದು ನೂರು ವರಹಗಳೆಂದು ಹೇಳಿದ್ದೆ" ಎಂದು ಆ ಹಳ್ಳಿಗ ಹೇಳಿ ರಾಜಕುಮಾರನನ್ನು ಸಮಾಧಾನಪಡಿಸಿದನು.

ತನ್ನ ಮೊದಲ ವ್ಯಾಪಾರದಿಂದ ರಾಜಕುಮಾರನಿಗೆ ಅತ್ಯಾನಂದವಾಗಿತ್ತು. ಹೆಮ್ಮೆಯಿಂದ ಅದನ್ನು ಮನೆಗೆ ತಂದನು. ತಾಯಿಯೆದುರಿಗೆ ಚೀಲವನ್ನಿರಿಸಿ ಭಕ್ತಿಯಿಂದ ಸಾಷ್ಟಾಂಗವೆರಗಿ ತನ್ನ ವ್ಯಾಪಾರದ ಕುರಿತು ಹೇಳಿದನು.

ನೂರು ಮೊಹರುಗಳನ್ನಿತ್ತು ಒಂದು ಬೆಕ್ಕಿನ ಮರಿಯನ್ನು ಕೊಂಡು ತಂದ ಮಗನ ಬುದ್ಧಿವಂತಿಕೆಯನ್ನು ಕಂಡು ಅವಳು "ಅಯ್ಯೋ ದೇವಾ!" ಎಂದು ಕೈ ಹೊತ್ತು ಕುಳಿತಳು.

★——(ಮುಂದಿನ ಸಂಚಿಕೆ ನೋಡಿ)——★

ಶಾಸ್ತ್ರೀಜಿಯ ಔದಾರ್ಯ

ಆಗ ಶಾಸ್ತ್ರೀಜಿ ಕೇಂದ್ರ ಸರ್ಕಾರದ ಮಂತ್ರಿಯಾಗಿದ್ದರು. ಒಂದು ಸಲ ವಿರೋಧ ಪಕ್ಷದವರು "ಕೇಂದ್ರ ಮಂತ್ರಿಮಂಡಲದಲ್ಲಿರುವ ಮಂತ್ರಿಗಳು ವಿದ್ಯುತ್ ಮತ್ತು ನೀರನ್ನು ಬೇಕಾಬಿಟ್ಟಿಯಾಗಿ ಖರ್ಚು ಮಾಡುತ್ತಾರೆ. ಏಕೆಂದರೆ ಅದರ ಬಿಲ್ಲನ್ನು ತಮ್ಮ ಜೇಬಿನಿಂದ ಕೊಡುವುದಿಲ್ಲ" ಎಂಬ ಆಕ್ಷೇಪವನ್ನೆತ್ತಿದರು. ಅವರ ಈ ವಾದ ಶಾಸ್ತ್ರೀಜಿಗೆ ಸರಿ ಎನಿಸಿತು. ಆಗ ಅವರು, "ನನ್ನ ನಿವಾಸದ ನೀರು ಮತ್ತು ವಿದ್ಯುತ್ತಿನ ಬಿಲ್ಲು ೨೫೦ ರೂಪಾಯಿಗಳನ್ನು ಮೀರಿದರೆ ಹೆಚ್ಚುವರಿಯಾದ ಹಣವನ್ನು ನಾನು ಸ್ವತಃ ನೀಡುತ್ತೇನೆ", ಎಂಬ ಹೇಳಿಕೆಯನ್ನು ನೀಡಿದರು. ದೆಹಲಿಯ ಒಂದು ಪತ್ರಿಕೆ ಈ ನಿರ್ಣಯವನ್ನು ಪ್ರಶಂಸಿಸಿ ಒಂದು ವರದಿಯನ್ನು ಪ್ರಕಟಿಸಿತು.

ಇದಾದ ಎರಡು ಮೂರು ದಿವಸಗಳ ನಂತರ ಒಂದು ವರದಿಗಾರರ ಕೂಟದಲ್ಲಿ ಶಾಸ್ತ್ರೀಜಿಗೆ ಆ ಪತ್ರಿಕೆಯ ಸಂಪಾದಕರು ಸಿಕ್ಕಾಗ "ತಮ್ಮಿಂದ ನಾನು ಇಂಥದ್ದನ್ನು ನಿರೀಕ್ಷಿಸಿರಲಿಲ್ಲ" ಎಂದು ಹೇಳಿದರು. ಅದನ್ನು ಕೇಳಿ ಸಂಪಾದಕರು ತಮ್ಮಿಂದ ಏನು ಅಚಾತುರ್ಯ ಸಂಭವಿಸಿತೋ ಎಂದು ಗಲಿಬಿಲಿಗೊಂಡರು. ಆಗ ಶಾಸ್ತ್ರೀಯವರೇ ಮುಂದುವರೆದು ಹೇಳಿದರು; "ನೀರು ಹಾಗೂ ವಿದ್ಯುತ್ತಿನ ಬಿಲ್ಲಿನ ಬಗ್ಗೆ ನಾನು ಹೇಳಿರುವುದನ್ನು ನೀವು ತುಂಬ ಹೊಗಳಿ ಬರೆದಿದ್ದೀರಿ. ವಿರೋಧ ಪಕ್ಷದವರು ಈ ವಿಷಯವನ್ನು ನನ್ನ ಗಮನಕ್ಕೆ ತರುವ ಮೊದಲು ಅದು ನನಗೆ ಹೊಳೆಯಲೇ ಇಲ್ಲ. ಹಾಗೆ ನೋಡಿದರೆ ಈ ನಿರ್ಣಯವನ್ನು ನಾನು ಮೊದಲೇ ಕೈಕೊಳ್ಳಬೇಕಾಗಿತ್ತು. ಆಶ್ಚರ್ಯದ ವಿಷಯವೆಂದರೆ ಭಾರತದಂಥ ಬಡದೇಶದಲ್ಲಿ ಮಂತ್ರಿಗಳು ಮಾಡುವ ತಪ್ಪಿಗೂ ಪ್ರಶಂಸೆ ದೊರೆಯುತ್ತದೆ".

ಈಗೆಲ್ಲಿ ದೊರೆತಾರೂ ಇಂತಹ ನಿಃಸ್ವಾರ್ಥಿ ಮಂತ್ರಿಗಳು?

ಸಂಗ್ರಹ: ಮುರಳೀಧರ ಕುಲಕರ್ಣಿ

ಚಿಂತೆಯಿಂದ ವಿಮುಕ್ತಿ ಹೇಗೆ ಸಾಧ್ಯ?

● ಸೋನಿ

ಚಿತೆ ಮತ್ತು ಚಿಂತೆಗಳ ನಡುವೆ ಒಂದು ಸೊನ್ನೆ ಮಾತ್ರದ ವ್ಯತ್ಯಾಸ. ಚಿತೆ ಹೆಣವನ್ನು ಸುಟ್ಟರೆ ಚಿಂತೆ ಜೀವಂತ ಮನುಷ್ಯನನ್ನೇ ಸುಡುವುದೆಂದು ಹಿರಿಯರು ಹೇಳುತ್ತಾರೆ. ಕೆಲವರಿಗೆ ಚಿಂತಾಸಕ್ತರಾಗಿರುವುದೇ ಒಂದು ಸ್ವಭಾವ. ಅದಕ್ಕೆ ನಿಶ್ಚಯಾತ್ಮಕ ಬುದ್ಧಿಯಿಲ್ಲದುದೇ ಕಾರಣ. ಅಂಥವನು ಮಾಡ ಹೋದ ಕೆಲಸಗಳೆಲ್ಲವೂ ಹಾಳೇ. ಒಂದನ್ನು ಮಾಡ ಹೋದರೆ ಒಂಬತ್ತಾಗುತ್ತದೆ, ಒಂದರಿಂದ ಒಂದು ತಪ್ಪೇ ಆಗುತ್ತ ಹೋಗುತ್ತದೆ. ಇದು ಅನೇಕರ ಅನುಭವದಲ್ಲಿ ಬಂದಿರತಕ್ಕದ್ದೇ ಆಗಿದೆ. ಕೆಳಗಿನ ೨೦ ಪ್ರಶ್ನೆಗಳಿಗೆ ಪ್ರಾಮಾಣಿಕವಾಗಿ ಉತ್ತರಗಳನ್ನು ಕೊಟ್ಟು ಕೊಂಡು ನಿಮಗೆ ಚಿಂತಾರೋಗವಿದೆಯೊ ಇಲ್ಲವೋ ಎಂಬುದನ್ನು ಪರೀಕ್ಷಿಸಿಕೊಳ್ಳಬಹುದು.

ನಿಮ್ಮನ್ನು ನೀವೇ ನೋಡಿಕೊಳ್ಳಿ

೧. ನಿಮಗೆ ಉಗುರು ತಿನ್ನುವ ಅಭ್ಯಾಸವಿದೆಯೆ?

೨. ನೀವು ಪದೇ ಪದೇ ಖಿನ್ನರಾಗುತ್ತೀರಾ?

೩. ನಿಮ್ಮ ಕೈಕಾಲುಗಳು ಬೆವರುವವೊ?

೪. ನಿಮಗೆ ಒಮ್ಮಿಂದೊಮ್ಮೆಲೆ ಚಿತ್ತವೃತ್ತಿ ಪರಿವರ್ತನವಾಗುವುದು ಕಂಡುಬಂದಿದೆಯೊ?

೫. ಬಾಗಿಲು ಮುಚ್ಚಿದ ಕೋಣೆಯಲ್ಲಿರಲು ನಿಮಗೆ ಅಸುಖವಾಗುವುದೊ?

೬. ರಾತ್ರಿ ಸ್ವಪ್ನಗಳು ಬೀಳುವುವೊ?

೭. ನಿಮ್ಮ ಸಂಬಂಧಿಕರು ದುರ್ವಾಕ್ಯರೆನಿಸುವುರೋ?

೮. ಗುಡುಗು ಇಲ್ಲವೆ ಮಿಂಚುಗಳಿಗೆ ಹೆದರುವಿರೇನು?

೯. ನಿಮಗೆ ಬೇಗ ಆಯಾಸವಾಗುವುದೆ?

೧೦. ಕೆಲವು ಪದಾರ್ಥಗಳು ಕಾರಣವಿಲ್ಲದೇ ನಿಮಗೆ ಸೇರದಿರುವುದುಂಟೊ?

೧೧. ಎತ್ತರದ ಸ್ಥಳ ನಿಮ್ಮನ್ನಂಜಿಸುವುದೊ?

೧೨. ಯಾವುದಾದರೊಂದು ನಿರ್ಧಾರಕ್ಕೆ ಬರಲು ಬಹು ಕಷ್ಟವಾಗುವುದೆ?

೧೩. ಅಪರಿಚಿತರೊಡನೆ ನಿಮಗೆ ಹಿತವೆನಿಸದೆ?

೧೪. ನಿಮಗೆ ಬಹುಬೇಗ ಅಳುಬರುವುದೆ?

೧೫. ನಿಮಗೆ ಪದೇ ಪದೇ ತಲೆನೋವು ಬರುವುದೆ?

೧೬. ಆಕಸ್ಮಿಕ ಸೂಚನೆಗಳು ನಿಮ್ಮನ್ನು ಅಡ್ಡದಾರಿಗೊಯ್ಯುವುವೆ?

೧೭. ಯಾರಾದರೂ ದೂಷಿಸಿದರೆ ನಿಮಗೆ ಬಹಳ ವ್ಯಥೆಯಾಗುವುದೆ?

೧೮. ನಿದ್ದೆ ಬೇಗ ಬರುವುದಿಲ್ಲವೇನು?

೧೯. ಜನರು ನಿಮ್ಮ ವಿಷಯಗಳನ್ನೆಲ್ಲ ಮೊದಲೇ ತಿಳಿದಿರುವರೆಂಬ ಸಂಶಯವಿರುವುದೇನು?

೨೦. ಕತ್ತಲೆಯೆಂದರೆ ನಿಮಗೆ ಹೆದರಿಕೆಯೇ?

ಮೇಲಿನ ಪ್ರಶ್ನೆಗಳಿಗೆ ನೀವು ಪ್ರಾಮಾಣಿಕವಾಗಿ ಉತ್ತರಿಸುತ್ತಾ ಹೋಗಿ 'ಅಹುದು' ಎಂಬವುಗಳೆಷ್ಟೆಂದು ಲೆಕ್ಕಹಾಕಿರಿ. ಅವು ೫ಕ್ಕಿಂತ ಕಡಿಮೆಯಾದರೆ ನೀವು ಚಿಂತಾಸಕ್ತರಲ್ಲವೆಂದೇ ಹೇಳಬಹುದು, ೬ ರಿಂದ ೧೦ರ ವರೆಗೆ - ನೀವು ಸಾಮಾನ್ಯ ಚಿಂತಾಕುಲರು, ೧೧ ರಿಂದ ೧೫ರವರೆಗೆ - ನೀವು ಚಿಂತಾಮಗ್ನರು. ಕೂಡಲೇ ಚಿಂತಾಮಗ್ನತೆಯನ್ನು ದಮನ ಮಾಡಲು ಪ್ರಾರಂಭಿಸಬೇಕೆಂದು ಡಾ.

ಗಿಬ್ಬರ್‌ಸನ್ನರ ಸಲಹೆ. 'ಅಹುದು'ಗಳು ೧೬ಕ್ಕೂ ಮಿಕ್ಕಿದರೆ ನಿಮ್ಮ ಮನಸ್ಸನ್ನು ಸಮಾಧಾನಪಡಿಸಲು ಅನ್ಯರ ಸಹಾಯ ಬೇಕಾಗಬಹುದು.

ದಶನಿಯಮಗಳು

ಚಿಂತಾ ಪರಿಹಾರಕ್ಕೆ ಚಿಂತಾಕುಲರು ಕೆಳಗೆ ಕೊಟ್ಟಿರುವ ದಶನಿಯಮಗಳನ್ನು ಪಾಲಿಸುವುದು ಆರೋಗ್ಯಕರ.

೧. ಬುದ್ಧಿವಂತಿಕೆಯಿಂದ ಬಾಳುವುದು. ಬೇಕಾದಷ್ಟು ವಿಶ್ರಾಂತಿ, ಸರಿಯಾದ ಆಹಾರ, ಆಟ ಪಾಠಾದಿ ವಿನೋದಗಳನ್ನು ತೆಗೆದುಕೊಳ್ಳಬೇಕು. ದೇಹಾರೋಗ್ಯ ಮನಸ್ಸಿನ ಆರೋಗ್ಯಕ್ಕೆ ಕಾರಣ.

೨. ಜೀವನದಲ್ಲಿ ಒಂದು ಧ್ಯೇಯವನ್ನಿಟ್ಟುಕೊಳ್ಳತಕ್ಕದ್ದು. ಆ ಧ್ಯೇಯವು ಸಂಪೂರ್ಣ ಸ್ವಾರ್ಥಕ್ಕಾಗಿ ಇರದೆ ಸಹಜೀವಿಗಳ ಹಿತಕ್ಕಾಗಿಯೂ ಇರುವ ತತ್ವಕ್ಕೆ ಅನುಗುಣವಾಗಿರಬೇಕು.

೩. ಪರಿಸ್ಥಿತಿಯನ್ನು ಇದ್ದಹಾಗೆ ಸ್ವೀಕರಿಸತಕ್ಕದ್ದು. ಮನಸ್ಸಿಗೆ ಬರಲಿಲ್ಲವೆಂದು ಗೊಂದಲವೆಬ್ಬಿಸಕೂಡದು.

೪. ಯಾವ ಯಾವುದರ ಬೆಲೆ ಎಷ್ಟೆಂದು ನಿರ್ಣಯಿಸುವ ಬುದ್ಧಿಯನ್ನು ಬೆಳೆಸಿಕೊಳ್ಳಬೇಕು. ಚಿಲ್ಲರೆ ಸಂಗತಿಗಳು ಮನಸ್ಸಿನ ಮೇಲೆ ಪರಿಣಾಮ ಮಾಡದಂತೆ ನೋಡಿಕೊಳ್ಳಬೇಕು. ಯಾವುದಾದರೂ ಕೆಟ್ಟುಹೋದರೆ ಅದಕ್ಕಿಂತ ಹೆಚ್ಚಿಗೆ ಕೆಡಲಿಲ್ಲವಲ್ಲಾ ಅಷ್ಟೇ ಒಳ್ಳೆಯದಾಯ್ತು ಎಂದು ಸಮಾಧಾನ ಮಾಡಿಕೊಳ್ಳತಕ್ಕದ್ದು.

೫. ನಗುವನ್ನು ಅಭ್ಯಸಿಸಬೇಕು - ಹಾಸ್ಯಾಸ್ಪದವಾದುದರತ್ತ ಗಮನ ಕೊಡುವುದನ್ನು ಕಲಿಯಬೇಕು. ಇಡಿಯ ಜಗತ್ತಿನ ಭಾರವನ್ನು ಹೊರುತ್ತೇನೆಂಬ ಮನುಷ್ಯನಿಗಿಂತ ಹೆಚ್ಚಿನ ಮರುಳನಿಲ್ಲವೆಂಬುದನ್ನು ನೆನಪಿಗೆ ತಂದುಕೊಳ್ಳತಕ್ಕದ್ದು.

೬. ಮನಸ್ಸನ್ನು ಗಟ್ಟಿ ಮಾಡಬೇಕು - ಬೇಗ ನಿರ್ಧಾರಕ್ಕೆ ಬರಬೇಕು. ಆ ನಿರ್ಣಯಗಳ ಪರಿಣಾಮವನ್ನು ಪೃಥಃಕರಿಸುವುದನ್ನೂ ಅದಕ್ಕಾಗಿ ಪಶ್ಚಾತ್ತಾಪ ಪಡುವುದನ್ನೂ ಬಿಟ್ಟುಬಿಡತಕ್ಕದ್ದು. ಚಿಂತೆಯಿಂದ ಪಾರಾಗುವ ಪ್ರಸಂಗದಲ್ಲಿ ಅನಿರ್ಧಾರಕ್ಕಿಂತ ಕ್ಷುದ್ರ ನಿರ್ಧಾರವಾದರೂ ಲೇಸು.

೭. ವರ್ತಮಾನ ಕಾಲದಲ್ಲಿ ಬಾಳಬೇಕು - ತಾಸುಗಳ ಪರಿಧಿಯಲ್ಲೇ ಆಲೋಚನೆ ತಿರುಗುತ್ತಿರಬೇಕು. ನಿನ್ನೆ ಕಳೆದಿತು. ನಾಳೆ ಬಂದಿಲ್ಲ. ಆದುದರಿಂದ ಇಂದಿಗೆ ಅಂಟಿಕೊಳ್ಳತಕ್ಕದ್ದು.

೮. ಸಡಿಲಿಸಬೇಕು - ಬಾಳನ್ನು. ಅನಾವಶ್ಯಕಗಳನ್ನು ಬಿಡತಕ್ಕದ್ದು. ತ್ವರೆ ಮತ್ತು ಉದ್ವಿಗ್ನತೆ ಯಾವಾಗಲೂ ಒಟ್ಟೊಟ್ಟಾಗಿ ಸಾಗುತ್ತವೆ. "ಸುಮ್ಮನೇ ಕುಳಿತುಕೊಳ್ಳಲು ಬಾರದುದರಿಂದಲೇ ಮನುಷ್ಯನಿಗೆ ಎಲ್ಲ ತೊಂದರೆಗಳೂ ಉಂಟಾಗುವುವು" ಎಂಬ ಪ್ಯಾಸ್ಕಲ್ಲನ ಮಾತನ್ನು ಮರೆಯತಕ್ಕದ್ದಲ್ಲ. ಆದುದರಿಂದ ಬಂದದ್ದೆಲ್ಲ ಬರಲಿ, ಗೋವಿಂದನ ದಯವೊಂದಿರಲಿ ಎಂದುಕೊಂಡು ಹೆಚ್ಚು ಮನಸ್ಸಿಗೆ ಹಚ್ಚಿಕೊಳ್ಳದೆ ಮೈ ಮೇಲೆ ಬಿದ್ದ ಕೆಲಸವನ್ನು ನಿಧಾನವಾಗಿ ಮಾಡಬೇಕು. ಅವಸರಪಡುವುದೇಕೆ?

೯. ಹಾಸ್ಯಗಾರಿಕೆ ಇರತಕ್ಕದ್ದು - ಆಟವಾಡಲು ಅಭ್ಯಸಿಸಬೇಕು. ಬೇಜಾರಾದಾಗ ಏನಾದರೂ ಸಣ್ಣಪುಟ್ಟ ಕೆಲಸಗಳಲ್ಲಿ ಮಗ್ನರಾಗಿ ಅದನ್ನು ಮರೆಯಬೇಕು. ಕೈಕೊಂಡ ಕೆಲಸದಲ್ಲಿ ತೃಪ್ತಿ ಪಡೆಯತಕ್ಕದ್ದು. ಅದರಲ್ಲಿ ಆಸಕ್ತಿ ವಹಿಸಬೇಕು. ಕಾರ್ಯ ತಾನೇ ಆಕರ್ಷಿಸಲೆಂದು ಕಾಯ್ದುಕುಳಿತಿರಬಾರದು.

೧೦. ಉದ್ಯೋಗಶೀಲತೆಯನ್ನು ಒಂದು ಅಭ್ಯಾಸವಾಗಿ ಮಾಡಿಕೊಳ್ಳಬೇಕು - ತೊಂದರೆಗಳು ಉದ್ಭವಿಸಿದಾಗ ಸುಮ್ಮನೆ ಅಳೆಯುತ್ತ ಸುರಿಯುತ್ತ ಕುಳಿತುಕೊಳ್ಳಬಾರದು. ಯಾವುದಾದರೂ ಕಾರ್ಯವನ್ನು ಆರಂಭಿಸತಕ್ಕದ್ದು. ವಿಹಾರಕ್ಕೆ ಹೊರಡಬಹುದು, ಇಲ್ಲವೆ ತೋಟದಲ್ಲಿ ಕೆಲಸ ಮಾಡಬಹುದು, ಚಿಕ್ಕ ಚಿಕ್ಕ ಬಟ್ಟೆಗಳನ್ನು ಒಗೆಯಬಹುದು, ಮರ ಕಡಿಯಬಹುದು, ಏನಾದರೂ ಕೊಳ್ಳಲು ಅಂಗಡಿಗೆ ಹೋಗಬಹುದು.

ಚಿಂತಾಕುಲತೆಯೊಂದು ದುರಭ್ಯಾಸ. ಇತರ ದುರಭ್ಯಾಸಗಳನ್ನು ಹೇಗೋ ಹಾಗೇ ಇದನ್ನಾದರೂ ಸದಭ್ಯಾಸವನ್ನು ಬದಲಿಯಾಗಿ ತಂದು ಸ್ಥಾನಭ್ರಷ್ಟ ಮಾಡಬಹುದು. ಇದನ್ನು ಒಂದು ಸಲ ಗೆದ್ದವರು ಇದು ಏನೆಂದೇ ತಿಳಿಯದವರಿಗಿಂತ ಹೆಚ್ಚು ಸಮರ್ಥರಾಗುತ್ತಾರೆಂದು ಮೇಲೆ ಹೇಳಿದ ಅಮೆರಿಕದ ವೈದ್ಯರ ಅಭಿಪ್ರಾಯ.

ಬೇವಿನ ಕವಲು

● ಕೆ. ರಾಮ ಮೋಹನ್

ಸಾಮಾನ್ಯವಾಗೇ ಮಾಸ್ತರು, ಲಾಯರ್‌ಗಳಿಗೆ ಮಾತು ಹೆಚ್ಚು. ಹಾಗೆಂದು ಆಡಿದ್ದೆಲ್ಲ ಚೆನ್ನಾಗಿಯೆ ಇರುತ್ತೆ ಎಂದೇನಲ್ಲ. ವಾಚಾಳಿಗಳು ಹೌದು, ಆದರೆ ವಾಗ್ಮಿಗಳು ಎಂಬುದು ಸಾರ್ವತ್ರಿಕವಲ್ಲ. ಎಷ್ಟೋ ವೇಳೆ ಮಾತಿನಲ್ಲಿ ಬೇಡದಿದ್ದುದು ಬಹಳ, ತಿಳಿಯ ಬೇಕಾದ್ದು ಅತ್ಯಲ್ಪ, ಹೀಗಿರುತ್ತೆ.

"ಹೇಗಿದ್ದರೇನ್ರಿ, ಮಾತನಾಡುವುದನ್ನು ನಮಗೆ ಕಲಿಸಬೇಕೇ? ದುಡ್ಡು ಕೊಟ್ಟಿದ್ದಾರೆ ಅಂತ ಮಾತಾಡೋರು ನಾವು, ದುಡ್ಡು ಬರಲಿ ಅಂತ ಮಾತಾಡೋರು ಲಾಯರ್‌ಗಳು, ಇಷ್ಟೇ ವ್ಯತ್ಯಾಸ," ಎನ್ನುವರು ಮಾಸ್ತರು. ಇಂತಹ ಧಾರಾಳ ಮಾತಿನಲ್ಲಿ ಅಪದ್ಧ ಅಸಂಗತ, ಅಪ್ರಸ್ತುತ ಕೊನೆಗೆ ಅಪ್ರಬುದ್ಧಗಳು ಎಷ್ಟೋ ತೂರಿಕೊಂಡು ಆಭಾಸ ಆಗುವುದು ವಿರಳವೂ ಅಲ್ಲ ವಿಶೇಷವೂ ಅಲ್ಲ. ಇದರಿಂದಾಗಿ ಎಷ್ಟೋ ಸಲ ಎಡವಟ್ಟು, ನಗೆಪಾಟಲು, ಮುಜುಗರ, ಮನಃಕ್ಲೇಶವಷ್ಟೇ ಅಲ್ಲ, ಮನಸ್ತಾಪವೂ ಬರುವುದುಂಟು.

"ಇಷ್ಟು ಮಾತನಾಡಿದರೆ ವಾಕ್‌ಸಿದ್ಧಿಯಾಗಬಲ್ಲುದೆ? ಮಾತು ಕಡಿಮೆ ಮಾಡಿ" ಎಂದು ಒಬ್ಬರು ಸ್ನೇಹಿತರು, "ಅಯ್ಯೋ ಮಾರಾಯ ನಿನ್ನತ್ರ ಬಂದ್ರೆ ಗಂಟೆಕಾಲ ವೇಸ್ಟ್" ಎಂದು ಮತ್ತೊಬ್ಬರು, "ಭೈರಿಗೆಗಿಂತ ಜೋರಯ್ಯ ನೀನು" ಎಂದು ಮತ್ತೆ ಕೆಲವರು ಅನ್ನುವರು. ಮಾಸ್ತರಿಗೆ ಇದೂ ಹೆಮ್ಮೆಯ ಪ್ರಶಂಸೆ, ಮುಖ ಉಬ್ಬಿಸಲು. ಅಂತರಂಗದಲ್ಲಿ ಅವರಿಗೇ ಈ ಸತ್ಯದ ಅರಿವಿದೆ. "ಏನು ಮಾಡಲಿ, ನನ್ನ ತಲೆಗೂ ಎಲುಬಿಲ್ಲದ ನಾಲಿಗೆಗೂ ನಡುವೆ ಕವಾಟವೇ ಇಲ್ಲ" ಎಂದು ಕೊರಗಿದರೂ, "ಹೌದ್ರೀ, ನಾನು ಖಂಡಿತವಾದಿ, ನಾಜೂಕಾಗಿ" ಸುತ್ತಿ ಬಳಸಿ ಮಾತಾಡಲಾರೆ" ಎಂದು ಜಂಭದಿಂದಲೇ ಹೇಳಿಕೊಳ್ಳುವರು. ಸ್ವಲ್ಪ ಹಾಸ್ಯವನ್ನು ಮೈಗೂಡಿಸಿಕೊಂಡಿದ್ದರೆ, ಅವಸರಪಡದೆ ತಾಳ್ಮೆಯನ್ನು ಒಲಿಸಿಕೊಂಡಿದ್ದರೆ ಆಗ ಮಾತಿಗೂ ಮನುಷ್ಯನಿಗೂ ಬೆಲೆ, ಮಾನ್ಯತೆ ಎಂದು ತಿಳಿದೀತು; ಆದರೆ ಹುಟ್ಟಿನಿಂದ ಬಂದ ಅಭ್ಯಾಸ ಅಷ್ಟು ಸುಲಭದಲ್ಲಿ, ತಕ್ಷಣದಲ್ಲಿ ಹೋದೀತೇ!



ಮನೆಯಲ್ಲೊಂದು ಊಟದ ಏರ್ಪಾಡು. ತುಂಬಾ ಹತ್ತಿರದ ಬಂಧುವನ್ನು ಕರೆದು ಬರಲು ಇನ್ನೂ ಮಾಸ್ತರಾಗದೆ, ಚಿಕ್ಕವರಾಗಿದ್ದ ಇವರನ್ನೇ ಕಳಿಸಿದರು ತಂದೆಯವರು. ಮನೆಯಾಕೆಯೇ

"ಏನೋ, ಇಷ್ಟು ದೂರ ಬಂದೆ, ಮನೆಯಲ್ಲಿ ಎಲ್ಲ ಕ್ಷೇಮವೇ?" ಎಂದು ಮಾತನಾಡಿಸಿದರು. ಕ್ಷೇಮದ ಕಥೆಯಾಯಿತು, ಕರೆಯನ್ನೂ ಕೇಳಿ ಆಯಿತು. "ಆಗಲಿ ಮಗೂ, ನಿಮ್ಮ ಮನೆಗೇನಂತೆ, ಬಂದೇ ಬರ್ತೇವಲ್ಲ" ಎಂದರು. ಆಗ ತಾನೇ ದೊಡ್ಡವರೊಡನೆ ಸರೀಕನಂತೆ ಮಾತನಾಡಲು ಹೊರಟಿದ್ದ ಮಾಸ್ತರಿಗೆ ಈಗ ಬಂತು ಹೆಚ್ಚುಗಾರಿಕೆಯ ಅವಕಾಶ.

'ನೀವು ಆಪ್ತರು, ಮನೆಯವರೇ ಆಗಿದ್ದೀರಿ, ನಾನೇನು ಉಪಚಾರ ಹೇಳಲಿ' ಹಾಗೆ ನೀವು ನಿರೀಕ್ಷಿಸುವವರೂ ಅಲ್ಲ ಎಂಬ ತಾತ್ಪರ್ಯ. ಆಡಿದ್ದು ಮಾತ್ರ, "ಅಲ್ವೆ, ನಮಗೆ ಹತ್ತಿರದವರಾಗಿರುವುದರಿಂದಲೇ ಕರೆಯದೇ ನೀವು ಬರುತ್ತೀರಿ. ಕರ್ತವ್ಯವಾಗಿ ನಾವು ಕರೆಯುತ್ತೀವಿ". ಆ ದಿನದಿಂದ ಆಕೆಯಾಗಲಿ, ಮಕ್ಕಳಾಗಲಿ, ಒಮ್ಮೆಯಾದರೂ ಮನೆಯ ಕಡೆ ಸುಳಿದರೆ ಕೇಳಿ.

ಅಣ್ಣ ಬರುತ್ತಾರೆಂದು ರೇಲ್ವೆ ಸ್ಟೇಷನ್‌ಗೆ ಹೋಗಿದ್ದರು ಮಾಸ್ತರು. ಮಾರ್ಗಮಧ್ಯದ ಸಾಮಾನ್ಯ ನಿಲ್ದಾಣ. ಪರಿಚಯದ ಬಳಗವೇ ಸೇರಿತು. ಪ್ಲಾಟ್‌ಫಾರಂ ಟಿಕೆಟ್ ತಂದವನು ಶಿಷ್ಯ. ಹೊರಗೆ ಬರುವಾಗ ಒಂದು ಟಿಕೆಟ್ ಕಡಿಮೆ ಎಂದು ಟಿಕೆಟ್ ಕಲೆಕ್ಟರ್ ಹಿಡಿದ. ಮಾಸ್ತರು ಎಣಿಸಿದರು. ಹೆಚ್ಚಾಗಿ ಉಳಿದವರು ತಮ್ಮ ನೆಂಟನೇ. ಗಡಿಬಿಡಿಯ ಮಾಸ್ತರು ತಟ್ಟನೇ, "ಅವರನ್ನೇ ಕೇಳಿ", ಎಂದು ನಡೆದರು. ತಮ್ಮ ಅವಿವೇಕ, ಹೇಡಿತನದ ಅರಿವಾಗಿ ಹಿಂದೆ ಬಂದು ಸ್ಟೇಷನ್ ಮಾಸ್ತರನ್ನೋ ಮತ್ತೊಬ್ಬರನ್ನೋ ಗೋಗರೆಯುವಷ್ಟರಲ್ಲಿ ನೆಂಟನಾಗಲೇ ಹೊರಗೆ ಬಂದಿದ್ದ ಆದರೆ ಈ ಕಳಂಕ ಮಾತ್ರ





ನುಡಿದರೆ ಮುತ್ತಿನ ಹಾರದಂತಿರಬೇಕೆಂದರು ಬಸವಣ್ಣ. ಆದರೆ ಈ ಮಾಸ್ತರರ ಮಾತೆಂದರೆ ಮುಳ್ಳಿನ ಹಾರ!

ಮಾಸ್ತರ ಹೃದಯಕ್ಕೆ ಅಳಿಸಲಾರದಂತೆ ಕೀಳಲಾರ ದಂತೆ ಮೆತ್ತಿತು.

ನಿವೃತ್ತಿ ಹತ್ತಿರವಾಗಿ ಮೀಸೆ ಬೆಳ್ಳಗಾದಾಗ ಮಾತಿನ ಸ್ವಚ್ಛಂದಕ್ಕೆ ಮತ್ತೊಂದು ಆಯಾಮವೇ ದೊರೆಯಿತು. ವಯಸ್ಸಿನಲ್ಲಿ ಚಿಕ್ಕವರಾದರೆ ಮಾತು ಏಕವಚನದಲ್ಲೇ. ದೇವಸ್ಥಾನವಾದರೂ ಸರಿಯೇ, ಸಭೆಯಾದರೂ ಸರಿಯೆ, ಮಾತಿನ ಕಡೆ ಒಲವು ಹರಿಯಿತೆಂದರೆ ಮಾಸ್ತರಿಗೆ ಸುತ್ತಲಿನ ಸನ್ನಿವೇಶ, ಜನ ಎಲ್ಲಾ ಮರೆಯಾದೀತು. ಉತ್ಸಾಹ ಮೀರಿದಾಗ



ಭಾಷಣಕಾರರನ್ನೂ ದಾಟಿ ತಮ್ಮದೇ ಮೆಚ್ಚುಗೆ, ಟೀಕೆ, ವ್ಯಾಖ್ಯಾನ ಮಾಡುವರು. ಒಮ್ಮೆ ಗದಾಯುದ್ಧ ಭಾಗದ ವಿವರಣೆ ನಡೆಯುತ್ತಿತ್ತು. ಇದನ್ನು ರನ್ನ ಹೇಗೆ ಬರೆದಿದ್ದಾನೇಂತೀರಿ, ನಮಗೆ ಕಾಲೇಜಿನಲ್ಲಿ ತ್ರಪ್ಪಾ. (ಅದಕ್ಕೇ ಅಲ್ವೇ ಅವರಿಗೆ ಗೊತ್ತಿದ್ದದ್ದು) ಎಂದು ಸಣ್ಣ ಉಪನ್ಯಾಸವನ್ನೇ ಪ್ರಾರಂಭಿಸಿದರು. ಇನ್ನು ಭಾಷಣವನ್ನು ಕೇಳುವುದೆಂತು? ಅದರ ಪರಿವೆ ಮಾಸ್ತರಿಗೆ ಇರಬೇಕಲ್ಲ. ಪಕ್ಕದವರು ಮುಖ ತಿರುವಿದರೂ, ಮೂತಿ ತಿರುವಿದರೂ ತಿಳಿಯುವಂ ತಿಲ್ಲ.

ಪರಿಚಯದ ಹಿರಿಯರು ಸಿಕ್ಕಿದರೆ, "ಏನು, ಯಾವಾಗ ನಿಮ್ಮ ನಿವೃತ್ತಿ?" ಎಂದು ಶುರು. "ಈಗೆಲ್ಲ ಪಿಂಚಣಿ ನಿಯಮಾವಳಿ ಅನುಕೂಲವಾಗಿದೇಂದ್ರೆ, ಬೇಗ ನಿವೃತ್ತರಾದರೆ ಸೌಲಭ್ಯ ಜಾಸ್ತಿ ಏನಂತೀರಿ?" ಎನ್ನುವರು. ಒಬ್ಬರಂತೂ ಬೇಸರದಿಂದ, "ನಾಳೇನೇ ನಿವೃತ್ತನಾಗ್ತೀನಿ. ಆದರೆ ಸರ್ಕಾರ ಇನ್ನೂ ಹತ್ತು ವರ್ಷ ಇರ್ಬೇಕೂಂತ ಹೇಳ್ತಿದಾರೆ," ಎಂದು ಮುಖ ಉದ್ದಮಾಡಿದರು. "ಅರೆ, ಅದೇನು ಹಾಗೆ, ಅದ್ಯಾರ್ರಿ, ಸರ್ಕಾರದಲ್ಲಿ ಹಾಗೆ ಮಾಡೋನು?" ಎಂದು ಮಾಸ್ತರು ಕೂಗಿದರು. "ಹೌದು ಸ್ವಾಮಿ, ನನ್ನ ಕೂದಲು ಬೆಳ್ಳಗಾದರೂ ನಿವೃತ್ತಿಯ ತಾರೀಖಿಗೆ ಹತ್ತು ವರ್ಷ ಉಳಿದಿದೆಯಲ್ಲ", ಎಂದಾಗ ಮಾಸ್ತರು ತಡವರಿಸಿ, ಹೇಗೋ ಸಾವರಿಸಿ, "ಅಲ್ವೇ ಮತ್ತೆ, ನಿಮ್ಮಂಥ ನಿಸ್ಪೃಹರೂ ಇರಬೇಕ್ರೀ, ಎಲ್ಲಾ ಮುಠ್ಠಾಳರ ಕೊಂಪೆ, ನೋಡಿ." ಹೀಗೆಯೇ ಎಂತದೋ ವರಸೆ ತೆಗೆದಾರು.

ಸಣ್ಣ ಪ್ರಾಯದ ಯುವತಿ ಬಂದಳೋ, "ಏನಮ್ಮಾ ಹೇಗಿದ್ದೀ?" ಎಂದು ಪ್ರಾರಂಭ. ಕೊರಳಲ್ಲಿ ಕರಿಮಣಿ ಕಂಡಿತೋ, "ಯಾವಾಗ ಮದುವೆಯಾಯಿತು, ನಮಗೆ ಸಿಹಿ ಬರಲಿಲ್ಲವೇ?" ಎನ್ನುವರು. ಅದೇ ಹುಡುಗಿ ಕೆಲವು ತಿಂಗಳ ನಂತರ ಸಿಕ್ಕಿದರೆ, "ಏನು ಎಷ್ಟು ತಿಂಗಳು, ಸಮಾಚಾರ ಏನೂ ಇಲ್ವೇ, ಯಾಕೆ?"ಅಂದಾರು. ಹತ್ತು ಜನಗಳ ಮುಂದೆ ಹೀಗೆ ಕೇಳಿದರೆ ಆಕೆ ನಾಚಿ ನೀರಾದಾಳು. ಮುಖ ಕೆಂಪಾಗಿ ಸಿಡುಕಿಯಾಳು. ದೂರದಲ್ಲೇ ಇವರನ್ನು ಕಂಡರೆ ಹೆಜ್ಜೆ ತಿರುಗಿಸಿ ಹೊರಟಾಳು. ಸೀರೆ, ಬಟ್ಟೆಯಿಂದ ಒಡವೆಯವರೆಗೂ ಇಂಥದೇ ತನಿಖೆ. "ಹೊಸದರಲ್ಲೂ ಪ್ರೀತಿಯಿಂದ ಹೆಂಡತಿಗೆ ಸೀರೆ ತರಲು ಕೈ ಹಿಡೀತಾರೆಯೇ, ಅಮ್ಮ ಇನ್ನೂ ಎಷ್ಟು ದಿನ ಕೊಡ್ತಾಳಂತೆ, ಮದುವೆ ಮಾಡಿ ಕೊಟ್ಟಮೇಲೂ."

ಗೋದೂಬಾಯಿ ಬೇರೆ ಸಂಸ್ಥೆಯಲ್ಲಿ ಅಧ್ಯಾಪಕಿ; ಎಲ್ಲೋ ಒಮ್ಮೆ ಭೇಟಿ, ಪರಿಚಯ ಅಂದ ಮೇಲೆ ಮುಗೀತು, ಮಾತು ಆಡಿಯೇ ತೀರಬೇಕಲ್ಲ. ಒಮ್ಮೆ ದೇವಸ್ಥಾನಕ್ಕೆ ಬಂದಾಗ ನಾಲ್ಕೇ ದಿನಗಳ ಹಿಂದೆ ಎದ್ದು ಕಾಣುತ್ತಿದ್ದ ಹಳೆ ಮೂರು ಕಾಸಗಲದ ಕುಂಕುಮ ಇಂದಿಲ್ಲದೆ ಹಣೆ ಬೋಳು! ಮಾಸ್ತರಿಗೆ

ವಿವಂಚನೆಯಾಯಿತು. "ಅಯ್ಯೋ ಪಾಪ, ಏನಾಗಿತ್ತೋ", ಎಂದು ಲೊಚಗುಟ್ಟಿಯೇಬಿಟ್ಟರು. ತಬ್ಬಿಬ್ಬಾದ ಗೋದೂಬಾಯಿ ಉತ್ತರ ಕೊಡುವಷ್ಟರಲ್ಲೇ, "ಯಾವತ್ತು? ವಯಸ್ಸಾಗಿತ್ತೆ?" ಎಂದು ಮುಂದಿನ ಸರಣಿ, ತಮಗೆ ಗೊತ್ತಿಲ್ಲದ್ದೇನು ಎಂದು ಮಾಸ್ತರು ಬೀಗಿಕೊಂಡು ಅತ್ತಿತ್ತ ನೋಡುವಾಗ ಆಕೆಗೆ ಅಲ್ಪಸ್ವಲ್ಪ ಅರಿವಾಗಿರಬೇಕು. "ಯಾರಿಗೆ? ನಿಮಗೇ-ಇರಬಹುದು, ಮಾತು ಅರುಳು ಮರುಳಾಗೇ ಇದೆ", ಎಂದು ಮುಖ ಸಿಂಡರಿಸಿದರು. ಪಕ್ಕದವರು ತಿಳಿದು ಎಳೆಯದಿದ್ದರೆ ಮಾಸ್ತರು ಏನಾಡುತ್ತಿದ್ದರೋ, ಮುಖವೇನೋ ಕೆಂಪಾಗಿತ್ತು. ಹೊರಗೆ ಬಂದಾಗ ಸ್ನೇಹಿತರು ವಿಷಯ ಹೇಳಿದಾಗ ತಲೆತಿರುಗಿ ಬೀಳುವಂತಾಗಬೇಕು. "ಅಲ್ರೀ, ಸುಮ್ಮನಿರೋಕ್ಕಾಗದೇ! ಎಲ್ಲ ಅಧಿಕ ಪ್ರಸಂಗದ ಮಾತೇ! ಆಕೆಗೆ ಮದುವೆಯಾಗಿದೆಯೋ ಇಲ್ಲವೋ! ಆಗಿದ್ದರೂ ಕುಂಕುಮ ಕಳಕೊಂಡವರು ಮೂರು ದಿನಕ್ಕೇ ದೇವಸ್ಥಾನಕ್ಕೆ ಬರ್ತಾರೆಯೇ?"

ಹೀಗೆ ಒಂದು ಸಲ ಎಡವಿ ಪೆಟ್ಟು ತಿಂದೆ, ಸರಿ ಮಾಡಿಕೊಂಡೆ, ಎಚ್ಚರ ಬಂದಿದೆ ಎಂದಿಲ್ಲ. ಯಾಕೆಂದರೆ ವಿಷಯ ಅಥವಾ ವ್ಯಕ್ತಿಯ ಪೂರ್ಣ ಪರಿಚಯ ಇರಲೇ ಬೇಕೆಂದಿಲ್ಲ ಮಾತು, ಮಾತಿಗಿಂತ ಬಡಬಡಿಸುವುದು ಮುಖ್ಯ.

ಮಾತನಾಡುವಾಗ ಎದುರಿಗಿದ್ದವನನ್ನು ಕೇಳಿಸಿಕೊಂಡು ಅರ್ಥ ಮಾಡಿಕೊಳ್ಳುವುದಾಗಲೀ ಅವರ ಮನೋಭಾವವನ್ನು ತಿಳಿಯಲಾಗಲಿ ಪ್ರಯತ್ನ ಬಹಳ ವಿರಳ. ಕುರುಡು ಉತ್ಸಾಹವೊಂದೇ ಅವರಿಗಿದ್ದುದು. ಹಿಂದೊಮ್ಮೆ ಮಾಸ್ತರು ಬೀಗರ ಮನೆಗೆ ಹೋಗಿದ್ದರು. ತಂಗಿಯ ಮಗುವನ್ನು ನೋಡಿ ಅವಳ ಯೋಗಕ್ಷೇಮ ತಿಳಿದು ಬರಲು ತಾಯಿ-ತಂದೆಗಳ ಪ್ರತಿನಿಧಿಯಾಗಿ. ಅವಳತ್ತೆ ಒಂದು ಸಂಜೆ ಈ ದೊಡ್ಡವರನ್ನು ಕೇಳಿದರು, ಮಗು ಯಾರ ಹಾಗಿದೇಂತ. "ಮಗು ನೋಡಿ ಎಲ್ಲ ನಿಮ್ಮದೇ ಪಡಿಯಚ್ಚು" ಅನ್ನಬೇಕು "ಇಲ್ಲವೇ ಯಜಮಾನರ ಹಾಗೇ ಅಲ್ವೇ,"ಅನ್ನಬೇಕು. ಅದೂ ಅಲ್ಲದಿದ್ದರೆ "ಮೂಗು ಮಾತ್ರ ತಂದೆಯ ಹಾಗೆ, ಮಿಕ್ಕೆಲ್ಲ ನಿಮ್ಮ ಹಾಗೆ, ಅದರಲ್ಲೂ ತಲೆಕೂದಲಂತೂ ನಿಮ್ಮ ಹಾಗೇ ನವಿರು ರೇಷ್ಮೆ" ಹೀಗೆ ಏನಾದರೂ ಹೇಳಿಯಾರು ಎಂದು ಅವರ ಸಹಜ ನಿರೀಕ್ಷೆ. ಬಿಳಿಯಾಗಿ ಮುರುಟಿಕೊಂಡು ಮೇಲೆ ಮೇಲೆ ಹೋಗುತ್ತಿರುವ ಕೂದಲನ್ನು ಮೈಸೂರು ಸಿಲ್ಕ್‌ಗೆ ಹೋಲಿಸಿಕೊಳ್ಳುವ ಚಪಲ ಎಷ್ಟು ಅಜ್ಜಿಯರಿಗಿಲ್ಲ! ಆದರೆ ಗೊಡ್ಡು ಮಾಸ್ತರಿಗೆ ಈ ಸಾಮಾನ್ಯತೆಯೇ ಹೊಳೆಯದು. ಇನ್ನು ಬೇರೆಲ್ಲಿಯ ಸೂಕ್ಷ್ಮ? ಹೋಗಲಿ, ಸರಿಯಾಗಿ ಪರಾಮರ್ಶೆಯನ್ನಾದರೂ ಮಾಡುವುದುಂಟೆ? ತಿಳಿಯದ್ದನ್ನು ಒಪ್ಪಿಕೊಳ್ಳುವುದಂತೂ ದೂರವೇ ಉಳಿಯಿತು. ಹಾಗಾಗಿ ಯಾವ ನವೀನ ಕಂಪ್ಯೂಟರನ್ನೂ ಮೀರಿಸುವಂತೆ ತಟಕ್ಕನೆ ಬಂದೇ ಬಿಡ್ತು ಮಾಣಿಕ್ಯದಂತಹ ನುಡಿ "ಅಯ್ಯೋ ನಾ ಕಾಣೆನೆ, ಏನೇ ಹೇಳಿ ನನಗೇನೋ ಎಲ್ಲಾ ಸೀತಾರಾಮಯ್ಯನ್ನ ನೋಡಿದ ಹಾಗೆ ಅನಿಸುತ್ತೆ" ಎನ್ನಬೇಕೇ! ಯಾರು ಈ ಸೀತಾರಾಮಯ್ಯ ಅಂತೀರೇನೊ. ಮನೆಯೂ ಅಲ್ಲ ನಂಟನೂ ಅಲ್ಲ, ಹೋಗಲಿ ಹೆಚ್ಚಿನ ಸ್ಥಾನಮಾನ ಪಡೆದ ಗರಿಷ್ಠನೂ ಅಲ್ಲ. ನಡೇಲೇನೂ ಅಷ್ಟು ಚಂದದ ವ್ಯಕ್ತಿತ್ವವಾಗಲೀ, ಗೌರವದಲ್ಲಿ ಎದ್ದು ನಿಲ್ಲುವ ಹಿರಿತನವಾಗಲೀ ಇಲ್ಲದ ದೂರದ ಅಮಾಯಕ! "ಹಾಗೋ, ಬೋ ಚೆನ್ನಾಗಿದೆ," ಎಂದು ಕಾಣುವಂತೆಯೇ ಮೂತಿ ಸೊಟ್ಟಗೆ ಮಾಡಿ ಆ ಕಡೆ ತಿರುಗಿದಳು ಆಕೆ. ಅದೂ ಸಹಿತ ಇವರಿಗೆ ಕಾಣದೇಹೋಯಿತು. ತನ್ನ ಹೇಳಿಕೆಯ ಸಮರ್ಥನೆಗೆ ಮತ್ತೆರಡು ಮಾತು ಬೇರೆ ಒಟ್ಟಿದರು. ಆಗ ಸುಮ್ಮನಿದ್ದು ಒಳಗೆದ್ದು ಹೋದಾಕೆ, ಮತ್ತೊಂದು ದಿನ ಸೊಸೆಯ ಹತ್ತಿರ "ಆಹಾಹಾ, ಎಂಥಾ ಬುದ್ಧಿವಂತ ನಿಮ್ಮಣ್ಣ ಕೇಳಿದ್ಯಾ ಅವನ್ದೇ ಛಿದ್ದು! ಇನ್ನು ಹುಡುಗರಿಗೆ ಏನು ಕಲಿಸ್ತಾನೋ, ಇವನ ಹತ್ತಿರ ಕಲ್ತವರು ಅದಿನ್ನೆಷ್ಟು ಉದ್ಧಾರವಾಗ್ತಾರೋ!" ಅಂತ ಹಾಸ್ಯಮಾಡಿ ನಕ್ಕರಂತೆ. ಸೊಸೆಯನ್ನು ಕಂಡರೆ ಅವರಿಗೆ ಪ್ರೀತಿ ಇದ್ದದ್ದೇ ಪುಣ್ಯದ ಮಾತು. ಹೀಗಾಗಿ ಮಾಸ್ತರು ಅರಿಯದೆ ಊದಿದ್ದು ಅವಿವೇಕದ ಸುಂಟರ ಗಾಳಿಯಾಗದೆ ಹಾಸ್ಯದ ಹೊನಲಾಗಿ ತೇಲಿ ಹೋಯಿತು.

ನಾರಾಯಣನೂ ಮಾಸ್ತರೂ ಶಾಲೆಯಲ್ಲಿ ಓದುವಾಗ ಸ್ನೇಹಿತರು. ಒಮ್ಮೆ ನಾರಾಯಣನ ಅಣ್ಣ ಗುಂಡಪ್ಪ ಇವರಣ್ಣನಿಗೆ ಹೇಳುತ್ತಿದ್ದ "ಏನಂತೀ, ನಿಮ್ಮ ತಂದೆ ಈಗಿನಂತೆ ನಮ್ಮಷ್ಟು ಓದಲಿಲ್ಲ,

ಅವಕಾಶವೂ ಇರಲಿಲ್ಲ ಅನ್ನು. ಯಾವುದೋ ಏವಿ ಸ್ಕೂಲಂತೆ, ಅಷ್ಟೇ ಅವರ ಬಂಡವಾಳ. ಆದರೆ ಅವರ ಭಾಷೆಯ ಬಿಗಿ ಏನು, ಮಾತಿನ ಓಟ ಏನು! ಇಲ್ಲಿದ್ರಲ್ಲ, ಇಂಗ್ಲೀಷಿನೋರು, ಅವರೇ ಹುಡುಕಿ ಕೊಂಡು ಬಂದು ಪತ್ರ ಬರೆಸಿಕೊಂಡು ಹೋಗ್ತಿರ ಲಿಲ್ವೇ? ಆ ಸೊಗಸು ಈಗ ನಮ್ಮ ಕಾಲೇಜಿನ ಅಧ್ಯಾಪಕರಲ್ಲೂ ಕಾಣಲಿಲ್ಲಪ್ಪ." ಇದು ಮಾಸ್ತರ ಬತ್ತಳಿಕೆ ಸೇರಿತ್ತು. ಅದೇ ವರ್ಷ ನಾರಾಯಣನಿಗೆ ಇಂಗ್ಲಿಷಿನಲ್ಲಿ ಕಡಿಮೆ ಅಂಕಗಳು. ಉಪಾಧ್ಯಾಯರು ಇವನನ್ನು ತರಾಟೆಗೆ ತೆಗೆದುಕೊಂಡರು. "ಅಪ್ಪನ ಮಗನೇ ಮೈ ಬಗ್ಗಿಸಿ ಓದೋಕ್ಕೇನೋ ಆಗಿ ರೋದು?" ಎಂದು, ತಲೆ ಬಗ್ಗಿಸಿ ಬೆನ್ನಿಗೆ ಗುದ್ದಿದರು. ಮನೆಗೆ ಹೋಗುವಾಗ ಮಾಸ್ತರ ಬತ್ತಳಿಕೆಯಿಂದ ಗುಂಡಪ್ಪನ ಮಾತು ಹೊರ ಬಂತು, ಅದು ಪೀಠಿಕೆ, ಮುಂದಕ್ಕೊಂದು ಒಗ್ಗರಣೆ- ಅದಿಲ್ದೆ ಅಡುಗೆ ಮುಗಿಯಲ್ವೆ- "ನಮ್ಮಪ್ಪ ಹಾಗಿದ್ರೆ ಈ ನಾಣೇನ ನೋಡಿ ಮುಂಡೇದು. ಸರಿಯಾಗಿ ಒಂದು ವಾಕ್ಯ ಬರೆಯೋಕ್ಕೂ ಬರಲ್ಲ" ಹಾಗೆಂದು ಬೆನ್ನುತಟ್ಟಿ ನಕ್ಕರು. ಮನೆಗೆ ಹೋದ ಕೂಡಲೆ ನಾರಾಯಣ ಅತ್ತು ರಂಪ ಮಾಡಿದ. ಅವರಮ್ಮ ಅಲ್ವೋ ಗುಂಡಾ, ಬೆಳೆದವನು ಹತ್ತು ಜನರ ವ್ಯವಹಾರ ನಡೆಸೋನು, ಈ ಹುಡುಗನನ್ನು ಕಂಡವ್ರ ಮುಂದೆ ಆಡ್ಕೋತಾರೇನೋ! ನೀನೇ ಸರಿ ಮಾಡ್ಬೇಕಪ್ಪ," ಅಂದ್ರಂತೆ. ಎರಡು ದಿನದ ಮೇಲೆ, ಮಾಸ್ತರನ್ನು ಅವರಣ್ಣ ಕೇಳಿದರು, "ಎಂಥದೋ ನಿನ್ನದು ಪುರಾಣ - ಗುಂಡ ಹೇಳದಿದ್ದ ಮಾತ್ನೆಲ್ಲಾ ಆಡಿ ಆ ಹುಡುಗನ್ನ ನೋಯಿಸೋದೆ, ಇದೇ ಏನು ನಿನ್ನ ಜಾಣತನ?" - "ತಂದೆ ಅಷ್ಟು ಜಾಣರು, ಇವನಿಗೂ ಹಾಗಾಗ್ಬೇಕು ಅನ್ನೊ ಛಲಾ ಬರಲಿ ಅಂತ ಅಂದೆ. ಆದರೆ ನಾಣಿ ರಾದ್ಧಾಂತ ಮಾಡ್ತಾ ನೇಂತ ನನಗೇನು ಗೊತ್ತು?" ಎಂಬ ವಿವರಣೆ ಸಾಕಾಗದೆ, ಒಂದಷ್ಟು ಬುದ್ಧಿವಾದ ಆಯ್ತು. ಆದ ರೇನು ಪ್ರಸಂಗ ಮನಸ್ಸಿನಲ್ಲಿ ನಿಲ್ತೇ ವಿನಾ ಮಾತು ನಿಲ್ಲಲಿಲ್ಲ!

ಈಗ ನಿವೃತ್ತರಾದಾಗ ಎಷ್ಟೋ ವರ್ಷಗಳ ಮೇಲೆ ನಾರಾಯಣ ಸಿಕ್ಕಿದ. ಇಬ್ಬರೂ ಹಳೆಯ ದನ್ನು ನೆನೆಸಿಕೊಂಡು ನಕ್ಕರು. "ಏನೋ ಮಾಸ್ತರ ಮಹಾಶಯ, ನನ್ನಂಥೋರು ಎಷ್ಟು ಜನರನ್ನು ಸರಿಮಾಡಿದೆಯಪ್ಪಾ ನಿನ್ನ ಸರ್ವೀಸಿನಲ್ಲಿ?" ನಾಣಿ ಕೇಳಿದ. "ನಂದೇನಯ್ಯಾ ಜೊತೇಲಿದ್ದ ನಾನು ಮಾಸ್ತರಾಗೇ ಉಳಿದೆ, ನೀನು ದೊಡ್ಡ ಇಂಜಿನಿಯ ರಾಗಿ ಬಂದೆ, ಇನ್ನು ಶಿಷ್ಯರು ಯಾರಾದರೂ ಹೇಳ್ಬೇಕು ಅಷ್ಟೆ".ಅಂದರು. "ಇಲ್ಕೇಳು ಹಿಂದೊಮ್ಮೆ ರೈಲಿನಲ್ಲಿ ಬರೋವಾಗ ಸಿಕ್ಕಿದೋನೊಬ್ಬ ನಿನ್ನ ಶಿಷ್ಯ ಆಗಿದ್ದಾ ಅಂತ ತಿಳೀತು. ನೀನು ಗೊತ್ತಿಲ್ವ ಅನ್ನೋ ತರಾ ಸುಮ್ನನೆ ನಿನ್ನ ವಿಷಯ ಕೇಳಿದೆ. 'ಆ ಮಾಸ್ತರ, ಹೇಳ್ತಾರೆ ಹೇಳ್ತಾರೆ ಪಾಠ, ಏನೂ ತಿಳಿಯೋಲ್ಲ. ಬರೇ ಮಾತು, ಮಂತ್ರಕ್ಕಿಂತ ಉಗುಳು ಜಾಸ್ತಿ. ಒಂಥರಾ ಹರಿಕಥೆ', ಅಂತ ವ್ಯಾಖ್ಯಾನ ಮಾಡಿದ ನಲ್ಲೋ," ನಾಣಿ ನೆನಪು ಮಾಡಿಕೊಂಡು ನಕ್ಕ.


"ನಿಜವಾದ ಮಾತು ನಾಣಿ, ಹಿಂತಿರುಗಿ ನೋಡಿದ್ರೆ ನನ್ನ ಜೀವನಾನೇ ಚಿಟಿಕೆ ಹಿಡಿದು ತಾಳಕುಟ್ಟಿ ಹರಿಕಥೆ ಮಾಡಿದಹಾಗೇ, ಸಮಯಕ್ಕೆ ನಾಲ್ಕು ಮಾತು, ನಲವತ್ತು ಕವಲು - ಮಾವಿಗೆ ಬೇವಿನ ಕವಲಾದರೂ ಸರಿ. ಹೇಳಿದ ದಾಸರಿಗೇ ತತ್ವದ ಮರ್ಮ ತಿಳೀಲಿಲ್ಲ, ಕೇಳಿದೋರಿಗೆ ಕಥೇನೂ ಗೊತ್ತಾಗಿಲ್ಲ, ಅಷ್ಟೇ ಕಣೋ ನನ್ನ ಸಾಧನೆ" ಎಂದು ಹೇಳಿ ಮಾಸ್ತರೂ ನಕ್ಕರು! ★

ನನ್ನದು...

ಅಪಘಾತ ಸಂಭವಿಸಿತ್ತು. ಆ ಆಸ್ಪತ್ರೆಯ ಶವಾಗಾರದಲ್ಲಿ ಆಕ್ರಂದನ ತಾರಕಕ್ಕೇರಿದಾಗ ಮಂತ್ರಿಗಳು ಅಲ್ಲಿಗೆ ಬಂದರು. ಆಗತಾನೇ ಅಲ್ಲಿಗೆ ತಂದ ಶವದತ್ತ ಕೈ ತೋರಿಸಿ "ಯಾರದದು?" ಎಂದು ಕೇಳಿದರು. ಮಂತ್ರಿಗಳ ಬೆನ್ನ ಹಿಂದೆ ನಿಂತಿದ್ದ ಹೆಣದ ವಾರಸುದಾರ "ನನ್ನದು ಸ್ವಾಮೀ" ಎಂದೆನ್ನುತ್ತ ಬಿಕ್ಕಿದ.

-'ವೀರಪ್ಪನ್'.

'ಅಲೆಮಾರಿ ನೆನಪುಗಳು'




ಅಲೆಮಾರಿ ನೆನಪುಗಳು
ಮತ್ತೆ ಹೊಕ್ಕಿವೆ ಮನಸ್ಸು
ಭಗ್ನಗೊಳಿಸುತ್ತಿವೆ
ರಮ್ಯಲೋಲುಪ ಮನಸು

ಬಿಸಿಲ ಬಳ್ಳಿಯ ಬಿತ್ತಿ
ಉರಿಯ ಕೆನ್ನಾಲಗೆ ಬೆಳೆದು
ಸುಡು ನೆನಪುಗಳು
ಭಗಭಗೆಂದು
ಭುಗಿಲೆದ್ದು
ಸುಡುತ್ತಿವೆ ಒಂದೊಂದು ಕ್ಷಣವನ್ನು
ಕಾಪಿಟ್ಟ ಮನವನ್ನು

ಎಡೆಬಿಡದೆ ಬೆಂಬತ್ತಿ
ಕಾಳಸರ್ಪದ ಹೆಡೆಯೆತ್ತಿ
ಬುಸುಗುಡುತ
ತಲ್ಲಣಿಸುತ್ತಿವೆ
ಇರುವುದೆಲ್ಲವ ಭಗ್ನಗೊಳಿಸಿ
ಬರುವುದೆಲ್ಲವ ವಿಘ್ನಗೊಳಿಸಿ
ಮತ್ತೆ ತಲೆಯೆತ್ತುತ್ತ
ಹುತ್ತ ಹೆಡೆಯಾಡುವುದು

ಎದೆಯ ಕದಗಳನೆಲ್ಲ
ವಿಧ್ವಂಸ ಕೃತ್ಯದಲಿ
ಛಿದ್ರಮಾಡಿ
ಒಳಗಿರುವ ಕನಸನ್ನು
ಎಳೆಯಾದ ಮನಸನ್ನು
ಆಕ್ಟೋಪಸ್ ಅಪ್ಪುಗೆಯಲಿ
ಕೊರಳು ಕೊಲ್ಲುವ
ಓ ಸುಡು ನೆನಪೆ
ಕರಗು ಆಣೆಕಲ್ಲಿನ ಹಾಗೆ
ಒರಗು ಸಾವಿನ ಮೈಗೆ.

- ಹೊರೆಯಾಲ ದೊರೆಸ್ವಾಮಿ



ಕೊನೆಯ ಚಕ್ರವೂ ರಟ್ಟ ಹೋಗದಿರಲು
ಹೆಬ್ಬೆರಳನ್ನು ತಿರುಗಣೆಯನ್ನಾಗಿಸಿದ್ದ ಜೆನ್ನಿ

ಮೂರು ಚಕ್ರಗಳ ಆಟದ ಬಂಡಿ ಅಂಗಳದಲ್ಲಿ ಬಾದಾಮಿ ಮರದ ನೆರಳಿನಲ್ಲಿ ಕಾದು ನಿಂತುಕೊಂಡಿತ್ತು. ನಿರೀಕ್ಷಿಸಿರುವವನಂತೆ ಪುಟ್ಟ ಅದನ್ನು ಹತ್ತಿದ. ಬಂಡಿಯ ಬಣ್ಣ, ಜರತಾರಿ ಜಾಲರಿಗಳು, ಮೆದು ಮೆತ್ತನೆಯ ಆಸನ-ಎಲ್ಲವೂ ಕನಸಿನಲ್ಲಿ ಅಂದುಕೊಂಡಂತೆಯೇ.

ಮುಂಜಾವದ ಕನಸುಗಳಲ್ಲಿ ಆಗಾಗ ಕಾಣಿಸಿಕೊಂಡು ಹೆದರಿಸುತ್ತಾ ಇರುವ ಒಕ್ಕಣ್ಣನ, ತೆರೆದ ಬಾಯಿಯ, ಎರಡು ಕಾಲುಗಳಲ್ಲಿ ಎದ್ದು ನಿಲ್ಲುವ, ತುಕ್ಕು ಹಿಡಿದ ಆ ಜಟಕಾ ಬಂಡಿಯಾಗಿದ್ದರೆ ಪುಟ್ಟ ನಿರುಪಾಯನಾಗಿ ಅತ್ತು ಬಿಡುತ್ತಿದ್ದ.

ಬಾಲ್ಯದ ಬಾದಾಮಿ ನೆರಳಿನಲ್ಲೆಲ್ಲೂ ಆಟದ ಬಂಡಿ ಇರಲಿಲ್ಲ. ಕುರುಂಬೆ ಮತ್ತು ಕಡ್ಡಿಗಳದ್ದೇ ಒಂದು ಕಾಲ.

ಎಲ್ಲಿಗಾದರೂ ಹೋಗಬೇಕೆಂದುಕೊಂಡಲ್ಲ ಪುಟ್ಟ ಆಟದ ಬಂಡಿ ಹತ್ತಿದ್ದು. ಮಾತ್ರ ತಮಾಷೆಗಾಗಿಯೂ ಅಲ್ಲ. ಅಪ್ಪ ಒಣಗಿದ ಮರವಾಗಿದ್ದ. ಅಲ್ಲಿ ನೆರಳಾಗಲಿ ತಂಪಾಗಲಿ ಇರಲಿಲ್ಲ. ಆ ಬರಡುತನಗಳ ಆಚೆಗೆ, ಅತ್ತಿಗೆಯ ತಂಪಿನೆಡೆಗೆ ಪುಟ್ಟ ಗಾಡಿ ಬಿಟ್ಟ.

ಅಣ್ಣ ಮತ್ತು ಅತ್ತಿಗೆ ಇದ್ದದ್ದು ಮಧುಚಂದ್ರದ ಸಂಜೆಯಲ್ಲಿ. ತಣ್ಣಗಿನ ಒಂದು ಸಂಜೆ. ಅಣ್ಣನಿಗೆ ಯಾವಾಗಲೂ ತರಾತುರಿಯೇ. ಯೋಜನೆಗಳು, ಲೆಕ್ಕಾಚಾರಗಳು. ಬರೆದಿರಿಸಲಾದ ಮೆಟ್ಟಿಲುಗಳನ್ನು ಹಾರುತ್ತ ಹತ್ತಿ ಎಲ್ಲವನ್ನೂ ಸ್ವಾಧೀನಪಡಿಸುವ ಆತುರ. ತನ್ಮಧ್ಯೆ ಸಿಡಿದು ದೂರಾಗುತ್ತಲೇ ಇರುತ್ತವೆ ದಿನ ರಾತ್ರಿಗಳು.

ಅಷ್ಟೆಲ್ಲ ಅವಸರಿಸಕ್ಕದ್ದಲ್ಲ ಜೀವನ ಎಂಬ ನಿಲುವಿನವಳಾಗಿದ್ದಳು ಅತ್ತಿಗೆ. ಲೆಕ್ಕಾಚಾರಗಳ ಆಚೆಗಿನ ಒರತೆಗಳತ್ತ, ಆರ್ದ್ರ ಸಂಜೆಗಳತ್ತ, ನದಿ ತೀರದ ಶೈತ್ಯಗಳತ್ತ ದಾಂಗುಡಿಯಿಡುತ್ತಿರುವ ಬಳ್ಳಿಯಾಗಿದ್ದಳು ಆಕೆ. ಆಫೀಸಿನಲ್ಲಿ ಅಂಕಿಗಳೊಂದಿಗೆ ಆಡುವ ಅಣ್ಣನಿಗಾಗಿ ಕಾದು ಬೇಸರಗೊಂಡ ಆಕೆ ನದೀತೀರದಲ್ಲಿ ಕುಳಿತು ಹೇಳುವಳು,

"ಪುಟ್ಟ, ಇಲ್ಲಿ ಹತ್ತಿರ ಕುಳಿತುಕೊ, ಆಯ್ತಾ... ಹತ್ತಿರದವರು ದೂರದಲ್ಲಿರೋದು ಯಾಕೆ?"

ಕಾಗದಗಳನ್ನು ಮಡಚಿ, ಆಟದ ದೋಣಿಗಳನ್ನು ತಯಾರಿಸಿ, ನದಿಯಲ್ಲಿ ತೇಲಿಸಿ ಹೇಳುವಳು:

"ನಾವು ಹೊರಡೋಣ ಪುಟ್ಟ, ಈ ಲೆಕ್ಕಾಚಾರಗಳ ಹಾಗೂ ಕಾಪಟ್ಯಗಳ ತೀರಗಳಿಂದ..."

"ಆಚೆ ದಡಕ್ಕೆ...?"

"ಈ ದಡದಲ್ಲಿ ಕುಳಿತರೆ ಆ ದಡ ಹಸಿರು; ಅಲ್ಲಿಗೆ ಹೋದರೆ ಈ ದಡ ಹಸಿರು."

"ಹಾಗಾದರೆ ಮತ್ತೆಲ್ಲಿಗೆ ಹೋಗಬಲ್ಲೆವು ನಾವು..."

"ಅದನ್ನೇ ನಾನು ಹೇಳ್ತಿದ್ದೇನೆ, ಪುಟ್ಟಾ. ನಾವು ಹೊಳೆಯಲ್ಲೇ ಪ್ರವಾಹಗಳನ್ನೂ ಅಲೆಗಳನ್ನೂ ಅತಿಕ್ರಮಿಸಿ ಮತ್ತೊಂದು ತೀರಕ್ಕೆ ತೆರಳಬೇಕು. ಮೂರನೆಯ ಒಂದು ತೀರಕ್ಕೆ..."

ಆದುದರಿಂದಲೇ ಪುಟ್ಟ ಮೂರು ಚಕ್ರಗಳ ಆಟದ ಬಂಡಿಯನ್ನು ಹತ್ತಿದ್ದು. ಭೂತಕಾಲದ ಜಡತೆಯಿಂದ ಭವಿಷ್ಯದ ಶೀತಲ ತೀರಗಳತ್ತ ತಿರುಗುವ ಚಕ್ರಗಳು. ಮೂರನೆಯ ಚಕ್ರ ಪುಟ್ಟನನ್ನು ಕಾಲದ ವಿರುದ್ಧ ದಿಕ್ಕಿಗೆ, ವರ್ತಮಾನದ ಕ್ಷಣಿಕ ನಿಶ್ಚಲತೆಗಳೆಡೆಗೆ ಒಯ್ದಿತು.

ಮಲಯಾಳಂ ಮೂಲ:
ಪಾಯಿಪ್ರ ರಾಧಾಕೃಷ್ಣನ್
ಅನುವಾದ:
ಕೆ.ಕೆ. ನಾಯರ್

ಬಂಡಿ ಧಾವಿಸುತ್ತಲೇ ಇದೆ.

ಇಬ್ಬದಿಗಳತ್ತವೂ ಜೂಲು ಕೂದಲುಗಳು ಹಾರಾಡಿದುವು. ಹಿಮ್ಮುಖವಾಗಿ ತಿರುಗುವ ಒಂದು ಕನ್ವೇಯರ್ ಬೆಲ್ಟಿನ ಮೇಲೆ ಬಂಡಿ ಪಟ್ಟು ಹಿಡಿದು ಧಾವಿಸುತ್ತ ಇದೆ. ಪುಟ್ಟ, ಸಣ್ಣಗೆ ದೊಡ್ಡವನಾಗುತ್ತಲೂ ಇದ್ದಾನೆ. ತಪ್ಪಲುಗಳನ್ನೂ, ಜನಪದಗಳನ್ನೂ, ಬಯಲು ಸೀಮೆಗಳನ್ನೂ, ತೀರಪ್ರದೇಶಗಳನ್ನೂ ಹಿಂದೆ ಹಾಕುತ್ತ ಬಂಡಿ ಕುಲುಕಾಡುತ್ತಲೇ ದೌಡಾಯಿಸುತ್ತಿದೆ.

ಯಾವುದೋ ಹೊಳೆಯ ದಡದಲ್ಲಿ ಒಬ್ಬಳೇ ಕುಳಿತು ಕೈಬೀಸುತ್ತಿರುವ ಅತ್ತಿಗೆಯನ್ನು ಪುಟ್ಟ ಕಾಣಲಿಲ್ಲ.

ತುಳಸಿಕಟ್ಟೆ, ಮೊಗಸಾಲೆ, ಗದ್ದೆಹುಣೆ ಮುಂತಾದವುಗಳೆಲ್ಲ ಹಿಂದಕ್ಕೆ ಧಾವಿಸಿ ಮರೆಯಾದವು.

ಅಮ್ಮನ ನೆರಿಗೆ ಬಿದ್ದ ಮುಖ.

"ಅಮ್ಮಾ ನಿಂಗೆ ಏನ್ ಬೇಕು ಹೇಳು. ಕಳ್ಳಿಕೊಡ್ತೇನೆ."

ಫೋನಿನ ಮರತುದಿಯಲ್ಲಿ ಒಂದು ನಿಟ್ಟುಸಿರು. ನಿಡಿದಾಗುತ್ತಲೇ ಇರುವ ನಿಶ್ಶಬ್ದತೆ.

"ನನಗೇನೂ ಬೇಡ ಪುಟ್ಟಾ... ನೀನು ಮಾತ್ರ ಇಲ್ಲಿಗೆ ಬಂದರೆ ಸಾಕು. ನೀನು ಕಳಿಸಿರೋ ದುಡ್ಡೆಲ್ಲಾ ಈ ಹಾಸಿಗೆಯಡಿಯಲ್ಲೇ ಇದೆ. ಔಷಧಿ, ಮಾತ್ರೆ ಮತ್ತು ನೋಟಿನ ಕಂತೆಗಳು... ನಾ ತೀರಾ ಸೋತಿದ್ದೇನೆ ಪುಟ್ಟಾ... ಇಲ್ಲೆಲ್ಲಾದರೂ ಬಿದ್ದು ಉಸಿರೆಳೆದು ಬಿಟ್ರೆ ಯಾರ್ ಹಾಕ್ತಾರೆ ಗುಟುಕು ನೀರು...."

ಎರಡು ಚಕ್ರಗಳೂ ಕಳಚಲ್ಪಟ್ಟ ಬಂಡಿ ಕೊನೆಯ ಕಸುವಿನೊಂದಿಗೆ ಹಾರುತ್ತ ಇದೆ. ಈಗ ಕೆಳಗಡೆ ಮರುಭೂಮಿ. ಹಣ ಬಿಡುವ ಹನೆಗಳು. ಎ.ಸಿ. ಕಾರಿನಿಂದ ಹೊರಗೆ ದಿಟ್ಟಿಸಿದರೆ ಉಸುಕು ಗಾಳಿ.

ಒಂದು ಕ್ಷಣದೊಳಗೇ ಈ ಮರಳುಗಾಡಿನಲ್ಲಿ ಎಲ್ಲವೂ ಧ್ವಂಸವಾಗುವುದರಲ್ಲಿತ್ತು. ಜೆನ್ನಿಫರ್, ಪುಟ್ಟನ ರಕ್ಷಣೆಗಾಗಿ ಅವತರಿಸಿದ್ದಳು. ಎಟುಕಿದ್ದ ಹುಲ್ಲುಕಡ್ಡಿಯನ್ನೇ ಹಿಡಿದು ಮೇಲೆ ಹತ್ತಿದ್ದ.

ಜೆನ್ನಿಯನ್ನು ಆನಿಸಿ ಹಿಡಿದು ಗುಣುಗುಣಿಸಿದ್ದ:

"ನಿನ್ನ ನಾನು ತೊರೆಯಲಾರೆನು ಯಾವತ್ತೂ..."

ಕೊನೆಯ ಚಕ್ರವೂ ರಟ್ಟೆ ಹೋಗದಿರಲು ಹೆಬ್ಬೆರಳನ್ನು ತಿರುಗಣೆಯನ್ನಾಗಿಸಿದ್ದ. ಜೆನ್ನಿ.

"ನಿನಗೆ ಯಾವ ವರ ಡಾರ್ಲಿಂಗ್?" ವರ, ಶಾಪಗಳ ಬಲೆ-ಕಣ್ಣಿಗಳ ಬಗ್ಗೆ ಗೊತ್ತೇ ಇಲ್ಲದ ಪಾಪ ಜೆನ್ನಿ.

ಕೊನೆಗೆ ಬಲೆ-ಕಣ್ಣಿಗಳು ತುಂಡಾದುವು. ಎಲ್ಲವನ್ನೂ ತೊರೆಯಲೇ ಬೇಕಾಯ್ತು. ಹಾಸಿಗೆಯಡಿಯ ನೋಟುಗಳಲ್ಲಿ ತೇವ ಹಬ್ಬಿತ್ತು. ಬಳಿಕ ಎಲ್ಲವೂ ಗಾಳಿಯಲ್ಲಿ ಹಾರಿದವು. ಹತ್ತಿದ್ದ ಮೆಟ್ಟಿಲುಗಳಲ್ಲೇ, ಮಾರ್ಗಗಳಲ್ಲೇ ಹಿಂದಕ್ಕೆ.

ಹಿಂದಕ್ಕೆ ಧಾವಿಸುತ್ತಿರುವ ಚಕ್ರಗಳು.

ಹಿಮ್ಮುಖವಾಗಿ ಸಾಗುತ್ತಿರುವ ಪ್ರಯಾಣದಲ್ಲಿ ಸಂಗಡಿಗರಿಲ್ಲದೆ ಕಂಬ, ಕಡ್ಡಿ ಯಾವುದೂ ಇಲ್ಲದೆ ನೆರಳು ಕೂಡ ಜೊತೆಗಿಲ್ಲದೆ ಮೂರು ಚಕ್ರಗಳ ಬಂಡಿಯಲ್ಲಿ ಪುಟ್ಟ ಎಂಬ ಪುಟ್ಟ ಕೃಷ್ಣ.

ಮೂರನೆಯ ಚಕ್ರವೂ ರಟ್ಟೆ, ಪಲ್ಟಿ ಹೊಡೆದು, ಸೋತುಬಿದ್ದ ಬಂಡಿಯ ಬಳಿ, ಕಾಲದ ಲೆಕ್ಕಾಚಾರಗಳೆಲ್ಲ ತಪ್ಪಿ ಬಿದ್ದು, ಪುನಃ ಪುಟ್ಟ ಕೃಷ್ಣನಾಗಿ ಬೆರಳು ಚೀಪುತ್ತ ಮಲಗಿರುವಾಗ, ಮೂರನೇ ತೀರವನ್ನು ಅರಸುತ್ತ ಪ್ರವಾಹ ಮತ್ತು ಆಟದ ದೋಣಿಗಳ ಆಚೆ, ಯಾವುದೋ ತೀರದಲ್ಲಿ ಕುಳಿತು ಅತ್ತಿಗೆ ಮೆಲ್ಲಗೆ ಕೈಗಳ ಬೀಸುತ್ತಿರುವುದನ್ನು ಪುಟ್ಟನು ಅರಿತನು.

●

ಸೌಭಾಗ್ಯ

೧೯೮೬. ಸರ್ ಅಟೆನ್‌ಬರೋ ನಿರ್ಮಿಸಿದ 'ಗಾಂಧಿ' ಚಲನಚಿತ್ರ ಅಮೆರಿಕಾದಲ್ಲಿ ಬಿಡುಗಡೆಯಾದ ಸಂದರ್ಭದಲ್ಲಿ ಭಾರತದಿಂದ ಒಂದು ನಿಯೋಗ ಅಮೆರಿಕಾದ ವಿಶ್ವ ವಿದ್ಯಾಲಯಗಳು ಹಾಗೂ ಸಾಂಸ್ಕೃತಿಕ ಸಂಸ್ಥೆಗಳು ಗಾಂಧೀಜಿ ಬಗ್ಗೆ ಏರ್ಪಡಿಸಿದ್ದ ಸಮಾರಂಭಗಳಲ್ಲಿ ಭಾಗವಹಿಸಲು ಹೋಗಿತ್ತು. ಆ ನಿಯೋಗ ನ್ಯೂಯಾರ್ಕಿನಿಂದ ಸ್ಯಾನ್‌ಫ್ರಾನ್ಸಿಸ್‌ಕೋಗೆ ಗಾಂಧೀ ಅವರ ಬೃಹದಾಕಾರದ ಭಾವಚಿತ್ರವಿದ್ದ ಭಾಂಗಿ (Packet) ಒಂದನ್ನು ಕೊಂಡೊಯ್ಯ ಬೇಕಾಗಿತ್ತು. ಅದಕ್ಕಾಗಿ ನ್ಯೂಯಾರ್ಕಿನ ವಿಮಾನ ನಿಲ್ದಾಣದಲ್ಲಿ ಇಬ್ಬರು ಕರಿಯ ಕೂಲಿಗಳ ಸಹಾಯ ತೆಗೆದುಕೊಳ್ಳಲಾಯಿತು. ಆ ಕರಿಯರು ಭಾಂಗಿಯನ್ನು ಹೊತ್ತುಕೊಂಡು ಹೋಗುತ್ತಾ 'ಇದರಲ್ಲಿ ಏನಿದೆ?' ಎಂದು ಕೇಳಿದರು. 'ಮಹಾತ್ಮ ಗಾಂಧಿಯ ತೈಲ ಚಿತ್ರ' ಎಂದು ನಿಯೋಗದ ಸದಸ್ಯರಲ್ಲೊಬ್ಬರಾದ ಸಿ. ಸುಬ್ರಹ್ಮಣ್ಯಂ ಹೇಳಿದಾಗ ಆ ಕರಿಯರಿಗೆ ಆದ ಆನಂದ ಅಷ್ಟಿಷ್ಟಲ್ಲ. ಗಾಂಧಿಜೀಯಂತಹ ಮಹಾನ್ ವ್ಯಕ್ತಿಯ ಚಿತ್ರವನ್ನು ಹೊರುವ ಸೌಭಾಗ್ಯ ಎಲ್ಲರಿಗೂ ಬರುವುದಿಲ್ಲ' ಎಂದದ್ದಲ್ಲದೆ ಅವರು ಕೂಲಿಯನ್ನೂ ನಿರಾಕರಿಸಿದರು. - ಎಚ್.ಆರ್.ಸಿ. ರಾವ್

ಆರನೇ ಇಂದ್ರಿಯ ಎಂಬುದು ಇದೆಯೇ?

ಕೆಲವು ತಿಂಗಳುಗಳ ಹಿಂದೆ 'ಕಸ್ತೂರಿ'ಯಲ್ಲಿ 'ಎಕ್ಸ್-ರೇ ಕಣ್ಣಿನ ಮನುಷ್ಯ' ಎಂಬ ಧಾರವಾಹಿ ಬರುತ್ತಿತ್ತು, ಇದು ಬಹಳ ಜನಪ್ರಿಯವೂ ಆಯಿತು. ಇದರಲ್ಲಿ ಪೀಟರ್ ಹುರ್ಕೋಸ್ ಎಂಬಾತನಿಗೆ ಇದ್ದ ಅತೀಂದ್ರಿಯ ಶಕ್ತಿ ಹಾಗೂ ಆ ಶಕ್ತಿಯನ್ನು ವಿವಿಧ ಕೆಲಸಗಳಿಗಾಗಿ ಹೇಗೆ ಉಪಯೋಗಿಸಲಾಯಿತು ಎಂದು ವಿಶದವಾಗಿ ವಿವರಿಸಲಾಗಿತ್ತು. ಅವನ ಈ ಶಕ್ತಿಯನ್ನು ಪೊಲೀಸರು ಹಾಗು ತನಿಖಾದಳದವರು ಅನೇಕ ಅಪರಾಧಗಳನ್ನು ಪತ್ತೆ ಮಾಡಲು ಬಹಳ ಸಮರ್ಥವಾಗಿ ಬಳಸಿಕೊಂಡರು. ಅಪರಾಧಿಗಳ ಬಂಧನವೂ ಆಯಿತು. ಆದರೆ ಪೀಟರ್‌ಗೆ ಈ ವಿಷಯಗಳು ಹೇಗೆ ತಿಳಿಯುತ್ತಿದ್ದವು?

ನಮ್ಮ ಮುಖ್ಯ ಜ್ಞಾನೇಂದ್ರಿಯಗಳು ಐದು (ಕಣ್ಣು, ಮೂಗು, ಕಿವಿ, ನಾಲಿಗೆ ಹಾಗೂ ಚರ್ಮ). ಇವುಗಳ ಸಹಾಯದಿಂದ ನಾವು ದೃಶ್ಯ, ವಾಸನೆ, ಶಬ್ದ, ರುಚಿ ಹಾಗೂ ಸ್ಪರ್ಶಗಳನ್ನು ತಿಳಿಯಬಲ್ಲೆವು. ಕೆಲವೊಮ್ಮೆ ನಾವು ಈ ಐದು ಇಂದ್ರಿಯಗಳಿಗಿಂತ ವಿಭಿನ್ನವಾದ, ಅವ್ಯಕ್ತವಾದ ಒಂದು ಇಂದ್ರಿಯ ಜ್ಞಾನವನ್ನು ಪಡೆಯಬಲ್ಲೆವು. ಅದುವೇ ಆರನೇ ಇಂದ್ರಿಯ.

ಕೆಲವು ಮಂದಿ ವಿಜ್ಞಾನಿಗಳು ತಮ್ಮ ಸಂಶೋಧನೆಗಳನ್ನು ಕನಸಿನಲ್ಲಿ ಮಾಡಿದರಂತೆ. ಬೆಂಜೀನಿನ ರಚನೆಯನ್ನು ಕಂಡುಹಿಡಿದ ಫ್ರೆಡರಿಕ್ ಆಗಸ್ಟ್ ಮತ್ತು ಹೊಲಿಗೆ ಯಂತ್ರದ ಸೂಜಿಯನ್ನು ಕಂಡುಹಿಡಿದ ಎಲಿಯಾಸ್ ಹೆವಿ ಇದಕ್ಕೆ ಉದಾಹರಣೆ. ಇಂತಹ ಅನುಭವಗಳು ನಿಮ್ಮಲ್ಲಿ ಕೆಲವರಿಗಾದರೂ ಆಗಿರಬಹುದು. ನಾವು ಯಾವುದೇ ಸಮಸ್ಯೆಯ ಬಗ್ಗೆ ಗಾಢವಾದ ಚಿಂತನೆ ನಡೆಸಿ, ತಕ್ಕ ಸಮಾಧಾನ ಸಿಗದೇ ಹಾಗೆ ನಿದ್ರಿಸಿದರೆ ನಮಗೆ ಅದೇ ವಿಷಯದ ಬಗ್ಗೆ ಕನಸು ಬೀಳುವುದು ಹಾಗೂ ಸಮಸ್ಯೆಗೆ ಉತ್ತರವೂ ಸಿಗುವುದು. ಹಲವಾರು ಮಂದಿಗೆ ಈ ರೀತಿ ಆಗಿದೆಯಂತೆ.

ಇದು ಕೇವಲ ಕನಸಿನಲ್ಲಿ ಅಲ್ಲ, ನನಸಿನಲ್ಲಿಯೂ ಈ ರೀತಿ ಆಗುವುದು. ನಮಗೆ ಎದುರಾಗಿರುವ ಸಮಸ್ಯೆಯ ಕುರಿತು ನಾವು ಕಣ್ಣು ಮುಚ್ಚಿ ಆಲೋಚಿಸಬೇಕು. ನಮ್ಮ ಮನಸ್ಸನ್ನು ಆ ವಿಷಯದ ಕಡೆಗೆ ತಿರುಗಿಸಬೇಕು ಅಥವಾ 'ಟ್ಯೂನ್' ಮಾಡಬೇಕು. ಸ್ವಲ್ಪ ಸಮಯದಲ್ಲಿ ನಮ್ಮ ಮನಸ್ಸಿನಲ್ಲಿ ಆ ಸಮಸ್ಯೆಗೆ ತಕ್ಕ ಉತ್ತರ ಮೂಡುವುದು. ಈ ರೀತಿಯನ್ನು ಊಹಾಶೋಧ (ಡೌಸಿಂಗ್) ಎನ್ನುತ್ತಾರೆ. ಇದರ ಸಹಾಯದಿಂದ ಕಳ್ಳತನವಾದ ವಸ್ತುಗಳು, ಪೊಲೀಸರಿಗೆ ಬೇಕಾದ ವ್ಯಕ್ತಿಗಳನ್ನು ಹಿಡಿಯಬಹುದು. ಅಂತರ್ಜಲವನ್ನು ಶೋಧಿಸುವಲ್ಲಿ ಕೂಡಾ ಈ ತಂತ್ರವನ್ನು ಬಳಸುತ್ತಾರೆ.

ಈ ರೀತಿಯ ಅನುಭವ ಕೇವಲ ಮನುಷ್ಯರಿಗಷ್ಟೇ ಅಲ್ಲ, ಇತರ ಪ್ರಾಣಿಗಳಿಗೂ ಆಗುತ್ತದೆ ಎಂದು ಸಾಧಿಸಲ್ಪಟ್ಟಿದೆ. ಜ್ಯೋತಿಷ್ಯ ಅಥವಾ ಭವಿಷ್ಯವೆಂಬುದು ಇದೇ ರೀತಿಯದ್ದಾಗಿರಬಹುದು ಎಂದು ನನ್ನ ಅಂದಾಜು.

- ಹರೀಶ್ ಎಚ್. ಹಳೆಮನೆ

ಸಂಭಾಷಣೆ

● ಯಲ್ಲೂರು ಪ್ರಭು

"ಹಲೋ"

"ಶ್ರೀನಿಧಿ ವಿಡಿಯೋ ಲೈಬ್ರರಿ!?"

"ಸಾರಿ! ರಾಂಗ್ ನಂಬರ್!"

* * *

"ಹಲೋ!"

"ಈಜ್ ಇಟ್-೪೪೫೫೯೬?"

"ಸಾರಿ! ರಾಂಗ್ ನಂಬರ್!"

* * *

"ಹಲೋ!"

"ದಿಸ್ ಈಜ್ ನಾಟ್ ೯೯೭ ಬಟ್ ೯೯೬..ಫಾರ್ ಯುವರ್ ಕೈಂಡ್ ಇನ್‌ಫಾರ್ಮೇಷನ್...ಇದು ಶ್ರೀನಿಧಿ ವಿಡಿಯೋ ಲೈಬ್ರರಿನೂ ಅಲ್ಲ! ನಾನು ನಿನಗೆ ರಾಂಗ್ ನಂಬರ್ ಅಂತ ಹೇಳ್ತಾ ಇರೋದು ಇದು ಎಂಟನೇ ಸಾರಿ!"

"ತಪ್ಪು ಮೇಡಂ! ಒಂಭತ್ತನೇ ಸಾರಿ".

"ಓಹೋ...!ಎಣಿಸಿಕೊಂಡೇ ಫೋನ್ ಮಾಡ್ತಿದ್ದೀಯಾ ಅನ್ನು! ಅಂದ್ರೇ...?"

"ಛೆ...!ಛೆ...ನಾನು ಅಂಥವನಲ್ಲ ಮೇಡಂ...ಐ ಯಾಮ್ ಎ ಡಿಗ್ನಿಫೈಡ್ ಜಂಟ್ಲಮ್ಯಾನ್. ನಿಜವಾಗಿಯೂ ವಿಡಿಯೋ ಲೈಬ್ರರಿಗಾಗಿಯೇ ಪ್ರಯತ್ನಿಸುತ್ತಿದ್ದೇನೆ!"

"ಸರಿ!...ಈಗ ತಿಳಿಯಿತಲ್ಲವೇ- ಇನ್ನು ಹತ್ತನೇ ಸಾರಿ ಮಾತ್ರ ಮಾಡ್ಬೇಡ. 'ಅಂಥವನಂತಲೇ' ಅರ್ಥೈಸಿಕೊಳ್ಳಬೇಕಾಗುತ್ತೆ."

* * *

"ಹಲ್ಲೋ!"

"ಸಾರಿ ಮೇಡಂ! ಮತ್ತೆ ನಿಮ್ಮ ನಂಬರೇ ಕನೆಕ್ಟಾಗಿದೆ. ಫಾಲ್ಟ್ ಲೈನ್ ಏನಾದರೂ ಇದ್ದರೆ ಇಷ್ಟರೊಳಗೇನಾದರೂ ಸರಿಯಾಗಿಬಹುದೆಂದು ಊಹಿಸಿ ಪುನಃ ಟ್ರೈ ಮಾಡಿದೆ. ಆದರೆ..."

"ಒಂದು ಗಂಟೆಯೊಳಗೆ ನೀನು ವಿಡಿಯೋ ಲೈಬ್ರರಿಗೇ ಹೋಗಿಯೇ ಬರಬಹುದಿತ್ತಲ್ಲ!"

"ನಿಜವೇ ಮೇಡಂ! ಆದರೆ ನಾನು ಹೊರಗೆ ಹೋಗುವ ಪರಿಸ್ಥಿತಿಯಲಿಲ್ಲ. ಮನೆಯಲ್ಲೂ ಯಾರೂ ಇಲ್ಲ!"

"ಓ!...ಐಯಾಮ್. ಸಾರಿ! ಆರೋಗ್ಯ ಚನ್ನಾಗಿಲ್ಲದಿದ್ರೆ ಯಾರಾದರೂ ಡಾಕ್ಟರನ್ನು ಕನ್ಸಲ್ಟ್ ಮಾಡಿ ಔಷಧಿ ತೆಗೆದುಕೊಳ್ಳುವುದು ಬಿಟ್ಟು ಇದೇನಿದು ಅವತಾರ!? ವಿಡಿಯೋ ಲೈಬ್ರರಿ ಅಂತ ಫೋನು ಮಾಡ್ಕೊಂಡು ಕೂತ್ಕೋಳ್ಳೋದು?"

"ಆರೋಗ್ಯಕ್ಕೇನೂ ಆಗಿಲ್ಲ ಮೇಡಂ! ಒಂದು ಒಳ್ಳೆ ಕಾಮಿಡಿ ಚಿತ್ರ ನೋಡಬೇಕೆನಿಸಿದೆ. ಆದಕ್ಕೇ..."

"ಒಳ್ಳೆ ಸ್ನೇಹಿತರಾಗಿಯೂ ನೀವು ನನ್ನನ್ನು 'ಮೇಡಂ' 'ನೀವು' 'ತಾವು' ಅಂತ ಬಹುವಚನದಲ್ಲಿ ಸಂಬೋಧಿಸುವುದು ಏಕೋ ನನಗೆ ಸರಿಕಾಣಲಿಲ್ಲ"- ಅಂತ ಆಚೆಯಿಂದ ಬಂತು ಅಚ್ಚೆಯ ದನಿ.

"ಹೋಗಲಿ ಆ ವಿಡಿಯೋ ಲೈಬ್ರರಿಗೆ ಫೋನ್ ಮಾಡಿ ಹೇಳಿ ಅಂತೀರೇನು?"

"ಅನಾವಶ್ಯಕವಾಗಿ ನಿಮಗೇಕೆ ತೊಂದರೆ..."

"ಪರವಾಗಿಲ್ಲ ಹೇಳು...ಯಾವ ಚಿತ್ರದ ಕ್ಯಾಸೆಟ್ ಬೇಕು?"

"'ಅವಳೇ ನನ್ನ ಹೆಂಡ್ತಿ'-ಚಿತ್ರದ ಕ್ಯಾಸೆಟ್ ಬೇಕು. ಅಂತ ಹೇಳಿ ಮೇಡಂ!"

"ಎಲ್ಲಿಗೆ ಕಳುಹಿಸು ಅಂತ ಹೇಳಲಿ?"

"ನನಗೇ ಮೇಡಂ!"

"ಅದೇ...ನಿನಗೇ...ನಿನ್ನ ಹೆಸರು...ವಿಳಾಸ...?"

"ಪ್ರಶಾಂತ್...ಅಂತ ಹೆಸರು ಹೇಳಿದರೆ ಸಾಕು ಮೇಡಂ. ಅವರಿಗೆ ನನ್ನ ಅಡ್ರಸ್ ಗೊತ್ತಿದೆ. ಕಳಿಸಿಕೊಡ್ತಾರೆ."

"ಸರಿ! ಹಾಗಾದರೆ."

"ಪರವಾಗಿಲ್ಲ! ಇಷ್ಟಕ್ಕೂ ನೀನೇನು ಓದ್ತಿದ್ದೀಯಾ? ಇಂಟರ್? ಡಿಗ್ರಿ?"


"ಒಂದು ದಶಕದ ಹಿಂದೆಯೇ ನನ್ನ ಯುನಿವರ್ಸಿಟಿ ವಿದ್ಯಾಭ್ಯಾಸ ಪೂರ್ಣವಾಗಿದೆ ಮೇಡಂ!"

"ಮೈ ಗುಡ್‌ನೆಸ್! ಯಾವುದೋ ಕಾಲೇಜು ವಿದ್ಯಾರ್ಥಿಯಾಗಿರಬಹುದು ಎಂದು ಕೊಂಡಿದ್ದೆ... ಅದಕ್ಕೇ.. ಏಕವಚನದಲ್ಲಿ ಸಂಬೋಧಿಸಿಬಿಟ್ಟೆ. ದಯವಿಟ್ಟು ಅಪಾರ್ಥ ಮಾಡಿಕೊಳ್ಳಬೇಡಿ."

"ಭಲೇ! ನಿಮ್ಮನ್ನು ಒಳ್ಳೆಯವರು ಅಂದುಕೊಂಡಿದ್ದೆ. ನೀವು ತುಂಬಾ ಒಳ್ಳೆಯವರೇ!"

"ಅದೇನು ನೀವು ನನ್ನನ್ನು ಹೊಗಳ್ತಿದ್ದೀರೋ..ಬೈಯ್ತಿದ್ದೀರೋ ಏನೂ ಅರ್ಥವಾಗ್ತಿಲ್ಲ."

"ಮತ್ತಿನ್ನೇನು ಮೇಡಂ! ನೀವಾಗುವಷ್ಟೊತ್ತಿಗೆ



ಪದೇ ಪದೇ ಈ 'ರಾಂಗ್ ನಂಬರ್' ಮಾತುಗಳನ್ನು ಸಹನೆಯಿಂದ ಕೇಳಿ ನನಗೆ ಸಹಾಯ ಮಾಡಿದಿರಿ. ಬೇರೆಯವರಾಗಿದ್ದಿದ್ದರೆ ಎರಡನೇ ಸಾರಿಗೇ ಫೋನ್ ಕುಟ್ಟಿ ಬಾಯಿಗೆ ಬಂದ್ಹಾಗೆ ಬೈಯ್ತಿದ್ರು".

"ಸರಿ...! ಆ ವಿಷಯವನ್ನು ಅಲ್ಲಿಗೇ ಬಿಡೋಣ. ಇಷ್ಟಕ್ಕೂ ನೀವು ಏನು ಮಾಡ್ತಿರ್ತೀರಾ...?

"ಸಾಫ್ಟ್‌ವೇರ್ ಪ್ರೋಗ್ರಾಮಿಂಗ್ ಮೇಡಂ!"

"ಕಂಪ್ಯೂಟರ್ ಮಾನವರು ಅನ್ನಿ ನೀವು! ಅದರಲ್ಲಿ ಕೆಲ್ಸಮಾಡ್ತೀದ್ದೀರ... ಎನ್.ಡಿ.ಸಿ.ನಾ?"

"ಇಲ್ಲ ಮೇಡಂ!...ನನ್ನದೇ ಒಂದು ಸ್ವಂತ ಕಂಪ್ಯೂಟರ್ ಫರ್ಮ್ ಇದೆ, ಅದರಲ್ಲಿ..."

"ಸಾರಿ ಪ್ರಶಾಂತ್! ನನಗೆ ಹೊತ್ತಾಗುತ್ತೇ ಬೈ..."

"ಥ್ಯಾಂಕ್ಯೂ ಮೇಡಂ...ಥ್ಯಾಂಕ್ಯೂ ವೆರಿಮಚ್."

* * *

"ಹಲೋ!"

"ಮೇಡಂ ನಾನು..."

"ಕರ್ಮ ಕರ್ಮ ಮತ್ತೆ ನನ್ನ ನಂಬರೇ ಕನೆಕ್ಟಾಗಿದೆಯಾ?"

"ಇಲ್ಲ ಮೇಡಂ, ಈ ಸಾರಿ ನಾನು ನಿಮ್ಮ ನಂಬರ್‌ಗೇ ಫೋನ್ ಮಾಡಿದೆ."

"ಕ್ಯಾಸೆಟ್ ಪೂರ್ತಿ ನೋಡಿದ್ದಾಯ್ತು ಅಂತ ಕಾಣ್ಸುತ್ತೆ. ಮತ್ತೆ ಯಾವ ಕ್ಯಾಸೆಟ್ ಕಳುಹಿಸು ಅಂತ ಹೇಳ್ಬೇಕಾಗಿತ್ತು?"

"ಹಾಗೇನಿಲ್ಲ ಮೇಡಂ! ನೀವು ಮಾಡಿದ ಸಹಾಯಕ್ಕೆ ಥ್ಯಾಂಕ್ಸ್ ಹೇಳೋಣ ಅಂತ..."

"ಮೇಡಂ!...ಒಂದು ನಿ...ಮಿ...ಷ..?"

* * *

"ಹಲೋ!"


"ನಾನು!"

"ಗುರ್ತು ಹಿಡಿದೆ. ನನಗೇ ಫೋನ್ ಮಾಡಿದಿರಾ...? ಇಲ್ಲ ಮತ್ತೆ...?"

"ನಿಮಗೇ ಮೇಡಂ! ಆದರೇ.."

"ಯಾಕೆ ಸಿಲ್ಲಿಸಿಬಿಟ್ರೀ...ಮಾತಾಡಿ..ಪರವಾಗಿಲ್ಲ. ನಾನೇನೂ ತಪ್ಪು ತಿಳಿದುಕೊಳ್ಳುವುದಿಲ್ಲ."

"ನಿಮ್ಮ ಕುರಿತು ನೀವೇನೂ ಹೇಳಲಿಲ್ಲ! ಕೇಳೋಣಾ...? ಬೇಡವಾ...? ಅಂತ ಈ ಒಂದು ವಾರ ಪೂರ್ತಿ ಯೋಚಿಸಿದೆ. ಒಂದು ವೇಳೆ ನಿಮಗೆ ಹೇಳುವ ಇಷ್ಟವಿಲ್ಲದಿದ್ದರೂ ಬೈಯ್ಯುವುದಿಲ್ಲವೆಂಬ ಮಿನಿಮಮ್ ಗ್ಯಾರಂಟಿ ಇದ್ದದ್ದರಿಂದ ಧೈರ್ಯವಾಗಿ ನಿಮಗೆ ಫೋನ್ ಮಾಡಿದೆ."



"ಒಳ್ಳೆಯವರೇ ನೀವು! ಇಷ್ಟು ಮಾತ್ರಕ್ಕೆ ನೀವು ಒಂದು ವಾರ ಯೋಚಿಸಬೇಕಾಗಿತ್ತಾ? ನಿಜಕ್ಕೂ ನಾನು ಅಂದೇ ನಿಮಗೆ ನನ್ನ ಪರಿಚಯವನ್ನು ಹೇಳಿಕೊಳ್ಳಬೇಕಿತ್ತು."

"ಪರವಾಗಿಲ್ಲ ಮೇಡಂ, ಈಗಲಾದರೂ ಹೇಳಿ?"

"ಈ ಪರಿಚಯಗಳು...ನಾಲ್ವರಲ್ಲಿ ಬೆರೆತು, ಮನಸ್ಸು ಬಿಚ್ಚಿ ಮಾತಾಡುವುದು...ಇವೆಲ್ಲಾ ನನಗೆ ಅಭ್ಯಾಸವಿಲ್ಲದ ವಿಷಯಗಳು. ಒಂದು ರೀತಿಯಲ್ಲಿ ನಾನೂ ಒಂಟಿಯೇ! ಮುಖ್ಯವಾಗಿ ನನ್ನ ಅಭಿರುಚಿಯನ್ನು ನನ್ನ ವೃತ್ತಿಯೂ ಬದಲಿಸಲು ಅಸಮರ್ಥವಾಯಿತು."

"ಇಷ್ಟಕ್ಕೂ ನಿಮ್ಮ ಅಭಿರುಚಿ-ವೃತ್ತಿ ಏನು ಮೇಡಂ? ಪ್ರಥಮ ಬಾರಿಗೆ ನಿಮ್ಮ ಕಂಠ ಮಾಧುರ್ಯವನ್ನು ಕೇಳಿದಾಗ ನೀವು ಖಂಡಿತಾ ಒಳ್ಳೇ ಸಿಂಗರ್ ಆಗಿರಬಹುದು ಅಂದುಕೊಂಡಿದ್ದೆ."

"ಸಾಕು! ಇನ್ನು ನೀವು ಕೊಯ್ದಿದ್ದು! ನಾನು ಓರ್ವ ವಯೋಲಿನ್ ವಾದಕಿ ಮಾತ್ರವೇ."

"ಯಾಕೆ ಮೇಡಂ...! ನಿಮ್ಮ ಕಂಠ ಅಷ್ಟು ಇಂಪಾಗಿದೆ; ನೀವು ಹಾಡುವುದಿಲ್ಲವಾ?"

"ಇರಬಹುದೇನೋ...ಆದರೆ ನಾನು ಪ್ರಧಾನವಾಗಿ ಓರ್ವ ವಯೋಲಿನಿಸ್ಟ್."

"ವೃತ್ತಿಯಾಗಿ ಸಂಗೀತದ ಅನುಭವ ವಿಲ್ಲದಿದ್ದರೂ ಸಂಗೀತ ಒಂದು ಉತ್ತಮ ಹವ್ಯಾಸವೆಂದಷ್ಟೇ ಹೇಳಬಲ್ಲೆ."

"ಥ್ಯಾಂಕ್ಯೂ!"

"ನನಗೂ ಯಾವುದಾದರೂ ಇನ್‌ಸ್ಟ್ರುಮೆಂಟ್‌ನ್ನು ಗಂಭೀರವಾಗಿ ಕಲಿತು ಕೊಳ್ಳಬೇಕೆಂಬ ಮಹದಾಶೆಯಿತ್ತು. ಕೊನೆಗೂ ಅದು 'ಈಡೇರದ ಬಯಕೆ' ಯಾಗಿಯೇ ಉಳಿದುಹೋಯ್ತು."

"ಈಡೇರದ ಬಯಕೆ ಅಂತ ಯಾಕೆ ಭಾವಿಸಿಕೊಳ್ತಿರಾ?"

"ಹೌದು!...ಇಂದಿನವರೆಗೂ ಅವಕಾಶಗಳು ಕೈಗೂಡದ್ದು, ಮುಂದೆ ಫಲಿಸುವುದೆಂಬ ಭರವಸೆಯೂ ಇಲ್ಲದಿರುವುದರಿಂದ."

"ಈಗ ನಿಮ್ಮ ವಯಸ್ಸೆಷ್ಟು?"

"ಈಗ ಅದರ ಅಗತ್ಯವೇನಿದೆ?"

"ನನ್ನ ವಯಸ್ಸು ೩೧, ಈಗಲಾದರೂ ನಿಮ್ಮ ವಯಸ್ಸೆಷ್ಟು ಹೇಳ್ತೀರಾ?"

"ನನ್ನ ವಯಸ್ಸು ಹೇಳಲು ನಾನೇನು ಸಂಕೋಚಪಡುತ್ತಿಲ್ಲ. ಐ ಯಾಮ್ ೩೫."

"ನಿಮಗೆ ತಿಳಿದಿದೆಯೇ ಪ್ರಶಾಂತ್! ಅರವತ್ತು

ದಾಟಿದ ನಂತರವೂ ಕೆಲವರು ಒಂದು ವಿದ್ಯೆ, ಕಲೆಯನ್ನು ಕಲಿತು, ಅದರಲ್ಲಿ ಸಾಧನೆ ಮಾಡಿ ಪ್ರಖ್ಯಾತರಾಗುತ್ತಾರೆ."

"ಅಷ್ಟು ಸಂಯಮ ನನಗಿಲ್ಲಬಿಡಿ ಮೇಡಂ! ನನ್ನ ಜೀವನವನ್ನೆಲ್ಲಾ ಪೂರ್ತಿಯಾಗಿ ಈ ಕಂಪ್ಯೂಟರ್‌ಗೇ ಅರ್ಪಿಸಿಬಿಟ್ಟಿದ್ದೀನಿ."

"ಅನ್ಯಥಾ ಭಾವಿಸದಿದ್ದರೆ...ನಿಮ್ಮ ದಿನಚರಿಯನ್ನು ಒಮ್ಮೆ ವಿವರವಾಗಿ ಹೇಳ್ತೀರಾ?"

"ದಿನವೆಲ್ಲಾ ಕಂಪ್ಯೂಟರ್ ಜೊತೆ ಕಳೆದು ಹೋಗುತ್ತದೆ. ಮಧ್ಯೆ ಮಧ್ಯೆ ಮೂಡ್ ಔಟ್ ಆದಾಗ ಯಾವುದಾದರೂ ಸಿನಿಮಾ ಕ್ಯಾಸೆಟ್ ತರಿಸಿ ನೋಡಿ ಬೇಜಾರು ಕಳ್ಕೋತೀನಿ."

"ಸಿನಿಮಾ ನೋಡಿ ಸಮಯವನ್ನು ವ್ಯರ್ಥ ಮಾಡುವ ಬದಲು ನಿಮ್ಮ ಈಡೇರದ ಬಯಕೆಯ ಕಡೆಗೆ ಗಮನಕೊಟ್ಟು ಅದನ್ನು ಕೈಗೂಡಿಸಿ

"ಯೂ ಆರ್ ವೆಲ್‌ಕಲಂ. ನನಗೂ ನಿಮ್ಮೊಂದಿಗೆ ಮಾತಾಡ್ಬೇಕೆನಿಸುತ್ತದೆ."

* * *

"ಹಲೋ!"

"ನಾನು".


"ಮಾತಾಡಿ."

"ಇಷ್ಟೊತ್ತು ಒಂದು ಸಿನಿಮಾ ನೋಡ್ತಿದ್ದೆ. ಯಾಕೋ ಮನಸ್ಸಿಗೆ ವ್ಯಾಕುಲವಾಗಿದೆ."

"ಇಷ್ಟಕ್ಕೂ ಯಾವ ಸಿನಿಮಾ?"

" 'ಹೂಸ್ ಲೈಫ್ ಈಸ್ ಇಟ್ ಎನಿವೇ'. ಎಂಬ ಆಂಗ್ಲ ಚಿತ್ರ. ಚಿತ್ರದ ಹೀರೋ ಸಿನಿಮಾ ಪೂರ್ತಿ ಹಾಸ್ಪೆಲ್ ಬೆಡ್ ಮೇಲೆ ಮಲಗಿರುತ್ತಾನೆ."

"ಕುರುಡನೋ. ಕುಂಟನೋ..ಆಗಿರುತ್ತಾನೆ."



ಕೊಳ್ಳಬಹುದಲ್ಲಾ?"

"ನಿಮ್ಮ ಸಲಹೇನ ಕನ್ಸಿಡರ್ ಮಾಡ್ತೀನಿ. ಸಂಗೀತ ಅಲ್ದೆ ಬಿಡುವಿನ ಸಮಯದಲ್ಲಿ ನೀವಿನ್ನೇನು ಮಾಡ್ತೀರಾ?"

"ವೆಸ್ಟರ್ನ್ ಮ್ಯೂಜಿಕ್ ಕೇಳ್ತೀನಿ. ಕನ್ನಡ ಜಾನಪದ ಗೀತೆಗಳೆಂದರೆ ಅಪಾರವಾದ ಒಲವು. ಹಾಡುವ ಅಭ್ಯಾಸದಲ್ಲಿ ತೊಡಗುತ್ತೇನೆ."

"ನಿಮ್ಮದು ಪೂರ್ಣವಾಗಿ ಸಂಗೀತ ಪ್ರಪಂಚ."

"ನಿಮ್ಮದು ಕಂಪ್ಯೂಟರ್ ಪ್ರಪಂಚ."

"ಆಫ್‌ಕೋರ್ಸ್! ಯಾರೋ ಬಂದಿದ್ದಾರೆ. ಆಮೇಲೆ ಫೋನ್ ಮಾಡ್ತೀನಿ."

"ಮತ್ತೇನಾ...? ಯಾಕೇ...?"

"ಯಾಕೋ ನಿಮ್ಮೊಂದಿಗೆ ಆಗಾಗಲೂ ಮಾತಾಡ್ತಿರಬೇಕು ಅನಿಸುತ್ತದೆ ಮೇಡಂ!"

"ಆ ಸಿನಿಮಾ ನೋಡಿದ್ದರೆ ನೀವು ಹೀಗೆ ಮಾತಾಡ್ತಿರಲಿಲ್ಲ.."

"ಅಷ್ಟು ಅದೃಷ್ಟ ನನಗೆಲ್ಲಿದೆ!"

"ಒಳ್ಳೆಯವರೇ ನೀವು! ಸಿನಿಮಾ ನೋಡುವುದಕ್ಕೆ ಅದೃಷ್ಟ ಬೇಕಾ?"

"ಸರಿ!...ಸರಿ!...ಅದೆಲ್ಲಾ ಒತ್ತಟ್ಟಿಗಿರಲಿ. ನಾವು ಇಷ್ಟು ದಿನಗಳಿಂದ ಒಳ್ಳೆ ಸ್ನೇಹಿತರಾಗಿಯೂ ನೀವು ನನ್ನನ್ನು 'ಮೇಡಂ' 'ನೀವು' 'ತಾವು' ಅಂತ ಬಹುವಚನದಲ್ಲಿ ಸಂಬೋಧಿಸುವುದು ಏಕೋ ನನಗೆ ಸರಿ ಕಾಣಲಿಲ್ಲ."

"ಸರಿ, ಇನ್ನು ಮುಂದೆ ಏಕವಚನದಲ್ಲೇ ಮಾತಾಡಿಸುತ್ತೇನೆ ಬಿಡು! ಆದರೆ..."

"ಏನೋ ಹೇಳುವುದಕ್ಕೆ ಹೊರಟು ಯಾಕೆ ನಿಲ್ಲಿಸಿ ಬಿಟ್ರೀ ಹೇಳಿ...?"

"ಏನೂ ಇಲ್ಲ, ನಾವು ಇಷ್ಟು ದಿನಗಳಿಂದ ಒಂದೇ ಊರಿನಲ್ಲಿದ್ದು ಹೆಸರು, ಕುಲ-ಗೋತ್ರ ಎಲ್ಲವನ್ನೂ ತಿಳಿದುಕೊಂಡು ಪರಸ್ಪರ ಭೇಟಿ ಮಾಡಕ್ಕಾಗಲಿಲ್ಲವಲ್ಲಾ! ಲಲಿತಾ!"

"..."

"ಹಲೋ!"

"ಉಂ!..."

"ಏನೂ ...ಮೌನವಾಗಿಬಿಟ್ರಲ್ಲಾ...?"

"ಏನೂ ಇಲ್ಲ."

"ನನ್ನ ಮಾತುಗಳಿಂದ ನಿಮಗೇನಾದರೂ ದುಃಖವಾಗಿದ್ದರೆ...ಸಾರಿ!"

"ಹಾಗೇನಿಲ್ಲ."

"ನಿಮಗೆ ನನ್ನನ್ನು ನೋಡಬೇಕೆಂದು ನಿಜವಾಗಿಯೂ ಅನಿಸಿದೆಯೇ ಪ್ರಶಾಂತ್?"

"ಬೆಟ್ಟದಷ್ಟು ಆಶೆ ಇದೆ."

"ಗುಡ್ ನೈಟ್!"

* * *

"ಹಲೋ!"

"ಮಾತಾಡು ಪ್ರಶಾಂತ್."

"ಏಕೆ...ನಿನ್ನ . ಕಂಠ ಒಂದು ಥರಾ ಗೊಗ್ಗರಾಗಿದೆ?"

"ಹಾಗೇನಿಲ್ಲ?" ನಿಮ್ಮ ಧ್ವನಿಯೇ ಸ್ವಲ್ಪ ಗಂಭೀರವಾಗಿದೆ."

"ಎಂಥದ್ದೂ ಇಲ್ಲ!ನಾವಿಬ್ಬರೂ ಯಾವಾಗ, ಎಲ್ಲಿ ಭೇಟಿಯಾಗೋಣ ಲಲಿತಾ?"

"ಅದೇನು...ನಾವಿಬ್ಬರೂ ಭೇಟಿಯಾಗದಿದ್ದರೇನೇ ಲೇಸು ಅಂದೆ ಮೊನ್ನೆ."

"ಆದರೆ...ನನ್ನಿಂದ ಸಾಧ್ಯವಿಲ್ಲ."

"ನನ್ನಿಂದಲೂ ಸಾಧ್ಯವಿಲ್ಲ.!"



"ನನ್ನ ನೋಡಿದ ನಂತರ ನಿಮ್ಮ ಪರಿಸ್ಥಿತಿ ಅಯೋಮಯವಾಗಬಹುದು."

"ನನ್ನ ಮೇಲೆ ನನಗೆ ಭರವಸೆ ಇದೆಯಾದರೂ ಒಮ್ಮೆ ನೀನು ನನ್ನನ್ನು ಭೇಟಿಯಾದೆಯೆಂದರೆ ಮತ್ತೆ ಇನ್ನೆಂದೂ ನೀನು ಭೇಟಿಯಾಗಲಿಚ್ಛಿಸದೇ ಇರಬಹುದು! ಕೊನೇ ಪಕ್ಷ ಮತ್ತೆ ಫೋನ್ ಸಹ ಮಾಡುವುದಿಲ್ಲವೇನೋ!"

"ತಪ್ಪದೇ ಫೋನ್ ಮಾಡುತ್ತೇನೆ. ಮತ್ತೆ ಮತ್ತೆ ಭೇಟಿಯಾಗುತ್ತಿರುತ್ತೇನೆ. ನನ್ನ ನಂಬಿಕೆ ಅಷ್ಟು ಬಲಹೀನವಾದುದಲ್ಲ ಪ್ರಶಾಂತ್."

"ನಾವು ಪರಸ್ಪರ ಭೇಟಿಯಾಗದಿರುವುದೇ ಲೇಸೆನಿಸುತ್ತದೆ ನನಗೆ ಲಲಿತ."

"ನನಗೂ ಹಾಗೇ ಅನಿಸುತ್ತದೆ ಪ್ರಶಾಂತ್. ಎನಿವೇ ಗುಡ್‌ನೈಟ್!"

"ನಾನೊಂದು ಯೋಚಿಸಿದ್ದೇನೆ...ಒಂದು ಕಂಡೀಶನ್ ಮೇಲೆ ನಾವಿಬ್ಬರೂ ಭೇಟಿಯಾಗಬಹುದು."

"ಏನದು?"

"ನಾವಿಬ್ಬರೂ ಪರಸ್ಪರ ಪ್ರತ್ಯಕ್ಷವಾಗಿ ಭೇಟಿಯಾದಾಗ ನಮ್ಮಿಬ್ಬರ ಊಹೆಗಳು ತಲೆಕೆಳಗಾಗುವ ಹಾಗಿದ್ದರೆ...ಆ ಒಂದು ಸಾರಿ ನಾವು ಭೇಟಿಯಾಗಿದ್ದವೆಂಬುದನ್ನು ಮರೆತು ನಮ್ಮ ಫೋನ್ ಸ್ನೇಹವನ್ನು ಮುಂದುವರೆಸಿಕೊಂಡು ಹೋಗಬೇಕು. ಓ.ಕೆ.?"

"ಓ.ಕೆ.!"

* * *

"ಹಲೋ ಪ್ರಶಾಂತ್"

"ಉಂ!..."

"ಮೂರು ದಿನಗಳಿಂದ ಏನಾಗಿತ್ತು ನಿಮಗೆ? ಒಂದೇ ಒಂದು ಫೋನ್ ಸಹಾ ಇಲ್ಲ...?"

"ನಿಮ್ಮನ್ನ ಕುರಿತೇ ಆಲೋಚಿಸುತ್ತಿದ್ದೆ ಲಲಿತಾ."

"ಏನಂತ?"

"ಲಲಿತಾ!"...ನಿನ್ನನ್ನು ಭೇಟಿಯಾಗಿ, ನಿನ್ನ ಮನಸ್ಸನ್ನು ನೋಯಿಸುವುದಕ್ಕಿಂತ ಭೇಟಿಯಾಗುವ ಮುನ್ನ ನನ್ನ ಕುರಿತು ನಿನಗೆ ಸಂಕ್ಷಿಪ್ತವಾಗಿ ಹೇಳಿಬಿಡುವುದೇ ಸೂಕ್ತ ಅನಿಸುತ್ತದೆ."

"ನನಗೂ ಅಷ್ಟೇ ಪ್ರಶಾಂತ್!"

"ಮೊದಲು ನನಗೆ ಹೇಳಲು ಅವಕಾಶ ಕೊಡು ಲಲಿತಾ! ಹತ್ತು ವರ್ಷಗಳ ಹಿಂದೆ ನಾನೊಂದು ಉದ್ಯೋಗಕ್ಕೆ ಸೇರಲು ಹೊರಟಾಗ ಅನಿರೀಕ್ಷಿತವಾಗಿ ಘಟಿಸಿದ ಒಂದು ವಾಹನ ಅಪಘಾತದಲ್ಲಿ ನನ್ನ ಒಂದು ಕಾಲು ಪೂರ್ತಿಯಾಗಿ ಮುರಿದು, ಮತ್ತೊಂದು ಕಾಲಿಗೆ ತೀವ್ರ ಪೆಟ್ಟುಗಳಾದವು. ಅಂದಿನಿಂದಲೂ ನಾನು ಸ್ವಲ್ಪ ಕದಲಬೇಕಾದರೂ ಊರುಗೋಲುಗಳು ಬೇಕು. ನಾಲ್ಕು ಗೋಡೆಗಳ ಮಧ್ಯೆಯೇ ನನ್ನ ಪ್ರಪಂಚ. ಆಚೆಗೆ ಬರಬೇಕಾದು ವ್ಹೀಲ್ ಚೇರ್ ಬೇಕು."

"ನನಗೆ ಎಲ್ಲಾ ಗೊತ್ತು ಪ್ರಶಾಂತ್. ನಾವು ಇಬ್ಬರೂ ಭೇಟಿಯಾಗಬೇಕೆಂದು ಕೊಂಡ ಮಾರನೆಯ ದಿನವೇ ನಿಮ್ಮ ಕುರಿತು ಎಲ್ಲಾ ವಿವರಗಳನ್ನು ಸಂಗ್ರಹಿಸಿದೆ. ನೀವು ಅಷ್ಟು ಬಾಧೆ ಪಡುವ ಅಗತ್ಯವಿಲ್ಲ. ನಿಜಕ್ಕೂ ನೀವು ತಿಳಿದುಕೊಳ್ಳಬೇಕಾಗಿರುವುದು ನನ್ನ ಕುರಿತು! ಈ ವರ್ಣಮಯ ಜಗತ್ತಿನ ರಂಗುಗಳನ್ನು ನೋಡುವ ವಯಸ್ಸು ಪ್ರಾಪ್ತವಾಗುವ ವೇಳೆಗೆ ಒಮ್ಮೆ ತೀವ್ರ ರೂಪದ ಜ್ವರಕ್ಕೆ ತುತ್ತಾಗಿ ನನ್ನ ಕಣ್ಣುಗಳು ಕಾಣದಂತಾಗಿ ಕುರುಡಿಯಾದೆ. ಅಂದಿನಿಂದಲೂ...ಸಂಗೀತವೇ ನನ್ನ ಕಣ್ಣು...ಊಹೆಗಳೇ ನನ್ನ ಲೋಕ...ಕಲ್ಪನೆಗಳೇ ನನ್ನ ಜೀವಕ್ಕೆ ಆಧಾರವಾದವು. ಇದು ಸತ್ಯ ಸಂಗತಿ. ನನ್ನ ಕುರಿತು ಇಷ್ಟು ತಿಳಿದುಕೊಂಡು ಈಗಲೂ ನಿಮಗೆ ನನ್ನನ್ನು ಭೇಟಿಯಾಗುವ ಮನಸ್ಸಿದೆಯೇ ಪ್ರಶಾಂತ್!"



"ದರೋಡೆಕೋರರ ಸಂಪರ್ಕ ಇಟ್ಕೊಂಡ್ರೆ ಸರಕಾರಕ್ಕೆ ಒಳ್ಳೇದು. ತೆರಿಗೆ ಕೊಡ್ದೇ ಇರ್ರೋ ಹಣವಂತರನ್ನು ಸುಲಭವಾಗಿ ಹಿಡೀಬಹುದು."

"ಖಂಡಿತಾ ಇದೆ ಲಲಿತಾ! ಕಾರಣ ನಾವಿಬ್ಬರೂ ಒಂದೇ ದೋಣಿಯ ಪಯಣಿಗರು."

"ಆದರೆ ನಾವಿಬ್ಬರೂ ಪರಸ್ಪರ ಭೇಟಿಯಾಗಬೇಕಾದರೆ ನಮಗೆ ಮತ್ತೊಬ್ಬರ ಸಹಾಯ ಬೇಕಲ್ಲಾ!"

"ಹೌದು ಲಲಿತಾ!...ನೀನು ಸಮ್ಮತಿಸಿದರೆ...ಒಮ್ಮೆ ನಾವಿಬ್ಬರೂ ಭೇಟಿಯಾದೆವೆಂದರೆ ಆನಂತರ ಮತ್ತೊಮ್ಮೆ ಅದರ ಅವಶ್ಯಕತೆ ನಮಗಿರುವುದಿಲ್ಲ."

"........."

"ದಾರಿ ತೋರಿಸಲು ನನಗೆ ಕಣ್ಣುಗಳಿವೆ. ಮುಂದೆ ನಡೆಸಲು ನಿನಗೆ ಕಾಲುಗಳಿವೆ. ನನಗೆ ನೀನು...ನಿನಗೆ ನಾನು..ಏನಂತೀಯ ಲಲಿತಾ?"

"ಏನಾದರೂ ಹೇಳಿದರೆ ಅಡಾಲಸೆಂಟ್ ಅಂತ ತಿಳ್ಕೋಳ್ತೀರಾ."

"ಇಲ್ಲ ಹೇಳು ಲಲಿತಾ...?"

"ಐ ಲೌವ್ ಯು!

(ಆಂಗ್ಲ ಕಥೆಯೊಂದರಿಂದ ಪ್ರೇರಿತ)

ನೆನಪು ನೆರಳಿನಲ್ಲಿ

ಸುಮಾರು ಮೂವತ್ತು ವರ್ಷಗಳ ಹಿಂದೆ ನಡೆದ ಘಟನೆ. ಕ್ಯಾನ್ಸರ್‌ನಿಂದ ಬಳಲುತ್ತಿದ್ದ ನನ್ನ ತಾಯಿಯನ್ನು ಹೆಚ್ಚಿನ ಚಿಕಿತ್ಸೆಗಾಗಿ ಮುಂಬಯಿಗೆ ಕರೆದೊಯ್ಯಲಾಗಿತ್ತು. ಆಗ ಕ್ಯಾನ್ಸರಿಗೆ ಈಗಿರುವಷ್ಟು ಔಷಧಗಳಾಗಲಿ ವೈದ್ಯಕೀಯ ಚಿಕಿತ್ಸೆಯಾಗಲಿ ಲಭ್ಯವಿರಲಿಲ್ಲ. ಮೂರು ತಿಂಗಳು ಅವಳಿಗೆ ಚಿಕಿತ್ಸೆ ಮಾಡಿದ ಮುಂಬಯಿ ವೈದ್ಯರು ನಮ್ಮ ತಾಯಿ ಇನ್ನು ಬಹಳ ದಿನ ಬದುಕುವ ಭರವಸೆ ಇಲ್ಲವೆಂದು ಹೇಳಿ ಮರಳಿ ಕರೆದೊಯ್ಯಲು ಸೂಚಿಸಿದಾಗ ಗತ್ಯಂತರವಿಲ್ಲದೆ ನನ್ನ ತಂದೆಯವರು ಅವಳನ್ನು ನಾವಾಗ ಇರುತ್ತಿದ್ದ ಬೆಳಗಾವಿಗೆ ಕರೆತಂದರು. ತೀವ್ರವಾದ ನೋವಿನಿಂದ ಬಳಲುತ್ತಿದ್ದ ಅವಳನ್ನು ರೈಲು ನಿಲ್ದಾಣದಿಂದ ನೇರವಾಗಿ ಆಸ್ಪತ್ರೆಗೆ ಕರೆದೊಯ್ಯುವ ಸಲುವಾಗಿ ಅಂಬುಲೆನ್ಸ್‌ನ ವ್ಯವಸ್ಥೆ ಮಾಡಲಾಗಿತ್ತು. ತಾಯಿಯನ್ನು ಕಾಣಲೆಂದು ನಾನು ಅಣ್ಣನೊಂದಿಗೆ ರೈಲ್ವೆ ಸ್ಟೇಶನ್ನಿಗೆ ಹೋದೆ. ಬಹುಶಃ ನನ್ನ ತಾಯಿಗೂ ತಾನಿನ್ನು ಉಳಿಯುವದಿಲ್ಲವೆಂಬುದು ಅರಿವಾಗಿತ್ತೇನೋ. ನನ್ನನ್ನೂ ಅಣ್ಣನನ್ನೂ ಬದಿಗೆ ಕೂರಿಸಿಕೊಂಡು, ಮೃದುವಾದ, ಕ್ಷೀಣಸ್ವರದಲ್ಲಿ ಎರಡು ಮಾತನಾಡಿ, ತಮ್ಮನೇಕೆ ಬರಲಿಲ್ಲ? ಎಂದು ಕೇಳಿದಳು. ಅವನನ್ನು ಕಾಣಲು ಅವಳ ಜೀವ ತುಡಿಯುತ್ತಿತ್ತೇನೋ. ಅಂಬುಲೆನ್ಸಿನವರು ಅವಳ ಅಪೇಕ್ಷೆಯನ್ನು ಈಡೇರಿಸುವ ಮನಸ್ಸಿನಿಂದ ಅದನ್ನು ನಮ್ಮ ಮನೆಯವರೆಗೆ ತಂದರು. ಆದರೆ ತಾಯಿ ಮನೆಗೆ ಬರುವುದು ಗೊತ್ತಿರದ ಆತ ಆಡಿಕೊಳ್ಳಲೆಂದು ಎಲ್ಲಿಗೋ ಹೊರಟುಹೋಗಿದ್ದ. ಎಷ್ಟು ಹುಡುಕಿದರೂ ಅವನು ಸಿಗಲಿಲ್ಲ. ಅಷ್ಟರಲ್ಲಿ ತಾಯಿಗೆ ಉಸಿರಾಟದ ತೊಂದರೆ ಆರಂಭವಾಗಿ ಇನ್ನು ಕಾಯುವುದು ಬೇಡವೆಂದು ಅಂಬುಲೆನ್ಸ್ ಮರಳಿ ಹೊರಟಿತು. ಅದು ಧೂಳೆಬ್ಬಿಸುತ್ತ ಬೀದಿಯ ತಿರುವಿನಲ್ಲಿ ಮರೆಯಾದ ಸಮಯಕ್ಕೆ ನನ್ನ ತಮ್ಮ ಎಲ್ಲಿಂದಲೋ ಓಡಿ ಬಂದವನು, ತಾಯಿ ಬಂದು ಹೋದಳೆಂದು ಗೊತ್ತಾದೊಡನೆ ಬಿದ್ದು ಬಿದ್ದು ಅಳತೊಡಗಿದ. ಅವಳನ್ನು ನೋಡಬೇಕೆಂದು ಒಂದೇ ಸವನೆ ಹಟಮಾಡತೊಡಗಿದಾಗ ನಾವು ಅವನನ್ನು ಕರೆದುಕೊಂಡು ಆಸ್ಪತ್ರೆಗೆ ಹೋದೆವು. ಆದರೆ ಅಲ್ಲಿಗೆ ಮುಟ್ಟುವಷ್ಟರಲ್ಲಿಯೇ ನಮ್ಮ ತಾಯಿ ನಮ್ಮನ್ನಗಲಿ ಮರಳಿ ಬಾರದ ಊರಿಗೆ ಹೊರಟುಹೋಗಿದ್ದಳು. ಕಿರಿಯ ಮಗ ನನ್ನು ಕಾಣಬೇಕೆಂಬ ಅವಳ ಕೊನೆಯ ಆಸೆ ಆಸೆಯಾಗಿಯೇ ಉಳಿಯಿತು. ನನ್ನ ತಮ್ಮನಿಗೂ ತಾಯಿಯ ಕೊನೆಯ ದರ್ಶನವಾಗಲೇ ಇಲ್ಲ. ಚಿಕ್ಕ ಮಕ್ಕಳೆಂಬ ಕಾರಣದಿಂದಾಗಿ ನಮ್ಮಿಬ್ಬರಿಗೂ ಅವಳ ದೇಹವನ್ನು ನೋಡಲೂ ಆಸ್ಪತ್ರೆಯವರು ಬಿಡಲಿಲ್ಲ. ತಮ್ಮ ಇನ್ನೊಂದೇ ನಿಮಿಷ ಮೊದಲೆ ಬಂದಿದ್ದರೆ ಅವಳನ್ನು ಕಾಣಬಹುದಾಗಿತ್ತು ಎಂಬ ಸಂಕಟ ನಮ್ಮೆಲ್ಲರ ಎದೆಯಲ್ಲೂ ಉಳಿಯಿತು.

• *ಜಯಶ್ರೀ ದೇಶಪಾಂಡೆ*

ಈ ಎರಡು ಘಟನೆಗಳು ನನ್ನ ನೆನಪಿನ ಭಿತ್ತಿಯಲ್ಲಿ ಅಚ್ಚೊತ್ತಿವೆ.

ಆಗ ನಾನಿನ್ನೂ ಬ್ರಹ್ಮಚಾರಿ. ಬೆಂಗಳೂರಿನಲ್ಲಿ ನಿವೇಶನ ದೊರಕಿತ್ತು. ನನಗೇಕೆ ನಿವೇಶನ, ಮನೆ ಎಂಬ ಧೋರಣೆಯೂ ನನ್ನಲ್ಲಿತ್ತು.

"ಜಾಗ ಸಿಕ್ಕಿರೋವಾಗ ಬಿಡೋದುಂಟೆ? ತೆಗೆದುಕೋ" ಎಂದು ಹಿರಿಯರ ಒತ್ತಾಯ. ಪ್ರಾಧಿಕಾರಕ್ಕೆ ಪಾವತಿ ಮಾಡಲು ಕೈಯಲ್ಲಿ ಸಾಕಷ್ಟು ಹಣವಿದ್ದಿಲ್ಲ. (೧೯೭೬ ರಲ್ಲಿ ೩೦'x೪೦' ನಿವೇಶನದ ಬೆಲೆ ಬೆಂಗಳೂರಲ್ಲಿ ಕೇವಲ ೩೫೦೦ ರೂ.ಗಳು) ನನ್ನ ಸ್ನೇಹಿತನಿಗೆ ವಿಷಯ ತಿಳಿಸಿದೆ. ಆತ ಚಿಕ್ಕಪೇಟೆಯಲ್ಲಿರುವ ತನ್ನ ಸೋದರಮಾವ 'ಸ್ವೀಟ್ ಸ್ಟಾಲ್' ಮಾಲೀಕರಲ್ಲಿಗೆ ನನ್ನನ್ನು ಕರೆದೊಯ್ದ. ಅವರು ವಿಶ್ವಾಸದಿಂದ ಹಿಂದುಮುಂದು ನೋಡದೆ ಅಂದಿನ ಗಳಿಕೆಯ ಹಣವನ್ನು ನನಗೆ ಕೊಟ್ಟಿದ್ದರು. ಹೀಗಾಗಿ ನಾನು ನಿವೇಶನದ ಮಾಲೀಕನಾಗಿದ್ದೆ.

೧೯೮೦ ರಲ್ಲಿ ನಾನು ಬಾಡಿಗೆಯ ಮನೆಯನ್ನರಸಿ ಜೆ.ಪಿ. ನಗರಕ್ಕೆ ಹೋದಾಗ ದೊರೆತಿದ್ದು ರೆಡ್ಡಿ ದಂಪತಿಗಳ ಔಟ್‌ಹೌಸ್. 'ನೀವು ಬ್ರಾಹ್ಮಣರು, ಮಡಿಜಾಸ್ತಿ. ನಿಮಗೆ ಮನೆ ಬಾಡಿಗೆಗೆ

ಕೊಡೋಲ್ಲ' ಅಂದಿದ್ದರು. ನಂತರ ಸಮಜಾಯಿಷಿ ನೀಡಿದ ಮೇಲೆ ಹೇಗೋ ಮನೆ ದೊರಕಿತ್ತು. ನಾನು ಮನೆ ಕಟ್ಟಿಸಲು ಪ್ರಾರಂಭಿಸಿದಾಗ ಪ್ರತಿಯೊಂದು ಹಂತದಲ್ಲೂ ನನಗೆ ಸಹಕರಿಸಿದ ಆ ದಂಪತಿಗಳ ಬಗೆಗೆ ಬರೆಯಲು ಶಬ್ದಗಳೇ ಸಾಲುವುದಿಲ್ಲ. ನಾನು ಸ್ವಂತದ ಮನೆಗೆ ಬರುವಾಗ ಆದರದ ಆತಿಥ್ಯ ನೀಡಿ, ನನ್ನವಳಿಗೆ ಸೀರೆ ರವಿಕೆಗಳೊಂದಿಗೆ ಉಡಿ ತುಂಬಿ ಭಾರವಾದ ಮನಸ್ಸಿನಿಂದ ಬೀಳ್ಕೊಟ್ಟರು ರೆಡ್ಡಿ ದಂಪತಿಗಳು. ಪ್ರತಿ ವರ್ಷವೂ ಗೌರಿಹಬ್ಬದಂದು ಮಂಗಳದ್ರವ್ಯದೊಂದಿಗೆ ಬಂದು, ನನ್ನವಳಿಗೆ ನೀಡಿ, ನಮ್ಮೆಲ್ಲರಿಗೂ ಶುಭಾಶಯ ಕೋರಿ ತೆರಳುವ ಅವರನ್ನು ಕಂಡಾಗ ಹೃದಯ ತುಂಬಿ ಬರುತ್ತದೆ.

• ಟಿ.ವಿ. ಮುಕುಂದರಾವ್

ನನಗಾಗ ಸುಮಾರು ೬ ವರ್ಷಗಳಿರಬಹುದು. ನಾಲ್ಕನೇ ತರಗತಿಯಲ್ಲಿ ಓದುತ್ತಿದ್ದೆ. ನಮ್ಮದು ತುಂಬಾ ದೊಡ್ಡ ಹಾಗೂ ಬಡ ಕುಟುಂಬ. ನಾನು ಎಂಟನೆಯವಳು. ನನಗೆ ಐದನೆಯ ವರ್ಷ ನಡೆಯುತ್ತಿರುವಾಗಲೆ ಅಕ್ಕನ ಮದುವೆಯಾಯಿತು. ಆಮೇಲೆ ಅಮ್ಮನಿಗೆ ಮನೆಗೆಲಸದ ಒತ್ತಡ. ತಂಗಿ ತುಂಬಾ ಚಿಕ್ಕವಳು. ಹೀಗಾಗಿ ನನ್ನ ಆರು ಜನ ಅಣ್ಣಂದಿರು ಮತ್ತು ಅಮ್ಮ ಸಣ್ಣಪುಟ್ಟ ಕೆಲಸಗಳಿಗೆಲ್ಲ ನನ್ನನ್ನೇ ಅವಲಂಬಿಸುತ್ತಿದ್ದರು. ಇವರೆಲ್ಲರೂ ಸೇರಿ ಒಟ್ಟಿಗೇ ಒಂದೇ ಸಮಯಕ್ಕೆ ಕೆಲಸ ಹೇಳಿದಾಗ ಮಾಡಲಾಗದೆ ತಡವಾಗಿ ಎಲ್ಲರಿಂದಲೂ ತಲೆಯ ಮೇಲೆ ಹೊಡೆತ ತಿನ್ನುತ್ತಿದ್ದೆ. ಮನೆಯ ಪ್ರೀತಿಯ, ಪರಿಶುದ್ಧ ವಾತಾವರಣ ಹಾಗೂ ತಂದೆ-ತಾಯಿಯ ಪ್ರೀತಿ-ವಾತ್ಸಲ್ಯ, ಅಣ್ಣ, ಅಕ್ಕ-ತಂಗಿಯರ ಅಕ್ಕರೆ ಬಯಸುತ್ತಿದ್ದ ನನ್ನ ಪುಟ್ಟ ಮನಸ್ಸು ಅವುಗಳಿಂದ ವಂಚಿತವಾಗಿ ಮುದುಡಿ ಹೋಯಿತು. ಮನೆಯವರ ತಿರಸ್ಕೃತ ನೋಟ, ಮಾತು, ಮನಸ್ಸಿಗೆ ಜಿಗುಪ್ಸೆ ತಂದಿತು. ಬದುಕು ಬೇಡವಾಯಿತು. ಎಷ್ಟೋ ಬಾರಿ ಆತ್ಮಹತ್ಯೆಗೆ ಮನಸ್ಸು ಮಾಡಿದ್ದರೂ ಅಷ್ಟು ಧೈರ್ಯ ಬರಲಿಲ್ಲ. ಜೊತೆಗೆ ಹೆತ್ತವರ ಗೌರವದ ಪ್ರಶ್ನೆ. ಆಗ ಒಂದು ದಿನ ಒಂದು ಚೀಟಿಯಲ್ಲಿ, 'ನನಗೆ ಬದುಕಲು ಇಷ್ಟವಿಲ್ಲ. ನಾನು ಶಾಲೆಗೆ ಹೋಗುವಾಗ ಅಥವಾ ಬರುವಾಗ ಯಾವುದಾದರೂ ವಾಹನಕ್ಕೆ ಸಿಕ್ಕಿ ಆಕ್ಸಿಡೆಂಟ್ ಮಾಡಿಕೊಳ್ಳುತ್ತೇನೆ. ನನಗೆ ಮನೆ ಬೇಡ, ಯಾರೂ ಬೇಡ, ನಾನು ಸಾಯಬೇಕು' ಎಂದು ಬರೆದು ನಂತರ ಅದನ್ನು ಪುಸ್ತಕದಲ್ಲಿ ಇಟ್ಟೆ. ಮನೆಗೆ ಹೋಗಿ ಪುಸ್ತಕ ಹುಡುಕಿದಾಗ ಚೀಟಿಯೇ ಇರಲಿಲ್ಲ. ಯಾರಿಗೆ ಸಿಕ್ಕಿ ಏನು ಹಗರಣವಾಗುವುದೋ ಎಂದು ಹೆದರಿಬಿಟ್ಟೆ. ಮರುದಿನ ಶಾಲೆಗೆ ಹೋದ ಕೂಡಲೇ ನಮ್ಮ ಮಾಸ್ತರರಿಂದ ಕರೆಬಂತು. ಹೋದ ಕೂಡಲೇ ಅವರು ನಮ್ಮ ಮನೆಯ ಬಗ್ಗೆ ಸಂಕ್ಷಿಪ್ತವಾಗಿ ಕೇಳಿದರು. ನನಗೆ ವಸ್ತುಸ್ಥಿತಿಯ ಅರಿವಾಯಿತು. ಅಂದು ನಮ್ಮ 'ವೆಂಕಟಸ್ವಾಮಿ' ಉಪಾಧ್ಯಾಯರು ಹಾಗೂ 'ಜಯಲಕ್ಷ್ಮಿ' ಉಪಾಧ್ಯಾಯರು "ನಿನಗಲ್ಲದಿದ್ದರೆ ಬೇರೆಯವರ ಸಂತೋಷಕ್ಕಾಗಿ, ಸುಖಕ್ಕಾಗಿ ಬದುಕಬೇಕು ಆಗಲೇ ಜೀವನ ಸಾರ್ಥಕ," ಎಂದು ಬುದ್ಧಿವಾದ ಹೇಳಿದರು. ಅಷ್ಟೇ ಅಲ್ಲ, ಅವರ ಪ್ರೀತಿ-ವಾತ್ಸಲ್ಯವೂ ನನಗೆ ದೊರಕಲಾರಂಭಿಸಿತು. ಅಂದಿನಿಂದ ಬೇರೆಯವರ ನಗುವಿನಲ್ಲಿ ನನ್ನ ನಗುವನ್ನು ಕಾಣುವಲ್ಲಿ ನನಗೆ ಹೆಚ್ಚು ಸಂತೋಷ. ಆ ಚೀಟಿ ಹೇಗೆ ಅವರ ಕೈಸೇರಿತೆನ್ನುವುದು ನನಗೆ ಇಂದಿಗೂ ತಿಳಿದಿಲ್ಲ. ಇದಾಗಿ ಒಂದು ವರ್ಷಕ್ಕೆ ಅವರಿಗೆ ವರ್ಗವಾಯಿತು. ವರ್ಗದ ಸುದ್ದಿ ತಿಳಿದಾಗ ಮನಸಾರೆ ಅತ್ತಿದ್ದೆ. ಇಂದಿಗೂ ಅವರು ಯಾವ ಊರಿನಲ್ಲಿ ವಾಸವಾಗಿದ್ದಾರೆ ಎನ್ನುವುದು ನನಗೆ ತಿಳಿದಿಲ್ಲ.

ಈಗ ನನಗೆ ೨೩ ವರ್ಷಗಳು. ಈಗಲೂ ನನಗೆ ಪ್ರೀತಿ-ವಾತ್ಸಲ್ಯಗಳ ಕೊರತೆಯೆನಿಸಿದಾಗ ನನ್ನ ಮನಸ್ಸು ಆ ಗುರುಗಳನ್ನರಸುತ್ತ ಬಾಲ್ಯದ ಆ ದಿನಗಳತ್ತ ಓಡುತ್ತದೆ, ಅವರ ಪ್ರೀತಿಯ ನೆರಳಿನಲ್ಲಿ ನಿಲ್ಲಲು.

• ಕೆ.ಜೆ. ರೇಣುಕಾಂಬ

ಈತ ಪೋಲಿಯೋ ಗುಣಪಡಿಸಬಲ್ಲ

ಅವನದು ಅರಣ್ಯರೋದನವೇ ಆಗಿದೆ

● ಶ್ರೀಕಾಂತ ಮಳಗಿ

ರಾಜೇಂದ್ರಪ್ರಸಾದ್ ಎಂಬೊಬ್ಬ ಐಪಿಎಸ್ ಆಫೀಸರ್. ಬಿಹಾರಿನಲ್ಲಿ ಕೆಲಸ. ತನ್ನ ಸಂಸಾರವನ್ನು ನೋಡಿಕೊಳ್ಳುವುದರ ಜೊತೆಗೆ ಅಖಿಲೇಶ್‌ನೆಂಬ ಸೋದರಳಿಯನನ್ನೂ ನೋಡಿಕೊಳ್ಳಬೇಕಾಗಿತ್ತು. ಆರು ವರ್ಷದವನಿದ್ದಾಗ (ಈಗ ೧೧ ವರ್ಷ) ಅಖಿಲೇಶನಿಗೆ ಪೋಲಿಯೋ ತಗುಲಿತು. ರಾಜೇಂದ್ರಪ್ರಸಾದ್ ಅಖಿಲೇಶನನ್ನು ಕರೆದುಕೊಂಡು ಕಂಡ ಕಂಡಲ್ಲೆಲ್ಲಾ ಅಲೆದ. ತನ್ನ ಗಮನಕ್ಕೆ ಬಂದ ಎಲ್ಲಾ ವಿಶೇಷಜ್ಞರಿಗೆ ತೋರಿಸಿ ಚಿಕಿತ್ಸೆ ಕೊಡಿಸಿದ. ಕಾಲುಗಳು ಕೃಶವಾಗುತ್ತಲೇ ಹೋದವೇ ಹೊರತು ಆ ಚಿಕಿತ್ಸೆಗಳಿಂದ ಅಖಿಲೇಶನಿಗೆ ಯಾವ ಪ್ರಯೋಜನವೂ ಆಗಲಿಲ್ಲ.

ಊರುಗೋಲಿನ ಆಸರೆಯಿಲ್ಲದೆ ಅಖಿಲೇಶನಿಗೆ ನಡೆಯಲೂ ಆಗುತ್ತಿರಲಿಲ್ಲ. ಮುಂದೇನು ಮಾಡಬೇಕೆಂದು ರಾಜೇಂದ್ರಪ್ರಸಾದನಿಗೆ ತೋಚುತ್ತಲೂ ಇರಲಿಲ್ಲ. ಹೀಗಿರುತ್ತಲೊಂದು ದಿನ ಹರಿಪುರವೆಂಬ ಹಳ್ಳಿಯಲ್ಲಿ ಪಂಚಮಕುಮಾರ ದಾಸ್ ಎಂಬ ಒಬ್ಬನು ಇದ್ದಾನೆಂದೂ ಆತ ಗಿಡಮೂಲಿಕೆಗಳಿಂದ ಪೋಲಿಯೋವನ್ನು ಗುಣಪಡಿಸುತ್ತಾನೆಂದೂ ರಾಜೇಂದ್ರಪ್ರಸಾದನ ಕಿವಿಗೆ ಸುದ್ದಿ ಬಿತ್ತು.

ಆಗ ಆತ ಅರಾರಿಯಾ ಜಿಲ್ಲೆಯಲ್ಲಿ ಪೊಲೀಸ್ ಸೂಪರಿಂಟೆಂಡೆಂಟ್ ಆಗಿ ಕಾರ್ಯನಿರ್ವಹಿಸುತ್ತಿದ್ದ. ಹರಿಪುರವಿರುವುದೂ ಅರಾರಿಯಾ ಜಿಲ್ಲೆಯಲ್ಲಿಯೆ. ಸುದ್ದಿ ತಿಳಿದದ್ದೇ ತಡ ರಾಜೇಂದ್ರಪ್ರಸಾದ್ ಅಖಿಲೇಶನನ್ನು ಕರೆದುಕೊಂಡು ಸೀದಾ ಹರಿಪುರಕ್ಕೇ ಹೋದ. ಅಖಿಲೇಶನನ್ನು ಪರೀಕ್ಷಿಸಿದ ಪಂಚಮಕುಮಾರ "ನಾನು ಔಷಧ ಕೊಡುತ್ತೇನೆ. ಆದರೆ



ಮತ್ತೆ ತನ್ನ ಕಾಲಮೇಲೆ ನಿಲ್ಲಬಲ್ಲ ತಾಕತ್ತು ಪಡೆದಿರುವ ಅಖಿಲೇಶ್


ಪರಿಣಾಮ ಕಂಡುಬರಲು ಆರು ತಿಂಗಳಾದರೂ ಬೇಕು" ಅಂದ.

ಕಂಡಕಂಡ ವಿಶೇಷಜ್ಞರ ಬಳಿ ಅಲೆದು ಅಲೆದು ರಾಜೇಂದ್ರಪ್ರಸಾದನಿಗೆ ಸಾಕಾಗಿತ್ತು. ಪೋಲಿಯೋ ಎಂದಾದರೊಮ್ಮೆ ವಾಸಿಯಾಗಬಹುದೆಂಬ ವಿಶ್ವಾಸವೂ ಹೋದಂತಾಗಿತ್ತು., ಇಂಥದರಲ್ಲಿ ಪಂಚಮಕುಮಾರನ ಮಾತು ಅವನಲ್ಲಿ ಒಂದಿಷ್ಟು ಆಸೆಯನ್ನು ಹುಟ್ಟಿಸಿತು. "ರೋಗ ಸಂಪೂರ್ಣವಾಗಿ ವಾಸಿಯಾಗದಿದ್ದರೂ ಪರವಾಗಿಲ್ಲ, ಸುಧಾರಣೆಯಾದರೂ ಸಾಕು. ಅದಕ್ಕಾಗಿ ನಾನು ಆರು ತಿಂಗಳೇಕೆ, ಆರು ವರ್ಷವಾದರೂ ಕಾಯಲು ಸಿದ್ಧ" ಎಂದ ರಾಜೇಂದ್ರಪ್ರಸಾದ್.

ಚಿಕಿತ್ಸೆಯನ್ನು ಪ್ರಾರಂಭಿಸಲಾಯಿತು. ಎರಡೇ ತಿಂಗಳಲ್ಲಿ ಔಷಧ ಪ್ರಭಾವವನ್ನು ತೋರಿಸತೊಡಗಿ ಆರೇ ತಿಂಗಳಲ್ಲಿ ಅಖಿಲೇಶ ಪೋಲಿಯೋದಿಂದ ಮುಕ್ತನಾದ. ಈಗ ಆತ ಎಲ್ಲರಂತೆಯೆ ನಡೆದಾಡಬಲ್ಲ. ಊರುಗೋಲಿನ ಅವಶ್ಯಕತೆ ಎಳ್ಳಷ್ಟೂ ಇಲ್ಲ.

"ಅದ್ಭುತ ಎನ್ನುತ್ತೀರಾ? ಇದರಲ್ಲಿ ಅಂಥಾ ಅದ್ಭುತವಾದದ್ದು ಏನೂ ಇಲ್ಲ. ನಾನು ಕೊಡುವ ಔಷಧದಲ್ಲಿ ಅನೇಕ ಗಿಡಮೂಲಿಕೆಗಳನ್ನು ಸೇರಿಸಲಾಗಿರುತ್ತದೆಯಾದರೂ ಮುಖ್ಯವಾಗಿ ಉಪಯೋಗಿಸಲ್ಪಡುವುದು ಸಿಂಕೋನಾ ಹಾಗೂ ಚೆಂಡುಹೂವಿನ ಸಸ್ಯಗಳನ್ನು. ನನ್ನ ತಂದೆ ಯೋಗೀಶ್ವರಲಾಲರು ಅಡವಿಗೆ ಹೋಗಿ ಸಸ್ಯಗಳನ್ನು ಆರಿಸಿಕೊಂಡು ಬಂದು ಔಷಧ ತಯಾರಿಸುತ್ತಿದ್ದುದನ್ನೂ ಅವರು ಕೊಟ್ಟ ಔಷಧದಿಂದ ಪೋಲಿಯೋ ರೋಗಿಗಳು ಗುಣಮುಖರಾಗುವುದನ್ನೂ ನಾನು ಬಹಳ ಕಾಲದಿಂದ ನೋಡುತ್ತಾ ಬಂದಿದ್ದೆ. ೧೯೮೬ರಲ್ಲಿ ಅವರು ತೀರಿಕೊಂಡ ನಂತರ ಅವರ ಕೆಲಸವನ್ನೇ ನಾನು ಮುಂದುವರಿಸಿಕೊಂಡು ಬಂದೆ" ಎನ್ನುತ್ತಾನೆ ಪಂಚಮಕುಮಾರ.

ರೋಹತಕ್‌ನಲ್ಲಿ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್‌ರಾದ ಬಿ.ಎನ್. ಗಿರಿಯವರ ಐದು ವರ್ಷದ ಮಗನಿಗೂ ಪೋಲಿಯೋ ತೊಂದರೆಯಿತ್ತು. ರಾಜೇಂದ್ರಪ್ರಸಾದನ ಸುದ್ದಿಯನ್ನೇ ತಿಳಿದದ್ದೇ ತಡ ತಮ್ಮ ಮಗನನ್ನು ಕರೆದುಕೊಂಡು ಪಂಚಮಕುಮಾರನ ಬಳಿಗೆ ಹೋಗಿ ಚಿಕಿತ್ಸೆ ಕೊಡಿಸಿದರು. ಎರಡು



ನಿರಾಶೆಯ ನೆರಳಲ್ಲಿರುವ ಪಂಚಮಕುಮಾರ್ ದಾಸ್

ವರ್ಷದ ಹಿಂದೆ ಆ ಹುಡುಗನಿಗೆ ಊರುಗೋಲಿನ ಸಹಾಯವಿಲ್ಲದೆ ಎದ್ದುನಿಲ್ಲಲೂ ಆಗುತ್ತಿರಲಿಲ್ಲ. ಈಗ ಆತ ಚೆನ್ನಾಗಿ ಓಡಲೂ ಬಲ್ಲ. ಇದರರ್ಥ ಪಂಚಮಕುಮಾರನ ಔಷಧದಿಂದ ಎಲ್ಲರಿಗೂ ಗುಣವಾಗುತ್ತದೆ ಎಂದಲ್ಲ. "ರೋಗಿಗಳು ಎಳೆವಯಸ್ಸಿನವರಾದಷ್ಟೂ ಗುಣವಾಗುವ ಸಾಧ್ಯತೆ ಹೆಚ್ಚು. ರೋಗ ಹೊಸದಾಗಿ ಪ್ರಾರಂಭವಾದಾಗ ಚಿಕಿತ್ಸೆ ಕೊಡಿಸಿದರೆ ಮೂರೇ ತಿಂಗಳಲ್ಲಿ ಸಂಪೂರ್ಣವಾಗಿ ಗುಣವಾಗುತ್ತದೆ. ರೋಗ ಹಳೆಯದಾದಷ್ಟೂ ಚಿಕಿತ್ಸೆಗೆ ತಲಗುವ ಅವಧಿ ಹೆಚ್ಚು. ಒಮ್ಮೊಮ್ಮೆ ಒಂದು ವರ್ಷದವರೆಗೂ ಚಿಕಿತ್ಸೆ ತೆಗೆದುಕೊಳ್ಳಬೇಕಾಗಬಹುದು. ಇಪ್ಪತ್ತೆರಡು ಮೀರಿದ ರೋಗಿಗಳನ್ನು ಸಂಪೂರ್ಣವಾಗಿ ಗುಣಪಡಿಸಲು ಆಗುವುದಿಲ್ಲ. ಆದರೆ ಅಂಥವರಲ್ಲಿಯೂ ಶೇಕಡಾ ಐವತ್ತರಷ್ಟು ವ್ಯಾಧಿಯನ್ನು ವಾಸಿಮಾಡಬಹುದು" ಎನ್ನುತ್ತಾನೆ ಪಂಚಮಕುಮಾರ.

ಪಾಟಣಾದ ಕಂಕಡಬಾಗಿನ ಅಸಿತಾ ಸಿಂಗಳಿಗೀಗ ೧೮ ವರ್ಷ. ಅವಳಿಗೂ ಪೋಲಿಯೋದ ತೊಂದರೆಯಿದೆ. ಎರಡು ವರ್ಷಗಳ ಹಿಂದೆ ಬೆಂಗಳೂರಿನಲ್ಲಿ ಆಪರೇಶನ್ ಮಾಡಿಸಿದರೂ ವಿಶೇಷ ಪ್ರಯೋಜನವಾಗಲಿಲ್ಲ. ಸೊಟ್ಟಸೊಟ್ಟದಾಗಿ ನಡೆಯಬೇಕಾಗುತ್ತಿತ್ತು. ಏಣಿಯನ್ನೇರಲು ಆಗುತ್ತಿರಲಿಲ್ಲ. ಪಂಚಮಕುಮಾರನಿಂದ ಒಂದೂವರೆ ವರ್ಷ ಚಿಕಿತ್ಸೆ ಪಡೆದ ನಂತರ ಆಕೆಯೀಗ ಎಲ್ಲರಂತೆ ನಡೆಯಬ

ಲ್ಲಳು. ಪೋಲಿಯೋದ ಲವಶೇಶ ಕೊಂಚವೂ ಇಲ್ಲ.

ನಾಟಿವೈದ್ಯನೆಂಬ ದೃಷ್ಟಿಯಿಂದ ಪಂಚಮಕುಮಾರನತ್ತ ನೋಡುವವರೇ ಹೆಚ್ಚು. ಪೂರ್ಣಿಯಾ ಜಿಲ್ಲೆಯ ಮ್ಯಾಜಿಸ್ಟ್ರೇಟರಾದ ರಾಮಸೇವಕ ಶರ್ಮರೂ ಇದಕ್ಕೆ ಹೊರತಾಗಿರಲಿಲ್ಲ. ಪಂಚಮ ಕುಮಾರನ ಹೆಸರು ಎಲ್ಲೆಡೆ ಕೇಳಿಬರತೊಡಗಿದಾಗ ಒಮ್ಮೆ ಆತನನ್ನು ನೋಡಿದರೂ ಆಯಿತು ಎಂದವರು ಆತನ ಬಳಿಬಂದಾಗ ಪಂಚಮಕುಮಾರ ಚಿಕಿತ್ಸೆಗೆ ಮೊದಲ ತೆಗೆದು ಫೋಟೋಗಳನ್ನೂ ರೋಗಿಗಳು ಗುಣಮುಖರಾದ ನಂತರ ತೆಗೆದ ಫೋಟೋಗಳನ್ನೂ ರಾಮಸೇವಕ ಶರ್ಮರಿಗೆ ತೋರಿಸಿದ. ಆಗ ಅವರಿಗೆ ಅವನ ಚಿಕಿತ್ಸೆಯ ಬಗೆಗೆ ಸ್ವಲ್ಪ ವಿಶ್ವಾಸ ಬಂತು. ಆನಂತರ ಅವರು ಸಧ್ಯ ಅವನಿಂದ ಚಿಕಿತ್ಸೆ ಪಡೆಯುತ್ತಿದ್ದವರ ವಿಳಾಸ ಪಡೆದು, ಅವರನ್ನು ಭೇಟಿಯಾಗಿ ರೋಗದ ಸ್ಥಿತಿಯನ್ನು ತಿಳಿದುಕೊಂಡರು. ಒಂದು ವರ್ಷದ ನಂತರ ಮತ್ತೆ ಅವರಲ್ಲಿಗೆ ಹೋಗಿ ನೋಡಿದಾಗ ಸುಮಾರಾಗಿ ಅವರೆಲ್ಲರೂ ಪೋಲಿಯೋದಿಂದ ಸಂಪೂರ್ಣವಾಗಿ ಪಾರಾಗಿದ್ದರು. ಇದರಿಂದ ಪ್ರಭಾವಿತರಾದ ರಾಮಸೇವಕ ಶರ್ಮಾ ಪಾಟ್ನಾದ ಯುನಿಸೆಫ್‌ನ ಅಧಿಕಾರಿಗಳಿಗೆ ಪತ್ರ ಬರೆದರು.

ದೇಶದಲ್ಲಿ ಮನ್ನಣೆ ದೊರೆಯದಿದ್ದರೂ ಪರದೇಶದಲ್ಲಿಯಾದರೂ ದೊರೆತೀತು ಎಂಬ ಆಶೆಯಿಂದ ಪಂಚಮಕುಮಾರನೂ ನ್ಯೂಯಾರ್ಕಿನಲ್ಲಿನ ಯುನಿಸೆಫ್‌ನ ಮುಖ್ಯ ಕಾರ್ಯಾಲಯಕ್ಕೆ ಪತ್ರ ಬರೆದ. ಅಲ್ಲಿನ ಅಧಿಕಾರಿಗಳು ದಿಲ್ಲಿಯ ಆಡಳಿತ ಕೇಂದ್ರದ ಡಾ. ಕೆ. ಸುರೇಶರಿಗೆ ಪತ್ರ ಬರೆದು ಪಂಚಮಕುಮಾರನ ಸತ್ಯಾಸತ್ಯತೆಯನ್ನು ಪರೀಕ್ಷಿಸುವಂತೆ ಕೇಳಿಕೊಂಡರು. ಡಾ ಕೆ. ಸುರೇಶ್ ಪಂಚಮಕುಮಾರನಲ್ಲಿಗೆ ಹೋಗಿ ೧೨೫ ದಾಖಲೆಗಳನ್ನು ಪರಿಶೀಲಿಸಿ, ಔಷಧಿ ಶೇಕಡಾ ಐವತ್ತರಷ್ಟು ಗುಣತೋರಿಸುತ್ತದೆಂದು ವರದಿ ಮಾಡಿದರು. ಇದಾದ ಬಳಿಕ ಯುನಿಸೆಫ್ ಮುಖ್ಯ ಕಾರ್ಯಾಲಯ ಪಾಟ್ನಾ ಆಫೀಸಿಗೆ ಪತ್ರ ಬರೆದು ಪಂಚಮಕುಮಾರನ ಆಸ್ಪತ್ರೆಗೆ ತಜ್ಞರನ್ನು ಕಳಿಸಿ ಇನ್ನಷ್ಟು ವಿವರವಾದ ತನಿಖೆ ನಡೆಸಬೇಕೆಂದು ಕೇಳಿಕೊಂಡಿತು. ಆ ತನಿಖೆಯಿನ್ನೂ ನಡೆಯಬೇಕಾಗಿದೆ.

ಖ್ಯಾತ ಪತ್ರಕರ್ತ ಎಂ.ಜೆ. ಅಕಬರ್ ಕೇಂದ್ರ ಮಾನವ ಸಂಪನ್ಮೂಲ ಖಾತೆಗೆ ಸಲಹೆಗಾರರಾಗಿದ್ದಾಗ ಪಂಚಮಕುಮಾರನ ಕುರಿತು ಆರೋಗ್ಯ ಸಚಿವರಿಗೆ ಪತ್ರ ಬರೆದಿದ್ದರು. ಆಗ ಆರೋಗ್ಯ ಸಚಿವರಾಗಿದ್ದ ಎಂ.ಎಲ್. ಫೊತೇದಾರ್ ಆ ಕುರಿತು ವಿಚಾರಿಸುವಂತೆ ಹೇಳಿ ಆ ಪತ್ರವನ್ನು ಆರೋಗ್ಯ ಖಾತೆಯಲ್ಲಿ ಡೆಪ್ಯೂಟಿ ಕಮೀಶನರ್‌ರಾದ ಡಾ. ಕೆ.ಬಿ. ಬ್ಯಾನರ್ಜಿಯವರಿಗೆ ಕಳಿಸಿಕೊಟ್ಟಾಗ ಬ್ಯಾನರ್ಜಿಯವರು ಫೈಲು ಸಹಿತವಾಗಿ ಆ ಪತ್ರವನ್ನು ಪಾಟ್ನಾಕ್ಕೆ ಕಳಿಸಿಕೊಟ್ಟಿದ್ದರು. ಆದರೆ ಆ ಫೈಲು ಮುಂದೆ ಚಲಿಸಲೇ ಇಲ್ಲ.

ಅಷ್ಟರಲ್ಲಿ ಡಾ. ಬ್ಯಾನರ್ಜಿಯವರಿಗೂ ಪಂಚಮಕುಮಾನರ ಬಗ್ಗೆ ಆಸಕ್ತಿ ಕುದುರಿತ್ತು. ಮೇಲಾಗಿ ಸೋಲೊಪ್ಪಿಕೊಳ್ಳುವ ಸ್ವಭಾವವೂ ಅವರದಾಗಿರಲಿಲ್ಲ. ಅವರು ನೇರವಾಗಿ ಪೂರ್ಣಿಯಾದ ಜಿಲ್ಲಾ ಸರ್ಜನ್ನರಿಗೆ ಪತ್ರ ಬರೆದು ಪಂಚಮಕುಮಾರ ಹೇಳುವುದರಲ್ಲಿ ಸಟೆಯೆಷ್ಟು, ದಿಟವೆಷ್ಟು ಎಂಬ ಬಗೆಗೆ ವಿವರವಾಗಿ ಪರಿಶೀಲನೆ ನಡೆಸಿ ವರದಿಯೊಪ್ಪಿಸುವಂತೆ ಕೇಳಿಕೊಂಡರು. ಆ ಪ್ರಕಾರ ಜಿಲ್ಲಾ ಸರ್ಜನ್ನರಾದ ಡಾ. ಜೆ.ಪಿ. ಸಿಂಗರು ಡಾ. ಜೆ.ಕೆ. ಸಿಂಗ್ ಎಂಬ ಶಿಶುತಜ್ಞರ ನೆರವಿನಿಂದ ವಿವರವಾಗಿ ಪರಿಶೀಲನೆ ನಡೆಸಿ, ಪಂಚಮಕುಮಾರ ಕೊಡುವ ಔಷಧ ನಿಜಕ್ಕೂ ಪರಿಣಾಮಕಾರಿಯಾಗಿದೆಯೆಂದು ವರದಿಯೊಪ್ಪಿಸಿದರು.

ಇಷ್ಟೆಲ್ಲ ಆದರೂ ಪಂಚಮಕುಮಾರನಿಗೆ ವೃತ್ತಿಯನ್ನು ಮುಂದುವರೆಸಿಕೊಂಡು ಹೋಗುವುದೇ ಕಷ್ಟವಾಗಿದೆ. ಮೊದಲಿನ ಹಾಗೆ ನೇಪಾಳದ ಅರಣ್ಯಗಳಲ್ಲಿ ಗಿಡಮೂಲಿಕೆಗಳನ್ನು ಸಂಗ್ರಹಿಸಲು ಆಗುತ್ತಿಲ್ಲ. ಉತ್ಪಾದನೆಯ ವೆಚ್ಚ ಏರುತ್ತಿದೆ. ವೆಚ್ಚ ಕಡಿಮೆಯಾಗಬೇಕೆಂದರೆ ದೊಡ್ಡ ಪ್ರಮಾಣದಲ್ಲಿ ಔಷಧವನ್ನು ಉತ್ಪಾದಿಸಬೇಕು. ಆದರೆ ಕಾರಖಾನೆಯನ್ನು ಸ್ಥಾಪಿಸಲು ಬೇಕಾಗುವಷ್ಟು ಹಣ ಅವನಲ್ಲಿಲ್ಲ. "ಈಗಾಗಲೆ ಸಾಕಷ್ಟು ತಡವಾಗಿದೆ. ಈಗಲೂ ಸಹಾಯ ಬಾರದಿದ್ದರೆ ಔಷಧ ತಯಾರಿಸುವಲ್ಲಿನ ಎರಡು ತಲೆಮಾರಿನ ಶ್ರಮ ಅಧಿಕಾರಶಾಹಿಯ ಕಾಲ್ತುಳಿತಕ್ಕೆ ಸಿಕ್ಕು ನಶಿಸಿಹೋಗುವುದಲ್ಲಿ ಸಂದೇಹವೇ ಇಲ್ಲ" ಎನ್ನುತ್ತಾನೆ ಪಂಚಮಕುಮಾರ.

ಪಾಪ ಅವನದು ಅರಣ್ಯರೋದನವೇ ಆಗಿದೆ.

(ಆಧಾರ: 'ದಿ ವೀಕ್'ನಲ್ಲಿ ಕನ್ಹಯ್ಯಾ ಭೆಲಾರಿಯವರ ಲೇಖನ)

ಅಪಹರಿಸಲ್ಪಟ್ಟ ಅವು
ಎಂದಿಗೂ ಅಮೂಲ್ಯ ಆಸ್ತಿ



ಐನ್‌ಸ್ಟೈನರ ಮಿದುಳು ಹಾಗೂ ಕಣ್ಣು

– 'ಕಸ್ತೂರಿಮೃಗ'

ಅಮೇರಿಕದ ನ್ಯೂಜರ್ಸಿಯ ಬ್ಯಾಂಕೊಂದರಲ್ಲಿ ಸೇಫ್ ಡಿಪಾಜಿಟ್ ವಾಲ್ಟ್. ಅದರಲ್ಲಿ ಒಂದೆಡೆ ರಕ್ಷಕ ದ್ರವ ತುಂಬಿದ ಗಾಜಿನ ಶೀಸೆ. ಆ ಶೀಸೆಯಲ್ಲಿ ಎರಡು ಚಿಕ್ಕ ಗಾತ್ರದ ವಸ್ತುಗಳು. ಆ ಶೀಸೆ ಡಾ. ಹೆನ್ರಿ ಅಬ್ರಾಮ್ಸರಿಗೆ ಸೇರಿದ್ದು. ಖಯಾಲಿ ಬಂದಾಗ ವರ್ಷದಲ್ಲಿ ಎರಡೋ ಮೂರೋ ಬಾರಿ ಅವರು ಬ್ಯಾಂಕಿಗೆ ಬಂದು ಖಜಾನೆಯಿಂದ ಅಮೂಲ್ಯ ವಸ್ತುವೆಂಬಂತೆ ಆ ಶೀಸೆಯನ್ನು ತೆಗೆದು ಅದರಲ್ಲಿನ ಆ ವಸ್ತುಗಳನ್ನು ತದೇಕಚಿತ್ತರಾಗಿ ವೀಕ್ಷಿಸುತ್ತಾರೆ. ಅವು ಯಾವ ರೀತಿಯಲ್ಲೂ ಕ್ಷತಿಗ್ರಸ್ತವಾಗಿಲ್ಲವೆನ್ನುವುದನ್ನು ಖಚಿತಪಡಿಸಿಕೊಂಡ ನಂತರ ಶೀಸೆಯನ್ನು ಲಾಕರಿನಲ್ಲಿ ಮತ್ತೆ ಭದ್ರಪಡಿಸಿ ತಮ್ಮ ಆಸ್ಪತ್ರೆಗೆ ಹಿಂದಿರುಗುತ್ತಾರೆ. ಕಳೆದ ನಾಲ್ವತ್ತು ವರ್ಷಗಳಿಂದಲೂ ಡಾ. ಹೆನ್ರಿ ಅಬ್ರಾಮ್ಸ್

ಅನೂಚಾನವಾಗಿ ನಡೆಸಿಕೊಂಡು ಬಂದಿರುವ ಕ್ರಮ ಇದು.

ಆ ಗಾಜಿನ ಶೀಸೆಯಲ್ಲಿ ಕಾಯ್ದಿರಿಸಲ್ಪಟ್ಟ ಆ ಬೆಲೆಬಾಳುವ ವಸ್ತುಗಳು ಮುತ್ತೂ ಅಲ್ಲ, ರತ್ನವೂ ಅಲ್ಲ. ಅವೆಲ್ಲಕ್ಕಿಂತಲೂ ಮಿಗಿಲಾದದ್ದು. ಅವೆರಡೂ ಸಾಪೇಕ್ಷ ಸಿದ್ಧಾಂತದ ಅಧ್ವರ್ಯುವಾದ ಆಲ್ಬರ್ಟ್ ಐನ್‌ಸ್ಟಾಯಿನರ ಕಣ್ಣುಗಳು! ಜೀವಿತರಾಗಿದ್ದಾಗಲೆ ದಂತಕತೆಯಾಗಿದ್ದ ಐನ್‌ಸ್ಟಾಯಿನರ ಕಣ್ಣುಗಳಿಗೆ ಬೆಲೆಯನ್ನೇನಾದರೂ ಕಟ್ಟಲಾದೀತೆ? ನಿಜಕ್ಕೂ ಅವು ಅಮೂಲ್ಯ ವಸ್ತುಗಳೇ ಸರಿ.

ಆದರೆ ಆ ಕಣ್ಣುಗಳು ಡಾ. ಅಬ್ರಾಮ್ಸರ ಬಳಿ ಬಂದದ್ದು ಹೇಗೆ? ಅದಕ್ಕೆ ರೋಚಕವಾದ ಒಂದು ಹಿನ್ನೆಲೆ ಇದೆ.

ಐನ್‌ಸ್ಟಾಯಿನ್ ತೀರಿಕೊಂಡದ್ದು ೧೯೫೫ರ ಏಪ್ರಿಲ್ ೧೮ ರಂದು, ಪ್ರಿನ್ಸ್‌ಟನ್ನಿನ ಆಸ್ಪತ್ರೆಯಲ್ಲಿ. ವ್ಯಕ್ತಿಪೂಜೆಯ ಕಟ್ಟಾ ವಿರೋಧಿಗಳಾಗಿದ್ದ ಆಲ್ಬರ್ಟ್ ಐನ್‌ಸ್ಟಾಯಿನ್, ತಾವು ಸತ್ತ ನಂತರ ಯಹೂದ್ಯ ಪರಂಪರೆಯ ಪ್ರಕಾರ ಶವವನ್ನು ಹೂಳದೆ ಅಗ್ನಿಸಂಸ್ಕಾರಕ್ಕೆ ಒಳಪಡಿಸಬೇಕೆಂದೂ ತಮ್ಮ ಹೆಸರಿನಲ್ಲಿ ಸ್ಮಾರಕವನ್ನಾಗಲಿ, ಮ್ಯೂಜಿಯಮ್ಮನ್ನಾಗಲಿ, ಮೂರ್ತಿಯನ್ನಾಗಲಿ ನಿರ್ಮಿಸಬಾರದೆಂದೂ ಜೀವಿತವಿರುವಾಗಲೆ ವಿಧಿಸಿದ್ದರು. ಆ ಪ್ರಕಾರ ಅವರು ತೀರಿಕೊಂಡ ದಿನವೇ ಐನ್‌ಸ್ಟಾಯಿನರ ಶವವನ್ನು ಅಗ್ನಿಸಂಸ್ಕಾರಕ್ಕೊಳಪಡಿಸಿ ಬೂದಿಯನ್ನು ಡೆಲಾವರ್ ನದಿಯಲ್ಲಿ ವಿಸರ್ಜಿಸಲಾಯಿತು.

ಐನ್‌ಸ್ಟಾಯಿನರ ಶವಯಾತ್ರೆಯಲ್ಲಿ ಸಾವಿರಾರು ಜನ ಪಾಲುಗೊಂಡಿದ್ದರು. ಐನ್‌ಸ್ಟಾಯಿನರ ಶವ ಪರಿಪೂರ್ಣವಾಗಿಲ್ಲ ಎಂಬುದನ್ನು ಅವರಲ್ಲಿ ಜನರಲ್ಲಿ ಒಬ್ಬರಾದರೂ ಕಲ್ಪಿಸಲು ಸಾಧ್ಯವಿರಲಿಲ್ಲ.

ಆದರೆ ವಾಸ್ತವವಾಗಿ ಐನ್‌ಸ್ಟಾಯಿನ್ ತೀರಿಕೊಂಡ ದಿನವೇ ಅವರ ಕಣ್ಣನ್ನೂ ಮಿದುಳನ್ನೂ ಅಪಹರಿಸಲಾಗಿತ್ತು. ಒಬ್ಬ ಡಾಕ್ಟರ್ ಕಣ್ಣನ್ನು ಅಪಹರಿಸಿದ್ದರೆ ಇನ್ನೊಬ್ಬಾತ ಮಿದುಳನ್ನು ಲಪಟಾಯಿಸಿದ್ದ.

ಡಾ. ಹೆನ್ರಿ ಅಬ್ರಾಮ್ಸ್ ೧೯೩೮ ರಿಂದ ೧೯೪೭ರ ವರೆಗೆ ಐನ್‌ಸ್ಟಾಯಿನರ ಖಾಸಗಿ ವೈದ್ಯರಾಗಿಯೂ ಕಾರ್ಯನಿರ್ವಹಿಸಿದ್ದರು. ಆಗಿನಿಂದಲೂ ಐನ್‌ಸ್ಟಾಯಿನರ ಕಣ್ಣುಗಳೆಂದರೆ ಅವರಿಗೆ ಏನೋ ಒಂದು ಬಗೆಯ ಆಕರ್ಷಣೆ. ಅವರೇ ಹೇಳುವ ಹಾಗೆ, "ಸ್ಫಟಿಕಸದೃಶವಾದ ಆ ಕಣ್ಣುಗಳು ದೇವದೂತರ ಕಣ್ಣುಗಳ ಹಾಗೆಯೆ ಇದ್ದವು. ಅವನ್ನು ನೋಡುತ್ತಲೇ ಇಂಥ ಅನುಪಮ ಕಣ್ಣುಗಳನ್ನು ಹೊಂದಿರುವವನಿಗೆ ಜಗತ್ತಿನ ಎಲ್ಲ ವಿಷಯಗಳ ಜ್ಞಾನವೂ ಇರಲಿಕ್ಕೇಬೇಕು ಎಂಬ ಭಾವನೆ ಬಾರದೆ ಇರುತ್ತಿರಲಿಲ್ಲ."

ಕರ್ಮಧರ್ಮ ಸಂಯೋಗವೇ ಎನ್ನಿ, ವಿಧಿಯ ಆಟವೇ ಎನ್ನಿ, ಐನ್‌ಸ್ಟಾಯಿನ್ ತೀರಿಕೊಂಡಾಗ ಡಾ. ಹೆನ್ರಿ ಅಬ್ರಾಮ್ಸ್ ಪ್ರಿನ್ಸ್‌ಟನ್ ಆಸ್ಪತ್ರೆಯಲ್ಲಿಯೆ ಕಾರ್ಯನಿರ್ವಹಿಸುತ್ತಿದ್ದರು. ಸುದ್ದಿ ತಿಳಿದದ್ದೇ ತಡ, ಅವರು ಆಸ್ಪತ್ರೆಯ ಅಧಿಕಾರಿಗಳನ್ನು ಸಂಪರ್ಕಿಸಿ, ಕಣ್ಣುಗಳನ್ನು ತೆಗೆದುಕೊಳ್ಳಲು ಕೇಳಿದಾಗ, ತಕ್ಷಣವೇ ಅನುಮತಿ ದೊರೆಯಿತು. ಶಸ್ತ್ರಕ್ರಿಯೆಯಲ್ಲಿ ಉಪಯೋಗಿಸುವ ಒಂದು ಚಿಮ್ಮಟ ಹಾಗೂ ಕತ್ತರಿಯನ್ನು ಮಾತ್ರ ಬಳಸಿ, ಕೇವಲ ಇಪ್ಪತ್ತು ನಿಮಿಷಗಳಲ್ಲಿಯೆ ಆ ಕಣ್ಣುಗಳನ್ನು 'ಬಟಾಣಿಯ ಕಾಳುಗಳನ್ನು ಬಿಡಿಸುವಷ್ಟು ಸುಲಭವಾಗಿ' ಡಾ. ಅಬ್ರಾಮ್ಸ್ ತೆಗೆದರಂತೆ. "ಐನ್‌ಸ್ಟಾಯಿನರ ಮರಣದ ನಂತರ ಅವರ ಶರೀರ ಅಗ್ನಿಗೆ ಆಹುತಿಯಾಗಿ ಲವಲೇಶವೂ ಇಲ್ಲದಂತಾಗುವುದು ನನಗೆ ಬೇಡವಾಗಿತ್ತು. ಕೊನೆಗೆ ಅವರ ಕಣ್ಣುಗಳಾದರೂ ಉಳಿಯಲಿ ಎಂದು ಈ ಉಪಕ್ರಮ ಕೈಗೊಂಡೆ" ಎಂದವರು ತಾವು ಮಾಡಿದ ಕೃತ್ಯಕ್ಕೆ ಸಬೂಬು ನೀಡುತ್ತಾರೆ.

ಡಾ. ಅಬ್ರಾಮ್ಸರಿಗೀಗ ಎಪ್ಪತ್ತು ವರ್ಷ. ನಾಲ್ವತ್ತು ವರ್ಷಗಳವರೆಗೆ ಈ ಕಣ್ಣುಗಳನ್ನು ಕಾಪಾಡಿಕೊಂಡು ಬಂದದ್ದಾಯಿತು. ಮುಂದೇನು? ಎಂಬ ವಿಚಾರ ಬಂದಾಗ ತಮ್ಮ ವಕೀಲರನ್ನು ಸಂಪರ್ಕಿಸಿದರು. ಅವರು ಆ ಕಣ್ಣುಗಳನ್ನು ಅವನಿಗೆ ಕೊಡಲಿಲ್ಲ; ಆ ಮಾತು ಬೇರೆ. ಆದರೆ ಈ ಸುದ್ದಿ ತಿಳಿಯುತ್ತಲೇ ಖ್ಯಾತ ಪಾಪ್ ಗಾಯಕ

ಮೈಕೇಲ್ ಜಾಕ್ಸನ್ ಒಂದೂವರೆ ಕೋಟಿ ಡಾಲರುಗಳಿಗೆ ಅವನ್ನು ಕೊಂಡು ಸುರಕ್ಷಿತವಾಗಿ ಇಟ್ಟುಕೊಳ್ಳಲು ಮುಂದೆ ಬಂದನಂತೆ.

ತನ್ನ ಹೊರತು ಬೇರೆ ಯಾರಿಂದಲೂ ಸಾಧ್ಯವಿಲ್ಲದ ಕಾರ್ಯವನ್ನು ಮಾಡಿದ್ದೇನೆಂದು ಡಾ. ಹೆನ್ರಿ ಅಬ್ರಾಮ್ಸ್ ಬೀಗುತ್ತಿದ್ದಾಗಲೆ ಅದೇ ಆ ಆಸ್ಪತ್ರೆಯ ಡಾ. ಥಾಮಸ್ ಹಾರ್ವೆ ಅವರಿಗಿಂತ ಒಂದು ಹೆಜ್ಜೆ ಮುಂದೆ ಹೋಗಿ ಐನ್‌ಸ್ಟಾಯಿನರ ಮಿದುಳನ್ನು ತೆಗೆದುಕೊಂಡಿದ್ದರು! ಪೋಸ್ಟ್‌ಮಾರ್ಟಂ ಮಾಡುವ ಕೆಲಸ ಅವರ ಪಾಲಿಗೇ ಬಂದದ್ದರಿಂದ ಮಿದುಳು ಅಪಹರಿಸುವುದು ಅವರಿಗೆ ಸುಲಭವೂ ಆಗಿತ್ತು. ಐನ್‌ಸ್ಟಾಯಿನರ ಮರಣ ಖಚಿತವೇ ಆಗಿದ್ದಾಗ ಅವರು ತೀರಿಕೊಳ್ಳುವುದಕ್ಕಿಂತ ಒಂದು ವಾರ ಮೊದಲು ಡಾ. ಹಾರ್ವೆ ಐನ್‌ಸ್ಟಾಯಿನರ ಕುಟುಂಬದವರನ್ನು ಸಂಪರ್ಕಿಸಿ, ವೈಜ್ಞಾನಿಕ ಸಂಶೋಧನೆಗಾಗಿ ಮಿದುಳನ್ನು ತೆಗೆದುಕೊಳ್ಳಲು ಅನುಮತಿ ಪಡೆದಿದ್ದರಂತೆ.

ಸಾಮಾನ್ಯ ಮನುಷ್ಯರ ಮಿದುಳೂ ಐನ್‌ಸ್ಟಾಯಿನರಂಥ ಪ್ರತಿಭಾಶಾಲಿಗಳ ಮಿದುಳೂ ಒಂದೇ ರೀತಿಯಾಗಿವೆಯೇ? ಅಥವಾ ಅವುಗಳ ಸಂರಚನೆಯಲ್ಲೇ ಮೂಲಭೂತವಾದ ಭೇದಗಳೇನಾದರೂ ಇವೆಯೇ? ಎನ್ನುವುದನ್ನು ಡಾ. ಥಾಮಸ್ ಹಾರ್ವೆ ಖಚಿತಪಡಿಸಿಕೊಳ್ಳಬೇಕಾಗಿತ್ತು. ಅಧ್ಯಯನದಿಂದ ಪ್ರಸ್ಫುಟಿತವಾದ ಅಂಶವನ್ನವರು ಬಹಿರಂಗಪಡಿಸುವುದಿಲ್ಲ ನಿಜ. ಆದರೆ ಸ್ವತಃ ಡಾ. ಹಾರ್ವೆ ಅವರು ಐನ್‌ಸ್ಟಾಯಿನರ ಮಿದುಳಿನ ಮೇಲೆ ಅಧ್ಯಯನ ನಡೆಸಿದ್ದಲ್ಲದೆ ಹೆಚ್ಚಿನ ಅಧ್ಯಯನ ನಡೆಯಲು ಅನುವಾಗಲು ಮಿದುಳಿನ ತುಣುಕುಗಳನ್ನು ಚೀನ, ಜಪಾನ್ ಹಾಗೂ

ಬಿಸಿನೆಸ್ ಈಸ್ ಬಿಸಿನೆಸ್

ದೇಶ-ವಿದೇಶದ ವಿದ್ಯಾರ್ಥಿಗಳು ಸೇರುತ್ತಿದ್ದ ಒಂದು ಅಮೆರಿಕನ್ ಕಾಲೇಜ್. ಅಲ್ಲಿ ಒಂದು ಸ್ಪರ್ಧೆ. ಸ್ಪರ್ಧೆಯ ವಿಷಯ: 'ಮನುಕುಲದ ಶ್ರೇಷ್ಠರು ಯಾರು?'

'ಅಬ್ರಹಾಂ ಲಿಂಕನ್!' ಅಂದ ಅಮೆರಿಕನ್ ವಿದ್ಯಾರ್ಥಿ.

'ಮಹಾತ್ಮಾ ಗಾಂಧಿ' ಅಂದ ಭಾರತೀಯ ವಿದ್ಯಾರ್ಥಿ.

'ಚರ್ಚಿಲ್' ಅಂದ ಇಂಗ್ಲೆಂಡ್ ವಿದ್ಯಾರ್ಥಿ.

ಅಧ್ಯಾಪಕರು ಒಬ್ಬ ಯಹೂದ್ಯ ವಿದ್ಯಾರ್ಥಿಯನ್ನು ಕೇಳಿದರು. ಅವನನ್ನು ಪ್ರಶ್ನಿಸುವಾಗಲೇ ಅವನು, 'ಮೋಸೆಸ್!' ಎಂದು ತಿಳಿಸುತ್ತಾನೆ ಎಂದು ಅವರು ನಿರೀಕ್ಷಿಸಿದ್ದರು.

ಆದರೆ ಆ ಆದ್ಯಾರ್ಥಿ, 'ಯೇಸುಕ್ರಿಸ್ತ!' ಎಂದು ಬಿಟ್ಟ.

ಒಬ್ಬ ಯಹೂದ್ಯ ವಿದ್ಯಾರ್ಥಿ ಯೇಸುಕ್ರಿಸ್ತನ ಬಗ್ಗೆ ಇಂಥಾ ಘನವಾದ ಅಭಿಪ್ರಾಯವನ್ನು ಇರಿಸಿಕೊಂಡಿದ್ದಕ್ಕಾಗಿ ಆ ಕ್ರೈಸ್ತ ಅಧ್ಯಾಪಕರು ಖುಷಿಗೊಂಡು ಅವನಿಗೇ ಬಹುಮಾನ ನೀಡಿದರು.

ಬಳಿಕ, 'ಅಂದ ಹಾಗೆ ನೀನು ಮೋಸೆಸ್‌ನ ಬದಲು ಯೇಸುಕ್ರಿಸ್ತನ ಹೆಸರನ್ನು ಏಕೆ ಹೇಳಿದೆ? ನಿನ್ನ ನಿಷ್ಠೆ ಬದಲಾಯಿತೆ?' ಎಂದು ಕೇಳಿದರು.

ಅದಕ್ಕೆ ಆ ವಿದ್ಯಾರ್ಥಿ 'ಈಗಲೂ ನನ್ನ ಹೃದಯದಲ್ಲಿರುವುದು ಮೋಸೆಸ್‌ರೇ. ಆದರೆ, ಯೇಸುಕ್ರಿಸ್ತ ಅಂದರೆ ನಿಮಗೆ ಇಷ್ಟವಾಗುತ್ತದೆ. ಬಹುಮಾನವನ್ನು ಗಳಿಸಬೇಕೆಂದರೆ ಅದನ್ನು ಗಳಿಸುವ ಉತ್ತರವನ್ನು ನೀಡಬೇಕು. ನಮ್ಮ ಮನಃಸಾಕ್ಷಿಯ ಬಗ್ಗೆ ತಲೆ ಕೆಡಿಸಿಕೊಳ್ಳಬಾರದು. ಬಿಸಿನೆಸ್ ಈಸ್ ಬಿಸಿನೆಸ್'! ಅಂದ ಆ ಯಹೂದ್ಯ ವಿದ್ಯಾರ್ಥಿ.

ಸಂಗ್ರಹ: **ಬಾರಾಶಂ**

ಜರ್ಮನಿಯ ವಿಶೇಷಜ್ಞರಿಗೆ ಕಳಿಸಿಕೊಟ್ಟಿದ್ದರು. ಲಾರೆನ್ಸ್ ಕನ್‌ಸನ್ ಸಾರ್ಸ್‌ನಲ್ಲಿರುವ ಹಾರ್ವೆಯವರ ಮನೆಯಲ್ಲಿ ಐನ್‌ಸ್ಟಾಯಿನರ ಮಿದುಳಿನ ಉಳಿದ ಭಾಗಗಳನ್ನು ಮೂರು ಬಾಟಲುಗಳಲ್ಲಿ ರಕ್ಷಕದ್ರವಗಳಲ್ಲಿರಿಸಿ ಕಾಯ್ದಿರಿಸಲಾಗಿದೆ.

ಡಾ. ಹೆನ್ರಿ ಅಬ್ರಾಮ್ಸ್‌ರ ಬಳಿಯಿರುವ ಕಣ್ಣುಗಳಲ್ಲಿ ಈಗಲೂ ಅದೇ ಹೊಳಪಿದೆ, ಅದೇ ಆಕರ್ಷಣೆಯಿದೆ. ಡಾ. ಅಬ್ರಾಮ್ಸ್ ಅವುಗಳನ್ನು ನೋಡುತ್ತಾ, ಐನ್‌ಸ್ಟಾಯಿನರನ್ನು ಉಪಚರಿಸುತ್ತಿದ್ದ ಹಳೆಗಾಲಕ್ಕೆ ಮರಳಿ ಅತೀತವನ್ನು ಮೆಲಕುಹಾಕತೊಡಗುತ್ತಾರೆ. ಆ ಕಣ್ಣುಗಳನ್ನು ನೋಡಿದಾಗಲೆಲ್ಲ ಅವರಿಗೆ ಜೀವಂತ ಐನ್‌ಸ್ಟಾಯಿನರನ್ನೇ ನೋಡಿದಂತಾಗುತ್ತದಂತೆ.

ಆದರೆ ಡಾ. ಅಬ್ರಾಮ್ಸ್‌ರ ಬಳಿಯಿರುವ ಕಣ್ಣುಗಳಾಗಲಿ, ಡಾ. ಹಾರ್ವೆಯವರ ಬಳಿಯಿರುವ ಮಿದುಳಾಗಲಿ ನಿಜಕ್ಕೂ ಐನ್‌ಸ್ಟಾಯಿನರದ್ದೆ? ಅಥವಾ ಬೇರೆ ಯಾರದಾದರೂ ಕಣ್ಣನ್ನೂ ಮಿದುಳನ್ನೂ ಲಪಟಾಯಿಸಿ ಪ್ರಚಾರ ಪಡೆಯುವ ದೃಷ್ಟಿಯಿಂದ ಈ ತಂತ್ರ ಹೂಡಿದ್ದಾರೋ ಎನ್ನುವುದೊಂದು ಜಿಜ್ಞಾಸೆಯ ಪ್ರಶ್ನೆ. ಆಲ್ಬರ್ಟ್ ಐನ್‌ಸ್ಟಾಯಿನರನ್ನು ಬಹಳ ಕಾಲ ನೋಡಿಕೊಂಡ ಡಾ. ಡಾನ್ ಹೇಳುವ ಪ್ರಕಾರ, "ಡಾ. ಹಾರ್ವೆ ಹೇಳುವುದರಲ್ಲಾಗಲಿ, ಡಾ. ಅಬ್ರಾಮ್ಸ್ ಹೇಳುವುದರಲ್ಲಾಗಿ ಉತ್ಪ್ರೇಕ್ಷೆಯೇನೂ ಇಲ್ಲ, ಅವೆರಡೂ ಐನ್‌ಸ್ಟಾಯಿನರವೆ."

ಐನ್‌ಸ್ಟಾಯಿನರ ಕಣ್ಣುಗಳಾಗಲಿ, ಮಿದುಳಾಗಲಿ ಮುಂದೆ ಯಾರ ಕೈಸೇರಬಹುದು ಎನ್ನುವುದನ್ನು ಈಗಲೆ ಹೇಳುವುದು ಕಠಿಣ. ಹಾಗೆಯೇ ಈ ಇಬ್ಬರು ಡಾಕ್ಟರರು ಮಾಡಿದ್ದು ಸರಿಯೋ ಅಥವಾ ತಪ್ಪೋ ಎಂಬುದನ್ನು ಹೇಳುವುದು ಕೂಡಾ ಚರ್ಚಾಸ್ಪದವಾಗಬಹುದು. ಆದರೆ ಐನ್‌ಸ್ಟಾಯಿನರ ಕಣ್ಣುಗಳಾಗಲಿ ಮಿದುಳಾಗಲಿ ಜಗತ್ತಿನ ಆಸ್ತಿ; ಹಾಳಾಗದ ಹಾಗೆ ಅವುಗಳನ್ನು ಕಾಪಾಡಿಕೊಂಡು ಹೋಗುವುದು ಅತ್ಯವಶ್ಯ ಎನ್ನುವುದರಲ್ಲಿ ಎರಡು ಮಾತಿಲ್ಲ.

ಧಾನ್ಯ - ಹಣ

ಡಾ. ಡಿ.ವಿ. ಗುಂಡಪ್ಪನವರು ತಮ್ಮ 'ಬಾಳಿಗೊಂದು ನಂಬಿಕೆ 'ಎಂಬ ಪುಸ್ತಕದಲ್ಲಿ ಧಾನ್ಯ ಮತ್ತು ಹಣ ಇವುಗಳನ್ನು ಈ ರೀತಿಯಾಗಿ ವಿಶ್ಲೇಷಿಸಿದ್ದಾರೆ. ಪ್ರಕಾಶಕರು: ಕಾವ್ಯಾಲಯ, ಜಯನಗರ, ಮೈಸೂರು -೫೭೦೦೧೪

ಪೂರ್ವಕಾಲದಲ್ಲಿ ಅರ್ಥಪದ್ಧತಿಯಲ್ಲಿ ಧಾನ್ಯ ಪ್ರಮುಖವಾಗಿತ್ತು. ಆಗ ಲೋಹ ನಾಣ್ಯದ ಅಧಿಕಾರ ಅಥವಾ ನೋಟು ಕಾಗದದ ಅಧಿಕಾರ ಈಗಿನಷ್ಟು ಪ್ರಬಲವಾಗಿರಲಿಲ್ಲ. ಹೊಟ್ಟೆಯ ತುಂಬ ಊಟ, ಮೈತುಂಬ ಬಟ್ಟೆ, ಕಣಜದ ತುಂಬ ಧಾನ್ಯ ಕೊಟ್ಟಿಗೆ ತುಂಬ ದನಕರು-ಇದು ಆಗಿನ ಧ್ಯೇಯ. ಜೇಬಿನಲ್ಲಿ ಬಿಡಿರೂಪಾಯಿ, ಬ್ಯಾಂಕಿನಲ್ಲಿ ಮುಡಿಪು ರೂಪಾಯಿ-ಇದು ಈಗಿನ ಧ್ಯೇಯ. ಸರ್ವ ಸಾಧಕವಾದದ್ದು ನಾಣ್ಯ ನೋಟು ಎಂಬುದನ್ನು ಹಳ್ಳಿಗರು ಈಗ ಚೆನ್ನಾಗಿ ಕಲಿತುಕೊಂಡಿದ್ದಾರೆ. ಪಟ್ಟಣಿಗರಿಂದಲೇ ಅವರು ಅದನ್ನು ಕಲಿತದ್ದು. ಜಗತ್ತಿನಲ್ಲಿ ಯಾವ ಮಹಾನುಭಾವನು ನಾಣ್ಯವೆಂಬ ವಶೀಕರಣ ತಂತ್ರವನ್ನು ಮೊದಲು ಕಂಡುಹಿಡಿದನೋ ಅವನೇ ನಮ್ಮ ನಾಗರಿಕತೆಯ ಅನಿಷ್ಟಗಳಿಗೆಲ್ಲಾ ಮೂಲ ಪುರುಷ. ಅವನಿಂದ ಲೋಕದಲ್ಲಿ ಆಗಿರುವಷ್ಟು ಗಾಳಿಗಂಟುಗಳೂ, ಗುದ್ದಾಟಗಳೂ ಮತ್ತಾರಿಂದಲೂ ಆಗಿಲ್ಲ. ಧಾನ್ಯ ಸಂಪತ್ತಿನಿಂದ ಅಷ್ಟು ಕೇಡು ಸಾಧ್ಯವಿಲ್ಲ; ಏಕೆಂದರೆ, ಸ್ವಲ್ಪ ಕಾಲದ ಮೇಲೆ ಧಾನ್ಯ ಹುಳುತು ಕೊಳೆತು ಹೋಗತಕ್ಕದ್ದು; ಯಾರೂ ಅದನ್ನು ಮಿತಿ ಮೀರಿ ಬಚ್ಚಿಟ್ಟುಕೊಳ್ಳಲು ಆಗುವುದಿಲ್ಲ. ಯಾವುದೋ ಒಂದು ರೀತಿ ಉಪಯೋಗ ಮಾಡಿಯೇ ಮುಗಿಸಬೇಕು. ನಾಣ್ಯ ಸಂಪತ್ತು ಹಾಗಲ್ಲ; ಇದನ್ನು ಎಷ್ಟು ದಿನ ಬೇಕಾದರೂ ಭದ್ರವಾಗಿ, ರಹಸ್ಯವಾಗಿ ಎತ್ತಿಡಬಹುದು; ಎಲ್ಲಿ ಬೇಕಾದರೂ ಹೇಗೆ ಬೇಕಾದರೂ ಉಪಯೋಗಿಸಿಕೊಳ್ಳಬಹುದು. ಧಾನ್ಯಕ್ಕೆ ಬದಲಾಬದಲಿಯಾಗಿ ಸಿಕ್ಕಲಾರದ ಎಷ್ಟೋ

ಭೋಗ ವಸ್ತುಗಳು ನಾಣ್ಯ-ನೋಟು ಕೊಟ್ಟರೆ ಸಿಕ್ಕುತ್ತವೆ. ಆದ್ದರಿಂದ ಎಲ್ಲರಿಗೂ ನಾಣ್ಯ ಸಂಪತ್ತಿನ ಮೇಲೆ ಆಸೆ. ಏನಾದರೂ ಮಾಡಿ ಹಣ ಕೂಡಿಹಾಕಬೇಕು. ಸರಕಾರದ ಅಧಿಕಾರಿಗಳ ನೀತಿ ಇದು; ವಕೀಲರದೂ ಇದೇ ಮಂತ್ರ; ಕಾಲೇಜುಗಳಲ್ಲಿ ಶಾಸ್ತ್ರ ಬೋಧನೆ ಮಾಡುವ ದಿಗ್ಗಜಗಳದೂ ಅದೇ ಸೂತ್ರ; ವರ್ತಕ ಸಾಹುಕಾರರಿಗಂತೂ ಅದೇ ವಿಹಿತ ಮಾರ್ಗ. ಇದನ್ನು ದಿನೇ ದಿನೇ ನೋಡುವ ಹಳ್ಳಿಗರು ಮಾತ್ರ ಆ ದಾರಿಯನ್ನು ಬಿಟ್ಟಿರುವುದು ಹೇಗೆ?

ಸರಿ, ನಾಣ್ಯ ಸಂಗ್ರಹಕ್ಕಾಗಿ ನಾಗರಿಕರು ನಾಗರಿಕ ಉಪಾಯಗಳನ್ನು ಅನುಸರಿಸುತ್ತಾರೆ. ಅದು ಬೇಗ ಕಣ್ಣಿಗೆ ಕಾಣಿಸುವುದಿಲ್ಲ. ಗ್ರಾಮಸ್ಥರು ಬೇರೆ ಉಪಾಯಗಳನ್ನು ಹಿಡಿಯುತ್ತಾರೆ; ಇವು ಸ್ವಲ್ಪ ಒರಟು-ಬೇಗ ಕಾಣಿಸುತ್ತವೆ. ಕೃತ್ರಿಮ ಕೂಟಗಳು, ಪೋಟಾಪೋಟಿ, ಕಕ್ಷಿ ವ್ಯಾಜ್ಯಗಳು, ಲಂಚ, ವೇಷ, ಆಡಂಬರ, ಬಿನ್ನಾಣ, ತಟವಟ-ಇವು ನಾಣ್ಯದ ದೊಡ್ಡಸ್ತಿಕೆಯಿರುವ ಕಡೆಯಲೆಲ್ಲಾ ಇರುವುದು ಸಹಜ. ಪಟ್ಟಣಗಳಲ್ಲಿ ಇವು ಜರೀ ರುಮಾಲು ಧರಿಸಿ ಹಾರಾಡುತ್ತವೆ. ಹಳ್ಳಿಗಳಲ್ಲಿ ಅವು ಹಚ್ಚಡ ಹೊದ್ದುಕೊಂಡಿರುತ್ತವೆ. ಮನುಷ್ಯ ಜಾತಿಯೆಲ್ಲಾ ಮೂಲದಲ್ಲಿ ಒಂದೇ ಪಿಂಡ. ಆದ್ದರಿಂದ ನಮ್ಮ ದೇಶದಲ್ಲಿ ಈಗ ನೀತಿ ಸಂಸ್ಕಾರ ನಡೆಯಬೇಕಾಗಿರುವುದು ಹಳ್ಳಿಗಳಲ್ಲಿ ಮಾತ್ರವೇ ಅಲ್ಲ. ಪಟ್ಟಣಿಗರ ನೀತಿಯೂ ಮೇಲ್ಮಟ್ಟಕ್ಕೆ ಏಳಬೇಕಾಗಿದೆ. ಸತ್ಯ ಪ್ರಾಮಾಣಿಕತೆ, ಮನಃಸಾಕ್ಷಿಯ ಭೀತಿ, ಧರ್ಮೇಂದ್ರಿಯದ ಶುಶ್ರೂಷೆ-ಈ ಗುಣಗಳು ಎಲ್ಲ ಅಭಿವೃದ್ಧಿಗಳಿಗೂ ಮೂಲಾಧಾರ. ಈ ನೀತಿ ಮೂಲಗಳನ್ನು ಕೃಷಿ ಮಾಡಿ ಬೆಳಸಿಕೊಳ್ಳದಿರುವ ಜನಾಂಗಕ್ಕೆ ಎಂದಿಗೂ ನಿಜವಾದ ಏಳಿಗೆ ಬರಲಾರದು. "ಅನ್ಯಾಯದ ಹಣ ನೆಮ್ಮದಿಯ ಹೆಣ" ಎಂಬುದಕ್ಕೆ ಇಂದಿನ ಯುರೋಪಿನ ಚರಿತ್ರೆ ಪ್ರತ್ಯಕ್ಷ ದೃಷ್ಟಾಂತವಾಗಿದೆ.

ಸಂಗ್ರಹ: **ಕೆ.ಎನ್.ಮೋಹನಕುಮಾರ**

ತೆರೆದ ಮನ


ಪುಸ್ತಕದ ಹೆಸರು: ತೆರೆದ ಮನ
ಲೇಖಕರು: ಡಾ. ಹೆಚ್. ನರಸಿಂಹಯ್ಯ
ಪ್ರಕಾಶಕರು: ಕನ್ನಡ ಸಂಘ,
ಕ್ರೈಸ್ಟ್ ಕಾಲೇಜ್, ಬೆಂಗಳೂರು
ಬೆಲೆ: ರೂ. ೨೫

ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ತಮ್ಮ ದೇಶವು ಹೆಚ್ಚಿನ ಪ್ರಗತಿಯನ್ನು ಸಾಧಿಸಿದೆ ಎಂಬುದು ನಿಜ. ವಿಜ್ಞಾನಿಯು ಪ್ರಯೋಗಶಾಲೆಯಲ್ಲಿ ಜೀವನವನ್ನು ಸೃಷ್ಟಿಸುವ ಹಂತದಲ್ಲಿ ಇದ್ದಾನೆ. ಪ್ರಕೃತಿಯ ಅನೇಕ ರಹಸ್ಯಗಳನ್ನು ಮನುಷ್ಯನು ತನ್ನ ಪರಿಶೀಲನ ಮನೋಭಾವದಿಂದ, ಅವಿರತ ಶ್ರಮದಿಂದ ಬಿಡಿಸಿದ್ದಾನೆ. ನಿನ್ನೆಯ ದಿನ ಅತಿಮಾನುಷ ಎಂದುಕೊಂಡ ಸಂಗತಿಯು ಈ ದಿನ ಸಂಪೂರ್ಣ ಸಹಜ ಸಂಗತಿಯಾಗಿದೆ. ಇದು ಸಾಧನೆಯ ಒಂದು ಮುಖ ಮಾತ್ರ.

ಈ ಪ್ರಗತಿಯ ಮತ್ತೊಂದು ಭಾಗದ ಚಿತ್ರ ಅತ್ಯಂತ ನಿರಾಶಾದಾಯಕ. ವಿಜ್ಞಾನಿ ಅಥವಾ ವಿಜ್ಞಾನದ ವಿದ್ಯಾರ್ಥಿ ಪ್ರಯೋಗ ಶಾಲೆಯಲ್ಲಿ ಸಮಸ್ಯೆಗಳನ್ನು ಎದುರಿಸುವಾಗ ವಿಚಾರವಾದಿಯಾಗಿ ಕಂಡು ಬರುತ್ತಾನೆ. ಆದರೆ ಇದೇ ವ್ಯಕ್ತಿ ಜೀವನದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವಾಗ ಸಂಪೂರ್ಣವಾಗಿ ವೈಚಾರಿಕತೆಯನ್ನು ತ್ಯಜಿಸಿಬಿಡುತ್ತಾನೆ. ಅವನ ಯೋಚನಾಶಕ್ತಿ ರಜೆ ತೆಗೆದುಕೊಂಡುಬಿಡುತ್ತದೆ. ಕೆಲವು ವಿಜ್ಞಾನಿಗಳು ಪವಾಡಗಳನ್ನು ಮಾಡುತ್ತೇವೆ ಎಂದು ಹೇಳುವ ವ್ಯಕ್ತಿಗಳನ್ನು ಅಂಧರಾಗಿ ಅನುರಿಸುವುದೂ ಉಂಟು. ವಿಜ್ಞಾನವು ಜೀವನ ನಂಬಿಕೆಯಾಗದೆ ಹೊಟ್ಟೆಪಾಡಿನ ಮಾರ್ಗವಾದಲ್ಲಿ ಅಂತಹ ವ್ಯಕ್ತಿಗಳು ಹೇಗೆ ತಾನೇ ವೈಜ್ಞಾನಿಕ ಮನೋಭಾವವನ್ನೂ ವೈಚಾರಿಕತೆಯನ್ನೂ ಪ್ರಚಾರ ಮಾಡಲು ಸಾಧ್ಯ?

ಸಂಗ್ರಹ: ಡಿ.ಸಿ.ಬಾಬು

★



ನೀರು ನೀರು
• ಮಂಗಳಾ ಧಾರವಾಡ್ •
"ದೇವಸ್ಥಾನದ ತೀರ್ಥ ಕೂಡಾ ತಲಾ ಒಂದು ಚಮಚೆಗೆ ಒಂದು ರೂಪಾಯಿ!...ಗೊತ್ತಾ?"
"ಎಂಟು ಪ್ಲೇಟ್ ತಿಂಡಿಗೆ ಮಾತ್ರ ಒಂದು ಲೋಟ ನೀರು ಉಚಿತ ಅಂತ ಗಿರಾಕಿಗಳಿಗೆ ಹೇಳಿಬಿಡು"
"ಸಂಬಳ ಕಡಿಮೆ ಮಾಡೀದ್ರೂ ಚಿಂತೆ ಇಲ್ಲ, ದಿನಾ ಎರಡು ಕೊಡ ನೀರು ಕೊಡದಿದ್ರೆ ಕೆಲಸಕ್ಕೇ ಬರೊಲ್ಲ ಅಮ್ಮಾವ್ರೆ....."

ಇಬ್ಬರು ಕಲಾವಿದರು

"ರಾಣೀ, ಏ ರಾಣೀ, ಏಳು" ಚಿತ್ರಾ ಬೆಡ್‌ಶೀಟ್ ಎಳೆದು ಎಬ್ಬಿಸಿದಳು.

"ಏನು ನಿನ್ನ ಗಲಾಟೆ?" ಎನ್ನುತ್ತಾ ಅರುಣಾ ಕಣ್ಣುಜ್ಜುತ್ತಾ ಎದ್ದು ಕೂಡುತ್ತಿದ್ದಂತೆ ಅವಳ ಕೈ ಹಿಡಿದೆಳೆದು ಕರೆದೊಯ್ದು ತಾನು ಹೊಸದಾಗಿ ರೂಪಿಸಿದ ಚಿತ್ರದ ಮುಂದೆ ನಿಲ್ಲಿಸಿ "ನೋಡಿದೆಯಾ, ಚಿತ್ರ ಮುಗಿಸಿಬಿಟ್ಟೆ" ಎಂದಳು, ಚಿತ್ರಾ.

"ಥತ್, ಈ ಚಿತ್ರ ತೋರಿಸೋದಕ್ಕೆ ನನ್ನ ನಿದ್ದೆ ಹಾಳು ಮಾಡಿದೆಯಾ, ನೀನೊಂದು ತರಲೆ" ಅರುಣಾ ಮುಖ ಉಬ್ಬಿಸಿದಳು.

"ಸ್ವಲ್ಪ ಈ ಚಿತ್ರ ನೋಡೇ. ಮೊದಲನೇ ಬಹುಮಾನ ಬರದೆ ಇದ್ದರೆ ನನ್ನ ಹೆಸರನ್ನೇ ಬದಲಾಯಿಸಿಬಿಡು, ತಿಳೀತಾ?" ಚಿತ್ರಾ ಹೆಮ್ಮೆಯಿಂದ ಹೇಳಿದಳು.

ಅರುಣಾ ಚಿತ್ರವನ್ನು ನಾಲ್ಕಾರು ಕಡೆ ತಿರುಗಿಸಿ ನೋಡಿ "ಇದನ್ನು ಹೇಗೆ ಇಟ್ಟುಕೊಂಡು ನೋಡಬೇಕೆ? ಚಿತ್ರದ ಕೆಳಗೆ ಅದು ಯಾವುದರ ಚಿತ್ರ ಅಂತ ಬರಿ ಎಂದು ಎಷ್ಟು ಸಲ ಹೇಳಿದ್ರೂ ನೀನು ಬರೆಯೋಲ್ಲ. ನೀನು ಆನೆ ಬರದರೆ ನಾನು ಗೂಬೆ ಅಂತ ತಿಳಿದುಕೋತೀನಿ. ಈಗ ಹೇಳು ಇದು ಯಾವ ಚಿತ್ರ?"

"ಇದು ಪ್ರಾಣಿಯ ಚಿತ್ರದ ಹಾಗಿದೆಯಾ? ಸ್ವಲ್ಪ ಯೋಚಿಸು."

"ಇದೇನಿದು? ಮನುಷ್ಯ, ಟ್ರಾಂ, ಮೋಟಾರ್, ಮನೆ ಒಂದರ ಮೇಲೊಂದು ಹತ್ತುತ್ತಿವೆ. ಒಳ್ಳೆ ಕಿಚಡಿ ತಯಾರಿಸಿದಹಾಗಿದೆ."

"ಇದು ಯಾವುದರ ಪ್ರತೀಕ ಹೇಳು..."

"ಓಹೋ ಮಹಾ ಪ್ರತೀಕವಂತೆ ಪ್ರತೀಕ."

"ರಾಣೀ, ಇದು ಪ್ರಪಂಚದ 'ಗೋಜಲುತನ'ದ ಪ್ರತೀಕ."

"ನನಗೆ ನಿನ್ನ ಬುದ್ಧಿಯ ಗೋಜಲುತನವೇ ಎದ್ದು ಕಾಣುತ್ತಿದೆ. ನೀನು ಜೀವನವನ್ನು ವ್ಯರ್ಥ ಮಾಡಿಕೋತಿದೀಯಾ" ಎನ್ನುತ್ತಾ ರಾಣಿ ಮುಖ ತೊಳೆಯಲು ಹೋದಳು.

ನಾಲ್ಕು ಗಂಟೆಗೆ ಕಾಲೇಜಿನ ಹುಡುಗಿಯರೆಲ್ಲ ಬಂದರೂ ಅರಣಾ ಬರಲಿಲ್ಲ. ಚಿತ್ರಾ ಟೀ ಕುಡಿಯಲು ಅವಳ ದಾರಿ

"ನಿನಗೆ ಇನ್ನೊಬ್ಬರ ಪರಿವೆಯೆ ಇರುವುದಿಲ್ಲ. ಯಾವಾಗಲೂ ನಿನ್ನ ಬಣ್ಣದಲ್ಲೇ ಮುಳುಗಿ ಬಿಟ್ಟಿರುತ್ತೀ." ಎಂದು ಬೈದ ಗೆಳತಿ ತಾನು ಒಬ್ಬ ಕಲಾವಿದೆ ಎಂದು ತೋರಿಸಿಕೊಂಡಿದ್ದಳು.

●ಕೆ. ಶಾಂತಾಮಣಿ

ಕಾಯತೊಡಗಿದಳು."ಅದಾವ ಬೀದಿಯಲ್ಲಿ ತಿರುಗುತ್ತಿದ್ದಾಳೊ" ಎಂದು ವಟಗುಟ್ಟುತ್ತಿರುವಾಗಲೇ ಅರುಣಾ ಬಂದಳು.

"ಏನು ವಟಗುಟ್ಟುತ್ತಿದ್ದೀಯಾ? ಟೀ ಮಾಡು" ಎಂದಳು.

"ತಗೋ, ನಿನಗೆ ಮನೋಜನಿಂದ ಕಾಗದ ಬಂದಿದೆ. ನನ್ನ ತಂದೆಯೂ ಕಾಗದ ಬರೆದಿದ್ದಾರೆ. ಕೋರ್ಸ್ ಮುಗಿದ ಕೂಡಲೇ ವಿದೇಶಕ್ಕೆ ಕಳಿಸಬೇಕೆಂದಿದ್ದಾರೆ. ಅವರು ವಿದೇಶಕ್ಕೆ ಕಳಿಸುತ್ತಾರೆಂದು ನನಗೆ ಗೊತ್ತಿತ್ತು."

"ಹೂಂ, ಶ್ರೀಮಂತರ ಒಬ್ಬಳೇ ಮಗಳು. ನಿನ್ನ ಇಷ್ಟವನ್ನು ತಳ್ಳಿಹಾಕಲು ಸಾಧ್ಯವೆ! ಆದರೂ ನನಗೆ ಈ ಕಲೆ ಅರ್ಥವಿಲ್ಲದ್ದು ಎನ್ನಿಸುತ್ತಿದೆ. ಮನುಷ್ಯನನ್ನು ಮನುಷ್ಯನನ್ನಾಗಿ ಮಾಡದ ಇಂಥ ಕಲೆ ಏಕೆ?"

"ಹಾಗಾದ್ರೆ ನೀನು ನನ್ನನ್ನು ಮನುಷ್ಯಳು ಅಂತ ತಿಳಿದುಕೊಂಡಿಲ್ಲ?"

"ನಿನಗೆ ಇನ್ನೊಬ್ಬರ ಪರಿವೆಯೆ ಇಲ್ಲ. ಯಾವಾಗಲೂ ಬಣ್ಣದಲ್ಲೇ ಮುಳುಗಿರುತ್ತೀಯಾ! ಪ್ರಪಂಚದಲ್ಲಿ ಯಾವುದೇ ದೊಡ್ಡ ಘಟನೆ ನಡೆದರೂ ನಿನಗೆ ಅದು ಮಹತ್ವದ್ದಾಗಿರುವುದಿಲ್ಲ. ಪ್ರತಿದಿನ, ಪ್ರತಿಕ್ಷಣ ನಿನ್ನ ಚಿತ್ರಕ್ಕೆ ಒಂದು ವಸ್ತು ಹುಡುಕುತ್ತಿರುತ್ತೀಯ. ಕಾಗದದ ಮೇಲೆ ನಿರ್ಜೀವ



ಚಿತ್ರ ಚಿತ್ರಿಸುವುದಕ್ಕಿಂತ ಒಬ್ಬಿಬ್ಬರ ಜೀವನವನ್ನೇಕೆ ರೂಪಿಸಬಾರದು? ನಿನ್ನಲ್ಲಿ ಆ ಸಾಮರ್ಥ್ಯ ಇದೆ. ಸಾಧನವೂ ಇದೆ".

"ಈ ಕೆಲಸವನ್ನು ನೀನು ಮತ್ತು ನಿನ್ನ ಮನೋಜ್ ಸೇರಿ ಮಾಡಿ. ನೀವಿಬ್ಬರೂ ಬೇಗ ಮದುವೆಯಾಗಿ ಲೋಕಕಲ್ಯಾಣ ಮಾಡಿ," ಚಿತ್ರಾ ಜೋರಾಗಿ ನಕ್ಕಳು.

ಪತ್ರಿಕೆಯಲ್ಲಿ ಬರುವ ನೆರೆಹಾವಳಿ ಇತ್ಯಾದಿ ಸುದ್ದಿಗಳನ್ನು ನೋಡಿದ ಕೂಡಲೇ ಅರುಣಾ ಪರಿಹಾರನಿಧಿ ಸಂಗ್ರಹಕ್ಕೆ ಹೊರಡುತ್ತಿದ್ದಳು. "ಈ ರೀತಿ ನೀನು ತಿರುಗಾಡುತ್ತಿದ್ದರೆ ಪರೀಕ್ಷೆಯಲ್ಲಿ ಖಂಡಿತ ಫೇಲ್" ಎಂದು ಚಿತ್ರಾ ಹೇಳಿದರೆ ಈ ದಿನ ಪ್ರಿನ್ಸಿಪಾಲ್‌ರ ಅನುಮತಿ ಪಡೆದು ಸ್ವಯಂ ಸೇವಕ ಗುಂಪಿನ ಜೊತೆ ನಾನೂ ಹೋಗುತ್ತಿದ್ದೇನೆ," ಎಂದು ಅರುಣಾ ತನ್ನದೇ ಆದ ಗುಂಗಿನಲ್ಲಿ ಹೇಳಿಬಿಡುತ್ತಿದ್ದಳು.



* * * * *

ಬರುವ ಬುಧವಾರ ಚಿತ್ರಾ ವಿದೇಶಕ್ಕೆ ಹೊರಡುವವಳಿದ್ದಳು.

ರೀತಿ-ನೀತಿ, ಆಹಾರ-ವಿಹಾರ, ವಿಚಾರ-ಆಸಕ್ತಿ ಇತ್ಯಾದಿಗಳಲ್ಲಿ ಎಷ್ಟೇ ಅಂತರವಿದ್ದರೂ ಆರು ವರ್ಷಗಳ ಒಡನಾಟದಿಂದ ಅರುಣಾಳಿಗೆ ಚಿತ್ರಾಳನ್ನು ಬಿಟ್ಟಿರುವುದೆಂದರೆ ಕಷ್ಟವೆನಿಸುತ್ತಿತ್ತು.

ಚಿತ್ರಾ ಹೊರಡುವ ದಿನ ಬಂತು. ಆದರೆ ಹೊರಡುವ ವೇಳೆ ಸಮೀಪಿಸುತ್ತಿದ್ದರೂ ಆಕೆ ಅದೆಲ್ಲೋ ಮಾಯವಾಗಿ ಬಿಟ್ಟಿದ್ದಳು. ಅರುಣಾ ಅವಳ ಸಾಮಾನು-ಸರಂಜಾಮನ್ನೆಲ್ಲ ಪ್ಯಾಕ್ ಮಾಡಿಟ್ಟಳು. ಅಷ್ಟೊತ್ತಿಗೆ ಓಡೋಡಿ ಚಿತ್ರಾ ಏದುಸಿರು ಬಿಡುತ್ತ ನಿಂತಳು.

"ಇಷ್ಟು ಹೊತ್ತು ಎಲ್ಲಿದ್ದೆ ಚಿತ್ರಾ? ಟ್ರೇನ್‌ಗೆ ಹೊತ್ತಾಯಿತು"- ಅರುಣಾ ರೇಗಿದಳು.

"ಆ ಸ್ಟೋರ್ ಹತ್ತಿರ ಒಬ್ಬ ಭಿಕ್ಷುಕಿ ಇದ್ದಳಲ್ಲ, ಅವಳು ಸತ್ತಳು ಪಾಪ. ಅವಳ ಎರಡು ಮಕ್ಕಳು ಅಳುತ್ತಿದ್ದವು. ಚಿತ್ರ ಬರೆಯಲು ಒಳ್ಳೆಯ ದೃಶ್ಯ. ತಕ್ಷಣ ಸ್ಕೆಚ್ ಹಾಕಿಕೊಂಡೆ ಕಣೆ ಅದಕ್ಕೇ ಲೇಟಾಯ್ತು".

ನಾಲ್ಕೂವರೆ ಹೊತ್ತಿಗೆ ಚಿತ್ರಾಳನ್ನು ಬೀಳ್ಕೊಡಲು ಹಾಸ್ಟೆಲ್ ಹುಡುಗಿಯರು ಗೇಟಿನವರೆಗೆ ಬಂದರು. ಆದರೆ ಅರುಣಾಳ ಸುಳಿವೇ ಇಲ್ಲ. ಚಿತ್ರಾಳ ಕಣ್ಣಲ್ಲಿ ನೀರು ತುಂಬಿತು. ಹೊರಡುವ ವೇಳೆಯಲ್ಲಿ ಜೀವದ ಗೆಳತಿ ಇಲ್ಲ! ಕರ್ಚೀಫ್‌ನಿಂದ ಕಣ್ಣು ಒರೆಸಿಕೊಳ್ಳುತ್ತಲೆ ಚಿತ್ರಾ ಗೆಳತಿಯರಿಂದ ಬೀಳ್ಕೊಂಡಳು.

* * * * *

ವಿದೇಶ ತಲುಪಿದ ಚಿತ್ರಾಳಿಗೆ ತನ್ನ ಕಲೆಯಿಂದ ಕೀರ್ತಿ, ಹಣ ಎರಡೂ ಒದಗಿ ಬಂದವು. ವೈಭವದ ತುಟ್ಟತುದಿಯಲ್ಲಿದ್ದಳು ಅವಳು. ಹಳೆಯದನ್ನೆಲ್ಲ ಮರೆತಳು. ಮೊದಲ ವರ್ಷ ಅರುಣಾಳೊಂದಿಗೆ ಪತ್ರ ವ್ಯವಹಾರ ಇತ್ತು. ಕಾಲ ಕಳೆದಂತೆ ಅದೂ

ಕಡಿಮೆಯಾಗಿ ಸಂಪೂರ್ಣ ನಿಂತು ಹೋಯಿತು.

ಆಕೆ ಚಿತ್ರಿಸಿದ್ದ 'ಭಿಕ್ಷುಕಿ'ಗೆ ಅಲ್ಲಿಯ ಪತ್ರಿಕೆಗಳಿಂದ ಹೊಗಳಿಕೆಯ ಸುರಿಮಳೆ 'ಅನಾಥ'ಎಂದು ಶೀರ್ಷಿಕೆ ಪಡೆದ ಆ ಭಿಕ್ಷುಕಿ ಚಿತ್ರಕ್ಕೆ ಪ್ರಥಮ ಬಹುಮಾನವೂ ದೊರಕಿತು. ದುಃಖ - ದಾರಿದ್ರ್ಯ - ಕರುಣೆಗಳು ಸಾಕಾರವಾಗಿ ನಿಂತ ಆ ಚಿತ್ರ ಪ್ರೇಕ್ಷಕರನ್ನು ದಂಗುಬಡಿಸಿತ್ತು. ಚಿತ್ರಾಳ ಜೀವನ-ಕಲಾಸಾಧನೆಗಳ ಬಗ್ಗೆ ಪತ್ರಿಕೆಗಳು ಲೇಖನಗಳನ್ನು ಪ್ರಕಟಿಸಿದವು.

ಮಗಳ ಕೀರ್ತಿಯಿಂದ ಚಿತ್ರಾಳ ತಂದೆ ಆನಂದಭರಿತರಾಗಿದ್ದರು. ದಿಲ್ಲಿಯಲ್ಲಿ ಅವಳ ಚಿತ್ರಗಳ ಪ್ರದರ್ಶನದ ಏರ್ಪಾಡಾಗಿತ್ತು. ಅದರ ಉದ್ಘಾಟನೆಯ ದಿನ ಚಿತ್ರಾ ದಿಲ್ಲಿಗೆ ಬಂದಳು.

ಅಬ್ಬಾ ಅದೆಂಥ ಜನಸಂದಣಿ!

ಆ ಜನಸಂದಣಿಯಲ್ಲಿ ಚಿತ್ರಾಳ ಕಣ್ಣಿಗೆ ಅರುಣಾ ಕಾಣಿಸಿದಳು.

"ರಾಣೀ" ಎನ್ನುತ್ತಾ ಜನರನ್ನು ದೂಡಿಕೊಂಡು ಓಡಿ ಅರುಣಾಳನ್ನು ಆಲಂಗಿಸಿದಳು ಚಿತ್ರಾ.

"ರಾಣಿ, ನಿನಗೆ ಚಿತ್ರಗಳನ್ನು ನೋಡುವ ಗೀಳು ಯಾವಾಗ ಶುರುವಾಯಿತೇ?"

"ಚಿತ್ರವನ್ನಲ್ಲ, ಚಿತ್ರಾಳನ್ನು ನೋಡಲು ಬಂದೆ. ನೀನು ನನ್ನನ್ನು ಮರೆತೇಬಿಟ್ಟಿದ್ದೀಯಾ".

ಅಷ್ಟರಲ್ಲಿ ಚಿತ್ರಾಳ ದೃಷ್ಟಿ ಅರುಣಾಳ ಹತ್ತಿರವಿದ್ದ ಹತ್ತುವರ್ಷದ ಹುಡುಗ, ಎಂಟು ವರ್ಷದ ಹುಡುಗಿಯ ಮೇಲೆ ಬಿತ್ತು.

"ಯಾರ ಮಕ್ಕಳೇ ಇವು" ಚಿತ್ರಾ ಕೇಳಿದಳು.

"ಇನ್ಯಾರವು? ನನ್ನವೇ.. ಮಕ್ಕಳೇ ಆಂಟಿಗೆ ನಮಸ್ಕಾರ ಮಾಡಿ..." ಅರುಣಾ ಹೇಳಿದಳು.

ಮಕ್ಕಳು 'ನಮಸ್ತೇ' ಎಂದವು. ಚಿತ್ರಾ ಒಮ್ಮೆ ಅರುಣಾ ಮತ್ತೊಮ್ಮೆ ಮಕ್ಕಳ ಕಡೆ ನೋಡತೊಡಗಿದಳು. ಅವಳಿಗೆ ತುದಿ-ಬುಡ ತಿಳಿಯಲಿಲ್ಲ. "ನೀನೆಂಥ ಆಂಟೀ? ಮಕ್ಕಳನ್ನು ಪ್ರೀತಿಯಿಂದ ಮಾತಾಡಿಸಬಾರದಾ?" ಅರುಣಾ ಮೂದಲಿಸಿದಾಗ ಚಿತ್ರಾ ಮಕ್ಕಳ ತಲೆ ಸವರಿದಳು.

ಆ ಪ್ರೀತಿಗೆ ಉತ್ತರವೆಂಬಂತೆ ಅವು ಚಿತ್ರಾಳನ್ನು ತಬ್ಬಿಕೊಂಡವು.

"ನಿಮ್ಮ ಆಂಟೀ ತುಂಬಾ ಒಳ್ಳೆ ಚಿತ್ರಗಳನ್ನು ಬರೀತಾಳೆ, ಗೊತ್ತಾ..." ಅರುಣಾ ಹೆಮ್ಮೆಯಿಂದ ಹೇಳಿದಳು.

"ಹೌದಾ ಆಂಟೀ! ಹಾಗಾದರೆ ಡ್ರಾಯಿಂಗ್‌ನಲ್ಲಿ ಫಸ್ಟ್ ಬಂದಿರಬಹುದು."

ಹುಡುಗಿ ಕೇಳಿತು. ಆ ಮಾತಿಗೆ ಅರುಣಾ, ಚಿತ್ರಾ ಇಬ್ಬರೂ ನಕ್ಕುಬಿಟ್ಟರು.

"ಆಂಟೀ ನಮಗೆ ನಿಮ್ಮ ಚಿತ್ರಗಳನ್ನು ತೋರಿಸಿ ಮತ್ತೆ", ಹುಡುಗ ಹೇಳಿದ.

ಚಿತ್ರಾ ಚಿತ್ರಗಳನ್ನು ತೋರಿಸುತ್ತಾ ಅವುಗಳ ಬಗ್ಗೆ ಹೇಳುತ್ತಾ ಮುಂದೆ ನಡೆದಳು. ಎಲ್ಲರೂ ಅವಳ ಹಿಂದೆ ಹೋಗುತ್ತಾ 'ಅನಾಥ' ಶೀರ್ಷಿಕೆಯ ಭಿಕ್ಷುಕಿ ಚಿತ್ರದ ಮುಂದೆ ನಿಂತರು.

"ರಾಣೀ, ಈ ಚಿತ್ರಕ್ಕೇ ನನಗೆ ಪ್ರಶಸ್ತಿ ಬಂದದ್ದು" ಚಿತ್ರಾ ಹೆಮ್ಮೆಯಿಂದ ಹೇಳಿದಳು.

"ನಿಜವಾಗಿಯೂ ಇವರ ಅಮ್ಮ ಸತ್ತೋಗಿದಾಳಾ ಆಂಟಿ?" ಹುಡುಗಿ ಕೇಳಿತು.

"ನಿಜವಾಗಿಯೂ, ಅದನ್ನು ನೋಡಿಯೇ ನಾನು ಚಿತ್ರ ಬರೆದಿದ್ದೇನೆ".

"ಅಯ್ಯೋ ಪಾಪ. ಆ ಮಕ್ಕಳು ಏನಾದವೋ"-ಹುಡುಗಿ ಮರುಕ ತೋರಿತು.

ಅಷ್ಟರಲ್ಲಿ ಬಂದ ಪತಿಯ ಜೊತೆ ಮಿಕ್ಕ ಚಿತ್ರಗಳನ್ನು ನೋಡಲು ಮಕ್ಕಳನ್ನು ಕಳಿಸಿದಳು. ಮಕ್ಕಳು ಮನಸ್ಸಿಲ್ಲದೆ ಹೋದವು.

ಚಿತ್ರಾಳಿಗೆ ಆ ಮುದ್ದು ಮಕ್ಕಳು ಇಷ್ಟವಾದವು. ಚಿತ್ರಾ ಅರುಣಾಳ ಕೈಹಿಡಿದು "ನಿಜ ಹೇಳು ರಾಣೀ, ಈ ಮಕ್ಕಳು ಯಾರವು?" ಕೇಳಿದಳು.

"ನನ್ನವೆಂದು ಹೇಳಿದೆನಲ್ಲ."

"ನನ್ನನ್ನು ಮೂರ್ಖಳನ್ನಾಗಿ ಮಾಡಲು ನೋಡುತ್ತೀಯಾ? ನಿಜ ಹೇಳು".

ಒಂದು ಕ್ಷಣ ಸುಮ್ಮನಿದ್ದ ಅರುಣಾ ಆ ಭಿಕ್ಷುಕಿಯ ಮಕ್ಕಳ ಚಿತ್ರದ ಮೇಲೆ ಕೈ ಇಟ್ಟು "ಅವು ಈ ಮಕ್ಕಳು" ಎಂದಳು.

"ಆಂ..."ಚಿತ್ರಾ ಬಾಯಿ ತೆರೆದು ಹಾಗೇ ನಿಂತುಬಿಟ್ಟಳು. ★

ಬದುಕು-ಬದಲಾವಣೆ

ಮಗನನ್ನ ಬಯಸಿದರೆ...

ಶಸ್ತ್ರ ಚಿಕಿತ್ಸೆಗೆ ಮುನ್ನ
ಆಯೂಬ್ ಪುತ್ರಿಯರು



ಪ್ರಕೃತಿಯ ವೈಚಿತ್ರ್ಯವನ್ನು ಹೀಗೇ ಎಂದು ಹೇಳಲು ಆಗುವುದಿಲ್ಲ!

• *ಪ್ರಕಾಶಚಂದ್ರ*

ಇಂದಿನ ದಿನಗಳಲ್ಲಿ ಯುವಕರು ಯುವತಿಯರಂತೆ ಅಲಂಕರಿಸಿಕೊಳ್ಳುವುದು, ಹುಡುಗಿಯರಂತೆ ನಡೆಯುವುದು ಅಲ್ಲಲ್ಲಿ ನಮಗೆ ಕಾಣಸಿಗುತ್ತದೆ. ಹಾಗೆಯೇ ಯುವತಿಯರೂ ಯುವಕರಂತೆ ಉಡುಪು ಧರಿಸಿ, ಕೂದಲನ್ನು ಬಾಬ್ ಕಟ್ ಮಾಡಿಸಿಕೊಂಡು ಥೇಟ್ ಗಂಡಸರಂತೆ ವರ್ತಿಸುವುದೂ ಕಂಡುಬರುತ್ತದೆ. ಇತ್ತೀಚೆಗಂತೂ ಗಂಡಸರು ಹೆಂಗಸಾಗಿಯೂ ಹೆಂಗಸರು ಗಂಡಸಾಗಿಯೂ

ಪರಿವರ್ತನೆಗೊಳಗಾಗುತ್ತಿರುವುದೂ ವಿಜ್ಞಾನದ ಅಚ್ಚರಿಗಳಲ್ಲಿ ಒಂದಾಗಿದೆ. ಆದರೆ ವೈದ್ಯಕೀಯ ಲೋಕಕ್ಕೆ ಸವಾಲೆಂಬಂತೆ ಒಂದೇ ಕುಟುಂಬದ ನಾಲ್ವರು ಸಹೋದರಿಯರು ಲಿಂಗಪರಿವರ್ತನೆ ಮಾಡಿಸಿಕೊಂಡು ಸಹೋದರರಾಗಿ ಬದಲಾಗಿರುವುದು ಇಡೀ ಜಗತ್ತಿಗೇ ಆಶ್ಚರ್ಯ ಉಂಟುಮಾಡುವ ಅಪರೂಪದ ಪ್ರಕರಣ. ಅದು ನಡೆದದ್ದು ಅಮೇರಿಕದಲ್ಲಿ.

೧೧, ೧೪, ೧೫ ಮತ್ತು ೧೬ ವರ್ಷಗಳ ಈ ಹೆಣ್ಣುಮಕ್ಕಳು ಬೇಕಾಗಿಯೇ ಲಿಂಗ ಪರಿವರ್ತನೆ ಮಾಡಿಸಿಕೊಳ್ಳಲಿಲ್ಲ. ಇದಕ್ಕೆ ಅನಿವಾರ್ಯವಾದ ಒಂದು ಕಾರಣವೂ ಉಂಟು. ಅದರಲ್ಲೂ ಈ ವಿಚಿತ್ರ ಪ್ರಕರಣ ನಡೆದಿರುವುದು ಸಂಪ್ರದಾಯಸ್ಥ ಮುಸ್ಲಿಂ ಕುಟುಂಬದಲ್ಲಿ!

ಜೋರ್ಡಾನ್ ದೇಶದ ಅಯೂಬ್ ಎಂಬಾತನ ಪುತ್ರಿಯರಿವರು.

ಮೊದಲ ಮಗು ಗಂಡಾಗಬೇಕೆಂದು ಅಯೂಬ್ ಅಲ್ಲಾಹನಲ್ಲಿ ಪ್ರಾರ್ಥಿಸಿದ್ದರು. ಆದರೆ ಆದದ್ದು ಹೆಣ್ಣುಮಗು. ಇದರಿಂದ ನಿರಾಶರಾದರೂ ಅಯೂಬ್ ವಿಚಲಿತರಾಗಲಿಲ್ಲ. ಆದರೆ ನಂತರದ ಮೂರೂ ಹೆರಿಗೆಗಳಲ್ಲೂ ಆತನ ಹೆಂಡತಿ ಹೆಣ್ಣು ಮಗುವನ್ನೇ ಹೆತ್ತಾಗ ಅಯೂಬರಿಗೆ ಬಹಳ ನಿರಾಶೆಯಾಯಿತು. ಕೊನೆಗೆ ದೇವರ ಕರುಣೆ ಇಷ್ಟೇ ಎಂದು ಭಾವಿಸಿಕೊಂಡ ಅಯೂಬ್ ದಂಪತಿಗಳು ಹೆಣ್ಣುಮಕ್ಕಳನ್ನೇ ಗಂಡುಮಕ್ಕಳಂತೆ ಬೆಳೆಸಲು ನಿರ್ಧರಿಸಿದರು. ಘೋಷಾ ಪದ್ಧತಿಯನ್ನು ಕಟ್ಟುನಿಟ್ಟಾಗಿ ಅನುಸರಿಸುವ ಕುಟುಂಬದ ಈ ಹೆಣ್ಣುಮಕ್ಕಳು ಹೊರಗಡೆ ತಿರುಗಾಡುವುದು, ಗಂಡುಮಕ್ಕಳೊಂದಿಗೆ ಬೆರೆಯುವುದು ಇತ್ಯಾದಿಗಳಿಂದ ದೂರವುಳಿದರು.

ಬಹುಶಃ ಅಯೂಬ್ ಜೋರ್ಡಾನನ್ನು ಬಿಡದೆಹೋಗಿದ್ದರೆ ಈ ಕುಟುಂಬಕ್ಕೆ ಇಂಥ ವಿಚಿತ್ರ ತಿರುವು ಸಿಗುತ್ತಿರಲಿಲ್ಲವೋ ಏನೋ. ಹಿರಿಯ ಮಗಳಿಗೆ ೧೬ ವರ್ಷ ತುಂಬುತ್ತಿದ್ದಂತೆಯೇ ಅಯೂಬ್‌ಗೆ ಅಮೆರಿಕದ ಪ್ರತಿಷ್ಠಿತ ಕಂಪನಿಯೊಂದರಲ್ಲಿ ಉದ್ಯೋಗ ಸಿಕ್ಕ ಕಾರಣ ತನ್ನ ಕುಟುಂಬವನ್ನು ಅಲ್ಲಿಗೆ ಸ್ಥಳಾಂತರಿಸಿದರು. ಡೆಟ್ರಾಯಿಟ್‌ನ ಮೋಟಾರು ಕಂಪನಿಯೊಂದಕ್ಕೆ ಸೇರಿದ ಶಾಲೆಯಲ್ಲಿ ಮಕ್ಕಳು ಓದತೊಡಗಿದರು. ಅಲ್ಲಿಯೂ ಪಾಶ್ಚಾತ್ಯ ಸಂಸ್ಕೃತಿಯ ಮೋಡಿಗೆ ಒಳಗಾಗದ ಈ ಹುಡುಗಿಯರು ಹೆಚ್ಚು ಆಸಕ್ತಿಯಿಂದ ಅಭ್ಯಾಸದಲ್ಲಿ ತಲ್ಲೀನರಾದರು.

ಕಥೆಗೆ ತಿರುವು ಬಂದದ್ದು ಇದೇ ಸಮಯದಲ್ಲಿ!

ಹದಿನಾರು ವರ್ಷಗಳಾದರೂ ಹಿರಿಯ ಮಗಳಿಗೆ ಹೆಣ್ತನದ ಲಕ್ಷಣಗಳು ಕಂಡುಬರದ್ದರಿಂದ ತಾಯಿಗೆ ಗಾಬರಿಯಾಯಿತು. ಕೂಡಲೇ ಈ ವಿಷಯವನ್ನು ಗಂಡನಿಗೆ ತಿಳಿಸಿದಳು. ಆದರೆ ಅದನ್ನು ಗಂಭೀರವಾಗಿ ತೆಗೆದುಕೊಳ್ಳದ ಅಯೂಬ್ ವಾತಾವರಣ ಬದಲಾದ ಪರಿಣಾಮವಾಗಿ ಈ ರೀತಿ ಆಗಿರಬಹುದೆಂದು ಹೆಂಡತಿಗೆ ಸಮಜಾಯಿಸಿದರು.

ಒಂದು ತಿಂಗಳ ನಂತರ ಹಿರಿಯ ಮಗಳಿಗೆ ಮೂಗಿನ ಕೆಳಗೆಲ್ಲ ಮೀಸೆ, ಗದ್ದ-ಕೆನ್ನೆಗಳ ಮೇಲೆಲ್ಲ ಗಡ್ಡ ಬೆಳೆಯುತ್ತಿರುವುದನ್ನು ಗಮನಿಸಿದ ದಂಪತಿಗಳು ದಿಗ್ಭ್ರಾಂತರಾದರು. ಸ್ವಲ್ಪವೂ ತಡಮಾಡದೆ ವೈದ್ಯರನ್ನು ಸಂಪರ್ಕಿಸಿದರು. ಡೆಟ್ರಾಯಿಟ್ ನಗರದಲ್ಲಿ ಅತ್ಯಾಧುನಿಕ ವೈದ್ಯಕೀಯ ಸೌಲಭ್ಯಗಳಿದ್ದುದರಿಂದ ಅಯೂಬ್ ಹಿರಿಯ ಮಗಳನ್ನು ಎಲ್ಲಾ ರೀತಿಯ ಪರೀಕ್ಷೆಗಳಿಗೆ ಒಳಪಡಿಸಲಾಯಿತು.

"ಈಕೆಯನ್ನು ಇನ್ನು ಮೇಲೆ 'ಈತ' ಎನ್ನಿ. ಮಗಳೆನ್ನದಿರಿ," ಎಂದು ಹೇಳಿದ ಡಾಕ್ಟರುಗಳು, ಮಗ ಬೇಕು ಎಂದು ಹಂಬಲಿಸುತ್ತಿದ್ದ ಅಯೂಬ್ ದಂಪತಿಗೆ ಅಚ್ಚರಿ-ಸಂತಸವನ್ನಿತ್ತರು. ಸಣ್ಣ ಶಸ್ತ್ರಚಿಕಿತ್ಸೆಯೊಂದರ ಮೂಲಕ ಈಕೆಯನ್ನು ಸಂಪೂರ್ಣ ಗಂಡಸಾಗಿ ಮಾರ್ಪಡಿಸಬಹುದೆಂದೂ, ಒಂದು ತಿಂಗಳಲ್ಲೇ ಆಕೆ ಗಂಡಸರಂತೆ ಎಲ್ಲಾ ಕೆಲಸಗಳನ್ನೂ ಮಾಡಬಹುದೆಂದೂ ವೈದ್ಯರು ತಿಳಿ ಹೇಳಿದರು. ಅಲ್ಲದೆ, "ಲಿಂಗ ಪರಿವರ್ತನೆ ಚಿಕಿತ್ಸೆ ಮಾಡಿಸಿಕೊಳ್ಳದಿದ್ದರೆ ಮುಂದೆ ಗಂಭೀರ ಸಮಸ್ಯೆಗಳು ಎದುರಾಗಬಹುದು," ಎಂದು ಅಯೂಬ್ ದಂಪತಿಗೆ ವೈದ್ಯರು ಎಚ್ಚರಿಕೆ ನೀಡಿದರು.

ಗತ್ಯಂತರವಿಲ್ಲದೆ ಅಯೂಬ್ ದಂಪತಿ ಇದಕ್ಕೆ ಸಮ್ಮತಿಸಿದರು. ಶಸ್ತ್ರಚಿಕಿತ್ಸೆ ಯಶಸ್ವಿಯಾಯಿತು.

"ನಮಗೆ ಒಬ್ಬ ಗಂಡು ಮಗು, ಮೂವರು ಹೆಣ್ಣು ಮಕ್ಕಳು," ಎಂದು ಅಭಿಮಾನದಿಂದ ಹೇಳಿ


ಕೊಳ್ಳುತ್ತಾ ತಿರುಗಾಡಿದ ಅಯೂಬ್ ಯಶಸ್ವಿ ಶಸ್ತ್ರಚಿಕಿತ್ಸೆ ನಡೆಸಿ ತಮ್ಮ ಆತಂಕವನ್ನು ದೂರಮಾಡಿದ ಡಾ. ರೇನಾಲ್ಡ ಅವರನ್ನು ಕೃತಜ್ಞತಾಪೂರ್ವಕವಾಗಿ ಒಮ್ಮೆ ಮನೆಗೆ ಆಹ್ವಾನಿಸಿದರು. ಊಟ ಮಾಡುತ್ತಿದ್ದ ಸಂದರ್ಭದಲ್ಲಿ ಡಾ. ರೇನಾಲ್ಡ ಅವರು ಅಯೂಬರ ಉಳಿದ ಮೂವರು ಪುತ್ರಿಯರ ವರ್ತನೆ, ನಡಿಗೆ ಮತ್ತು ಹಾವ ಭಾವಗಳಲ್ಲಿ ಏನೋ ವ್ಯತ್ಯಾಸ ಇದೆ ಎಂಬುದನ್ನು ಗಮನಿಸಿದರು. ಅವರನ್ನು ಒಮ್ಮೆ ಪರೀಕ್ಷೆಗೆ ಒಳಪಡಿಸುವುದು ಒಳ್ಳೆಯದು ಎಂದು ಅವರು ಅಯೂಬ್‌ಗೆ ಸಲಹೆ ಮಾಡಿದರು.

ಈ ಸಲಹೆಯಿಂದ ಅಯೂಬ್ ದಂಪತಿಗೆ ಭಾರೀ ಆಘಾತ ಉಂಟಾಯಿತು. ಈಗಾಗಲೇ ಹಿರಿಯ ಮಗಳು ಪರಿವರ್ತನೆಗೊಂಡ ಬಗ್ಗೆ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಇನ್ನುಳಿದವರ ಕಥೆಯೂ ಇದೇ ರೀತಿ ಆದರೆ ಪತ್ರಿಕೆಗಳು ಭಾರೀ ಮಜಾದಾರಿ ಪ್ರಚಾರ ನೀಡಿ ತಮ್ಮ ಕುಟುಂಬದ ಹೆಸರು ಹಾಳಾಗುತ್ತದೆ ಎಂದು ಅವರು ಅತೀವ ಆತಂಕಕ್ಕೆ ಗುರಿಯಾದರು. ಆದರೆ ವೈದ್ಯರು ಧೈರ್ಯ ತುಂಬಿದ ಕಾರಣ ಉಳಿದ ಮೂವರಿಗೂ ವೈದ್ಯಕೀಯ ಪರೀಕ್ಷೆ ನಡೆಸಲು ಒಪ್ಪಿಗೆ ನೀಡಿದರು.

ನಂತರದ ಸ್ಕ್ಯಾನಿಂಗ್ ಮತ್ತಿತರ ಪರೀಕ್ಷೆಗಳಲ್ಲಿ ಅವರೂ ಗಂಡು ಮಕ್ಕಳೇ ಎಂದೂ ಅದೇ ಸಣ್ಣ ಶಸ್ತ್ರಚಿಕಿತ್ಸೆಯನ್ನೇ ನಡೆಸಬೇಕಾಗುವುದೆಂದೂ ಡಾ. ರೇನಾಲ್ಡ ಹೇಳಿದರು.

ಈ ಶಸ್ತ್ರಚಿಕಿತ್ಸೆಗಳೂ ಯಶಸ್ವಿಯಾದವು. ಯಾವುದೇ ಹಾರ್ಮೋನಿನ ಅವಶ್ಯಕತೆಯೇ ಇಲ್ಲದೆ ಈ ನಾಲ್ವರಿಗೆ ಯುವಕರ ಲಕ್ಷಣಗಳು ಕಂಡು ಬರತೊಡಗಿವೆ.

★



"ಪರೀಕ್ಷೇಲಿ ನಾನು ಫೇಲಾಗಿದ್ರೇನಂತೆ? ನೀವು ಚುನಾವಣೇಲೇ ಫೇಲಾಗಿದ್ದೀರಿ... ಅದಕ್ಕೆ ನಾನು ಕೋಪಿಸ್ಕೋಬೇಕಾ ಹಾಗಾದ್ರೆ''?



ಕೊನೆಗೂ ಕೊಟ್ಟ!



ಸ್ವರ್ಣ ಗರ್ಭ...

ಇದು ಲಖನೌ ನಗರದಲ್ಲಿ ನಡೆದದ್ದು. ಬದರಿ ಪ್ರಸಾದ್ ಓಂಕಾರನಾಥ್ ಎಂಬ. ಆತನೊಬ್ಬ ಸರಾಫ. ಒಂದು ದಿನ ಮೂರು ತೊಲ ಚಿನ್ನ ಆತನ ಅಂಗಡಿಯಿಂದ ನಾಪತ್ತೆಯಾಯಿತು. ಕದ್ದವನಾರು? ಉಳಿದೆಲ್ಲಾ ಚಿನ್ನ, ಚಿನ್ನಾಭರಣ, ನಗದನ್ನು ಬಿಟ್ಟು ಇಷ್ಟನ್ನೇ ಯಾಕೆ ಕದ್ದ?

ಪೊಲೀಸರಿಗೆ ದೂರು ಹೋಯಿತು. ಅವರು ಅಂತೂ ಇಂತೂ ಕಳ್ಳನನ್ನು ಹಿಡಿದು ತಂದು ನಿಲ್ಲಿಸಿದರು. ಅಲ್ಲಲ್ಲ, ಮಲಗಿಸಿದರು. ಕಳ್ಳನನ್ನು

ಸಣ್ಟೀವಿ! ಕಣ್ಟೀವಿ?!



ಕೆನಡಾದಲ್ಲಿ ವಾಸಿಸುವ ಭಾರತೀಯ ಯುವಕ ರಾಜಸಿಂಹ ತುಲಿ ಎಂಬಾತ ಈ 'ಕಣ್ಟೀವಿ'ಯನ್ನು ತಯಾರಿಸಿದ್ದಾನೆ. ನಿಮ್ಮ ಕನ್ನಡಕಕ್ಕೆ ಅಡಕಗೊಳಿಸಬಹುದಾದಷ್ಟು ಚಿಕ್ಕದು ಅದು. ಎರಡು ಮಿಲಿಮೀಟರ್‌ನಷ್ಟು ತೆಳ್ಳನೆಯ ಎರಡು ಮೈಕ್ರೊ ಚಿಪ್ಸ್‌ಗಳನ್ನು ಕನ್ನಡಕಕ್ಕೆ ಜೋಡಿಸುವ ಮೂಲಕ ಈ ಟಿವಿಯನ್ನು ವೀಕ್ಷಿಸಬಹುದು. ತುಲಿ ತನ್ನ ಈ ಆವಿಷ್ಕಾರಕ್ಕೆ ಪೇಟೆಂಟ್ ಕೂಡ ಪಡೆದಿದ್ದಾನೆ.

ರಾಜಸಿಂಹ ತುಲಿಯದು ಇದು ಮೊದಲ ಶೋಧವೇನೂ ಅಲ್ಲ. ಇದಕ್ಕೂ ಮುನ್ನ ಆತ ಫ್ಯಾಕ್ಸ್ ಯಂತ್ರದಲ್ಲಿ ಜೋಡಿಸಲಾಗುವ ವೈಡ್ ಫ್ಯಾಕ್ಸ್ ತಂತ್ರಜ್ಞಾನವನ್ನೂ ಆವಿಷ್ಕರಿಸಿದ್ದ. ಈ ಕಾರಣಕ್ಕಾಗಿಯೇ ಆತನ ಹೆಸರು ಗಿನ್ನಿಸ್ ಪುಸ್ತಕದಲ್ಲಿ ದಾಖಲೆಯಾಯಿತು.

ದೇವರು ಎಲ್ಲರ ಮೊರೆಯನ್ನೂ ಕೇಳು ತ್ತಾನೆ. ಕೆಲವರ ಮೊರೆಯನ್ನು ಬೇಗನೆ ಇನ್ನೂ ಕೆಲವರದನ್ನು ತಡವಾಗಿ. ಮತ್ತೆ ಕೆಲವರದನ್ನು ತೀರ ತಡವಾಗಿ 'ಛೇ, ದೇವರು ಮರೆತೇ ಬಿಟ್ಟ' ಎಂದು ಇಂಥವರು ನಿರಾಶೆಗೊಂಡಿರುವ ಹೊತ್ತಿಗೆಯೇ ಅವರ ಕೋರಿಕೆಯನ್ನಾತ ಈಡೇರಿಸಿ ಅವರಿಗಷ್ಟೇ ಅಲ್ಲ, ಸುತ್ತಮುತ್ತಲಿನ ಜನಕ್ಕೆಲ್ಲಾ ಅಚ್ಚರಿಬರಿಸು ತ್ತಾನೆ.

ಪ್ಯಾರಿಸ್ಸಿನ ಮೂವತ್ತೈದರ ಮಹಿಳೆ ಡಯಾನಾಳ ವಿಷಯದಲ್ಲಿ ಹೀಗೇ ಆಯಿತು. ಮೂವತ್ತಮೂರು ವರುಷಗಳವರೆಗೂ ಆಕೆಗೆ ಮಕ್ಕಳೇ ಆಗಲಿಲ್ಲ. ತಾನು ಬಂಜೆ, ತನ್ನನ್ನು ಭಗವಂತ ತಾಯ್ತನದ ಭಾಗ್ಯದಿಂದ ವಂಚಿತನನ್ನಾಗಿಸಿದ್ದಾನೆ ಎಂದೇ ಆಕೆ ಭಾವಿಸಿಕೊಂಡುಬಿಟ್ಟಿದ್ದಳು.

ಒಮ್ಮೆ ಇದ್ದಕ್ಕಿದ್ದಂತೆಯೇ ಆಕೆಗೆ ಜ್ವರ ಬಂತು. ನಾಲ್ಕಾರು ದಿನ ಹಾಸಿಗೆ ಬಿಟ್ಟೇಳಲಿಲ್ಲ. ಡಾಕ್ಟರುಗಳ ಬಳಿಗೊಮ್ಮೆ ಹೋಗಿದ್ದಾಗ 'ನೀನು ತಾಯಾಗಲಿದ್ದೀಯಮ್ಮ' ಎಂದರಂತೆ. ಈಕೆ ನಂಬಲಿಲ್ಲ. ಆದರೆ ಡಾಕ್ಟರುಗಳೂ ಪಟ್ಟುಬಿಡಲಿಲ್ಲ. ಆಕೆಗೆ ತಿಳಿ ಹೇಳಿದರು. 'ಅಂತೂ ನನ್ನನ್ನು ದೇವರು ಮರೆತಿಲ್ಲ ಎಂದಾಯಿತು' ಎಂದುಕೊಂಡಳು ಡಯಾನಾ.

ಸಂತಸದಿಂದ ಪ್ರಸವ ಸಮಯವನ್ನು ಆಕೆ ಎದುರು ನೋಡತೊಡಗಿದಳು.

ತಡವಾಗಿ ಕೊಟ್ಟರೂ ಬಡ್ಡಿ ಸಹಿತ ಕೊಟ್ಟಂತೆ ದೇವರು ಡಯಾನಾಳಿಗೆ ದಯಪಾಲಿಸಿದ ಮಕ್ಕಳೆಷ್ಟು ಗೊತ್ತೆ? ಒಂದೇ ಸಲಕ್ಕೆ ಎಂಟು!

ಕಂಡರೆ ಜನ ರೋಷದಿಂದ ಹೊಡೆಯಹೋಗ ಬೇಕು. ಆದರೆ ಇಲ್ಲಿ ಅವರೆಲ್ಲಾ ಬಿದ್ದು ಬಿದ್ದು ನಗತೊಡಗಿದರು.

ಚಿನ್ನ ಕದ್ದವ ಮನುಷ್ಯನಲ್ಲ, ಒಂದು ಇಲಿ!

ಆದದ್ದಿಷ್ಟು. ಝುಮಕಿಯೊಂದನ್ನು ತಯಾರಿಸಲು ಆ ಸರಾಫ ಮೂರು ತೊಲ ಚಿನ್ನವನ್ನು ತೆಗೆದುಕೊಂಡ. ಅದನ್ನು ಚಿಕ್ಕ ತುಂಡುಗಳಾಗಿ ಕತ್ತರಿಸಿ, ಅಂಗಡಿಯಲ್ಲಿಯೇ ಇಟ್ಟು ಬಾಗಿಲು ಮುಚ್ಚಿಕೊಂಡು ಮನೆಗೆ ಹೋದ. ಮರುದಿನ ಬಂದ. ಅಂಗಡಿ ತೆಗೆದ. ಕೆಲಸ ಪ್ರಾರಂಭಿಸಬೇಕೆಂದು ಕೂತು ಆ ಬಂಗಾರವನ್ನು ಎತ್ತಿಕೊಳ್ಳಲು ನೋಡಿದ. ಅದು ಅಲ್ಲಿದ್ದರೆ ತಾನೆ? ಅಲ್ಲಲ್ಲಿ ಹುಡುಕಿದ. ಸಿಕ್ಕಲಿಲ್ಲ. 'ಅಂಗಡಿ ಭದ್ರವಾಗಿಯೇ ಇದೆ. ಸಾಮಾನುಗಳೆಲ್ಲಾ ಯಥಾಸ್ಥಿತಿ ಇವೆ. ಹಾಗಾದರೆ ಈ ಚಿನ್ನ ಹೋಯಿತಾದರೂ ಎಲ್ಲಿ?'

ಪೊಲೀಸರು ಹುಡುಕಿಯೇ ಹುಡುಕಿದರು. ಹೀಗೆ ಹುಡುಕುವಾಗ ಅವರ ಕಣ್ಣಿಗೆ ಒಂದು ಸತ್ತ ಇಲಿಯ ವಿನಾ ಮತ್ತೇನೂ ಗೋಚರಿಸಲಿಲ್ಲ. "ಗುದ್ದು ತೋಡಿ ಇಲಿ ತೆಗೆದರು ಅಂತಾರಲ್ಲಾ ಹಾಗಾಯ್ತು ನಮ್ಮ ಪಾಡು" ಅಂತ ಅವರಂದುಕೊಳ್ಳುತ್ತಿದ್ದ ಹೊತ್ತಿನಲ್ಲೇ ಒಬ್ಬ ಪೇದೆ ಆ ಇಲಿಯ ಹೊಟ್ಟೆ ಉಬ್ಬಿರುವುದನ್ನು ಗಮನಿಸಿದ.

"ಇಲ್ಲಿದ್ದಾನೆ ಕಳ್ಳ" ಎಂದಾತ ಇಲಿಯನ್ನು ತೋರಿಸಿದ. ಸೇರಿದ್ದವರು ನಕ್ಕರೂ ಲಕ್ಷ್ಯವೀಯದ ಆತ ಅದರ ಹೊಟ್ಟೆ ಸೀಳಿಯೇಬಿಟ್ಟ.

ಅದರಲ್ಲಿ ಸಿಕ್ಕಿತು ಕಳೆದಿದ್ದ ಚಿನ್ನ.

ಇದು ಚೀನ!

ಅಮ್ನೆಸ್ಟಿ- ಇಂಟರ್ ನ್ಯಾಷನಲ್ ಪ್ರಕಾರ ೧೯೮೫ರಲ್ಲಿ ಅತ್ಯಧಿಕ ಮರಣ ದಂಡನೆಯ ಶಿಕ್ಷೆಗಳು ವಿಧಿಸಲ್ಪಟ್ಟಿರುವುದು ಚೀನದಲ್ಲಂತೆ. ಕಳೆದ ಡಿಸೆಂಬರಿನ ಕೊನೆಯ ವಾರದಲ್ಲಿಯೇ ಆ ದೇಶದಲ್ಲಿ ೪೪ ಜನಕ್ಕೆ ಫಾಶಿ ಹಾಕಲಾಯಿತು. ಆ ಇಡೀ ತಿಂಗಳಿನಲ್ಲಿ ಮರಣದಂಡನೆಗೆ ಗುರಿಯಾದವರು ೧೫೦ ಜನ. ೧೯೮೪ರಲ್ಲಿ ಕಡಿಮೆಯೆಂದರೆ ೧೭೬೧ ಜನ, ಅದಕ್ಕೂ ಹಿಂದಿನ ವರ್ಷವೂ ಅಷ್ಟೇ ಮಂದಿ ಅಲ್ಲಿ ಗಲ್ಲಿಗೇರಿಸಲ್ಪಟ್ಟರಂತೆ. ಅಮ್ನೆಸ್ಟಿ ಇಂಟರ್ ನ್ಯಾಷನಲ್ ಈ ಅಂಕಿ ಸಂಖ್ಯೆಗಳನ್ನು ಅರ್ಧಸತ್ಯ ಎಂದು ಹೇಳುತ್ತದೆ. ಯಾಕೆಂದರೆ ಚೀನದ ನ್ಯಾಯಾಲಯಗಳು ಮೃತ್ಯುದಂಡಕ್ಕೆ ಗುರಿಯಾದವರ ಹೆಸರುಗಳನ್ನು ಗೌಪ್ಯವಾಗಿರಿಸುತ್ತದೆ.



ಬಿಸಿ ಬಿಸಿ ಚಹದ ಹಸಿ ಹಸಿ ಕಥೆ

- ಜಿ. ಅನಂತ ನಾರಾಯಣಸ್ವಾಮಿ

ಬೋಧಿಧರ್ಮನೆಂಬ ಬೌದ್ಧ ಸಂನ್ಯಾಸಿಯೊಬ್ಬ ಧ್ಯಾನದಿಂದ ಎಚ್ಚೆತ್ತಾಗ ತಾನು ಆವರೆಗೆ ಬರಿ ನಿದ್ದೆ ಮಾಡಿದ್ದರ ಅರಿವುಂಟಾಯಿತು. ಈ ತಪ್ಪಿಗಾಗಿ ಬಹಳ ವ್ಯಥೆಪಟ್ಟು ಈ ತಪ್ಪಿಗೆ ಪರಿಹಾರವಾಗಿ ತನ್ನ ಎರಡೂ ಕಣ್ಣುಗಳ ರೆಪ್ಪೆಯನ್ನು ಕಿತ್ತು ಭೂಮಿಗೆ ಎಸೆದನಂತೆ. ಭೂಮಿಯ ಮೇಲೆ ಬಿದ್ದ ರೆಪ್ಪೆಗಳು ಅನುಕೂಲಕರ ವಾತಾವರಣ ಒದಗಿದಾಗ ಸಸ್ಯವಾಗಿ ಚಿಗುರಿದವಂತೆ. ಅದುವೆ 'ಚಹಾ'ದ ಸಸ್ಯವೆಂದು ಜಪಾನಿನ ಧಾರ್ಮಿಕ ಕಥೆಯೊಂದು ಹೇಳುತ್ತದೆ. ಆ ಕಾರಣದಿಂದಲೇ ಹೆಚ್ಚು ಚಹಾ ಕುಡಿದಾಗ ನಿದ್ದೆ ಬರುವುದಿಲ್ಲವಂತೆ.

'ಚಹಾ' ಎಂಬ ಪದ ಚೀನಿಭಾಷೆಯ 'ಚಾಹ್' (Chah) ಎಂಬುದರಿಂದ ಬಂದದ್ದು. ಇಂಗ್ಲೆಂಡಿನವರು ಇದನ್ನು ಟೇ (Tay) ಎಂದು ಉಚ್ಚರಿಸಿದರೂ ಬರೆಯುವಾಗ 'ಟೀ' (Tea) ಎಂದೇ ಬರೆಯುವ ವಾಡಿಕೆ ಹದಿನೆಂಟನೇ ಶತಮಾನದ ಕೊನೆಯವರೆಗೂ ಇತ್ತು. ಅನಂತರ ಆ ಶಬ್ದವನ್ನು 'ಟೀ' ಎಂದೇ ಉಚ್ಚರಿಸುವ ಅಭ್ಯಾಸ ಮಾಡಿಕೊಂಡರು. ಇಂಗ್ಲೆಂಡಿನ ಕೆಲವರು ಕಡೆ ಅದರಲ್ಲೂ ಹೆಚ್ಚಾಗಿ ಸೈನಿಕರು 'ಚಹ'ವನ್ನು 'ಚಾರ್' (Char) ಎಂದೂ ಕರೆ ಕರೆಯುತ್ತಿದ್ದರು. ರಟ್ಟಿನ ಪ್ಯಾಕ್‌ಗಳಲ್ಲಿರುವ ಚಹಾ ಪುಡಿಯನ್ನು ಅವರು 'ಕ್ಯಾಟೀ' (Catty) ಎಂದು ಕರೆಯುತ್ತಾರೆ. ನಂತರ 'ಕ್ಯಾಟೀ', 'ಕ್ಯಾಡೀ' ಯಾಗಿ ಪರಿವರ್ತನೆಯಾಯಿತೆಂದು ಹೇಳುವುದಿದೆ.

ಕ್ರಿ.ಶ. ೨೭೩ ಮೊದಲ ಸಹ ಚಹವನ್ನು ಬಳಸಲಾಯಿತೆಂದು ಚೀನಿ ಅಧಿಕಾರಿಯೊಬ್ಬನ ಜೀವನ ಚರಿತ್ರೆಯ ಪುಸ್ತಕ ಹೇಳುತ್ತದೆ. ಚೀನದಲ್ಲಿ ಪ್ರಚಲಿತವಾಗಿರುವ ಮತ್ತೊಂದು ಆಖ್ಯಾಯಿಕೆಯ ಪ್ರಕಾರ 'ಚಹಾ'ವನ್ನು ಕ್ರಿ.ಪೂ. ೨೭೩೭ರಲ್ಲಿ 'ಶೇನ್ ನಂಗ್' ಎಂಬ ಚಕ್ರವರ್ತಿ ಉಪಯೋಗಿಸುತ್ತಿದ್ದ. ಕ್ರಿ.ಶ. ೧೫೫೯ರಲ್ಲಿ ಪರ್ಷಿಯದ ವ್ಯಾಪಾರಿಯೊಬ್ಬ ಚೀನಕ್ಕೆ ಭೇಟಿನೀಡಿದಾಗ ಅಲ್ಲಿನ ಜನ ಚಹಾವನ್ನು ಉಪಯೋಗಿಸುತ್ತಿದ್ದನ್ನು ಕಂಡು ಅದರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪಡೆದ. ಚೀನಿಯರು ಆಗ ಚಹಾವನ್ನು ಔಷಧವನ್ನಾಗಿ ಉಪಯೋಗಿಸುತ್ತಿದ್ದರೆಂದು ತಿಳಿದು ಬಂದಿದೆ.

ನಂತರ ಅನೇಕ ಮಿಷನರಿಗಳು ಚೀನಾ ಮತ್ತು ಜಪಾನಿಗೆ ಭೇಟಿ ನೀಡಿದಾಗ ಅವರು ಈ ಪಾನೀಯದ ಬಗ್ಗೆ ಹೆಚ್ಚಿನ ಆಸಕ್ತಿ ತೋರಿಸಿದರೆಂದು ಇತಿಹಾಸ ತಿಳಿಸುತ್ತದೆ. ಕ್ರಿ.ಶ. ೧೬೧೦ರಲ್ಲಿ ಪ್ರಥಮ ಬಾರಿಗೆ ಚಹಾವು ಯೂರೋಪಿಗೆ ಬಂತು. ಆ ವರ್ಷ ಡಚ್ ವ್ಯಾಪಾರಿಗಳು ತಮ್ಮ ಹಡಗುಗಳಲ್ಲಿ ಜಪಾನಿನಿಂದ ಚಹಾ ಪುಡಿಯನ್ನು ಹಾಲೆಂಡ್‌ಗೆ ತಂದು ವ್ಯಾಪಾರ ಪ್ರಾರಂಭಿಸಿದರು. ಹೀಗೆ ಪಶ್ಚಿಮ

ದೇಶಗಳಲ್ಲಿ ಡಚ್ಚರೇ ಮೊದಲು ಚಹಾದ ರುಚಿ ನೋಡಿದವರು. ೧೬೨೬ರಲ್ಲಿ ಡಚ್ಚರು ಜಾವಾದಲ್ಲಿ ಚಹಾದ ತೋಟಗಳನ್ನು ಪ್ರಾರಂಭಿಸಿದರು. ೧೮೩೬ರಲ್ಲಿ ಈಸ್ಟ್ ಇಂಡಿಯಾ ಕಂಪನಿಯವರು ಭಾರತದಲ್ಲಿ ಚಹಾದ ತೋಟಗಳನ್ನು ಸ್ಥಾಪಿಸಿದರು. ೧೮೭೦ರಲ್ಲಿ ಶ್ರೀಲಂಕಾದಲ್ಲಿ ಕಾಫಿ ಬೆಳೆಗೆ ರೋಗ ತಗುಲಿ ಬೆಳೆಯೆಲ್ಲ ನಾಶವಾದಾಗ ಅವರು ಅದರ ಬದಲು ಚಹಾ ತೋಟಗಳನ್ನು ಅಭಿವೃದ್ಧಿ ಪಡಿಸಿದರು.

ಆದರೆ ಉಳಿದ ದೇಶದವರಿಗೆ ಹೋಲಿಸಿದರೆ ಬ್ರಿಟಿಶರು ಚಹಾ ಉಪಯೋಗಿಸುವುದರಲ್ಲಿ ಬಹಳ ಹಿಂದಿದ್ದರು. ಆಗಿನ ಕಾಲದಲ್ಲಿ 'ಚಹಾ' ಬಹಳ ದುಬಾರಿಯಾಗಿದ್ದುದೇ ಇದಕ್ಕೆ ಮುಖ್ಯ ಕಾರಣವೆಂದು ಹೇಳಲಾಗಿದೆ. ಹೀಗಾಗಿ ಕೇವಲ ಶ್ರೀಮಂತರು ಮಾತ್ರ ಇದನ್ನು ಸವಿಯಲು ಸಾಧ್ಯವಾಗಿತ್ತು. 'ಚಹಾ' ಕುಡಿಯುವುದು ಅವರಲ್ಲಿ ದೊಡ್ಡಸ್ತಿಕೆಯ ಲಕ್ಷಣವಾಗಿತ್ತು. ಸ್ವಾರಸ್ಯದ ವಿಷಯವೆಂದರೆ ಮೊದಮೊದಲು ಅಲ್ಲಿನವರಿಗೆ ಚಹವನ್ನು ಹೇಗೆ ಉಪಯೋಗಿಸಬೇಕೆಂಬುದೇ ಗೊತ್ತಿರಲಿಲ್ಲ. ಬ್ರಿಟನ್ನಿನ ಸಾಮಾನ್ಯ ಜನ ಇದನ್ನು (ಚಹಾ ಪುಡಿಯನ್ನು) ತರಕಾರಿಯ ಹಾಗೆ ಬಳಸಬೇಕೆಂದು ಭಾವಿಸಿದ್ದರು. ಚಹಾ ಎಲೆಗಳನ್ನು ಬೇಯಿಸಿ, ಮೆಣಸು, ಬೆಣ್ಣೆ ಮತ್ತು ಉಪ್ಪನ್ನು ಬೆರೆಸಿ ಪಲ್ಯದಂತೆ ಉಪಯೋಗಿಸುತ್ತಿದ್ದರು. ಚಹಾಪುಡಿಯನ್ನು ಬೆಣ್ಣೆಯೊಂದಿಗೆ ಬೆರೆಸಿ ಬ್ರೆಡ್ಡಿನ ತುಣುಕುಗಳಿಗೆ ಸವರಿ ಸ್ಯಾಂಡ್‌ವಿಚ್ ಆಗಿಯೂ ಸೇವಿಸುತ್ತಿದ್ದರು.

ಪ್ರಾರಂಭದ ದಿನಗಳಲ್ಲಿ ಜನರು ಡಿಕಾಕ್ಷನ್ನಿಗೆ ಬರಿ ಸಕ್ಕರೆ ಅಥವಾ ಬೆಲ್ಲವನ್ನು ಬೆರೆಸಿ ಕುಡಿಯುತ್ತಿದ್ದರು. ಒಂದು ದಿನ ಡಿ ಸೆವಿಗ್ನೆ ಎಂಬ ಫ್ರೆಂಚ್ ಮಹಿಳೆಗೆ ಚಹಾಕ್ಕೆ ಹಾಲನ್ನು ಬೆರೆಸಿದರೆ ಹೇಗಿರುತ್ತದೆ ಎಂಬ ಕುತೂಹಲ ಉಂಟಾಯಿತು. ಹಾಲು ಬೆರೆತ ಚಹಾ ಕುಡಿದ ಆಕೆಗೆ ಅದು ಬಹಳ ಮನಸ್ಸಿಗೆ ಬಂತು. ಈ ವಿಷಯವನ್ನಾಕೆ ತನ್ನ ಸ್ನೇಹಿತೆಯರಿಗೂ ಹೇಳಿದಾಗ ಅವರೂ ಈ ಪ್ರಯೋಗದಿಂದ ಹೆಚ್ಚಿನ ರುಚಿ ಪಡೆದರು. ಹೀಗೆ ಚಹಾಕ್ಕೆ ಹಾಲನ್ನು ಬೆರೆಸುವ ಪದ್ಧತಿ ಜಾರಿಗೆ ಬಂತು.

ಈ ಪದ್ಧತಿ ಕ್ರಮೇಣ ಇಂಗ್ಲೆಂಡಿಗೂ ವಿಸ್ತರಿಸಿ ಹೆಚ್ಚು ಹೆಚ್ಚು ಜನರು ಚಹಾ ಕುಡಿಯಲು ಪ್ರಾರಂಭಿಸಿದರು. ಆಗಿನ ಕಾಲದಲ್ಲಿ ರಾತ್ರಿ ಊಟದ ನಂತರ ಚಹಾ ಸೇವಿಸುವುದು ರೂಢಿಯಲ್ಲಿತ್ತು. ಬೆಳಿಗ್ಗೆ ಅಥವಾ ಮಧ್ಯಾಹ್ನ ಚಹಾ ಸೇವಿಸುವ ಅಭ್ಯಾಸವನ್ನು ಬಂದಿರಲಿಲ್ಲ. ಆದರೆ ಕ್ರಿ.ಶ. ೧೮೪೦ರಲ್ಲಿ ಡಚ್‌ರಾಣಿಯೊಬ್ಬಳು ಹೀಗೆಯೇ ಖಯಾಲಿಯಿಂದ ಒಂದು ಮಧ್ಯಾಹ್ನ ಬ್ರೆಡ್ ಜೊತೆ ಸ್ವಲ್ಪ ಚಹಾ ತೆಗೆದುಕೊಂಡಳು. ಅವಳ ಪ್ರಯೋಗ ಸೂಕ್ತ ಫಲ ನೀಡಿತ್ತು. ಆಕೆಗೆ ಹೆಚ್ಚಿನ ಲವಲವಿಕೆ ಬಂತು. ಅದುವರೆಗೂ ಅವಳಲ್ಲಿದ್ದ ಸೋಮಾರಿತನ ಮಾಯವಾಯಿತು. ಈ ವಿಷಯವನ್ನಾಕೆ ದೇಶದ ಇತರ ಜನರಿಗೂ ಪ್ರಚುರಪಡಿಸಿದಳು.

ಹೀಗೆ ಮಧ್ಯಾಹ್ನದ ವೇಳೆ ಚಹಾ ಕುಡಿಯುವ ಪದ್ಧತಿ ಬಳಕೆಗೆ ಬಂತು. ಜನ ಮಧ್ಯಾಹ್ನದ ಚಹಾ ಸಮಯವನ್ನು 'ಟೀ ಟೈಮ್' ಎಂದು ಕರೆಯಲಾರಂಭಿಸಿದರು. ಫ್ಯಾಕ್ಟರಿಗಳಲ್ಲಿ ಸಹ ಮಧ್ಯಾಹ್ನದ ವೇಳೆ ಕಾರ್ಮಿಕರಿಗೆ ಚಹಾ ಒದಗಿಸಿ ಅವರಲ್ಲಿ ಹುರುಪು ಮೂಡುವಂತೆ ಮಾಡಿ ಅವರಿಗೆ ಆಗಿರಬಹುದಾದ ಆಯಾಸವನ್ನು ತಗ್ಗಿಸಲು ಕ್ರಮ ಕೈಗೊಳ್ಳಲಾಯಿತು.

ರಶಿಯದಲ್ಲಿ ಡಿಕಾಕ್ಷನ್ನಿಗೆ ಸಕ್ಕರೆ ಮತ್ತು ನಿಂಬೆ ಹಣ್ಣನ್ನು ಬೆರೆಸಿ ಸೇವಿಸುವ ಕ್ರಮ ರೂಢಿಯಲ್ಲಿತ್ತು. ಟಿಬೆಟ್ ಮತ್ತು ಮಧ್ಯ ಏಶಿಯದ ದೇಶಗಳ ಜನ ಚಹಾಕ್ಕೆ ಉಪ್ಪು ಮತ್ತು ಬೆಣ್ಣೆಯನ್ನು ಬೆರೆಸಿ ತೆಗೆದುತ್ತಿದ್ದರು. ಅಮೆರಿಕನ್ನರು ಬೇಸಿಗೆ ಕಾಲದಲ್ಲಿ ಚಹಾಕ್ಕೆ ಮಂಜುಗಡ್ಡೆಯನ್ನು ಬೆರೆಸಿ 'ತಂಪು ಚಹಾ'ವನ್ನು ಸೇವಿಸುತ್ತಿದ್ದರು. ಈಗಲೂ ಅನೇಕ ದೇಶಗಳಲ್ಲಿ ಈ ಪದ್ಧತಿ ಚಾಲ್ತಿಯಲ್ಲಿದೆ. ಬೌದ್ಧರು ಚಹಾವನ್ನು ಕೇವಲ ಔಷಧಿ ಗುಣಗಳಿಗಾಗಿ ಉಪಯೋಗಿಸುತ್ತಿದ್ದರು. ಈ ಮೊದಲು ದಿನದಲ್ಲಿ ಒಂದು ಸಲ ಮಾತ್ರ ಸೇವಿಸುತ್ತಿದ್ದ ಜನ ಈಗ ಚಹಾವನ್ನು ದಿನದಲ್ಲಿ ಮೂರುಹೊತ್ತು ಸೇವಿಸಲು ಪ್ರಾರಂಭಿಸಿ ನಂತರ ಯಾವ ಸಮಯದಲ್ಲಾದರೂ ಸೇವಿಸುವ ಅಭ್ಯಾಸ ಬೆಳೆಸಿಕೊಂಡರು. ಅಷ್ಟು ಚಹಾ ಕುಡಿಯುವುದು ಆರೋಗ್ಯಕ್ಕೆ ಒಳ್ಳೆಯದಲ್ಲ ನಿಜ, ಆದರೆ ನಮ್ಮ ದೇಶದ ವಿದೇಶಾಂಗ ಮಂತ್ರಿಗಳಾಗಿದ್ದ ವಿ.ಕೆ. ಕೃಷ್ಣಮೆನನ್ನರು ಪ್ರತಿದಿನ ನಲವತ್ತು ಕಪ್ ಚಹಾ ಕುಡಿಯುತ್ತಿದ್ದರಂತೆ. ಅವರು ವಿಶ್ವ ಸಂಸ್ಥೆಯ ಸಭೆಗಳಲ್ಲಿ ಚಹಾ ಸೇವಿಸುತ್ತಲೇ ಭಾಷಣ ಬಿಗಿಯುತ್ತಿದ್ದರು.

ಇತ್ತೀಚೆಗೆ 'ಚಹಾ' ಅನೇಕ ರಾಷ್ಟ್ರಗಳಲ್ಲಿ ಜನ ಪ್ರಿಯ ಪೇಯವಾಗಿದೆ. ಸಭೆ ಸಮಾರಂಭಗಳಲ್ಲಿ ಕಾಫಿಯನ್ನೇ ನೀಡಿದರೂ ಅದನ್ನು 'ಟೀ ಪಾರ್ಟಿ' ಎಂದೇ ಕರೆಯುವುದು ರೂಢಿಯಾಗಿದೆ. ಚೀನಾ ಮತ್ತು ಜಪಾನ್ ದೇಶಗಳಿಂದ ಪ್ರಾರಂಭವಾದ ಈ ಪಾನೀಯವಿಂದು ಅಮೆರಿಕಾ ಹಿಂದಿನ ಸೋವಿಯತ್ ಒಕ್ಕೂಟದ ಸ್ವತಂತ್ರ ಗಣರಾಜ್ಯಗಳು, ಭಾರತ, ಶ್ರೀಲಂಕಾ, ಇಂಡೋನೇಶಿಯ ಹಾಗೂ ಇಂಗ್ಲೆಂಡನ್ನೊಳಗೊಂಡು ಇತರ ಯೂರೋಪಿಯನ್ ದೇಶಗಳಲ್ಲಿ ಜನ ಮನ್ನಣೆ ಪಡೆದಿದೆ. ಕ್ರಿ.ಶ. ೧೭೬೭ರಲ್ಲಿ ಇಂಗ್ಲೆಂಡಿನ ಸರ್ಕಾರಿ ಅಧಿಕಾರಿಗಳು ಚಹಾದ ಮೇಲೆ ಅಧಿಕ ತೆರಿಗೆಯನ್ನು ವಿಧಿಸಿದಾಗ ಅಲ್ಲಿನ ಮಹಿಳೆಯರು ಇದನ್ನು ಪ್ರತಿಭಟಿಸಿ ತೆರಿಗೆಯನ್ನು ಹಿಂತೆಗೆದುಕೊಳ್ಳದಿದ್ದಲ್ಲಿ ದೇಶದಲ್ಲಿ ಚಹಾ ಸೇವನೆಗೆ ತಡೆ ಒಡ್ಡುವುದಾಗಿ ಬೆದರಿಕೆ ಹಾಕಿದಾಗ ಸರಕಾರ ವಿಧಿಯಿಲ್ಲದೆ ತೆರಿಗೆಯನ್ನು ಹಿಂದೆಗೆದು ಕೊಂಡಿತಂತೆ. ಇಂದು ಚಹಾ ಸೇವಿಸುವಲ್ಲಿ ಇಂಗ್ಲೆಂಡಿನ ಜನರೇ ಮುಂದು. ಅಲ್ಲಿ ಸರಾಸರಿಯಾಗಿ ಪ್ರತಿಯೊಬ್ಬರೂ ವರ್ಷಕ್ಕೆ ಹತ್ತುಪೌಂಡ್ ಚಹಾ ಬಳಸುತ್ತಿದ್ದಾರಂತೆ.

ಚಹಾ ಎಂದರೆ ಒಂದೇ ಅಲ್ಲ, ಅದರಲ್ಲಿ ಹಸಿರು ಚಹಾ (Green Tea), ಕಪ್ಪು ಚಹಾ (Black Tea) ಮತ್ತು ಊಲಾಂಗ್ ಚಹಾ (Oolong Tea) ಎಂದು ಮೂರು ವಿಧ. ಇದರ ಜೊತೆಗೆ ಸುವಾಸಿತ ಚಹವೂ (Scented Tea) ಇತ್ತೀಚೆಗೆ ಬಳಕೆಗೆ ಬಂದಿದೆ. ಇದನ್ನು ಏಲಕ್ಕಿ ಅಥವಾ ಮಲ್ಲಿಗೆ ಹೂವಿನ ವಾಸನೆ ಬೆರೆಸಿ ತಯಾರಿಸಲಾಗುತ್ತಿದೆ. ಭಾರತದಲ್ಲಿ ಕೇರಳದವರು ತಯಾರಿಸುವ ಚಹಾ ಬಲು ಜನಪ್ರಿಯ. ಇದನ್ನು ಕೆ.ಟೀ (Kerala Tea) ಎಂದೇ ಕರೆಯುತ್ತಾರೆ. ಕಪ್ಪು ಚಹಾ ಮತ್ತು ಊಲಾಂಗ್ ಚಹಾವನ್ನು ಹಸಿರು ಚಹಾವನ್ನು ಹುಳಿಹಿಡಿಸುವುದರಿಂದ (Fermentation) ಪಡೆಯಲಾಗುತ್ತಿದೆ.

ಚಹಾದಲ್ಲಿ ಮೂರು ಮುಖ್ಯವಸ್ತುಗಳಿವೆ. ಅವುಗಳೆಂದರೆ ಥೀನ್ (Theine), ಟ್ಯಾನಿನ್ ಮತ್ತ ತೈಲಾಂಶ. ಥೀನ್ ಉತ್ತೇಜಕವಾಗಿ ಕೆಲಸ ಮಾಡಿದರೆ ಟ್ಯಾನಿನ್ ಶಕ್ತಿಯನ್ನು ನೀಡುತ್ತದೆ. ಚಹಾ ಎಲೆಗಳಲ್ಲಿರುವ ತೈಲಾಂಶ ಸುವಾಸನೆಯನ್ನು ಉಂಟುಮಾಡುತ್ತದೆ. ಟ್ಯಾನಿನ್ ಚಟಕಾರಕವಾದ್ದರಿಂದ ಮಕ್ಕಳಿಗೆ ಚಹಾ ಅಭ್ಯಾಸ ಮಾಡಿಸುವುದು ಒಳ್ಳೆಯದಲ್ಲ. ಚಹಾಪುಡಿ ತಯಾರಿಸುವ ಕಂಪನಿಯವರು ಬೇರೆ ಬೆರೆ ರುಚಿಯ ಚಹಾ ತಯಾರಿಸುವ ಸಲುವಾಗಿ ರುಚಿಕಾರರನ್ನು ನಿಯಮಿಸಿಕೊಂಡಿರುತ್ತಾರೆ. ಸಾವಿರಾರು ಬಗೆಯ ಚಹಗಳನ್ನು ಅವರು ಪ್ರತ್ಯೇಕವಾಗಿ ಗುರುತಿಸಬಲ್ಲರು.

ವಿಶ್ವವ್ಯಾಪಿಯಾಗಿರುವ 'ಚಹ' ಜನಪ್ರಿಯತೆಯಲ್ಲೂ ಬಳಕೆಯಲ್ಲೂ ಕಾಫಿಯನ್ನು ಹಿಂದೆ ಹಾಕಿದೆ. ರಸ್ತೆ ಬದಿಯ 'ಚಹಾ' ಅಂಗಡಿಗಳು ಅನೇಕರಿಗೆ ಉದ್ಯೋಗ ಒದಗಿಸಿರುವುದಲ್ಲದೆ ಟೀ ಪ್ರಿಯರಿಗೆ ಚಹವು ದಿನದ ಇಪ್ಪತ್ತನಾಲ್ಕು ಗಂಟೆಯೂ ಲಭ್ಯಗಲು ಸಾಧ್ಯವಾಗಿದೆ.

ಯಾವುದೂ ಅತಿಯಾದರೆ ಒಳ್ಳೆಯದಲ್ಲವಷ್ಟೆ? ಚಹದ ವಿಷಯದಲ್ಲಿಯೂ ಹಾಗೆಯೇ.

ಸಾಧನೆ

ತಮಿಳುನಾಡಿನ ಧರ್ಮಪುರಿಯ ಸಮೀಪದಲ್ಲಿರುವ ಇಲಕ್ಕಿಯಂ ಪಟ್ಟಿಯ ಅಕ್ಕ ತಂಗಿ ಮತ್ತು ತಮ್ಮ ಮೂರು ಜನರಿಗೂ ಒಂದೇ ವರ್ಷದಲ್ಲಿ ಮೆಡಿಕಲ್, ಇಂಜಿನಿಯರಿಂಗ್‌ನಲ್ಲಿ ಸೀಟು ಸಿಕ್ಕಿದೆ. ಅಂದರೆ ಆಶ್ಚರ್ಯವಾಗುತ್ತದಲ್ಲವೆ?

ಅಕ್ಕ ರಷ್ಯಾ ದೇವಿ, ತಂಗಿ ಚೈನಾ ದೇವಿ ಇವರು ಐದು ನಿಮಿಷಗಳ ಅಂತರದಲ್ಲಿ ಜನಿಸಿದ ಅವಳಿ ಸೋದರಿಯರು. ಇವರಿಗೆ ಒಬ್ಬ ತಮ್ಮ ನಿದ್ದಾನೆ. ಅವನ ಹೆಸರು ಮಾವೊತ್ಸೆ ತುಂಗ್.

ಈ ಮೂವರಲ್ಲಿ ಕಳೆದ ಬಾರಿ ಇಬ್ಬರಿಗೆ ಮೆಡಿಕಲ್ ಸೀಟು ಹಾಗೂ ಒಬ್ಬಳಿಗೆ ಇಂಜಿನಿಯರಿಂಗ್ ಸೀಟು ಸಿಕ್ಕಿದೆ. ಒಂದೇ ಕುಟುಂಬದ ಮೂವರು ಒಂದೇ ವರ್ಷದಲ್ಲಿ ಈ ಸಾಧನೆ ಮಾಡಿದ್ದು ಗಮನಾರ್ಹ.

ಕೊಕ್ಕರೆ ಬೆಳ್ಳೂರು ಟಿ.ಬಿ. ಲಕ್ಷ್ಮಣ

ಧ್ಯಾನಕಾಲ

- ತೋವಿನಕೆರೆ ಸೀತಾರಾಮ ಜೋಯ್ಸ

ಬೆಂಗಳೂರು ನಗರದ ಮಲ್ಲೇಶ್ವರ ಬಡಾವಣೆಯಲ್ಲಿರುವ ಸಂಪಿಗೆ ರಸ್ತೆ ಬೇವಿನಮರದ ರಸ್ತೆ ಎಂಬವೆರಡಿವೆ ಎಂಬುದನ್ನು ರಸ್ತೆಗಳ ಹೆಸರುಗಳನ್ನು ಮೈಸೂರು ಕಡೆಯವರೆಲ್ಲ ಕೇಳಿಯೆ ಇರುತ್ತಾರೆ. ಬೇವಿನಮರದ ರಸ್ತೆಯಲ್ಲಿ ಅದೇ ಜಾತಿಗೆ ಸೇರಿದ ಮರಗಳಿರುತ್ತವೆ ವಿನಾ ಅವು ಎಲ್ಲರಿಗೂ ತಿಳಿದಿರುವ ಬೇವಿನ ಮರಗಳಲ್ಲ. ಸಂಪಿಗೆ ರಸ್ತೆಯ ಇಕ್ಕೆಲದಲ್ಲೂ ಸಂಪಿಗೆ ಮರಗಳಿದ್ದವು. ಈಗ ಆ ರಸ್ತೆಯಲ್ಲಿ ಒಂದೇ ಒಂದು ಸಂಪಿಗೆ ಮರ ಉಳಿದಿದೆ. ಯಾರೋ ಒಬ್ಬ ಪುಣ್ಯಾತ್ಮನ ಭಾವನೆಗನುಗುಣವಾಗಿ ಈ ಹೆಸರುಗಳು ಅವತರಿಸಿರಬಹುದು. ಆಗ ಸಂಜೆಯ ವೇಳೆ ಸಂಪಿಗೆಯ ಗಿಡದಲ್ಲಿ ಮೊಗ್ಗುಗಳು ಬಿರಿದು ಪರಿಮಳವನ್ನು ವಾತಾವರಣದಲ್ಲಿ ತೇಲಿಬಿಟ್ಟಾಗ ಜನರು ಆ ರಸ್ತೆಯಲ್ಲಿ ಸುತ್ತುವುದೇ ಒಂದು ಲಾಭವೆಂದು ಭಾವಿಸಿದ್ದರು.

ಸಾವಿರದ ಒಂಬೈನೂರ ಮೂವತ್ತೈದನೇ ಇಸವಿಯ ಒಂದು ದಿನ ಈ ಸಸಿಗಳೆಲ್ಲ ಗರಗಸ ಪ್ರಯೋಗಕ್ಕೆ ತುತ್ತಾದವು. ರಸ್ತೆಯುದ್ದಕ್ಕೂ ಎರಡೂ ಬದಿಯಲ್ಲಿ ಕಂಗೊಳಿಸುತ್ತಿದ್ದ ಸಸಿಗಳೆಲ್ಲ ಮಾಯವಾದುದನ್ನು ಕಂಡ ಜನರು ದಿಗ್‌ಭ್ರಾಂತರಾದರು. ಆ ಮೇಲೆ ಸರಕಾರವೇ ಸಸಿಗಳನ್ನು ಕತ್ತರಿಸಿಹಾಕಲು ಆಜ್ಞೆ ಮಾಡಿದ್ದಿತೆಂದು ತಿಳಿಯಿತು. ಬೆಂಗಳೂರು ನಗರವನ್ನು ಅಲಂಕರಿಸಲು ಭವ್ಯವಾದ ಕಟ್ಟಡಗಳನ್ನು ನಿರ್ಮಿಸುವ ಯೋಜನೆ ಆಗತಾನೆ ಪ್ರಾರಂಭವಾಗಿತ್ತು. ಜನರು ಈ ಕಾರ್ಯಕ್ಕೆ ಕಾರಣವೇನಿರಬಹುದೆಂದು ಚರ್ಚಿಸುತ್ತಿದ್ದರು.

ಆ ಮೇಲೆ ತಿಳಿದುಬಂದ ವಿಷಯ ಹೀಗಿತ್ತು: ಸಂಪಿಗೆ ರಸ್ತೆಯ ಉತ್ತರದ ಕೊನೆಯಲ್ಲಿ ಉನ್ನತಮಟ್ಟದ ಭವ್ಯವಾದ ಸರಕಾರಿ ಕಲ್ಲು ಕಟ್ಟಡದ ಕೆಲಸ ನಡೆಯುತ್ತಿತ್ತು. ಕಟ್ಟಡ ನಿರ್ಮಾಣವಾದ ಮೇಲೆ ರಸ್ತೆಯ ಸಂಪಿಗೆ ಸಸಿಗಳು ಬೆಳೆದುನಿಂತಾಗ ಅವುಗಳು ನೋಡುವವರ ದೃಷ್ಟಿಗೆ ಅಡ್ಡವಾಗಿ ಕಟ್ಟಡದ ಅಂದ-ಚಂದಗಳಿಗೆ ಕೊರತೆಯನ್ನು ಉಂಟುಮಾಡಬಹುದೆಂದು ಭಾವಿಸಿ ಸರಕಾರ ಅವುಗಳನ್ನೆಲ್ಲ ತೆಗೆಸಿಹಾಕಲು ಹಾಗೆ ಮಾಡಿತೆಂಬ ವದಂತಿ ಹಬ್ಬಿತು! ಇದು ಎಷ್ಟರಮಟ್ಟಿಗೆ ಸತ್ಯವೆನ್ನುವುದು ಬೇರೆ ವಿಷಯ. ಸಸಿಗಳನ್ನು ನೆಡಿಸಿದವನ ಮತ್ತು ತೆಗೆಸಿದವನ ದೃಷ್ಟಿಕೋನಗಳಲ್ಲಿ ಎಷ್ಟೊಂದು ಅಂತರವಿತ್ತೆನ್ನುವುದೇ ಇಲ್ಲಿ



ಗಮನಿಸಬೇಕಾದ ವಿಷಯ. ಅನಂತರ ಸಂಪಿಗೆ ಸಸಿಗಳಿದ್ದ ಸ್ಥಳದಲ್ಲಿ ಕಾಡುಜಾತಿಯ ಸಸಿಗಳನ್ನು ಬೆಳೆಸಲಾಯಿತು.

ಕಟ್ಟಡದ ಕೆಲಸ ಭರದಿಂದ ನಡೆಯುತ್ತಿತ್ತು. ಮುಂದೆ ಅದು ಎಂಥ ಭವ್ಯ ಭವನವಾಗುವುದೋ ಏನೋ ಎನ್ನುವುದನ್ನು ನೋಡಲು ಗೆಳೆಯನೊಡಗೂಡಿ ಅತ್ತ ಧಾವಿಸಿದೆವು. ಸಂಜೆಯಾಗುವ ಸಮಯ. ನೂರಾರು ಕಾರ್ಮಿಕರು ಕೆಲಸಗಳಲ್ಲಿ ತೊಡಗಿದ್ದರು. ಕಲ್ಲುಕುಟಿಕರು ಉಳಿ-ಸುತ್ತಿಗೆಗಳಿಂದ ಕಲ್ಲುಗಳನ್ನು ನಯಗೊಳಿಸ ತೊಡಗಿದ್ದರು. ಅಂಥವರಲ್ಲಿ ಕೆಲವು ಜನ ತಾಯಂದಿರು ತಮ್ಮ ಎಳೆಯ ಮಕ್ಕಳನ್ನು ನೆರಳಾಗಿದ್ದ ಸ್ಥಳದಲ್ಲಿ ಮಲಗಿಸಿ ತಮ್ಮ ತಮ್ಮ ಕಾರ್ಯಗಳಲ್ಲಿ ನಿರತರಾಗಿದ್ದರು. ಕಾರ್ಮಿಕರು ಕೆಲಸಗಳಲ್ಲಿ ನಿರತರಾಗಿದ್ದಾಗಲೇ ನಗುತ್ತ ಮಾತನಾಡಿಕೊಳ್ಳುತ್ತಿದ್ದರು. ಅವರು ಆಡಿಕೊಳ್ಳುತ್ತಿದ್ದ ನಗೆಚಾಟಿಕೆಯ ಮಾತುಗಳನ್ನು ಕೇಳಿಸಿಕೊಳ್ಳುತ್ತ ಕಟ್ಟಡದ ಪ್ರದಕ್ಷಿಣೆ ಮಾಡುತ್ತ ನಾವು ಹೋಗುತ್ತಿದ್ದೆವು. ಹೀಗಿರುವಾಗ ಒಮ್ಮೆ ತೀರಾ ಹರುಕಲು ಉಡುಪನ್ನು ಧರಿಸಿ ಎತ್ತಲೂ ನೋಡದೆ ತಾನೊಬ್ಬಳೇ ತನ್ನ ಕೆಲಸದಲ್ಲಿ ಮೈಮರೆತಿದ್ದ ಒಬ್ಬ ಮುಸಲ್ಮಾನ ಮಹಿಳೆಯನ್ನು ಕಂಡೆವು.

ಗಡಿಯಾರದ ಘಂಟೆಯ ಶಬ್ದ ಕೇಳಿಸಿತು. ಸರಿಯಾಗಿ ಆರು ಘಂಟೆಯಾಗಿತ್ತು. ಎಲ್ಲರೂ ಕೆಲಸದಲ್ಲಿ ಮಗ್ನರಾಗಿದ್ದರೆ, ಆ ಮುಸಲ್ಮಾನ ಮಹಿಳೆ ನಿದ್ದೆಯಿಂದ ಎಚ್ಚೆತ್ತವಳಂತೆ ಚೇತರಿಸಿಕೊಂಡು ತನ್ನ ಕೈಲಿದ್ದ ಉಳಿ ಮತ್ತು ಸುತ್ತಿಗೆಗಳನ್ನು ನೆಲದ ಮೇಲೆ ಒಗೆದು ಬೇಗಬೇಗ ಕಟ್ಟಡದ ಹಿಂಭಾಗಕ್ಕೆ ನಡೆದು ಹೋದುದನ್ನು ಯಾರೂ ಗಮನಿಸಲಿಲ್ಲ. ಈ ತಾಯಿ ತನ್ನ ಹಸುಳೆಯನ್ನು ನೆನೆದು, ಆತುರಾತುರವಾಗಿ ಅತ್ತ ಕಡೆ ಹೋಗಿರಬಹುದೆಂದು ಬಗೆದು ನಾವು ಕಟ್ಟಡವನ್ನು ಬಳಸಿಕೊಂಡು ಹೋದೆವು.

ಅಲ್ಲಿ ನಾವು ಕಂಡುದಾದರೂ ಏನನ್ನು? ಆ ಮಹಿಳೆ ತನ್ನ ಮುಖದ ಮೇಲೆ ಸೆರಗೆಳೆದುಕೊಂಡು, ಕಿವಿಗಳನ್ನು ತನ್ನೆರಡು ಕೈಗಳಿಂದ ಮುಚ್ಚಿ ಪಶ್ಚಿಮಕ್ಕೆ ಅಭಿಮುಖವಾಗಿ ಶರಣು ಮಾಡುತ್ತಿದ್ದಾಳೆ! ಇದು ಅವಳ ಧ್ಯಾನಕಾಲ. ಗಡಿಯಾರದ ಶಬ್ದವು ಅವಳಿಗೆ ಜಗದೀಶ್ವರನ ನೆನಪು ತಂದಿತ್ತು. ಧ್ಯಾನಕಾಲದಲ್ಲಿ ಕಣ್ಣುಗಳು ಏನನ್ನೂ ನೋಡದಿರಲಿ, ಕಿವಿಗಳು ಏನನ್ನೂ ಕೇಳಿಸಿಕೊಳ್ಳದಿರಲಿ ಎಂದು ಮುಚ್ಚಿಕೊಂಡಿರಬಹುದೆಂದು ನಾವು ಬಗೆದೆವು. ಈ ದೃಶ್ಯವನ್ನು ನೋಡಿ ನಮಗೆ ಬೆರಗೂ ಲಜ್ಜೆಯೂ ಆಯಿತು. ಆಕೆಯಂಥ ಶ್ರದ್ಧೆ ನಮಗೆ ಇಲ್ಲವಾಯಿತಲ್ಲ ಎಂದು ವ್ಯಥೆಯೂ ಆಯಿತು.

"ಕೆಲವು ಜಾತಿಯ ಗಿಡಗಳಲ್ಲಿ ಹೂ ಸಂಜೆಯ ಹೊತ್ತಿನಲ್ಲಿ ಅರಳುತ್ತವೆ. ಇನ್ನು ಕೆಲವು ಜಾತಿಯ ಗಿಡಗಳಲ್ಲಿ ಸೂರ್ಯೋದಯ ವೇಳೆಗೆ ಅರಳುತ್ತವೆ. ಅವು ಅರಳಿದಾಗ ಆ ಜಾತಿಗೆ ಮೀಸಲಾದ ಪರಿಮಳವನ್ನು ಬೀರುತ್ತವೆ. ಇದು ಪ್ರಕೃತಿಮಾತೆಯ ಗುಟ್ಟು. ಹಾಗೆಯೇ ಮನುಷ್ಯರ ಹೃದಯಗಳೂ ಕುಸುಮಗಳಂತೆ. ಅವು ಯಾವುದೋ ಒಂದು ಶುಭ ಮುಹೂರ್ತ ಬಂದಾಗ ಅರಳುತ್ತವೆ. ಅರಳಿದಾಗ ಹೊರಗಿನ ಮತ್ತು ಒಳಗಿನ ಪ್ರಪಂಚಕ್ಕೆಲ್ಲ ಪ್ರಶಾಂತಿಯನ್ನು ಬೀರುತ್ತವೆ. ಆಗ ಮನಸ್ಸು ಧ್ಯಾನಾಸಕ್ತವಾಗಿ ತಲ್ಲೀನವಾಗುವುದು. ಅದೇ ಧ್ಯಾನಕಾಲ. ಕೆಲವರಿಗೆ ಅಭ್ಯಾಸಬಲದಿಂದ ಗೊತ್ತಾದ ಕಾಲಕ್ಕೆ ಸರಿಯಾಗಿ ಮನಸ್ಸು ಧ್ಯಾನಾಸಕ್ತವಾಗಲು ಬಯಸುವುದು. ಅಂಥ ಸಂದರ್ಭ ಒದಗಿದಾಗ ಅದನ್ನು ಸದುಪಯೋಗಪಡಿಸಿಕೊಳ್ಳುವುದೇ ಜಾಣತನ. ಮನಸ್ಸು ಅಂತರ್ಮುಖವಾದಾಗ ಅಲ್ಲಿ ಪರಮಾತ್ಮನ ಸಾನ್ನಿಧ್ಯವಿದೆ ಎಂದು ಅರಿಯಬೇಕು. ಎಲ್ಲರಿಗೂ ಈ ಅನುಭವ ಒಂದಲ್ಲ ಒಂದು ಕಾಲದಲ್ಲಿ ಕಾಣಸಿಕೊಳ್ಳುವುದು. ಆದರೆ ನಾವು ಅದನ್ನು ಗುರುತಿಸದೇ ಒಳ್ಳೆಯ ಅವಕಾಶಗಳನ್ನು ಕಳೆದುಕೊಳ್ಳುತ್ತೇವೆ. ಕೆಲವರಿಗಂತೂ ಇಂಥ ಗಳಿಗೆಗಳು ಬಂದದ್ದೇ ಗೊತ್ತಾಗುವುದಿಲ್ಲ" ಎಂದು ಒಬ್ಬ ತಪಸ್ವಿ ಹೇಳಿದರು. ನಿತ್ಯವೂ ಈ ಮಾತನ್ನು ನಾನು ಒಂದಾವರ್ತಿಯಾದರೂ ನೆನೆಯುತ್ತೇನೆ.


ಪುಸ್ತಕ ವಿಭಾಗ

ತೆಲಗು ನೀಳ್ಗತೆ:
ಬುರ್ರಾ ವೆಂಕಟ ಸುಬ್ರಮಣ್ಯಂ

ಕನ್ನಡಾನುವಾದ:
ಕುಂ. ವೀರಭದ್ರಪ್ಪ

ಪ್ಯಾರಿಸ್ ನೆನಪು





ಆಕಾಶಕ್ಕೊಂದು ಕಂದೀಲು

ಮೂಲ ಕಾದಂಬರಿ:
ವ್ಯಾಸರಾಯ ಬಲ್ಲಾಳ

ಸಂಗ್ರಹ:
ಮಣಿಮಾಲಿನಿ ವಿ.ಕೆ.



ಪ್ಯಾರಿಸ್ ನೆನಪು

ಯಾರಿಗಾದರೂ ನಾನು ಬುದ್ಧಿ ಇಲ್ಲದೆ ಪಾಶ್ಚಾತ್ಯ ದೇಶಗಳನ್ನು ನೋಡಿ ಬಂದೆನೆಂದು ತಿಳಿದರೆ ಅವರು ನನಗೆ ಮೊದಲು ಕೇಳುವ ಪ್ರಶ್ನೆ "ಪ್ಯಾರಿಸ್ ನೋಡಿದ್ರಾ?" ಎಂದು.

ಅಷ್ಟು ದೂರ ಹೋಗಿ ಪ್ಯಾರಿಸ್ ನಗರವನ್ನು ನೋಡದೆ ಬರುವುದುಂಟೆ?

ಹೀಗೆ ಕೇಳುವವರ ಪೈಕಿ ಕೆಲವರು ಪ್ಯಾರಿಸ್ ನೋಡದಿದ್ದರೂ ಅದರ ಬಗ್ಗೆ ಓದಿರುವುದರಿಂದ "ನಾಟರ್‌ಡ್ಯಾಂ ಆಲಯವನ್ನು ನೋಡಿದ್ರಾ?" ಎಂದೋ, "ಲೂವ್ರೇ ಚಿತ್ರಶಾಲೆ ನೋಡಿದ್ರಾ?" ಎಂದೋ, "ವರ್ಸೇಯ್ ರಾಜಭವನ ನೋಡಿದ್ರಾ?" ಎಂದೋ, "ಐಫೆಲ್ ಟವರ್ ನೋಡಿದ್ರಾ?" ಎಂದೋ ಕೇಳುತ್ತಲೇ ಇರುತ್ತಾರೆ.

ಮತ್ತೆ ಕೆಲವರು, ಯಾವ ರೀತಿಯಲ್ಲಾದರೂ ಪ್ಯಾರಿಸ್ ನಗರದಲ್ಲಿ ನಡೆಯುವ ಮೂರ್ಖತನಗಳನ್ನು ಸ್ವಲ್ಪ ವಿವರವಾಗಿ ತಿಳಿದುಕೊಂಡವರು, "ಫಾಲೀಸ್ ಬರ್ಜೀರ್ ನಾಟಕ ಶಾಲೆಗೆ ಯಾವತ್ತಾದರೂ ಹೋಗಿದ್ದಿರೇನು?" ಎಂದು ಸಂದೇಹಿಸುತ್ತ ಕೇಳುವರು. ಅವರ ಕುತೂಹಲವನ್ನು ಗ್ರಹಿಸಿ ನಗುತ್ತ "ಹೋಗಿದ್ದೆನು" ಎಂದು ಉತ್ತರಿಸುತ್ತೇನೆ.

ಆದರೆ ಪ್ಯಾರಿಸ್‌ನ ನೆನಪು ಬಂದಾಗಲೆಲ್ಲಾ ಇವು ಯಾವುವೂ ಜ್ಞಾಪಕಕ್ಕೆ ಬರುವುದಿಲ್ಲ. ಅದಕ್ಕೆ ಮೊದಲ ಕಾರಣ ಪ್ಯಾರಿಸ್ ನಗರವನ್ನು, ಆ ನಗರ ದೃಶ್ಯಗಳನ್ನು ನಾನು ಒಮ್ಮೆಯಲ್ಲದೆ ಅನೇಕ ಸಾರಿ ನೋಡಿರುವೆನು. ನನಗೆ ಯಾಕೋ ಏನೋ ಒಮ್ಮೆ ನೋಡಿದವೆಲ್ಲ ಚಕ್ಕನೆ ಜ್ಞಾಪಕಕ್ಕೆ ಬರುವವು. ಅನೇಕ ಸಾರೆ ನೋಡಿದವೆಲ್ಲ ಪ್ರತ್ಯೇಕವಾಗಿ ಯೋಚಿಸಿದಾಗಲೂ ಮತ್ತೆ ನೆನಪಾಗದಿರಬಹುದು! ಎರಡನೆ ಕಾರಣವೆಂದರೆ ನಾನು ಪ್ಯಾರಿಸ್ ನಗರ ಒಂದಲ್ಲದೆ ಅನೇಕ ದೊಡ್ಡ ಪಾಶ್ಚಾತ್ಯ ನಗರಗಳನ್ನು ನೋಡಿರುವೆನು. ಬರ್ಲಿನ್, ವೀನ್, ರೋಮ್, ನಪೋಲಿ, ಮಿನ್‌ಚೇನ್, ಫಿರ್‌ನ್‌ಜ್ಯೆ, ಬುಡಾಪೆಸ್ಟ್, ಜಿನಿವಾ, ಲುಸರ್ನ್, ಲೆನಿನ್ ಗ್ರಾಡ್, ಮಾಸ್ಕೋ ಇನ್ನೂ ಎಷ್ಟೋ ನಗರಗಳನ್ನೂ ಅಲ್ಲಲ್ಲಿನ ನೋಡಬೇಕಾದ ವಿಚಿತ್ರಗಳೆಲ್ಲವನ್ನೂ ನೋಡಿರುವೆನು. ಆದ್ದರಿಂದ ಪ್ಯಾರಿಸ್‌ನ ವಿಶೇಷಗಳಾವುವೂ ಅವಷ್ಟಕ್ಕವೆ ನೆನಪಾಗುವುದಿಲ್ಲ. ಈ ಎರಡು ಕಾರಣಗಳಲ್ಲದೆ ಇವೆರಡಕ್ಕಿಂತ ಮುಖ್ಯವಾದ ಮತ್ತೊಂದು ಕಾರಣ: ರೆನೀ!

ಪ್ಯಾರಿಸ್ ನಗರವನ್ನು ನಾನು ಜ್ಞಾಪಿಸಿಕೊಂಡಾಗಲೆಲ್ಲ ರೆನೀ ಒಬ್ಬಳು ಮಾತ್ರ ನೆನಪಾಗುವವಳು. ರೆನೀ ಒಬ್ಬ ಫ್ರೆಂಚ್ ಹುಡುಗಿ. ಪ್ಯಾರಿಸ್‌ನಲ್ಲಿ ಹುಟ್ಟಿ ಬೆಳೆದಾಕೆ. ಪೂರ್ತಿ ಹೆಸರು ರೆನೀ ಬರ್ನೇ. ಅಷ್ಟೊಂದು ಸುಂದರಿ ಅಂತ ನಾನು ಹೇಳಲಾರೆ. ಇಂಗ್ಲೆಂಡಿನಲ್ಲಿ ಗೋಚರಿಸುವ ಸುಂದರವಾದ

ಮುಖಗಳೂ ಅಂದವಾದ ದೇಹಗಳೂ ಮತ್ತಾವ ದೇಶದಲ್ಲೂ ನನಗೆ ಕಂಡುಬರಲಿಲ್ಲ. ಈ ವಿಷಯ ದಲ್ಲಿ ಪ್ಯಾರಿಸ್ ಮೊದಲೇ ನನಗಿಷ್ಟವಾಗಲಿಲ್ಲ. ಪ್ಯಾರಿಸ್‌ನ ಮುಖಗಳೆಲ್ಲ ಅನೇಕ ರಾತ್ರಿ ನಿದ್ರೆ ಮಾಡಿದವರ ಮುಖಗಳಂತಿರುತ್ತವೆ. ಅದಲ್ಲದೆ, 'ಲ್ಯಾಟಿನ್'ಪ್ರಜೆಗಳಾದ್ದರಿಂದ ಅವರ ಯೌವನ, ಕಲೆ, ಶೋಭೆ ಬೇಗನೆ ಕರಗಿ ಹೋಗಬಹುದೆಂದುಕೊಳ್ಳು ತ್ತೇನೆ ಕೂಡ. ಅಷ್ಟೆಲ್ಲ ಇದ್ದರೂ ರೆನೀ ಅಷ್ಟು ಸುಂದರಿ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಆದರೆ ತುಂಬ ಬುದ್ಧಿವಂತೆ. ಬುದ್ಧಿವಂತಿಕೆ ಆ ಕಣ್ಣುಗಳಲ್ಲಿ ಕಾಣುತ್ತದೆ. ನಗುವಾಗಂತೂ ಅಷ್ಟು ಸುಂದರಿ ಅಲ್ಲವೆಂಬ ಸಂಗತಿ ಕೂಡ ಮರೆತುಹೋಗುತ್ತದೆ.

ಈ ಹುಡುಗಿಯನ್ನು ಅನೇಕ ಸಾರಿ ಭೆಟ್ಟಿ ಮಾಡಿರುವೆನು. ನಡೆದಿರುವುದು ಇದು. ಅದು ನಾಲ್ಕನೆ ಸಾರಿ ನಾನು ಪ್ಯಾರಿಸ್ ನಗರಕ್ಕೆ ಬಂದದ್ದು. ಒಂದು ಚಿಕ್ಕ ಲೆದರ್‌ಬ್ಯಾಗನ್ನು ಕೈಯಲ್ಲಿ ಹಿಡಿದು ಕೊಂಡು ನಾನು ಕಳೆದಬಾರಿ ತಂಗಿದ್ದ ಹೋಟಲ್ಲಿಗೆ ಹೋದೆ. ಈ ಹೋಟೆಲ್ ಮಾಲಿಕನೆಂದರೆ ನನಗೆ ತುಂಬ ಇಷ್ಟ. ಮೊದಲನೆಯದಾಗಿ ಅವನಿಗೆ ಇಂಗ್ಲೀಷು ನಿರರ್ಗಳವಾಗಿ ಬರುತ್ತದೆ. ಅದೊಂದ ಲ್ಲದೆ ನನ್ನೊಂದಿಗೆ ಚುರುಕಾಗಿ ಮಾತಾಡುತ್ತಿದ್ದ. ಸಾಧ್ಯವಾದಾಗಲೆಲ್ಲ ನಾನು ಒಂಟಿಯಾಗಿ ಊಟ ಮಾಡುವುದಕ್ಕಾಗಲಿ ಚಹಾ ಕುಡಿಯುವುದಕ್ಕಾಗಲೀ ಬಿಡದೆ ತನ್ನ ಕುಟುಂಬದ ಯಾರಾದರೊಬ್ಬರು ಜೊತೆಯಿರುವಂತೆ ನೋಡಿಕೊಳ್ಳುತ್ತಿದ್ದ. ಆತನ ಹೆಂಡತಿ, ಇಬ್ಬರು ಚಿಕ್ಕ ಮಕ್ಕಳು ಸಹ ನನ್ನೊಂದಿಗೆ ಸಲಿಗೆಯಿಂದ ಇರುತ್ತಿದ್ದರು. ಕಳೆದ ಬಾರಿ ಒಂದು ಸಂಜೆ ಆ ಇಬ್ಬರು ಗಂಡು ಮಕ್ಕಳನ್ನು ಸಿನಿಮಾಕ್ಕೆ ಕರೆದೊಯ್ಯುವುದಾಗಿ ಹೇಳಿದಾಗ ತಾಯಿ 'ಸರಿ' ಅಂತ ಒಪ್ಪಿಕೊಂಡು, ತನ್ನನ್ನೂ ಕರೆದೊಯ್ಯುವ ನನ್ನ ಮೂರ್ಖತನಕ್ಕೆ ಕೋಪಿಸಿಕೊಂಡಿರುವವಳಂತೆ ನಟಿ ಸಿದಳು. ಹೀಗೆ ಇವರೆಲ್ಲರನ್ನು ಚೆನ್ನಾಗಿ ಬಲ್ಲೆನಾದ್ದ ರಿಂದ ಅಲ್ಲಿಗೇ ಹೋದೆನು. ಈಸಾರಿ ಹೋಟೆಲ್ ಕಿಕ್ಕಿರಿದಿದ್ದರೂ ನನಗೊಂದು ಒಳ್ಳೆಯ ಕೋಣೆಯನ್ನು ಏರ್ಪಾಡು ಮಾಡಿದನಾ ಮಾಲಿಕ. ಹತ್ತು ನಿಮಿಷ ತಡವಾಗಿ ಬಂದಿದ್ದಲ್ಲಿ ನನಗಲ್ಲಿ ಜಾಗ ಸಿಗುತ್ತಿರಲಿ ಲ್ಲೆಂದು ಹೇಳಿದ. ಮಾಮೂಲಿನಂತೆ ನನ್ನ ಅಗತ್ಯಗ ಳನ್ನು ಪೂರೈಸಿದ.

ಬಂದ ಮೂರನೆ ದಿನ ಬೆಳಗಿನಿಂದ ಸಂಜೆವರೆಗೆ ಕೋಣೆಯೊಳಗಡೆ ಗೆಳೆಯರೊಂದಿಗೆ ಹರಟೆ ಹೊಡೆ ಯುತ್ತಿರುವುದು ಹಿಡಿಸದೆ ದಿನವೆಲ್ಲ ಬೇರೆ ಎಲ್ಲಾ ದರೂ ಕಳೆಯಬೇಕೆಂದು ನಿರ್ಧರಿಸಿ, ಹನ್ನೊಂದು ಗಂಟೆಗೇನೇ ಮೇಲೆ ಹೋಗ್ತಾ, ಆ ರಾತ್ರಿ ಹತ್ತು ಗಂಟೆವರೆಗೆ ಬರುವುದಿಲ್ಲೆಂದು ಮಾಲಿಕನಿಗೆ ಹೇಳಿ ಹೋದೆ. ಹೋಗುತ್ತಿರುವಾಗ ಆತನ ಹೆಂಡತಿ ಸಹ ನಗುತ್ತ "ಈ ದಿನವೆಲ್ಲ ನಿನ್ನೊಂದಿಗೆ ಕಾಲ ಕಳೆ ಯುವ ಆ ಅದೃಷ್ಟವಂತೆಯ ಹೆಸರು ಹೇಳು" ಎಂದಳು.

"ವ್ಯಕ್ತಿ ಯಾರೂಂತ ಗೊತ್ತಾದ ಮೇಲೆ ತಾನೆ ಹೆಸರು ತಿಳಿಯುವುದು?" ಎಂದು ಉತ್ತರಿಸಿದೆ.

ಮೊದಲು ಲೂವ್ರೇ ಚಿತ್ರಶಾಲೆಗೆ ಹೋದೆ. ನೋಡಿದ ಚಿತ್ರಗಳನ್ನು, ಶಿಲ್ಪಗಳನ್ನು ಮತ್ತೆ ನೋಡಿದೆ. ವಿಶ್ವವಿಖ್ಯಾತ ಲಿಯೋನಾರ್ಡೋ ಡ ವಿಂಚಿಯ 'ಮೊನಾಲೀಸಾ' ಕಲಾಕೃತಿಯನ್ನು, ಅನೇಕ ಶತಮಾನಗಳ ಹಿಂದೆ ಮೈಲೋ ಎಂಬುವವ ಅತಿ ಸುಂದರವಾಗಿ ಕೆತ್ತಿದ 'ವೀನಸ್' ಶಿಲ್ಪಕೃತಿಯನ್ನು ಮತ್ತೆ ನೋಡಿದೆ. ಮೊದಲು ಅಷ್ಟೊಂದು ರಮ್ಯ ವಾಗಿ ಗೋಚರಿಸದೇ ಇದ್ದ ಚಿತ್ರಕೃತಿಗಳು ಈಗ ತುಂಬ ಸುಂದರವಾಗಿ ಕಂಡುಬಂದು ಸಂತೋಷ ವನ್ನುಂಟುಮಾಡಿದವು. ಹೆನ್ನರ್ ಎಂಬ ಕಲಾವಿ ದನ 'ಪಂಡಿತ' ವೆಂಬೊಂದು ಕೃತಿ ಅಲ್ಲಿದೆ. ಕಳೆದ ಸಾರಿ ನನಗದನ್ನು ನೋಡಲಾಗಿರಲಿಲ್ಲ. ಕೂದಲು ಕೆದರಿಕೊಂಡು ಒಂದಿಷ್ಟು ಮೈಮೇಲೆ ಬಟ್ಟೆ ಇಲ್ಲ ವೆಂಬಂತೆ ನೆಲದ ಮೇಲೆ ಮಲಗಿಕೊಂಡು, ಮುಂಗೈ ಗಳ ಮೇಲೆ ತಲೆ ಇಟ್ಟು, ಪುಸ್ತಕಗಳನ್ನು ಒಬ್ಬಾಕೆ ಓದುತ್ತಿರುವಳು. ಆಕೆಯ ಧ್ಯಾನವೆಲ್ಲ ಇದ್ದುದು ಆ ಪುಸ್ತಕದ ಮೇಲೆಯೇ. ಆ ಚಿತ್ರಪಟವನ್ನು ನೋಡಿ ದವರಿಗೆ ಕೂಡ ಆಕೆಯಾಗಲೀ, ಆಕೆ ಓದುತ್ತಿದ್ದ ಪುಸ್ತಕವಾಗಲೀ ಎಷ್ಟು ಮಾತ್ರವೂ ಮನೋವಿಕಾರಕ್ಕೆ ಆಸ್ಪದವೀಯುತ್ತಿರಲಿಲ್ಲ. ನಗ್ನ ಸ್ತ್ರೀಯರ ಅನೇಕ ಚಿತ್ರಗಳನ್ನು ನೋಡಿರುವೆ, ಆದರೆ ಇಷ್ಟು ನಿರ್ಮ ಲವಾದ ಕಲೆಯನ್ನು ಅವುಗಳಲ್ಲಿ ನಾನೆಂದೂ

ನೋಡಲಿಲ್ಲ....

ಸಾಯಂಕಾಲ ಮೂರು ಗಂಟೆವರೆಗೂ ಲೂವ್ರೇ ಚಿತ್ರಶಾಲೆಯಲ್ಲಿ ತಿರುಗಾಡಿದೆ. ನಂತರ ಏನೂ ನೋಡಬೇಕೆಂದೆನಿಸಲಿಲ್ಲ. ಸ್ವಲ್ಪಹೊತ್ತು ಟ್ಯೂಲರೀಸ್ ಉದ್ಯಾನದಲ್ಲಿ ಅರ್ಥವಿಲ್ಲದೆ ಸುತ್ತಿದೆ. ಸಿನೆಮಾಕ್ಕೆ ಹೋಗಬೇಕೆಂದೆನ್ನಿಸಲಿಲ್ಲ. ಮಾಡಬೇಕಿರುವುದೇನೊಂದೂ ಹೊಳೆಯಲಿಲ್ಲ. ಕೊನೆಕೊನೆಗೆ ಲಂಡನ್ ಬಿಟ್ಟು ಈ ಸಾರಿ ಪ್ಯಾರಿಸ್‌ಗೆ ನಾನು ಯಾಕಾದರೂ ಬಂದೆನೋ ಎಂದು ಬೇಸರಪಟ್ಟೆ. ಮರುದಿನ ಬೆಳಗ್ಗೇನೆ ಲಂಡನ್‌ಗೆ ಹೊರಟುಬಿಡಬೇಕೆಂದು ನಿಶ್ಚಯಿಸಿದೆ. ನಾಲ್ಕು ಗಂಟೆಯಾಗಿತ್ತು. ಆ ಉದ್ಯಾನದ ಬೆಂಚೊಂದರ ಮೇಲೆ ಕೂತುಕೊಳ್ಳುವ ಹೊತ್ತಿಗೆ ಪಕ್ಕದಲ್ಲಿದ್ದ ವೃದ್ಧರಿಬ್ಬರು ನಾನು ಆಫ್ರಿಕದವನೋ? ಇಂಡಿಯಾದವನೋ? ಎಂದು ವಾದಿಸಲಾರಂಭಿಸಿದರು. ನಾನು ಫ್ರೆಂಚ್ ಅಷ್ಟು ಚೆನ್ನಾಗಿ ಬಾರದಿದ್ದರೂ ಅರ್ಥಮಾಡಿಕೊಳ್ಳಬಲ್ಲವನಾಗಿದ್ದೆ.

ಅವರಲ್ಲಿ ಒಬ್ಬ ನನಗೆ "ಫ್ರೆಂಚ್ ಮಾತಾಡ್ತೀಯಾ?" ಎಂದು ಕೇಳಿದ. ನನಗೆ ಫ್ರೆಂಚ್ ಬರೋದಿಲ್ಲೆಂದು ಹೇಳಿದೆ. ಒಂದು ಪ್ರಶ್ನೆಗೆ ತಟಕ್ಕನೆ "ನನ್ನ ದೇಶ ಇಂಡಿಯಾ" ಎಂದು ಉತ್ತರಿಸಿದೆ.

ಅವರಲ್ಲಿ ಒಬ್ಬ "ನೋಡಿದಿಯಾ, ನಾನು ಹೇಳ್ದಂತೆ ಈ ಮನುಷ್ಯನ ತುಟಿಗಳು ನಿಗ್ರೋನ ತುಟಿಗಳಂತೆ ಮುಂದಕ್ಕೆ ಬರುತ್ತಿಲ್ಲ ನೋಡು" ಎಂದ. ಎರಡನೆಯವ ಮುಂದಕ್ಕೆ ಬಾಗಿ ನನ್ನ ಕಡೆಗೇ ನೋಡುತ್ತಿರುವಾಗ ಇದೊಳ್ಳೆ ತಲೆನೋವಾಯಿತೆಂದು ಎದ್ದು ಹೊರಟುಹೋದ.

ಮೆಲ್ಲಗೆ ಹೋಟೆಲ್ ಕಡೆಗೆ ಹೊರಟುಹೋದೆ. ರಾತ್ರಿ ಹತ್ತು ಗಂಟೆವರೆಗೆ ಬರಬಾರದೆಂದಿದ್ದವನು ಸಾಯಂಕಾಲ ಐದು ಗಂಟೆ ಬಾರಿಸುತ್ತಲೇ ಬಂದುಬಿಟ್ಟೆ. ಒಳಗಡೆ ಕಾಲಿರಿಸಿದ ನನ್ನ ಕಡೆ ಹೋಟೆಲ್ ಮಾಲಿಕ ದೆವ್ವ ನೋಡುತ್ತಿರುವವನಂತೆ ಆಶ್ಚರ್ಯದಿಂದ ನೋಡಿದ. ಏನೂ ಹೊಳೆಯದಿದ್ದುದರಿಂದ ಮೊದಲೇ ಬಂದುಬಿಡಬೇಕಾಯಿತೆಂದು ನಗುತ್ತ ಸಮಾಧಾನ ಹೇಳಿದೆ.

ಇಷ್ಟರಲ್ಲಿ ಆತನ ಹೆಂಡತಿ ಬಂದಳು. ಆಕೆ ಕೂಡ ನನ್ನತ್ತ ದಿಗ್‌ಭ್ರಾಂತಳಂತೇ ನೋಡಲಾರಂಭಿಸಿದಳು. "ನೀವು ಹತ್ತು ಗಂಟೆವರ್ಗೆ ಬರೋದಿಲ್ಲ ಅಂದ್ಕೊಡಿದ್ವಿ" ಅಂದಳು.

ನನ್ನ ಸಮಸ್ಯೆಗಳನ್ನು ಆಕೆಗೆ ವಿವರಿಸಿದೆ. ನನ್ನ ಕೋಣೆಗೆ ಹೋಗಲೆಂದು ಮೆಟ್ಟಲೇರುತ್ತಿರುವಾಗ ನನ್ನ ಹಿಂದೆಯೇ ಬಂದ ಆ ಯಜಮಾನಿ ಈದಿನ ತಮ್ಮೊಂದಿಗೆ ಕೆಳಗಡೆ ಬಂದು ಟೀ ತಗೋಬೇಕೆಂದು ಒತ್ತಾಯಿಸಿದಳು.

"ಸರಿ, ಮುಖ ತೊಳೆದುಕೊಂಡು ಬರ್ತೀನಿ" ಅಂದೆ.

ಮಾಲಿಕನ ಹೆಂಡತಿ ಎಷ್ಟೋ ಪ್ರೀತಿಯಿಂದ ಕೆಳಗಡೇನೆ ಸೋಪು, ಟವೆಲ್ಲು ಕೊಡ್ತೇನೆಂದಳು. ಕೊನೆಗೆ ಅವರೀರ್ವರ ಕಡೆಗೆ ನೋಡಿ,

"ನೋಡೀ, ಹೀಗೆಲ್ಲ ಅವಸರಿಸುತ್ತಿರುವುದ್ಯಾಕೆ ಅಂತ ಹೇಳಬಾರದೆ!" ಅಂದೆ.

"ಬಹಳಷ್ಟು ಪರಪಾಟಾಗಿದೆ ಕ್ಷಮಿಸಬೇಕು" ಎಂದು ಆರಂಭಿಸಿದ ಹೋಟೆಲ್ ಮಾಲಿಕ.

"ಪರವಾ ಇಲ್ಲ... ಹೇಳಿರಿ" ಎಂದೆ. ಆಗ ಹೇಳಿದ. ನಾನು ಹೊರಟುಹೋದ ಮೇಲೆ ಇದ್ದಕ್ಕಿದ್ದಂತೆ ಒಂದೂವರೆ ಗಂಟೆಗೆ ಫ್ರೆಂಚ್ ಯುವಕನೊಬ್ಬ ಯುವತಿಯೊಂದಿಗೆ ಬಂದು ಸಾಯಂಕಾಲ ಐದು ಗಂಟೆವರೆಗೆ ಒಂದು ರೂಮು ಬೇಕೆಂದು ಕೇಳಿದನಂತೆ. ಮಾಲಿಕ ಮೊದಲು ಕೋಣೆಗಳು ಯಾವೂ ಖಾಲಿ ಇಲ್ಲ ಎಂದು ಉತ್ತರಿಸಿದ. ಆದರೆ ಆ ಯುವಕ ಅತ್ತ ಇತ್ತ ನೋಡುತ್ತಿರುವಾಗ ಕರುಣೆ ಬಂದು, ನನ್ನ ಕೋಣೆಯೂ ನಾನು ಹತ್ತು ಗಂಟೆವರೆಗೆ ಬರೋದಿಲ್ಲೆಂಬ ಮಾತೂ ಜ್ಞಾಪಕಕ್ಕೆ ಬಂತಂತೆ. ಬಂದ ಅವರು ದಂಪತಿಯಲ್ಲ ಎಂಬುದೂ ಗೊತ್ತು. ಆದರೂ ಮಾಲಿಕ ಐದು ಗಂಟೆಗೆ ಸರಿಯಾಗಿ ಹೊರಟು ಹೋಗುವುದಾದರೆ ನನ್ನ ಕೋಣೆಯನ್ನು ಅವರು ಉಪಯೋಗಿಸಿಕೊಳ್ಳಬಹುದೆಂದು ಹೇಳಿದನಂತೆ. ನನ್ನ ಅನುಮತಿ ಇಲ್ಲದೆ ಹಾಗೆ ಹೇಳಿದ್ದುದು ಬಹಳ ತಪ್ಪೆಂದೂ, ಕ್ಷಮಿಸಿರೆಂದೂ ಸಾವಿರ ಸಾರಿ ನನ್ನನ್ನು ಪೀಡಿಸಿದ. ಇದರಲ್ಲಿ ಕ್ಷಮಿಸದೆ ಇರಬಹುದಾದದ್ದು ಏನೂ ಇಲ್ಲವೆಂದೂ, ಆತ ಮಾಡಿರುವುದೆಲ್ಲ ತನ್ನ ಒಪ್ಪಿಗೆಯಿಂದಲೇ

ಎಂದೂ ಮಾರುತ್ತರ ನೀಡಿದೆ..

ಮುಖ ತೊಳೆದುಕೊಳ್ಳದೇನೇ ಟೀ ಕುಡಿಯಲು ಸಿದ್ಧನಾದೆ. ನಾವು ಟೀ ಕುಡಿಯಲೆಂದು ಹೋಗುತ್ತಿರುವಾಗ ಆ ಯುವಕ ಮತ್ತು ಯುವತಿ ಮೆಟ್ಟಲು ಇಳಿದರು. ಇಬ್ಬರಿಗೂ ವಯಸ್ಸು ಇಪ್ಪತ್ತು, ಇಪ್ಪತ್ತೆರಡಕ್ಕಿಂತ ಹೆಚ್ಚಿರಲಾರವು. ಹೋಟೆಲ್ ಯಜಮಾನ ನನ್ನ ಕಡೆ ಮೂರ್ಖನಂತೆ ನೋಡುತ್ತ ನೆಮ್ಮದಿಯಿಂದ "ಇವರಿಬ್ರೇ ಇಷ್ಟೊತ್ತು ನಿಮ್ ಕೋಣೆಯಲ್ಲಿದ್ದದ್ದು" ಅಂದ. ಹತ್ತಿರ ಬಂದಮೇಲೆ ಅವರಿಗೆ ನನ್ನ ಪರಿಚಯ ಮಾಡಿಕೊಟ್ಟ. ಯುವಕನ ಹೆಸರು ಫಿಲಿಪ್ ಡೋಬ್ರೇ. ಯುವತಿ ತಡವರಿಸದೆ ತನ್ನ ಹೆಸರು ರೆನೀ ಬರ್‍ನೆ ಎಂದು ತಾನೆ ಹೇಳಿದಳು. ಟೀ ಕುಡಿಯಲು ಅವರಿಬ್ಬರನ್ನೂ ಆಹ್ವಾನಿಸಿದೆವು. ಸ್ವಲ್ಪ ಹೊತ್ತು ಅವರಷ್ಟಕ್ಕೆ ಅವರು ಆಲೋಚಿಸಿ ಸರಿ ಅಂದರು. ಟೀ ಕುಡಿಯಲು ಕೂಡ್ರುವ ಮೊದಲು ಹೋಟೆಲ್ ಮಾಲಿಕನ ಪುಸ್ತಕಗಳ ಬೀರುವಿನಿಂದ ಎರಡು ಪುಸ್ತಕಗಳನ್ನು ತೆಗೆದುಕೊಂಡಳು ರೆನೀ. ಅವು ಏನೆಂದು ನಾನು ಕೇಳಿದರೆ ನೋಡೆಂದು ನನಗೇ ಕೊಟ್ಟಳು. ಒಂದು ಶೇಕ್ಸ್‌ಪಿಯರ್‌ನ ನಾಟಕ, ಇನ್ನೊಂದು ಜರ್ಮನ್ ಕವಿ ಗಯಟೆ ಬರೆದ 'ಫಾಸ್ಟಸ್'. ನಾನಲ್ಲಿಯವರೆಗೆ ಇವರಿಬ್ಬರಿಗೆ ಫ್ರೆಂಚ್ ಹೊರತು ಮತ್ತೊಂದು ಭಾಷೆ ಬರುವುದಿಲ್ಲೆಂದು ಕೊಂಡಿದ್ದೆ. ಈಗ ಕೇಳಿದರೆ ಫಿಲಿಫ್‌ಗೆ ಫ್ರೆಂಚೊಂದೆ ಬರುವುದೆಂದೂ, ಆದರೆ ರೆನೀಗೆ ಫ್ರೆಂಚಲ್ಲದೆ ಇಂಗ್ಲೀಷೂ, ಜರ್ಮನ್ನೂ ಬರುವುದೆಂದೂ ಗೊತ್ತಾಯಿತು. ಶೇಕ್ಸ್‌ಪಿಯರ್‌ನ ನಾಟಕಗಳನ್ನು ಓದಿರುವೆನೆಂದಳು. ಇಂಗ್ಲಿಷ್ ಕವಿಗಳೆಂದರೆ ತನಗೆ ತುಂಬ ಇಷ್ಟ ಎಂದಳು. ಜರ್ಮನ್ ಭಾಷೆಯ ಅನೇಕ ಪುಸ್ತಕಗಳನ್ನು ಓದಿರುವೆನೆಂದಳು. ಕವಿಗಳ ಪೈಕಿ ಷಿಲ್ಲರ್ ಎಂದರೆ ತನಗೆ ಹೆಚ್ಚು ಇಷ್ಟ ಎಂದಳು. ಒಳ್ಳೆ ಓದುಗಾರ್ತಿ ಅಂದುಕೊಂಡೆ. ಓದುಗಾರ್ತಿ ಎಂಬ ಶಬ್ದ ನೆನಪಾಗುತ್ತಲೇ ಲೂವ್ರೇಯಲ್ಲಿ ನೋಡಿದ ಚಿತ್ರ ಜ್ಞಾಪಕಕ್ಕೆ ಬಂತು. ಹಿಂದೆಯೇ ಆ ವಿಷಯದ ಬಗ್ಗೆ ಹೇಳಿ "ಯಾವತ್ತಾದರೂ ಆ ಚಿತ್ರ ನೋಡಿದ್ದೀಯಾ?" ಎಂದು ಕೇಳಿದೆ ರೆನೀಗೆ.

"ಕಲಾವಿದ ಹೆನ್ನರ್ ರಚಿಸಿರೋದೇನು?"

"ಹೌದು."

"ನೋಡಿದ್ದೀನಿ. ನಿಜವಾಗ್ಲು ಅದು ನನ್ಗೆ ತುಂಬ ಇಷ್ಟ ಆಯ್ತು. ಅದರ ಪ್ರತಿ ಕೂಡ ನನ್ ಹತ್ರ ಇದೆ. ಆದ್ರೆ ಯಾವ ಕಲಾವಿದನೂ ಅದನ್ನು ಶ್ರೇಷ್ಠ ಅಂತ ಒಪ್ಪಿಕೊಳ್ಳಿಲ್ಲ."

"ನಿಜವಾಗ್ಲೂ?"

"ಹೌದು, ಯಾರೂ ಅದನ್ನ ಅಷ್ಟೊಂದಾಗಿ ಇಷ್ಟಪಡ್ಲಿಲ್ಲ. ನನ್‌ಮಟ್ಟಿಗೆ ಅದು ಸಂಪೂರ್ಣ ಇಷ್ಟವಾಯ್ತು... ಯಾವ್ದೋ ಕವಿಯ ಕನಸಿನಲ್ಲಿ ಕಂಡ ವಿಚಿತ್ರ ದೃಶ್ಯದಂತಿದೆ ಅದು. ಆದ್ರೆ ಕಾಮೋದ್ರೇಕ ಉಂಟುಮಾಡೋ ಸಾಮಾನ್ಯ ಮನುಷ್ಯನ ಶರೀರದಂತೆ ಕಾಣಿಸ್ತಿಲ್ಲದು. ಅದ್ರಲ್ಲಿ ಚಿತ್ರಕಲೆಗಿಂತ ಕಾವ್ಯ ಧೋರಣೆಯೇ ಹೆಚ್ಚಿದೆ. ಇದೇ ಮೊದಲ ಬಾರಿ ನನಗೆ ಅದನ್ನಷ್ಟೊಂದು ಮೆಚ್ಕೋಳ್ಳೋರು ಮತ್ತೊಬ್ರು ಕಾಣಸಿರೋದು!"

ಈ ಕಲಾಕೃತಿ ಕುರಿತು ನಡೆದ ಸಂಭಾಷಣೆಯಿಂದ ತಿಳಿದ ಸಂಗತಿ ಏನಂದ್ರೆ - ಫಿಲಿಪ್‌ನು ಲೂವ್ರೇ ಆರ್ಟ್ ಗ್ಯಾಲರಿ ನೋಡಿ ಆರುವರ್ಷ ಆಗಿರುವುದೆಂದೂ, ಆರು ವರ್ಷಗಳ ಹಿಂದೆ ನೋಡಿರುವುದು ತನಗೇನೂ ನೆನಪಿಲ್ಲವೆಂದೂ, ನಮ್ಮ ಹೋಟೆಲ್ ಮಾಲಿಕ ನಿಜನುಡಿಯಲು ನಾಚದಿದ್ದಲ್ಲಿ ಆತ ಲೂವ್ರೇ ಗ್ಯಾಲರಿಯನ್ನು ಎಂದೂ ನೋಡೇ ಇಲ್ಲವೆಂದೂ, ಆತನ ಪತ್ನಿಗೆ ಲೂವ್ರೇ ಅಂದರೆ ಏನೆಂದು ಗೊತ್ತಿದೆಯೋ, ಗೊತ್ತಿಲ್ಲವೋ ಎಂಬುದು ಕೂಡ ಸಂದೇಹಾಸ್ಪದವೆಂದೂ....

ಟೀ ಕುಡಿಯುವದಾದ ಮೇಲೆ ಅವರಿಬ್ಬರು ಹೊರಡಲೆಂದು ಎದ್ದರು. ಹೊರಡುವಾಗ ಫಿಲಿಪ್ ಮಾಲಿಕನನ್ನ ಹತ್ತಿರ ಕರೆದು ಆ ಕೋಣೆಗೆ ಸಂಬಂಧಿಸಿದಂತೆ ಸ್ವಲ್ಪ ಹಣ ಕೊಡಲು ಹೋದ. ಆಗ ಆತ ನನ್ನತ್ತ ನೋಡುತ್ತ ಕೋಣೆ ನನ್ನದಲ್ಲವೆಂದೂ ಹಣ ಪಡೆಯುವ ಹಕ್ಕು ತನಗಿಲ್ಲವೆಂದೂ ಹೇಳಿದ. ನಾನು ಸಹ ಅವರ ಬಗ್ಗೆ ನನಗೆಲ್ಲ ಹೇಳಿರುವನೆಂದೂ ಹಣ ಕೊಡುವ ಅಗತ್ಯವಿಲ್ಲವೆಂದೂ ಹೇಳಿದೆ. ಹೋಟೆಲಿನಾತ ತಮ್ಮ ಬಗ್ಗೆ ನನ್ನ ಬಳಿ ಹೇಳಿರುವುದು ಅವರಿಗೆ ಅಲ್ಲಿಯವರೆಗೆ ತಿಳಿದೇ ಇರಲಿಲ್ಲ. ರೇನಿಗೆ ಅಸಾಧ್ಯವಾದ ನಾಚಿಕೆ, ಕೋಪ

ಒಟ್ಟಿಗೇ ಉಂಟಾದವು.

ಮಾಲಿಕ ಇದರಲ್ಲಿ ತನ್ನ ತಪ್ಪೇನೂ ಇಲ್ಲೆಂದು ವಾದಿಸಿದ.

"ಕೋಣೆ ಮತ್ತೊಬ್ಬರದೆಂದು ಹೇಳಿದ್ರೆ ನಾವಿಲ್ಲಿ ಇರ್‍ತಾನೆ ಇರಲಿಲ್ಲ" ಎಂದ ಫಿಲಿಪ್.

"ನಿನ್‌ಜೊತೆ ಬುದ್ಧಿ ಇಲ್ದೆ ನಾನಿಲ್ಲಿಗೆ ಬಂದೆ" ಎಂದಳು ರೆನೀ, ಫಿಲಿಪ್‌ಗೆ.

ಫಿಲಿಪ್ ಮತ್ತಷ್ಟು ಉದ್ವಿಗ್ನಗೊಂಡ. ನಮ್ಮ ಮಾಲಿಕನ ಕಡೆ ನೋಡುತ್ತ "ನಮ್ ವಿಷಯ ಊರಿನವರಿಗೆಲ್ಲ ಹೇಳೋಕೆ ನೀನ್ಯಾರು?" ಅಂದ.

ಮಾಲಿಕ ಯಾಕಾದರೂ ಈ ತಲೆನೋವು ತಂದುಕೊಂಡೆನೋ ಅಂತ ತಲೆ ತುರಿಸಿಕೊಳ್ಳುತ್ತ ಮತ್ತೊಂದು ಕಡೆ ನೋಡತೊಡಗಿದ.

ನಾನು ಅವರ ಪರ ಆತನ ಕ್ಷಮೆಯಾಚಿಸಿದೆ. ಸ್ವಲ್ಪ ಹೊತ್ತಿನವರೆಗೆ ಅವರಿಬ್ಬರೂ ಮಾತಾಡಲಿಲ್ಲ.

ನಾನಿಷ್ಟೊಂದು ದೈನ್ಯತೆಯಿಂದ ಮಾತಾಡುತ್ತಿರಲು ಇಷ್ಟೊತ್ತಿನವರಿಗೆ ನನ್ನ ಕಡೆ ಮಾತಾಡದಿದ್ದ ರೆನೀ "ಇದ್ರಲ್ಲಿ ನಿಮ್ಮ ತಪ್ಪೇನೂ ಇಲ್ಲ. ಅದೆಲ್ಲ ಆ ಮಾಲಿಕನದೇ; ನೀವ್ಯಾಕೆ ಕ್ಷಮೆ ಕೇಳೋದು?" ಎಂದಳು.

"ಇಬ್ಬರದೂ ತಪ್ಪೇ, ಇಬ್ಬರದೂ ಅಲ್ಲ. ಇದ್ರಲ್ಲಿ ಆಗಿರೋ ನಷ್ಟವಾದ್ರೂ ಏನು ಇಲ್ವಲ್ಲ?" ಅಂದೆ.

"ನಿಮ್ಮನ್ನೇನು ಅನ್ತಿಲ್ಲ ಬಿಡಿ" ಅಂದಳು ಮತ್ತೆ.

"ಈ ಹೋಟೆಲ್‌ಗೆ ಮತ್ತೆಂದೂ ಬರೋದಿಲ್ಲ. ಬಾ" ಎಂದು ದೃಢನಿಶ್ಚಯದಿಂದ ರೆನೀಗೆ ಹೇಳಿದ.

ಅವರ ಮಾತೆಲ್ಲ ಮುಗಿದ ಮೇಲೆ ಪ್ರಾಂಗಣ ದಾಟಿ ಬೀದಿಯಲ್ಲಿ ಹೋಗುತ್ತಿದ್ದ ಅವರೊಂದಿಗೆ ನಾನು ಹೊರಟೆ. ನಾನಿಲ್ಲಿಯವರೆಗೆ ಇಂಗ್ಲೀಷಿನಲ್ಲಿ ಮಾತಾಡುತ್ತಿದ್ದುದನ್ನು ಫಿಲಿಪ್ ಅರ್ಥಮಾಡಿಕೊಳ್ಳದವನಾಗಿದ್ದ. ಆದರೂ ನಾನು ಫ್ರೆಂಚ್ ಭಾಷೆ ಬಳಸದೇನೆ ಇಂಗ್ಲಿಷಿನಲ್ಲಿಯೇ ಮಾತನಾಡಿದೆ. "ಮತ್ತೆ ನಿಮ್ಮನ್ನು ನೋಡೋದು ಯಾವತ್ತೋ?" ಎಂದು ಕೇಳಿದೆ. ಏನೆಂದು ಕೇಳಿದ ಫಿಲಿಪ್‌ಗೆ ರೆನೀ ನನ್ನ ಪ್ರಶ್ನೆಯನ್ನು ಫ್ರೆಂಚ್‌ಗೆ ಭಾಷಾಂತರಿಸಿ ಹೇಳಿದಳು. "ಈ ಹೋಟೆಲ್‌ಗೆ ನಾವು ಯಾವತ್ತೂ ಬರಬಾರದೆಂದುಕೊಂಡಿದ್ದೇವಲ್ಲ" ಅಂದ ಫಿಲಿಪ್. ಆ ಮಾತನ್ನು ಅರ್ಥಮಾಡಿಕೊಂಡ ನನಗೆ ರೆನೀ ಅನುವಾದಿಸಿ ಹೇಳಿದಳು.

"ಇಲ್ಲಲ್ಲ. ನಾವು ಬೇರೆಲ್ಲಾದ್ರೂ ಮತ್ತೆ ಸೇರೋಣ" ಅಂದೆ. ಅವನು ಉತ್ತರಿಸಲು ಸಂದೇಹಿಸುತ್ತಿರುವಾಗ ರೆನೀಗೆ "ನಾನು ನಿನ್ನಂತೆ ಇಂಗ್ಲೀಷಿನಲ್ಲಿ, ಜರ್ಮನಿಯಲ್ಲಿ ಅನೇಕ ಪುಸ್ತಕಗಳನ್ನು ಓದಿಕೊಂಡಿರೋನು! ನನ್ಗೂ ಇಂಗ್ಲೀಷ್ ಕವಿಗಳೆಂದ್ರೆ ಪಂಚಪ್ರಾಣ. ನಾಳೆ ನೀವಿಬ್ರೂ ಬಂದ್ರೆ ಎಲ್ಲಾದ್ರೂ ಟೀ ಕುಡಿದು ಸಿನಿಮಾಕ್ಕೆ ಹೋಗೋಣ" ಎಂದೆ. ರೆನೀ ಸರಿ ಅಂದಳು. ಫಿಲಿಪ್‌ಗೂ ತಿಳಿ ಹೇಳಿದಳು. ಫಿಲಿಪ್ ಸಹ ನನ್ನ ಕಡೆ ತೀಕ್ಷ್ಣವಾಗಿ ನೋಡುತ್ತ ಸರಿ ಎಂದು ತಲೆ ಅಲ್ಲಾಡಿಸಿದ.

ಮರುದಿನ ಸೇರುವ ಸ್ಥಳವನ್ನು ಖಚಿತಪಡಿಸಿಕೊಂಡ ನಂತರ ಅವರ ಕೆಲಸಕ್ಕೆ ಅವರು ನನ್ನ ಕೆಲಸಕ್ಕೆ ನಾನೂ ಬೇರೆಯಾದೆವು. ಮಾಲಿಕ ಮತ್ತಾತನ ಹೆಂಡತಿ ಸಹ ಫಿಲಿಪ್ ತುಂಬ ಒಳ್ಳೆಯವನಂತೆ ಕಾಣುತ್ತಿರುವನೆಂದೂ ರೆನೀ ಗಯ್ಯಾಳಿಯಂತೆ ಕಾಣುತ್ತಿರುವಳೆಂದೂ ಹೇಳಿದರು. ಅವರೊಂದಿಗೆ ವಾದಿಸುವುದು ಇಷ್ಟವಿಲ್ಲದೆ 'ಹೌದು' ಎಂದೆ.

ಮರುದಿನ ರೆನೀ, ಫಿಲಿಪ್, ನಾನೂ ಸೇರಿದಾಗ ಹಿಂದಿನ ದಿನ ವಿಷಯದ ಬಗ್ಗೆ ಮಾತಾಡಲಿಲ್ಲ. ರೆನೀ ಎಷ್ಟೋ ನಿರ್ಭಿಡೆಯಿಂದ ನನ್ನೊಡನೆ ಮಾತಾಡಲಾರಂಭಿಸಿದಳು. ಫಿಲಿಪ್ ಕೂಡ ಟೀ ಕುಡಿದ ನಂತರ ಖುಷಿಯಿಂದ ಮಾತಾಡಿದ ನನ್ನೊಂದಿಗೆ. ಇವರು ಚಿಕ್ಕಂದಿನಿಂದಲೇ ಪರಸ್ಪರ ಪರಿಚಯವಂತೆ. ವರ್ಷಗಳಿಂದ ಫಿಲಿಪ್‌ಗೆ ರೆನೀ ಅಂದರೆ ಅಪರಿಮಿತ ಪ್ರೇಮ. ಫಿಲಿಪ್ ತಂದೆ ವ್ಯಾಪಾರಿ, ಅಷ್ಟೊಂದು ಧನವಂತನೇನೂ ಅಲ್ಲ, ಆದರೂ ಧನವಂತನೇ. ರೆನೀ ತಂದೆ ಬಡವ. ಮಗಳಿಗೆ ಸ್ವಲ್ಪಮಟ್ಟಿಗೆ ಶಿಕ್ಷಣ ಕೊಡಿಸಿದ. ಆದರೆ ಹಣದ ಕೊರತೆಯಿಂದ ಪ್ಯಾರಿಸ್ ವಿಶ್ವವಿದ್ಯಾಲಯ ಪ್ರವೇಶಿಸಲಾಗಲಿಲ್ಲ. ಈಗ ನೌಕರಿಯ ಹುಡುಕಾಟದಲ್ಲಿರುವಳು. ಓದಬೇಕೆಂದು ಎಷ್ಟೋ ಆಸೆ. ಶ್ರಮವಹಿಸಿ ಇಂಗ್ಲೀಷು, ಜರ್ಮನ್ ಭಾಷೆಗಳನ್ನು ಸಹ ಕಲಿತುಕೊಂಡಿರುವಳು. ಫಿಲಿಪ್ ತಂದೆಗೆ ರೆನೀ ಬಗ್ಗೆ ಗೊತ್ತು. ಬಡಕುಟುಂಬದಲ್ಲಿ ಹುಟ್ಟಿರುವ ರೆನೀ ಜೊತೆ

ಹಾಗೆಲ್ಲಾ ತಿರುಗಕೂಡದೆಂದು ಫಿಲಿಪ್‌ಗೆ ಆಜ್ಞಾಪಿಸಿರುವುದೂ ಉಂಟು. ಫಿಲಿಪ್ ಸರಿ ಎಂದು ಒಪ್ಪಿಕೊಂಡು ಕಳ್ಳತನದಿಂದ ರೆನೀ ಜೊತೆ ಕಾಲ ಕ್ಷೇಪ ಮಾಡುತ್ತಿರುವನು. ತನ್ನ ಕೈಯಲ್ಲಿದ್ದರೆ ಕೂಡಲೆ ರೆನೀಯನ್ನು ಮದುವೆಯಾಗಲು ಸಿದ್ಧನಾಗಿರುವನು. ಆದರೆ ಸಧ್ಯದ ದಿನಗಳಲ್ಲಿ ಬರುವ ಆಸ್ತಿಯನ್ನು ತುಚ್ಛೀಕರಿಸುವುದು ಆಗದು. ಅವರ ಅಸಹಾಯಕತೆಗೆ ಇದೇ ಮೂಲ ಕಾರಣ. "ಇನ್ನು ನಿನ್ನ ಸಂಗತಿ?" ಅಂದರು. ಹೇಳಬೇಕಿದ್ದುದೇನೂ ಹೇಳದೆ, ಸ್ವಲ್ಪ ಹೊತ್ತಿನ ನಂತರ ಮಾತಿನ ಸಂದರ್ಭದಲ್ಲಿ "ಈ ಸಾರಿ ಪ್ಯಾರಿಸ್‌ನಲ್ಲಿ ಏನಾಗುವುದೋ ನನಗೊಂದು ತಿಳಿಯದು" ಎಂದೆ.

ರೆನೀ ನನ್ನ ಕಡೆ ನಗುತ್ತ "ಪ್ಯಾರಿಸ್ ನಗರದಲ್ಲಿ ಅಷ್ಟು ತೋಚದಿರುವುದು, ಅಷ್ಟೊಂದು ಒಂಟಿಯಾಗಿ ಇರೋದು ಯಾತಕ್ಕಾಗಿ?" ಅಂದಳು.

"ನನ್ಗೆ ಫ್ರೆಂಚ್ ಸರ್‍ಯಾಗಿ ಬರೋದಿಲ್ಲ ಎಂಬುದು ಸರಿತಾನೆ, ನಾನು ಸಲೀಸಾಗಿ ಮನುಷ್ಯರೊಂದಿಗೆ ಸ್ನೇಹ ಸಂಪಾದಿಸಲಾರೆ!" ಅಂದೆ.

"ಇಲ್ಲಿ ಕಣ್ಣು ಮಿಟುಕಿಸಿದ್ರೆ ಕೋಟಿ ಹೆಂಗಸರೇ" ಅಂದಳು.

ಕಣ್ಣು ಮಿಟುಕಿಸುವ ಅಭ್ಯಾಸದವನು ನಾನಲ್ಲವೆಂದೂ, ಕಣ್ಣು ಮಿಟುಕಿಸಿದ ಮಾತ್ರಕ್ಕೆ ಹಿಂಬಾಲಿಸುವ ಹೆಣ್ಣುಗಳ ಬಗ್ಗೆ ಒಳ್ಳೆಯ ಅಭಿಪ್ರಾಯ ನನಗಿಲ್ಲವೆಂದೂ ಹೇಳಿದೆ.

"ನೀನು ಬುದ್ಧಿವಂತನಂತ ತೋರಿಸ್ಕೊಂಡು ಪ್ಯಾರಿಸ್‌ನಲ್ಲಿರೋ ಹೆಂಗಸರೆಲ್ರೂ ನಿನ್ನ ಪ್ರೇಮಿಸಬೇಕೆಂದುಕೊಂಡಿರುವೆಯೋ?" ಎಂದಳು ರೆನೀ ತುಂಟತನದಿಂದ.

"ಅಷ್ಟೊಂದು ತಲೆ ಕೆಟ್ಟಿರೋನ ಥರ ಕಾಣಿಸ್ತಿದೀನೇನು!" ಎಂದು ಕೇಳಿದೆ.

ಪತ್ರಿಕೆಗಳಲ್ಲಿನ ಜಾಹಿರಾತು ನೋಡಿ ಯಾವ ಸಿನಿಮಾಕ್ಕೆ ಹೋಗುವುದೆಂದು ನಿಶ್ಚಯಿಸಿಕೊಂಡೆವು. ಟಿಕೆಟ್ ಕೊಂಡುಕೊಂಡು ಒಳಗಡೆ ಹೋದಮೇಲೆ ರೆನೀಯನ್ನು ತನ್ನ ಪಕ್ಕಕ್ಕೆ ಕೂಡ್ರಿಸಿಕೊಳ್ಳಲು ಫಿಲಿಪ್ ಪ್ರಯತ್ನಿಸಿದ. ಪಾಶ್ಚಾತ್ಯ ದೇಶಗಳಲ್ಲಿ ಇಬ್ಬರು ಪುರುಷರೊಂದಿಗೆ ಬರುವ ಸ್ತ್ರೀಯು ಪುರುಷರಿರ್ವರ ನಡುವೆ ಕೂತುಕೊಳ್ಳಬೇಕು. ಇಲ್ಲವೆಂದರೆ ಅವರಲ್ಲಿ ಒಬ್ಬರಿಗೆ ಅವಮಾನ ಮಾಡಿದಂತೆಯೇ. ರೆನೀ ಕೂಡಲೆ ಫಿಲಿಪ್‌ನನ್ನು ಇನ್ನೊಂದು ಪಕ್ಕ ಕಳಿಸಿ ತಾನು ನಮ್ಮ ನಡುವೆ ಕೂತುಕೊಂಡಳು. ಇಬ್ಬರೂ ಸ್ವಲ್ಪ ವಾದಿಸಿದರು. ನಾನೇನೂ ನೋಡದವನಂತೆ, ಕೇಳದವನಂತೆ ನಟಿಸಿದೆ. ಆದರೆ ನಡೆದುದೇನೆಂದರೆ ಫಿಲಿಪ್ ನನ್ನೊಂದಿಗೆ ಸಂತೋಷದಿಂದ ಮಾತಾಡುವುದನ್ನು ನಿಲ್ಲಿಸಿದ. ಅದಕ್ಕೆ ಬದಲು ರೆನೀ ನನ್ನ ಜೊತೆ ಮತ್ತಷ್ಟು ಸಲಿಗೆಯಿಂದ ಮಾತಾಡಲಾರಂಭಿಸಿದಳು. ನಾವಿಬ್ಬರು ಅಷ್ಟೊತ್ತಿನವರೆಗೆ ಇಂಗ್ಲೀಷಿನಲ್ಲಿ ಮಾತಾಡುತ್ತಿದ್ದುದು ಫಿಲಿಪ್‌ಗೆ ಇಷ್ಟವಾಗಲಿಲ್ಲ. ನಿಮಿಷ ನಿಮಿಷಕ್ಕೆ ಮಾತಾಡುತ್ತಿರುವುದೇನಂತ ರೆನೀಯನ್ನು ಕೇಳುತ್ತ ಬಂದ. ಕೆಲವು ಸಾರಿ ಸಮಾಧಾನದಿಂದಲ್ಲೇ ಉತ್ತರಿಸಿದಳು.

ಕೊನೆ ಕೊನೆಗೆ ಆಕೆಗೆ ಸಹನೆ ಮೀರಿತು. ಕೊನೆಗೆ ನನ್ನ ಕಡೆ ತಿರುಗಿ "ನಾವಿಬ್ರೂ ಇಂಗ್ಲೀಷ್‌ನಲ್ಲಿ ಗುಟ್ಟಾಗಿ ಏನೇನೋ ಮಾತಾಡ್ಕೊಳ್ತಿದೀವಂತ ಫಿಲಿಪ್ ಅನುಮಾನಿಸ್ತಿದ್ದಾನೆ" ಅಂದಳು. ಆಕೆ ಹಾಗೆ ಹೇಳುತ್ತಿದ್ದಾಗ ನನಗೆ ನಾಚಿಕೆಯಾಯಿತು. ರೆನೀ ಫಿಲಿಪ್‌ನೊಂದಿಗಿನ ತನ್ನ ಹಲವು ವರ್ಷಗಳ ಅನುಭವಗಳನ್ನು ನನ್ನೊಂದಿಗೆ ಹಂಚಿಕೊಳ್ಳತೊಡಗಿದಳು. ಕಲೆ, ಸಾಹಿತ್ಯದ ಬಗ್ಗೆ ಫಿಲಿಪ್‌ಗೆ ಏನೊಂದು ತಿಳಿಯದೆಂದಳು. ಫಿಲಿಪ್‌ಗೆ ಎರಡೇ ಮುಖ್ಯವಂತೆ: ಹಣ ಹಾಗೂ ರೆನೀ. ಹೆಂಗಸರೊಂದಿಗಾಗಲೀ, ಗಂಡಸರೊಂದಿಗಾಗಲೀ ಆಕೆ ಸಲಿಗೆಯಿಂದ ಸ್ನೇಹದಿಂದ ವರ್ತಿಸುವುದನ್ನು ಫಿಲಿಪ್ ಸಹಿಸಲಾರನಂತೆ ಆದರೂ ಒಳ್ಳೆಯವನಂತೆ. ಇಂಥ ಗುಣಗಳನ್ನು ನೋಡಿದರೆ ಆಗಾಗ್ಗೆ ಆಕೆಗೆ ನಿರಾಸೆಯಾಗುವುದಂತೆ. ನನಗೆ ಆ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದಾಗ ನಾನು ಇವರಿಬ್ಬರ ಮಧ್ಯೆ ಸೇರಿಕೊಂಡಿರುವುದು ಮೂರ್ಖತನ ಎಂದುಕೊಂಡೆ.

"ಅಷ್ಟೊಂದು ಇಷ್ಟವಿರೋದ್ರಿಂದ್ಲೇ ಸ್ತ್ರೀ, ಪುರುಷನಿಗೆ ಕೊಡಬೇಕಿರೋದನ್ನು ಕೊಟ್ಟಿರುವುದು. ಇಷ್ಟ ಇಲ್ಲದಿದ್ರೆ ಇದು ಹೇಗೆ ಸಾಧ್ಯ?" ಎಂದು ತಿಳಿಹೇಳಲು ಪ್ರಯತ್ನಿಸಿದೆ. ತದನಂತರ ಆ ಕಡೆ

ಇದ್ದ ಫಿಲಿಪ್‌ನನ್ನು ಹಿಡಿದುಕೊಂಡು,

"ನಿನ್ನೆಯಷ್ಟೆ ಪರಿಚಯವಾದ ನನ್ನೊಂದಿಗೆ ರೆನೀ ಇಷ್ಟೊಂದು ವಿವರವಾಗಿ ಹೇಳಿಕೊಳ್ಳೋದು ನ್ಯಾಯ ವೇನು?" ಎಂದು ಕೇಳಿದೆ.

ನಾನೀ ಪ್ರಶ್ನೆ ಕೇಳುತ್ತಲೆ ರೆನೀ ನನ್ನ ಕಡೆ ಅತಿ ದೀನಳಾಗಿ ನೋಡಿದಳು.

"ನಿನ್ನ ನೋಡಿದ ಕ್ಷಣವೇ ನೀನು ನನ್ನನ್ನು ಸರಿಯಾಗಿ ಅರ್ಥಮಾಡಿಕೊಳ್ಳಬಲ್ಲೆ ಎಂದು ತಿಳಿದು ಕೊಂಡದ್ದು ತಪ್ಪು" ಎಂದಳು ರೆನೀ.

"ಯಾರಾದ್ರೂ ಸರಿಯೇ... ಒಂದು ದಿನದಲ್ಲಿ ಯಾರ್‍ನಾದ್ರೂ ಅರ್ಥಮಾಡಿಕೊಳ್ಳಬಲ್ಲರೆ!"

"ನಿನ್ಗೂ ನನ್ಗೂ ಸಮಾನ ಅಭಿರುಚಿಗಳಿವೆ ಎಂದು ಗೊತ್ತಾಯ್ತು! ಮತ್ತೊಂದು ಮಾತು, ಪ್ಯಾರಿಸ್‌ಗೆ ಬಂದು ಬೀದಿಗಳಲ್ಲಿ ಹೆಂಗಸರನ್ನು ಬೆಂಬತ್ತದ ವಿದೇಶೀಯರೆಂದರೆ ಎಂಥವರಿಗೂ ಗೌರವವೇ!"

"ನಾನ್ಯಾವತ್ತೂ ಅವರ ಹಿಂದೆ ಬೀಳ್ಲಿಲ್ಲ ಅಂತ ತಾನೆ ನಿನಗಿಷ್ಟು ಧೈರ್ಯ!"

"ನನ್ಗೊತ್ತು... ಅದೂ ಅಲ್ಲದೆ ಆಂಗ್ಲ ಕವಿಗಳ ಕುರಿತು, ಜರ್ಮನ್ ಲೇಖಕರ ಕುರಿತು ನನ್ನೊಂದಿಗೆ ಚರ್ಚಿಸಬಲ್ಲಾತ... ಇಷ್ಟು ವರ್ಷಗಳ ನಂತರ ನಿನ್ನಂಥ ವಿದೇಶಿ ನನ್ನ ಕಣ್ಣಿಗೆ ಬಿದ್ದದ್ದು ಪ್ಯಾರಿಸ್‌ನಲ್ಲಿ. ದೊಡ್ಡೋರನ್ನಾಗಲೀ, ಸುಶಿಕ್ಷಿತರನ್ನಾಗಲೀ ನಾನು ಅಷ್ಟಾಗಿ ತಿಳಿಯೆನು. ಇವೆಲ್ಲ ಹಾಗಿರುವಾಗ ನನ್ನಂತೆಯೆ ಲೂವ್ರೇ ಕಲಾಕೃತಿಯನ್ನು ನೀನು ಕೂಡ ಹೊಗಳುವುದು ಸಾಮಾನ್ಯ ಸಂಗತಿ ಅಲ್ಲ. ಈಗಲೂ ನಿಜವಾಗಿ ಫಿಲಿಪ್‌ಗಿಂತ ನೀನೇ ನನ್ನನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಲ್ಲಾತನೆಂದು ನನ್ನ ನಂಬಿಕೆ."

ರೆನೀ ಸಾಮಾನ್ಯವಾಗಿ ಸತ್ಯವನ್ನೇ ಹೇಳುವ ಳೆಂದು ನನಗೆ ಗೊತ್ತು. ಸತ್ಯವನ್ನು ಅರ್ಥಮಾಡಿಕೊಂಡೇ ಆಕೆಯ ಜೊತೆ ಪರಿಚಯವನ್ನು ಬೆಳೆಸಿಕೊಳ್ಳುವ ಆಸೆ ಮೊದಲನೆಯ ದಿನವೇ ಮೂಡಿತ್ತು. ಆದರೆ ಇದು ತುಂಬ ಕಷ್ಟಕರ ಸ್ಥಿತಿ ಎಂದು ಕಂಡುಕೊಂಡೆ. ಮತ್ತೊಂದು ವಾರೊಪ್ಪತ್ತು ದಿನ ರೆನೀ ಫಿಲಿಪ್‌ರ ನಡುವೆ ನಾನಿದ್ದುದ್ದೇ ಆದರೆ ಅವರಿಬ್ಬರು ಪರಸ್ಪರ ಜಗಳವಾಡಿ ದೂರವಾಗುತ್ತಾರೆಂದು ಅರ್ಥಮಾಡಿಕೊಂಡೆ. ಈ ಸಂಜೆಯ ನಂತರ ರೆನೀಯನ್ನು ಎಂದೂ ಭೆಟ್ಟಿಯಾಗಬಾರದೆಂದು ದೃಢ ನಿಶ್ಚಯ ಮಾಡಿದೆ. ಮನುಷ್ಯರನ್ನು ಅರ್ಥಮಾಡಿಕೊಳ್ಳಲಾಗದೆ ಎಷ್ಟು ಮಂದಿಯ ಜೀವನವನ್ನು ನಿರರ್ಥಕ ಮಾಡುತ್ತೇವೋ ನಮಗೇ ತಿಳಿಯದು. ಈ ವಿಷಯದಲ್ಲಿ ಕಣ್ಣು ಮುಚ್ಚಿಕೊಂಡು ಕಂದಕದಲ್ಲಿ ಬೀಳಕೂಡದೆಂದುಕೊಂಡೆ.

ಸಿನಿಮಾದ ಆಳದಿಂದ ನಾವು ಮೂವರು ಮೇಲಕ್ಕೆ ಬಂದೆವು. ನನ್ನೊಂದಿಗೆ ಸಿನಿಮಾಕ್ಕೆ ಬಂದು ನನ್ನ ಆಸೆಯನ್ನು ಈಡೇರಿಸಿದ ಆ ಇಬ್ಬರಿಗೆ ನಾನು ಅಭಿನಂದನೆಗಳನ್ನು ಅರ್ಪಿಸಿದೆ. ತದನಂತರ ಚಟಕ್ಕನೆ "ನನ್ಗೆ ಬೇರೆ ಕೆಲಸವಿದೆ. ನಾನು ಹೋಗ್ತೀನಿ" ಎಂದೆ.

ರೆನೀ ನನ್ನ ಕಡೆ ಅಚ್ಚರಿಯಿಂದ ನೋಡುತ್ತಿದ್ದಳು.

"ಮತ್ತೆ ಯಾವತ್ತು ನಿನ್ನ ನೋಡುವುದು?" ಎಂದಳು. ಈ ಲೋಕದಲ್ಲಿ ಹೀಗೆಯೇ ಎಲ್ಲವೂ ಅಂದುಕೊಂಡಂತೆ ನಡೆಯದಿರವು. ಮಾತಾಡದೆ ಇಬ್ಬರೂ ಹೊರಟು ಹೋಗುತ್ತಾರೆಂದುಕೊಂಡೆ. ಮೊದಲು ಮಾತಾಡಿದ್ದು ಫಿಲಿಪ್.

"ನಾಳೆಯೇ ನಾನು ಲಂಡನ್‌ಗೆ ಹೊರಟು ಹೋಗ್ತೀನಿ".

"ಆಗಲೇ!" ಅಂದಳು ರೆನೀ.

"ನೀನೇ ನಮ್ಮನ್ನು ಟೀಗೆ, ಸಿನಿಮಾಕ್ಕೆ ಕರೆದೆ. ಆದ್ರೆ ನಿನ್ನ ನಾವು ಕರೆಯೋದು ಇಷ್ಟವಿಲ್ಲೇನು!" ಅಂದ ಫಿಲಿಪ್. ರೆನೀ ಆ ಮಾತನ್ನು ಇಂಗ್ಲಿಷಿನಲ್ಲಿ ಹೇಳಿದಳು.

"ಈ ವಿಷಯದಲ್ಲಿ ಅಷ್ಟು ಕಡ್ಡಾಯ ಯಾಕೆ!... ಪರವಾಯಿಲ್ಲ.. ಮತ್ತೆ ಪ್ಯಾರಿಸ್‌ಗೆ ಬಂದಾಗ ನನ್ಗೆ ಆತಿಥ್ಯ ಮಾಡುವಿರಂತೆ".

"ಸಾಧ್ಯವಿಲ್ಲ.. ನಾಳೆ ಸಾಯಂಕಾಲ ನಾಲ್ಕು ಗಂಟೆಗೆ ಪ್ಲೇಸ್ ಡಿಲಾ ಮೇಡ್‌ಲೈನ್ ಹತ್ತಿರ ನಮ್ಮನ್ನು ನೀನು ಭೆಟ್ಟಿಯಾಗಬೇಕು" ಅಂದ ಫಿಲಿಪ್.

"ಆದ್ರೆ ನಾಳೆ ಬೆಳಿಗ್ಗೇನೇ ನಾನು ಹೊರಟು ಹೋಗ್ತಿದೀನಿ."

"ನಾಳೆ ಹೋಗೋದು ಸಾಧ್ಯವಿಲ್ಲ" ಎಂದಳು ರೆನೀ.

"ಸರಿ" ಅಂದೆ.

ಮರುದಿನ ನಾಲ್ಕುಗಂಟೆಗೆ ಪೂರ್ವನಿರ್ಧರಿತ ಸ್ಥಳದಲ್ಲಿ ಹಾಜರಾದೆ. ನನ್ನ ಕೈಯಲ್ಲಿ ಎರಡು ಪುಸ್ತಕಗಳಿದ್ದವು. ಮೊದಲನೆಯದು ಮಹಾತ್ಮಾ ಗಾಂಧಿಯ 'ಆತ್ಮಕಥೆ', ಎರಡನೆಯದು ರವೀಂದ್ರರ 'ಗೀತಾಂಜಲಿ'. ಬೆಳಿಗ್ಗೆ ತಿರುಗುತ್ತಿದ್ದಾಗ ಅಂಗಡಿಯೊಂದರಲ್ಲಿ ಈ ಎರಡೂ ಪುಸ್ತಕಗಳು ಕಣ್ಣಿಗೆ ಬಿದ್ದವು. ಇವುಗಳನ್ನು ಕೊಂಡುಕೊಂಡು ರೆನೀಗೆ ಉಡುಗೊರೆಯ ರೂಪದಲ್ಲಿ ಕೊಡಬೇಕೆಂಬ ಆಸೆಯಾಯಿತು. ಕೂಡಲೆ ಕೊಂಡುಬಿಟ್ಟೆ. ರೆನೀ ಇವುಗಳನ್ನು ನೋಡಿ ತುಂಬ ಸಂತೋಷಪಡ್ತಾಳೆ ಎಂದು ನನಗೆ ಗೊತ್ತು. ಫಿಲಿಪ್‌ನೊಂದಿಗೆ ರೆನೀ ಬರುವುದು ಹತ್ತು ನಿಮಿಷ ವಿಳಂಬವಾಯಿತು. ವಿಳಂಬಕ್ಕೆ ಫಿಲಿಪ್ ಕ್ಷಮೆ ಕೋರಿದ.

ಬರುತ್ತಲೇ ನನ್ನ ಕೈಯಲ್ಲಿದ್ದ ಪುಸ್ತಕಗಳನ್ನು ನೋಡಿ "ಅವೇನು?" ಎಂದು ಕೇಳಿದಳು ರೆನೀ.

"ನೀನು ನೋಡೋವು ಅಲ್ಲ!" ಅಂದೆ.

"ಆದ್ರಿಂದ್ಲೇ ತೋರಿಸು."

"ನಂತರ ತೋರಿಸ್ತೀನಿ."

ಒಂದು 'ಕೆಫೇ'ನಲ್ಲಿ ಕೂತು ಕಾಫಿ ಕುಡಿಯುತ್ತಿದ್ದಾಗ ರೆನೀಗೆ ಆ ಎರಡು ಪುಸ್ತಕಗಳನ್ನು ತೋರಿಸಿದೆ. ನಾನು ಅವುಗಳನ್ನು ತನಗಾಗಿಯೇ ಕೊಂಡಿರುವುದನ್ನು ಸೂಚಿಸುವ ಒಳಗಿನ ಪುಟದಲ್ಲಿನ ಬರಹದ ಒಕ್ಕಣೆಕೆಯನ್ನು ನೋಡುತ್ತಲೆ ಮೂಡಿದ ಅಪರಿಮಿತ ಆನಂದವನ್ನು ಪ್ರಕಟಿಸುತ್ತ "ನೀನಿಷ್ಟು ಒಳ್ಳೆಯವನಂತ ನಾನು ಅಂದು ಕೊಂಡಿದ್ದಿಲ್ಲ" ಅಂದಳು.

ಮೂಡಿದ ಅಸಹನೆಯನ್ನು ಬಚ್ಚಿಟ್ಟುಕೊಳ್ಳುತ್ತ ಫಿಲಿಪ್ ವ್ಯಂಗ್ಯವಾಗಿ "ಎರಡು ಪುಸ್ತಕಗಳೂ ರೆನೀಗೆ... ಆದ್ರೆ ನನಗೇನು!" ಅಂದ.

"ಪುಸ್ತಕಗಳು ರೆನಿಯವು. ರೆನೀ ನಿನ್ನವಳು" ಅಂದೆ.

ಇಬ್ಬರೂ ನಗಾಡಿದರು. ಫಿಲಿಪ್ ಆ ಸಂತೋಷದಲ್ಲಿ ತನ್ನ ಕೈಯನ್ನು ರೆನೀಯ ಭುಜದ ಮೇಲೆ ಹಾಕಿದ. ಫಿಲಿಪ್ ಕಡೆ ನೋಡದದೇನೆ ಆ ಕೈಯನ್ನು ತೊಲಗಿಸಿಕೊಂಡು ರೆನೀ "ನನ್ಗೆ ಕೊಡಬೇಕಾದ ಸರಿಯಾದ ಪುಸ್ತಕಗಳನ್ನೇ ಕೊಟ್ಟಿರುವಿ.. ನಿಜ ಹೇಳ್ತಿದೀನಿ.. ನಿನ್ನ ಸಂತೋಷಪಡಿಸಬೇಕೂಂತ ಅಲ್ಲ... ಇಂಡಿಯಾ ನೋಡಬೇಕೆಂಬ ಬಹು ದೊಡ್ಡ ಆಸೆ ತುಂಬ ವರ್ಷಗಳಿಂದ ಇದೆ. ಈ ಜನ್ಮದಲ್ಲಿ ನೆರವೇರದ ಆಸೆಗಳಲ್ಲಿ ಅದೂ ಒಂದು" ಅಂದಳು.

"ಆ ಸುಂದರವಾದ ಆಸೆಗಳಲ್ಲಿ ಉಳಿದವು ಯಾವುವು?" ಎಂದು ಕೇಳಿದೆ ತುಂಟತನದಿಂದ. ರೆನೀ ಉತ್ತರಿಸಲಿಲ್ಲ.

"ಯಾವುದಾದ್ರು ನಾಟಕಕ್ಕೋ.. ಸಿನಿಮಾಕ್ಕೋ ಹೋಗೋಣವೇನು!" ಎಂದು ಕೇಳಿದ ಫಿಲಿಪ್. ಬೇಡ ಎಂದು ಹೇಳಿದೆ. ರೆನೀ ಕೂಡ ಬೇಡವೆಂದಳು. ಮತ್ತೇನೆಂದು ಯೋಚಿಸುತ್ತ ಆಲೋಚಿಸುತ್ತ ಯಾವುದಾದರೂ ತೋಟಕ್ಕೆ ಹೋಗಿ ಸ್ವಲ್ಪ ಹೊತ್ತು ಕೂತುಕೊಳ್ಳೋಣವೆಂದು ರೆನೀ ಹೇಳಿದಳು. 'ಬೋಯ್ ದಿ ಬೊಲೋನ್' ಎಂಬ ಸ್ಥಳಕ್ಕೆ ಹೋದೆವು. ಖುಷಿಯಿಂದ ಮಾತಾಡುತ್ತ ಕತ್ತಲಾಗುವವರೆಗೆ ನಡೆದೆವು. ಕೊನೆಗೆ ನಾನು ಹೊರಡುವೆನೆಂದಾಗ ಸ್ವಲ್ಪ ಹೊತ್ತು ಬೆಂಚ್ ಮೇಲೆ ಕೂತಿದ್ದು ನಂತರ ಹೋಗೋಣವೆಂದಳು ರೆನೀ. ಕತ್ತಲಲ್ಲಿ ಒಂದು ಬೆಂಚ್ ಮೇಲೆ ಕೂತಿದ್ದಾಗ ರೆನೀ ಮೌನವಾದಳು. ನಾನೂ ಫಿಲಿಪ್ ಪರಸ್ಪರ ಮಾತಾಡಿದೆವು. ನಾನು ತಪ್ಪು ತಪ್ಪಾಗಿ ಫ್ರೆಂಚ್ ಮಾತಾಡುತ್ತಿದ್ದೆ. ಆಗಾಗ್ಗೆ ರೆನೀ ಕೈಯಿಂದ ತಪ್ಪುಗಳನ್ನು ಸರಿಪಡಿಸಿಕೊಳ್ಳುತ್ತ ಅರ್ಥವಾಗುವಂತೆ ಮಾತಾಡುತ್ತಿದ್ದೆ. ಮರುದಿನ ನಾನು ಲಂಡನ್ನಿಗೆ ಹೊರಡುತ್ತಿರುವೆ. ಫಿಲಿಪ್ ಲಂಡನ್ ಕುರಿತಂತೆ ಅನೇಕ ಪ್ರಶ್ನೆಗಳನ್ನು ಹಾಕುತ್ತಿದ್ದ. ಎರಡು ಮೂರು ದಿನಗಳಲ್ಲಿ ತಾನಲ್ಲಿಗೆ ಬರುತ್ತಿರುವುದಾಗಿ ಹೇಳಿದ. ರೆನೀ ಕೂಡಾ ಬರುವಳೇನು ಎಂದು ನಾನು ಕೇಳಿದ್ದಕ್ಕೆ "ನನ್ಗೆ ಲಂಡನ್ನಿನಲ್ಲಿ ಏನು ಕೆಲಸ?" ಎಂದು ಉತ್ತರಿಸಿದಳು.

ಹೀಗಿರುವಾಗ ಸ್ವಲ್ಪ ದೂರದಲ್ಲಿ "ಫಿಗಾರೋ! ಫಿಗಾರೋ!" ಎಂದು ಕೂಗುತ್ತ ಫ್ರೆಂಚ್ ಪತ್ರಿಕೆಗಳನ್ನು ಬಾಲಕನೊಬ್ಬ ಮಾರುತ್ತಿದ್ದ. ಹೋಗಿ ಒಂದು ಪತ್ರಿಕೆ ತರುವಂತೆ ರೆನೀ ಫಿಲಿಪ್‌ಗೆ ಹೇಳಿದಳು.

"ಹೋಗ್ತಾ ದಾರಿಯಲ್ಲಿ ಕೊಂಡುಕೊಂಡರಾಯಿತು" ಎಂದ ಫಿಲಿಪ್, "ನಂತರ ಪತ್ರಿಕೆಗಳು

ದೊರಕುವವೋ ಇಲ್ಲವೋ ತಗೋ" ಅಂದಳು.

ಹೋಗಿ ತೆಗೆದುಕೊಂಡು ಬರ್‍ತೀನಂತ ನಾನು ಏಳುವ ಹೊತ್ತಿಗೆ; ಬೇಡ ಅಂತ ವಿಧೇಯನಂತೆ ಎದ್ದುಹೋದ ಫಿಲಿಪ್.

ಆತ ಸ್ವಲ್ಪ ದೂರ ಹೋಗುತ್ತಲೇ ನನ್ನೆರಡು ಕೈಗಳನ್ನು ರೆನೀ ಗಟ್ಟಿಯಾಗಿ ಹಿಡಿದುಕೊಂಡಳು.

"ನಾಳೆ ನೀನು ಹೋಗೋದು ಸಾಧ್ಯವಿಲ್ಲ.... ಸಾಧ್ಯವಿಲ್ಲ" ಅಂದಳು.

"ಇದೇನು ರೆನೀ ?" ಎಂದೆ ದಿಗ್ಭ್ರಾಂತನಾಗಿ.

"ಸಾಧ್ಯವಿಲ್ಲ. ನೀನಿಲ್ಲದೆ ನಾನಿರಲಾರೆ... ನೀನು ಹೋಗದಿರು... ನಾಳೆ ಮಧ್ಯಾಹ್ನ ಒಂದು ಗಂಟೆಗೆ ಮಾಲ್ ಮೆಯ್‌ಸಾನ್ ರಾಜಭವನದ ಹತ್ರ ನೀನಿರಬೇಕು. ನಾನಲ್ಲಿಗೆ ಬರ್‍ತೀನಿ... ಲಂಡನ್ನಿಗೆ ಹೋಗಲ್ಲಾ... ಅಲ್ಲಿಗೆ ಬರ್‍ತೀನಂತ ಮಾತು ಕೊಡು. ಬರ್‍ತೀಯಾ!...ಅಗೋ, ಫಿಲಿಪ್ ಬರ್‍ತಿದಾನೆ.. ಮಾತು ಕೊಡಲ್ವೇನು ?"

ನಾನು ಮಾತು ಕೊಡಲಿಲ್ಲ. ನನ್ನಿಂದ ದೂರ ಸರಿದು ಕೂತುಕೊಂಡಳು.

ಫಿಲಿಪ್ ಬಂದು "ಇಗೋ ನಿನ್ನ ಪತ್ರಿಕೆ!" ಎಂದ.

ಇಷ್ಟು ಮೌನದಿಂದ ಕೂತಿದ್ದ ರೆನೀ ಮತ್ತೆ ಯಥಾರೀತಿ ಲವಲವಿಕೆಯಿಂದ "ಏನಾದ್ರು ವಿಶೇಷಗಳಿವೆಯಾ ಫಿಲಿಪ್ ಈ ದಿನದ ಪತ್ರಿಕೇಲಿ!" ಎಂದಳು.

"ನಾನಿನ್ನು ನೋಡಿಲ್ಲ!" ಅಂದ ಫಿಲಿಪ್.

ಸ್ವಲ್ಪ ಹೊತ್ತಿನ ನಂತರ ಹೊರಡಲು ಅನುವಾದೆವು. ಮತ್ತೆ ನಾನು ಲಂಡನ್‌ಗೆ ಹೋಗ್ತಿದೀನಿ ಅಂತ ಫಿಲಿಪ್‌ಗೆ ಹೇಳಿದೆ. ನಾನಲ್ಲೇ ವಾಸಿಸುವುದಾಗಿ ಹೇಳಿದೆ. ಒಂದು ಚಿಕ್ಕಪುಸ್ತಕದಲ್ಲಿ ಬೀದಿಯ ದೀಪದ ಬೆಳಕಿನಲ್ಲಿ ನನ್ನ ವಿಳಾಸ ಬರೆದುಕೊಂಡ. ಹೋಗ್ತಿದೀನಿ ಅಂತ ರೆನೀಗೂ ಹೇಳಿದೆ. ಪ್ಯಾರಿಸ್‌ಗೆ ಬಂದಾಗ ನನ್ನ ಮಾತು ಮರೆಯಬಾರದೆಂದಳು. ಆಕೆ ಎಲ್ಲಿರುವಳೋ ತಿಳಿಯದೆಂದಾಗ "ತಿಳಿಯದುಂಟೇನು ?" ಎಂದು ಉತ್ತರಿಸಿದಳು.

ಇನ್ನೇನು ಅಗಲಬೇಕೆಂದಾಗ ನನ್ನ ರೆನೀ "ಅಂದ ಹಾಗೆ ಪ್ಯಾರಿಸ್‌ನೆಲ್ಲಾ ನೋಡಿದೀನಂತೀಯ... ಮಾಲ್ ಮೆಯ್‌ಸಾನ್ ರಾಜಭವನವನ್ನು ಎಂದಾದ್ರೂ ನೋಡಿದ್ದೀಯಾ ?" ಎಂದು ಕೇಳಿದಳು.

"ಎರಡು ಮೂರು ಸಾರಿ ನೋಡಿದ್ದೀನಿ" ಅಂದೆ.

"ನೋಡಿಲ್ವೇನೋ ಅಂತ ಕೇಳಿದೆ. ತುಂಬ ಸುಂದರವಾಗಿದೆ ಅಲ್ವ!"

"ಹೌದು".

ಆ ಇಡೀ ರಾತ್ರಿ ಆಲೋಚಿಸಿದೆ: ಮರುದಿನ ಬೆಳಗ್ಗೆ ಲಂಡನ್‌ಗೆ ಹೊರಟು ಹೋಗುವುದೋ ಬೇಡವೋ ಅಂತ. ಹೊರಟು ಹೋಗಿ ಬಿಡುವುದೆಂದು ಮೊದಲಿಗೆ ನಿಶ್ಚಯಿಸಿದ್ದೆ. ನಾನು ತಪ್ಪದೆ ಇದ್ದುಬಿಡುತ್ತೇನೆಂದೂ; ಮರುದಿನ ಒಂದು ಗಂಟೆಗೆ ಭೆಟ್ಟಿ ಮಾಡುತ್ತೇನೆಂದೂ ರೆನೀ ದೃಢ ನಿಶ್ಚಯದಿಂದ ಇರುವಳೆಂದೂ ನನಗೆ ಗೊತ್ತು. ತಾನು ಏನು ಕೇಳಿದರೂ ಅದನ್ನು ಮಾಡಲು ನಾನು ಸಿದ್ಧನೆಂದೂ ರೆನೀಗೆ ಈ ಧೈರ್ಯ ಇರಬೇಕಾದರೂ ಯಾಕೆ ಎಂದು ನನ್ನ ಪೌರುಷ ಪ್ರಶ್ನಿಸಿತು. ಸಾಯಂಕಾಲ ಕೊನೆಯ ಸಾರಿಗೆ ನನ್ನ ಮಾಲ್ ಮೆಯ್‌ಸಾನ್ ಬಗ್ಗೆ ಪ್ರಶ್ನೆ ಕೇಳುವುದು ಕೇವಲ ಹಠವೂ; ಹೆಮ್ಮೆಯೂ ಅಲ್ಲದೆ ಬೇರೇನೂ ಅಲ್ಲವೆಂದು ನಾನು ಬೇಸರಪಟ್ಟೆ. ಲಂಡನ್‌ಗೆ ನಾನು ಹೋಗಿ ಬಿಡಬೇಕು. ತಪ್ಪದು.... ಮತ್ತೆ ಒಂದು ಗಂಟೆಗೆ ಮರುದಿನ ಮಾಲ್ ಮೆಯ್‌ಸಾನ್ ಪ್ರದೇಶದಲ್ಲಿ ನನಗಾಗಿ ಅಪರಿಮಿತ ಆಸೆಯಿಂದ ಕಾಯುತ್ತ ಇರುವ ಬಗ್ಗೆ ಯೋಚಿಸಿದರೆ ಕರುಣೆ ಹುಟ್ಟುತ್ತದೆ... ಫಿಲಿಪ್ ಜೊತೆ ಆಕೆಗೆ ಸರಿಯಾದ ಆನಂದವಿಲ್ಲ. ನಿಜವೇ. ಅಷ್ಟು ಸದಭಿರುಚಿಯ ಸ್ವಭಾವದವಳನ್ನು ಫಿಲಿಪ್ ಅರ್ಥ ಮಾಡಿಕೊಳ್ಳಲಾರ. ಆದರೂ ನಾನು ಇರುಕಿನಲ್ಲಿ ಸಿಕ್ಕಿಹಾಕಿಕೊಳ್ಳಬಾರದು. ಹುಷಾರಿಂದ ಸ್ವಲ್ಪ ಹೊತ್ತು ಮಾತಾಡಿ ಬಂದು ಬಿಡಬೇಕು. ಪರವಾ ಇಲ್ಲ, ಅಷ್ಟು ಮಾತ್ರ ನಾನು ನೋಡಿಕೊಳ್ಳಬಲ್ಲೆ. ನಾನು ಕೊಟ್ಟ ಪುಸ್ತಕಗಳನ್ನು ನೋಡಿ ಚಿಕ್ಕ ಮಗುವಿನಂತೆ ಸಂತೋಷಪಟ್ಟಳು; ಪಾಪ; ಹೋಗಿ ನೋಡದಿದ್ದರೆ ಅಪರಾಧ.

ಮರುದಿನ ನಾನು ಲಂಡನ್‌ಗೆ ಹೊರಡಲಿಲ್ಲ. ಒಂದು ಗಂಟೆ ದಾಟಿ ಕೆಲವು ನಿಮಿಷಗಳಲ್ಲಿ ಮಾಲ್ ಮೆಯ್‌ಸಾನ್ ಪ್ರದೇಶ ಸೇರಿಕೊಂಡೆ. ಒಂದು

ಒಪ್ಪುವ ಗೌನು ಧರಿಸಿದ್ದ ರೆನೀ ನನ್ನ ನಿರೀಕ್ಷೆಯಲ್ಲಿದ್ದಳು. ಹತ್ತಿರ ಹೋದೆ. ನನ್ನ ಆಗಮನ ಆಕೆಯ ಮುಖದ ಮೇಲೆ ಯಾವ ಸಂತೋಷವನ್ನು ಮೂಡಿಸಲಿಲ್ಲ. ನೋಡಿದ ಕೂಡಲೇ ಮಾತಾಡಲೂ ಇಲ್ಲ. ಹತ್ತಿರದಲ್ಲೆ ಹೋಟೆಲ್ ಇದ್ದುದರಿಂದ "ಅಲ್ಲಿಗೆ ಹೋಗಿ ಕೂತುಕೊಳ್ಳೋಣ ಬಾ" ಅಂದಳು. ಇಬ್ಬರೂ ಅಲ್ಲಿಗೆ ಹೋಗಿ ಕುರ್ಚಿಗಳಲ್ಲಿ ಕೂತುಕೊಂಡೆವು. ನಾನೇನು ಮಾತಾಡಲಿಲ್ಲ. ರೆನೀ ಕಡೆ ನೋಡುತ್ತ ಕೂತಿದ್ದೆ. ರೆನೀ ನನ್ನ ಕಡೆ ನೋಡದಿರಲು ಪ್ರಯತ್ನಿಸುತ್ತಿದ್ದಳು. ಕೊನೆಗೆ ಅವಳೇ ಮಾತಾಡಿದಳು.

"ಒಂದು ಗಂಟೆ ದಾಟಿದ ನಂತರ ನೀನು ಬರೋದಿಲ್ಲೆಂದು ಗಾಬರಿಗೊಂಡಿದ್ದೆ".

"ಹೌದು! ತಡ ಆಯ್ತು. ಅದು ನನ್ನ ತಪ್ಪಲ್ಲ!"

"ನೀನು ಬರದಿದ್ರೆ ನಾನಿವತ್ತು ಏನು ಮಾಡಿಕೊಳ್ಳುತ್ತಿದ್ದೆನೋ ನನ್ಗೇ ತಿಳಿಯದಾಗಿತ್ತು."

ಇಷ್ಟರಲ್ಲಿ ಹೋಟಲ್‌ನವ ಬಂದು ಏನು ಬೇಕೆಂದು ಕೇಳಿದ. ತಿನ್ನೋದಕ್ಕೆ ಏನಾದ್ರೂ ತಯಾರಿಸು ಎಂದೆವು. ಆತ ಹೊರಟುಹೋದ.

ರೆನೀ ಇನ್ನೂ ನನ್ನ ಕಡೆ ನೋಡಲು ನಾಚುತ್ತಿದ್ದಳು.

ನಾನು ಆಗ "ರೆನೀ ನೀನು ನನ್ನೀ ಹೊತ್ತು ಬರಲು ಯಾಕೆ ಹೇಳಿದೇ ಅಂತ ಗೊತ್ತಿಲ್ಲವಾದ್ರೂ ನಾನು ಬರದೇ ಇರಲು ತುಂಬ ಪ್ರಯತ್ನಿಸಿದೆ... ನನಗಿದೊಂದೂ ಅರ್ಥ ಆಗ್ತಿಲ್ಲ" ಅಂದೆ.

"ಹಾಗೆ ನೀನು ಪ್ರಯತ್ನಿಸ್ತೀ ಅಂತ ನನ್ಗೆ ಗೊತ್ತು...ನಿನ್ನೆ ಇಡೀ ರಾತ್ರಿ ನಾನು ನಿದ್ದೆ ಮಾಡ್ಲಿಲ್ಲ. ನೀನು ಬರಲಿಕ್ಕಿಲ್ಲ ಎಂಬ ಭಯದಿಂದ. ನೀನು..." ಇನ್ನು ಮಾತಾಡಲಾರದಾದಳು, ಟೇಬಲ್ ಮೇಲೆ ಮುಖ ತಗ್ಗಿಸಿ ಅಳಲಾರಂಭಿಸಿದಳು.

"ಅಳಬೇಡ ರೆನೀ, ಯಾಕೆ ಹೀಗೆ ಅಳ್ತಿದ್ದೀ! ನನ್ನ ಯಾವುದಾದ್ರು ಮಾತು ನಿನ್ ಮನಸ್ಸಿಗೆ ನೋವು ಮಾಡಿದ್ರೆ ನನ್ನ ಕ್ಷಮಿಸು!"

"ನಿನ್ನ ಮಾತುಗಳಲ್ಲ."

"ಮತ್ತೇನು?"

"ನಿನ್ಗೆ... ನಾನಂದ್ರೆ.... ಇಷ್ಟವಿಲ್ಲ."

"ಮತ್ತೊಬ್ಬರಾಗಿದ್ರೆ ನಾನಿವತ್ತು ಲಂಡನ್‌ಗೆ ಹೋಗದೆ ಇರುತ್ತಿದ್ದನೇ!"

"ನಾನಷ್ಟು ಒತ್ತಾಯ ಮಾಡಿದ್ದಕ್ಕೆ ನೀನು ಉಳಿದುಕೊಂಡಿದ್ದು".

"ನಿಜವೇ. ಮತ್ತೊಬ್ಬರು ಒತ್ತಾಯ ಮಾಡಿದ್ರೂ ಇರುತ್ತಿರಲಿಲ್ಲವೇನೊ!"

ಕಣ್ಣು ಒರೆಸಿಕೊಂಡಳು. ನನ್ನ ಕೈ ಮೇಲೆ ತನ್ನ ಕೈಹಾಕಿದಳು. ನನ್ನ ಕೈಬೆರಳುಗಳನ್ನು ಮೃದುವಾಗಿ ಸವರಿದಳು.

"ನೀನು ನನ್ನನ್ನಿನ್ನೂ ಅರ್ಥ ಮಾಡಿಕೊಳ್ತಿಲ್ಲ" ಅಂದಳು.

"ನಿನ್ನ ಅರ್ಥ ಮಾಡ್ಕೋಳ್ಳೋದು ಅಂತ ಅಲ್ಲ... ನನ್ಗಿದೆಲ್ಲ ಇಷ್ಟ ಆಗೋದಿಲ್ಲ.... ನಿನ್ನೂ ನನ್ನೂ ಈಗ ಫಿಲಿಪ್ ನೋಡಿದ್ರೆ ಏನೆಂದುಕೊಂಡಾನು!"

"ಫಿಲಿಪ್ ಏನೆಂದುಕೊಂಡ್ರು ನನಗಿನ್ನು ಪರವಾಯಿಲ್ಲ".

"ಹಾಗನ್ನಬೇಡ. ಫಿಲಿಪ್‌ಗೆ ನೀನಂದ್ರೆ ತುಂಬ ಪ್ರೀತಿ...."

"ನಿನಗೂ ಇಲ್ವೇನು!"

"ನನ್ಗಿಲ್ಲ ಎಂದಲ್ಲ... ನನ್ನ ಪ್ರೇಮ ಮತ್ತೊಂದು ರೀತಿಯದು. ನೀನಂದ್ರೆ ನನಗೆ ತುಂಬ ಸ್ನೇಹ ಭಾವ. ಈ ಸಾರಿ ಬಂದು ನಿನ್ನಂಥ ಸುಂದರಿಯ ಪರಿಚಯವಾಗುವುದರ ಮೂಲಕ ನನಗೆಷ್ಟು ಸಂತೋಷ ಆಗಿದೆಯೋ ನೀನು ಊಹಿಸಲಾರೆ. ಆದರೆ... ಅಷ್ಟೇ, ಫಿಲಿಪ್ ಪ್ರೇಮ ಆ ರೀತಿಯದ್ದು ಅಲ್ಲ."

"ಫಿಲಿಪ್ ಬಗ್ಗೆ ನನ್ನ ಹತ್ರ ಮಾತಾಡುವುದಕ್ಕಾಗಿ ಇಲ್ಲಿಗೆ ಬಂದಿರುವೆ ಏನು ನೀನು?"

"ಆದ್ದರಿಂದಲೇ".

"ಹಾಗಿದ್ದರೆ ಹೊರಟು ಹೋಗು: ಫಿಲಿಪ್‌ನ ಸುಗುಣಗಳನ್ನು ನೀನು ನನ್ಗೆ ವರ್ಣಿಸುವ ಅಗತ್ಯ ಇಲ್ಲ. ನಿನಗಿಂತ ನಾನೇ ಫಿಲಿಪ್‌ನನ್ನು ಚೆನ್ನಾಗಿ ಅರ್ಥ ಮಾಡ್ಕೊಂಡಿದ್ದೀನಿ."

"ನೀನರ್ಥ ಮಾಡಿಕೊಂಡಿಲ್ಲ ಎಂದಲ್ಲ... ಆದ್ರೆ ರೆನೀ, ನಿನ್ನ ಉದ್ದೇಶವಾದರೂ ಏನು! ಯಾಕಿಷ್ಟು

ನೋವು ಮಾಡಿಕೊಳ್ತಿದ್ದೀ ನೀನು?"

"ನಾನೇನು ನೋವು ಮಾಡಿಕೊಳ್ತಿಲ್ಲ."

"ಮತ್ತೆ ಅಳೋದು... ಇದೆಲ್ಲ ಯಾಕೆ?"

"ನಿನ್ನ ನೋಡದೆ ಇರು ಅಂದ್ರೆ ಇರೋಕಾಗ್ತಿಲ್ಲ... ನೀನೇನು ಮಾಡು ಅಂದ್ರೆ ಅದನ್ನ ಮಾಡ್ತೀನಿ... ಏನು ಮಾಡು ಅಂದ್ರೆ.... ಅದು. ಆದ್ರೆ... ನಿನ್ನ ನಾನ್ಯಾವತ್ತೂ ನೋಡ್ತಾನೆ ಇರಬೇಕು!"

"ನನ್ನ ಮಾತೃದೇಶ ಇಲ್ಲೆಲ್ಲೂ ಇಲ್ಲ ಎಂಬುದು ನಿನಗೆ ಗೊತ್ತೋ?"

"ಅದನ್ನೆಲ್ಲ ಆಲೋಚಿಸಬೇಕೂಂತ ನಾನಂದ್ಕೊಂಡಿಲ್ಲ ಈಗ".

"ಹೋಗ್ಲಿ ನನ್ನ ದೇಹದ ಬಣ್ಣ ನೋಡು. ಕಪ್ಪು ಅಂದ್ರೆ ಕಪ್ಪು... ನಿನ್ಗೂ ನನ್ಗೂ ಸ್ನೇಹ ಇರಬಹ್ದು.. ಆದ್ರೆ ಮತ್ತಾವ ಸಂಬಂಧ ಸಾಧ್ಯವಿಲ್ಲ."

"ನನ್ನ ಮದುವೆ ಮಾಡ್ಕೋ ಅಂತ ನಿನ್ನ ನಾನು ಪೀಡಿಸುತ್ತಿಲ್ಲ."

"ರನೀ... ಫಿಲಿಪ್ ನಿನ್ನ ನಿಜವಾಗ್ಲೂ ಸುಖವಾಗಿಡ್ತಾನೆ.... ಮತ್ತಾವ ರೀತಿಯಲ್ಲೂ ನಿನಗೆ ಸುಖವಿಲ್ಲ. ನೀನು ಮೋಸ ಮಾಡಿದರೆ ಫಿಲಿಪ್ ಸಹಿಸಲಾರ!"

"ಫಿಲಿಪ್ ಬಗ್ಗೆ ಅಷ್ಟೊಂದು ಅನುಕಂಪ ಯಾಕೆ ನಿನಗೆ!... ನಾನಲ್ಲದಿದ್ರೆ ನನ್ನಂಥ ಲಕ್ಷ ಮಂದಿ ಇದ್ದಾರೆ ಫಿಲಿಪ್‌ಗೆ."

"ಫಿಲಿಪ್‌ಗಾಗಿ ಅಲ್ಲ ನನ್ನ ಅನುಕಂಪ... ನಿನಗಾಗಿಯೇ!"

ಇಷ್ಟರಲ್ಲಿ ಹೋಟೆಲ್ಲಿನವನು ತಿನ್ನುವುದಕ್ಕೆ, ಕುಡಿಯುವುದಕ್ಕೆ ಎಲ್ಲವನ್ನೂ ತಂದು ಟೇಬಲ್ ಮೇಲಿಟ್ಟ.

ತಿನ್ನುತ್ತಿರುವಾಗ ನಡುವೆ ರನೀ ನನಗೆ ಒಂದು ವಿಚಿತ್ರವಾದ ಪ್ರಶ್ನೆ ಹಾಕಿದಳು. "ನಿಜ ಹೇಳು... ನಾನು ನಿನಗೆ ಸುಂದರವಾಗಿ ಕಾಣಿಸುತ್ತಿಲ್ವೇನು?"

ನನಗೆ ನಗು ಬಂತು.

"ನಿನ್ನಲ್ಲಿ ಸೌಂದರ್ಯಕ್ಕೆ ಕೊರತೆ ಇಲ್ಲ... ನಿನ್ನಲ್ಲಿ ಬುದ್ಧಿವಂತಿಕೆಗೂ ಕೊರತೆ ಇಲ್ಲ. ಯಾರಲ್ಲಾದ್ರು ಇರುವ ಬುದ್ಧಿವಂತಿಕೆಯೇ ಸೌಂದರ್ಯಕ್ಕಿಂತ ಹೆಚ್ಚಾಗಿ ನನ್ನನ್ನು ಆಕರ್ಷಿಸುವುದು" ಎಂದೆ.

ತಿನ್ನುವುದಾದ ನಂತರ ಎಲ್ಲಿಗೆ ಹೋಗುವುದೆಂಬ ಚರ್ಚೆ ಬಂತು. "ಮಾಲ್ ಮೆಯ್‌ಸಾನ್ ಭವನಕ್ಕೆ ಹೋಗಿ ನೋಡೋಣ" ಅಂದೆ.

"ದರಿದ್ರವಾಗಿರ್ತದೆ... ಮತ್ತೆಲ್ಲಿಗಾದ್ರೂ ಹೋಗೋಣ" ಅಂದಳು ರನೀ. ಉಳಿದ ಸ್ಥಳಗಳು ಒಬ್ಬರಿಗೆ ಹಿಡಿಸಿದ್ರೆ ಮತ್ತೊಬ್ಬರಿಗೆ ಹಿಡಿಸಲಿಲ್ಲ.

"ಲೂವ್ರೆ ಕಲಾ ಶಾಲೆಗೆ ಹೋಗೋಣ" ಎಂದೆ.

"ಲೂವ್ರೆಗಾ?... ಫಿಲಿಪ್ ಕಾಣಬಹುದೇನೋ!"

"ಹಾಗಿದ್ರೆ ಬೇಡ!"

"ಪರವಾಗಿಲ್ಲ... ಲೂವ್ರೇಗೆ ಹೋಗೋಣ ನಡೆ."

ದಾರಿಯಲ್ಲೂ ಲೂವ್ರೇಯೊಳಗೂ ರನೀ ನನ್ನೊಂದಿಗೆ ಅನೇಕ ವಿಷಯಗಳನ್ನು ಕುರಿತಂತೆ ನಿರ್ಭಿಡೆಯಿಂದ ಮಾತಾಡಿದಳು. ಉಳಿದ ಮಾತುಗಳನ್ನಾಡುತ್ತ ನಡು ನಡುವೆ ಪ್ಯಾರೀಸ್‌ನಲ್ಲಿ ಇನ್ನೂ ಒಂದು ವಾರದ ಮಟ್ಟಿಗಾದರೂ ಉಳಿಯುವಂತೆ ಪ್ರೀತಿಯ ಒತ್ತಡ ಹೇರುತ್ತಿದ್ದಳು. ಯೋಚಿಸುವುದಾಗಿ ಉತ್ತರಿಸುತ್ತ ನಡೆದೆ. ಒಂದು ಕಡೆ 'ಅಮೂರ್ ಅಂಡ್ ಸೈಛಿ'(ಅಂದರೆ ಪಾಶ್ಚಾತ್ಯ ರತಿ-ಮನ್ಮಥರು) ಚಿತ್ರ ತೋರಿಸಿ; ಅದೆಷ್ಟು ಚೆನ್ನಾಗಿದೆ ನೋಡು ಅಂದಳು. ಅದನ್ನು ನೋಡುತ್ತಿದ್ದಾಗ ತಕ್ಷಣ ತಟಕ್ಕನೆ ನನ್ನ ಕೈ ಹಿಡಿದುಕೊಂಡು "ಪ್ಯಾರಿಸ್‌ನಲ್ಲಿ ಮತ್ತೊಂದು ವಾರ ಇರುವೆನೆಂದು ವಾಗ್ದಾನ ಮಾಡು"ಅಂದಳು. ಸುತ್ತ ಮುತ್ತ ಯಾವ ಕಡೆ ನೋಡಿದರೂ ಮನುಷ್ಯರು, ಯಾರೂ ಕಣ್ಣ ನೇರದಲ್ಲಿಲ್ಲವೆಂಬಂತೆ ನನ್ನ ಕಡೆ ತುಂಬ ಪ್ರೇಮೋದ್ರೇಕದಿಂದ ನೋಡಿದಳು ರನೀ.

ನಾನು ನಾಚಿಕೊಂಡೆ. ಕೈಬಿಡಿಸಿಕೊಂಡು "ಮತ್ತೊಂದು ಮೂರುದಿನ ಖಂಡಿತವಾಗಿಯೂ ಪ್ಯಾರಿಸ್‌ನಲ್ಲಿರ್ತೀನಿ.... ಆ ಮೇಲೆ ನಾನು ಮಾತು ಕೊಡಲಾರೆ" ಅಂದೆ. "ಸರಿ" ಅಂದಳು.

ಮತ್ತೊಂದು ಕಡೆ "ಮೂರು ದಿನ ಇರ್ತೀನಂದಿದೀಯಾ: ಮಾತು ಉಳಿಸಿಕೊಬೇಕು ಮರ್ಯಾದಸ್ಥನಂತೆ" ಅಂದಳು.

"ಮಾಡಿದ ವಾಗ್ದಾನದಂತೆ ನಡೆಯಲೇಬೇಕಲ್ಲ".

ಆ ಹೊತ್ತು ನಾಲ್ಕು ಗಂಟೆಗೆ ತಾನು ಹೋಗ ಬೇಕಿದೆ ಎಂದಳು. "ಫಿಲಿಪ್ಪನ್ನ ನೋಡೋದಕ್ಕಾ!" ಅಂದರೆ ಹೌದೆಂದಳು. ಮತ್ತೆ ಸ್ವಲ್ಪ ಹೊತ್ತು ಇದ್ದು "ನೀನಿವತ್ತು ಫಿಲಿಪ್ಪನ್ನ ನೋಡಬೇಡಂದ್ರೆ ಬಿಟ್ಟು ಬಿಡ್ತೀನಿ ಮತ್ತೆ!" ಅಂದಳು.

"ತಪ್ಪದೆ ಹೋಗಿ ನೋಡು!"

"ಎಂದೋ ಒಂದಿನ ನಾವಿಬ್ರೂ ದೂರವಾಗದೆ ಇರೋದಿಲ್ಲ. ಆದರೆ ಎಲ್ಲಾ ವಿಷಯಗಳ ಬಗ್ಗೆ ಫಿಲಿಪ್‌ಗೆ ಸ್ವಲ್ಪ ಸ್ವಲ್ಪ ಅರ್ಥ ಮಾಡಿಕೊಡಬೇಕೆಂಬುದು ನನ್ನ ಉದ್ದೇಶ. ಒಂದೇ ಸಾರಿಗೆ ಹೇಳೋದು ನನಗಿಷ್ಟವಿಲ್ಲ... ನೀನು ಹೋಗೆಂದ್ರೆ ನಾನು ಹೋಗ್ತೀನಿ... ಏನಂತೀಯಾ!...ನನ್ನ ಮುಟ್ಟೋಕೆ ಇನ್ನು ಮೇಲೆ ಫಿಲಿಪ್‌ಗೆ ಅವಕಾಶ ಕೊಡೋದಿಲ್ಲ."

ಆ ಮಾತುಗಳನ್ನು ಕೇಳುತ್ತಿದ್ದರೆ ನಾನು ಏನು ಮಾಡ್ತಿದ್ದೇನೋ ನನಗೇ ಅರ್ಥವಾಗಲಿಲ್ಲ. ಅಂತರಂಗದಿಂದ ಗೊಂದಲ ಹುಟ್ಟಿ ಬಂತು. ತೋರಿಕೆಗೆ ನಿರಾಳವಾಗಿರುವಂತೆ ನಟಿಸಿದೆ.

ಇಷ್ಟರಲ್ಲಿ ಹೆನ್ನರ್‌ನ 'ಸ್ವೇಚ್ಛೆ' ಎಂಬ ಕಲಾಕೃತಿಯ ಬಳಿಗೆ ಬಂದೆವು. ರೆನೀ ನನ್ನ ಬೆನ್ನು ತಟ್ಟಿದಳು.

"ಅಗೋ; ನೋಡು".

"ರೆನೀ; ನಿನ್ನ ನನ್ನ ಹೊರತು ಬೇರೆಯವರ‍್ಯಾರೂ ಇದನ್ನು ಹೊಗಳಲಿಲ್ಲಂತೀಯಾ!"

"ಇಲ್ಲ... ನಿಜವಾಗ್ಲೂ ನಾವಿಬ್ರೇ!"

"ಹಾಗಿದ್ರೆ ಹಿಡ್ಕೊಂಡು ಹೋಗೋಣವೇ!"

"ಇಲ್ಲಿ ನೋಡಿಕೊಳ್ಳೋರು ಯಾರೂ ಇರಲಿಲ್ಲಂದ್ರೆ ಅಂಥ ಕೆಲಸಕ್ಕೆ ನಾನು ಸಿದ್ಧವೇ.... ಒಂದು ರಾತ್ರಿ ನಾವಿಬ್ರು ಬಂದು ಲಪಟಾಯಿಸೋಣ."

"ರೆನೀ; ಇನ್ನು ಮೇಲೆ ನಿನ್ನ ನೆನಪಾದಾಗಲೆಲ್ಲ ಈ ಚಿತ್ರ ಕೂಡ ನೆನಪಾಗ್ತಿರ್ತದೆ ನನಗೆ."

"ಯಾವುದರಿಂದ?"

"ಎರಡು ದಿನಗಳ ಹಿಂದೆ ನೀನೂ ನಾನೂ ಅಪರಿಚಿತರಾಗಿದ್ದೆವು. ಈ 'ಸ್ವೇಚ್ಛೆ'ಯನ್ನು ನೋಡಿದ್ರೆ ಮನೋವಿಕಾರಗಳೊಂದೂ ಹುಟ್ಟೋದಿಲ್ಲ. ಕಲಾವಿದ ಚಿತ್ರಿಸಿದ ಶರೀರಕ್ಕಿಂತ ಕಲಾವಿದನೊಳಗಿನ ಕವಿಯ ಉದ್ದೇಶವಾದ ಮಾನಸಿಕ ಸೌಂದರ್ಯದಲ್ಲಿ ಹೆಚ್ಚಿನ ಶೋಭೆ ಕಾಣಿಸ್ತಿದೆ."

"ಅದೆಲ್ಲ ಚೆನ್ನಾಗೇ ಇದೆ... ಆದ್ರೆ ನನ್ನ ನೆನಪಾದಾಗಲೆಲ್ಲ ಈ ಕೃತಿ ಯಾಕೆ ನೆನಪಿಗೆ ಬರಬೇಕು ನಿನ್ಗೆ!"

"ಯಾಕೋ ಹೇಳಲಾರೆ.... ನಿನ್ನ ನೋಡಿದ್ರೆ ನನ್ಗೆ ನಿರ್ಮಲವಾದ ಆನಂದ ಉಂಟಾಗುವುದೇ ಹೊರತು ಮನೋವಿಕಾರವಲ್ಲವಾದ್ದರಿಂದ."

"ನಿಜವಾಗ್ಲೂ? ನಾನು ನಿನಗಷ್ಟೊಂದು ಅಂದವಿಕಾರವಾಗಿ ಕಾಣುತ್ತಿರುವೆನೇನು? ನಿನ್ಗೆ ಮನೋವಿಕಾರ ಆಗಲಿಲ್ಲಾಂದ್ರೆ ಅದು ನನ್ನಲ್ಲಿನ ಅಂದವಿಕಾರ ಎಂದೇ ಅರ್ಥ."

"ನೀನೋ ಅಂದವಿಕಾರಿಣಿ!"

"ಚಿಕ್ಕವಯಸ್ಸಿನಲ್ಲಿ ಎಲ್ರೂ ನನ್ನನ್ನು ತುಂಬ ಸುಂದರಿ ಎಂದು ಹೇಳ್ತಿದ್ದರು".

"ಈಗ ನೀನು ಚಂದ ಇಲ್ಲವೆಂದೋ, ನೀನೀಗ ಮತ್ತಷ್ಟು ಸುಂದರಿ ಆಗಬೇಕಿದೆಯೋ... ಸೌಂದರ್ಯಕ್ಕೇನು ಬಿಡು. ನಾಲ್ಕು ಗಂಟೆಯಾಗಿ ಬಿಡ್ತಿದೆ."

"ಆಗ್ಲೇ! ಹೌದು. ನಾನು ಹೋಗ್ತಿನಿ. ಮತ್ತೆ ನಾಳೆ.... ಹನ್ನೆರಡು ಗಂಟೆಗೇ ಇವತ್ತು ಸೇರಿದ ಸ್ಥಳದಲ್ಲಿಯೇ ಸೇರೋಣ.. ಏನು!!"

"ಸರಿ".

"ನನಗೆ ಕೈಕೊಡಬಾರದು ಮತ್ತೆ.... ಹನ್ನೆರಡು ಗಂಟೆಗೆ... ನಿಜವಾಗ್ಲೂ ನೀನು ನನ್ನ ಪ್ರೀತಿಸಲಿಲ್ಲಾಂದ್ರೆ ನನ್ನ ಬದುಕು ನಿರರ್ಥಕವಾಗಿ ಬಿಡ್ತದೆ... ಹಾಗೆ ನಗಬೇಡ... ತಮಾಷೆಗಲ್ಲ.."

"ರೆನೀ, ಈಗ ಹೊರಡುವ ಮೊದ್ಲು.... ನಿನ್ನ ವಿಳಾಸ ತಿಳಿಸು, ನನ್ನದು ಗೊತ್ತಿರುವುದಲ್ಲ!"

"ಈಗ ಅವಸರ ಯಾಕೆ! ನಾಳೆ ಹೇಳ್ತೀನಿ... ನನ್ಗೆ ಹೇಳದೆ ಹೋಗಬೇಕೆಂದುಕೊಂಡಿರುವಿಯಾ!... ಬೇಡಪ್ಪಾ ಬೇಡ... ಮರ್ಯಾದಸ್ಥರು ಮಾಡೋ ಕೆಲಸವಲ್ಲ ಅದು!"

"ಈ ಅಪನಂಬಿಕೆಗಳಾದ್ರೂ ಯಾಕೆ, ರೆನೀ! ನಿನ್ಗೆ ಕೊಟ್ಟಿರೋ ಮಾತು ತಪ್ಪೋದಿಲ್ಲ!"

"ಸರಿ.... ನಾಳೆ ಹನ್ನೆರಡು ಗಂಟೆಗೆ.... ಹೋಗಲೇ!"

ರೆನೀ ಹೋಗಿ ಬಿಟ್ಟಳು.

ನಾನು ತಲೆಕೆಟ್ಟವನಂತೆ ಪ್ಯಾರಿಸ್ಸಿನ ಬೀದಿಬೀದಿ

ಗಳಲ್ಲಿ ಸುತ್ತಿ ಸುತ್ತಿ ಎಂಟು ಗಂಟೆಗೆ ಹೋಟೆಲ್ ಸೇರಿಕೊಂಡೆ. ಏನೂ ತಿನ್ನಲಿಲ್ಲ.... ಕೋಣೆಗೆ ಹೋಗಿ ಬಟ್ಟೆ ಬದಲಾಯಿಸಿ, ದೀಪ ನಂದಿಸಿ ಹಾಸಿಗೆ ಮೇಲುರುಳಿ ಮೂರುದಿನಗಳಲ್ಲಿ ನಡೆದು ದರ ಬಗ್ಗೆ ಸುದೀರ್ಘವಾಗಿ ಯೋಚಿಸಿದೆ. ಆಲೋಚಿಸುತ್ತಲೆ ನನ್ನ ಮತ್ತು ರನೀಯ ವರ್ತನೆ ಹಾಗೂ ಸ್ವಭಾವಗಳು ತುಂಬ ಅಸಾಂದರ್ಭಿಕವೆನಿಸಿದವು. ನಾನು ದಿನದಿನಕ್ಕೆ ಬಹಳ ಮೂರ್ಖನಂತೆ ವರ್ತಿಸುತ್ತಿರುವೆನೆಂದುಕೊಂಡೆ. ಎರಡು ದಿನಗಳ ಕೆಳಗೇನೆ ಲಂಡನ್ನಿಗೆ ಹೋಗಬೇಕೆಂದುಕೊಂಡಿದ್ದೆ. ರನೀ ನನ್ನನ್ನು ತುಂಬ ಪ್ರೀತಿಸುತ್ತಿರುವುದಂತೂ ನಿಜ. ಆದರೆ ರನೀ ನನಗೆಷ್ಟು ಇಷ್ಟವಾದರೂ, ಆಕೆಯಲ್ಲಿರುವಷ್ಟು ಪ್ರೀತಿ ನನ್ನಲ್ಲಿಲ್ಲ ಎಂಬುದು ನಿಜ. ಆಕೆಯಂತೆ ನಾನು ಹೇಗೆ ಪ್ರೀತಿಸಲಿ! ಆಕೆ ಫಿಲಿಪ್‌ನೊಂದಿಗೆ ಈ ಕೋಣೆಯಲ್ಲಿ ಒಂಟಿಯಾಗಿ ನಾಲ್ಕು ತಾಸು ಕಳೆದು ಇನ್ನು ನಾಲ್ಕು ದಿನಗಳು ಸಹ ಆಗಿಲ್ಲ. ಮತ್ತೆ ಹಾಗೆ ಅವರಿಬ್ಬರು ಇದ್ದುದರಿಂದ ನನ್ನ ಮನದಲ್ಲಿ ಎಲ್ಲಿ ಹುಡುಕಿದರೂ ಯಾವ ಪ್ರಣಯಾಸೂಯೆಯೂ ದೊರಕದು.... ಯಾವುದೋ ಒಂದು ರೀತಿಯಲ್ಲಿ ರನೀ ಫಿಲಿಪ್‌ನೊಂದಿಗೆ ಹೊಂದಿಕೊಂಡು ಸುಖವಾಗಿ ಜೀವಿಸುವಂತಾಗಬೇಕೆಂಬುದೇ ನನ್ನ ಉದ್ದೇಶ, ಪಾಪ!

ಹೇಳದೆ ಮರುದಿನ ಬೆಳಿಗ್ಗೆ ಹೊರಟುಹೋಗಿ ಬಿಡಬೇಕೆಂದು ನಿರ್ಧರಿಸಿದೆ. ದೀಪ ಹಾಕಿ ಗಡಿಯಾರ ನೋಡಿಕೊಂಡರೆ ಹನ್ನೊಂದು ಗಂಟೆಯಾಗಿತ್ತು. ಕತ್ತಲೆಯಲ್ಲಿ ಮೂರು ಗಂಟೆಗಳ ಕಾಲ ಒದ್ದಾಡಿರುವೆನೆಂದೂ ಅರ್ಥ ಮಾಡಿಕೊಂಡೆ. ಈ ರೀತಿಯಾಗಿ ಮನಸ್ಸು ಸದೃಢ ಮಾಡಿಕೊಂಡ ನಂತರ ನಸುಕಿನಲ್ಲಿಯೇ ಹೊರಡಬೇಕೆಂದುಕೊಂಡಿರುವುದರಿಂದ ಬಟ್ಟೆ ಬರೆ ಸಾಮಾನು ಎಲ್ಲವನ್ನು ಜೋಡಿಸಿಕೊಳ್ಳತೊಡಗಿದೆ. ಇಷ್ಟರಲ್ಲಿ ಯಾರೋ ಕೋಣೆಯ ಬಾಗಿಲು ತಟ್ಟಿದರು. ಊಟ ಯಾಕೆ ಮಾಡಲಿಲ್ಲಾಂತ ಕೇಳಲು ಹೋಟೆಲ್ ಮಾಲಿಕನೇ ಬಂದಿರಬಹುದೆಂದೂಹಿಸಿ ಒಳಗಡೆ ಬರಬಹುದೆಂದು ಹೇಳಿದೆ. ಹಿಂದೆ ತಿರುಗಿ ನೋಡುವಷ್ಟರಲ್ಲಿ ಬಾಗಿಲು ತೆರೆದು ಒಳಗಡೆ ಬಂದಾಕೆ ರನೀ!

"ಇದೇನು ರನೀ!"

"ನಾಳೆ ಹೊರಟು ಹೋಗಬೇಕೂಂತ ಸಿದ್ಧತೆ ಮಾಡಿಕೊಳ್ತಿದೀಯಾ!"

"ಸಿದ್ಧತೆಯಲ್ಲ... ಅಚ್ಚುಕಟ್ಟಾಗಿ ಪೆಟ್ಟಿಗೆಯಲ್ಲಿ ಜೋಡಿಸಿಕೊಳ್ತಿದೀನಿ... ಆದ್ರೆ ನೀನ್ಯಾಕೆ ಬಂದದ್ದು?"

"ನಿಜ ಹೇಳು: ನಾಳೆ ಹೋಗಿ ಬಿಡಬೇಕೆಂದುಕೊಂಡಿದ್ದೆಯೋ ಇಲ್ವೋ!"

"ಹೋಗಬೇಕೂಂತ ಅಲ್ಲ ರನೀ... ನಿನ್ಗೆ ಮಾತು ಕೊಟ್ಟಮೇಲೂ ಹೋಗ್ತೀನೇನು! ಸರಿ ಬಿಡು: ಈ ಮಧ್ಯರಾತ್ರೀಲಿ ನನ್ ಕೋಣೆಗೆ ಬರಬೇಕೆಂಬ ಬುದ್ಧಿ ಯಾಕೆ ಬಂತು? ಯಾಕಿಷ್ಟು ಉದ್ವಿಗ್ನತೆ!"

"ನಿಜ ಹೇಳಲೇನು! ನೀನೇನು ಅಂದುಕೋಬೇಡ, ಸಾಯಂಕಾಲದ ನಿನ್ನ ಮಾತುಗಳ್ನ ಮೆಲುಕು ಹಾಕ್ತಿದ್ದಾಗ ನೀನು ನನ್ಗೆ ತಿಳಿಯದಂತೆ ಹೊರಟು ಹೋಗ್ತಿದೀ ಅಂತ ಅನುಮಾನ ಬಂತು. ಹೋಗಬೇಡಾಂತ ಮತ್ತೆ ಹೇಳೋದ್ಕೆ ಬಂದಿದೀನಿ!"

"ರನೀ ನಿನ್ಗೇನಾದ್ರೂ ಹುಚ್ಚು ಹಿಡಿದಿದೆಯಾ!"

"ಹೌದು, ಹುಚ್ಚು ಹಿಡಿದಿದೆ!"

"ಈ ಮಧ್ಯರಾತ್ರಿ ಹೊತ್ನಲ್ಲಿ ನೀನಲ್ಲಿ ಬಂದ್ರೆ ಹೋಟೆಲ್ ಮಾಲಿಕ ಏನೆಂದುಕೊಂಡಾನು!"

"ಏನೆಂದುಕೊಂಡ್ರೆ ನನಗಿಲ್ಲ ಲೆಕ್ಕ!"

"ಇಲ್ಲಿವರ್ಗ್ಗೂ ನಾನು ತುಂಬ ಮರ್ಯಾದಸ್ಥ ಅಂತ ತಿಳ್ಕೊಂಡಿದಾನೆ!"

"ಅಂದುಕೊಂಡಿದ್ದಕ್ಕಿಂತ ಹೆಚ್ಚು ಮರ್ಯಾದಸ್ಥ ಅಂತ ನಾನು ತಿಳಿಸಿ ಹೇಳ್ತೀನಿ ಬಿಡು ನಾನು ಆತಗೆ! ನಾನು ಹೀಗೆ ನಿಂತೇ ಇರಲೋ ಅಥವಾ ನಿನ್ನ ಪಕ್ಕ ಕೂತುಕೊಳ್ಳಲೋ!"

"ಬೇಡ ರನೀ, ನಾವಿಬ್ರೂ ಈಗ್ಲೇ ಮೇಲಕ್ಕೆ ಹೋಗೋಣ, ನಿನ್ನನ್ನು ನಿನ್ನ ಮನೆ ಹತ್ತಿರ ಬಿಟ್ಟು ಮರಳಿ ಬರ್ತೀನಿ."

"ನನ್ನ ಬಿಟ್ಟು ಬಿಡಬೇಕೆಂದು ಯೋಚಿಸ್ತಿದೀಯಾ! ನೀನು ಇರು ಅಂದ್ರೆ ನಿನ್ನೊಂದಿಗೆ ಇಡೀ ರಾತ್ರಿ ಕಳೆಯಬೇಕೆಂದುಕೊಂಡು ಬಂದಿದೀನಿ... ಗೊತ್ತಾ!"

“ಆ ಮಾತನ್ನು ಹೇಳಲು ಹೇಗೆ ಸಾಧ್ಯವಾಯಿತು, ರೆನೀ! ಇದೇ ಕೋಣೆಯಲ್ಲಿ ಫಿಲಿಪ್ ಜೊತೆ ಒಂಟಿಯಾಗಿ ನಾಲ್ಕು ಗಂಟೆಗಳ ಕಾಲ ಕಳೆದು ಇನ್ನು ನಾಲ್ಕು ದಿನಗಳು ಸಹ ಆಗಿಲ್ಲ!"

“ನೀನೀಗ ಆ ವಿಷಯವನ್ನು ನೆನಪಿಸುವಷ್ಟು ಕ್ರೌರ್ಯ ಮತ್ತೊಂದಿಲ್ಲ."

“ಸುಳ್ಳು ಹೇಳ್ತಿದೀನಾ ನಾನು?"

“ಫಿಲಿಪ್ ಅಂದ್ರೆ ನನಗಿನ್ನೂ ಪ್ರೇಮ ಇರಬಹುದೆಂದ್ಕೊಂಡಿದ್ದೀಯಾ!... ನಿಜವಾಗ್ಲೂ ಫಿಲಿಪ್ ನನ್ನ ಗಾಢವಾಗಿ ಪ್ರೀತಿಸಲೇ ಇಲ್ಲ. ಈ ಹೊತ್ತು ಅವನೊಂದಿಗೆ ಕಳೆದ ಪ್ರತಿನಿಮಿಷ ಒಂದೊಂದು ಯುಗದಂತೆ ಭಾಸವಾಯ್ತು. ಆತನೊಂದಿಗೆ ಕೂತಿರುವಾಗ್ಲೂ ನಿನ್ ಬಗ್ಗೆ ಆಲೋಚಿಸ್ತಿದ್ದೆ."

“ಹೋಗೋಣ, ಬಾ... ರೆನೀ".

“ಎಲ್ಲಿಗೆ?"

“ನಿಮ್ಮ ಮನೆವರ್ಗ ಬರ್ತೇನೆ!"

“ಅಲ್ಲಿಗೆ ನೀನು ಬರೋದು ಸಾಧ್ಯವಿಲ್ಲ. ಯಾವುದಾದ್ರೂ ಪಾರ್ಕಿಗೆ ಹೋಗಿ ಕೂತುಕೊಳ್ಳೋಣ".

“ಬೇಡಾ ರೆನೀ... ತುಂಬ ತಡ ಆಗಿ ಬಿಡ್ತಿದೆ. ಅಂದ ಹಾಗೆ ನಿನ್ನ ವಿಳಾಸ ಹೇಳ್ತೀ ಅಲ್ಲವೆ... ನಾಳೆ ಮತ್ತೆ ಕೇಳೋದು ಮರ್ರು ಬಿಡ್ತೀನೇನೋ ಅಂತ."

“ನೀನಾ ಮರೆತು ಹೋಗುವುದು! ನನ್ನ ವಿಳಾಸವನ್ನು ನೀನು ಕೇಳಿದಾಗಲೆಲ್ಲ ನೀನು ಕಾಣೆಸದ ಹಾಗೆ ಎಲ್ಲಿ ಹೊರಟು ಹೋಗ್ತೀಯೋ ಎಂಬ ಭಯ".

“ಅದಕ್ಕೇ ಅಲ್ಲ.... ಈಗ ಹೇಳಿದ್ರೆ ಪುಸ್ತಕದಲ್ಲಿ ಬರೆದುಕೊಳ್ತೀನಿ".

“ನಾನೇ ನಾಳೆಯೋ ನಾಡಿದ್ದೋ ಯಾವುದಾದ್ರು ಪುಸ್ತಕದಲ್ಲಿ ಬರೆದುಕೊಡ್ತೀನಿ ಬಿಡು!"

“ನಿನ್ನಿಷ್ಟ... ಇನ್ನು ಹೋಗೋಣ ಬಾ!"

ಇಬ್ಬರೂ ಹೋಟಲ್ ಬಿಟ್ಟು ಮೇಲೆ ಹೋದೆವು.

ಸ್ವಲ್ಪ ದೂರ ಹೋದ ಮೇಲೆ ರೆನೀ ಮತ್ತೆ “ಎಲ್ಲಿಗಾದ್ರು ಹೋಗಿ ಕೂತುಕೊಳ್ಳೋಣ" ಅಂದಳು.

“ಈಗ ಆಗದು" ಎಂದು ತಪ್ಪಿಸಿಕೊಂಡೆ.

ಹಾಗಿದ್ರೆ ತಾನು ಮನೆಗೆ ಹೊರಟು ಹೋಗುವೆನೆಂದಳು. ನಾನು ಸ್ಟೇಷನ್‌ವರೆಗೆ ಬರುವೆನೆಂದರೆ ಬೇಡ ಎಂದಳು.

ಹೊರಟು ಹೋಗುವಾಗ “ನನ್ಗೆ ನೀನು ಮೋಸ ಮಾಡಿ ಎಲ್ಲಿ ಹೊರಟು ಹೋಗ್ತೀಯೋ ಎಂಬ

ಕಮಾನು

ಏಳು ತಂತಿಯ
ಸೊಗಸಾದ
ಪಿಟೀಲು ನನ್ನ
ಬಳಿಯಿದೆ
ಆದರೆ
ಪ್ರೀತಿಯ
ಕಮಾನು
ಕಳೆದು ಹೋಗಿದೆ.

- ರಮೇಶಚಂದ್ರ

ದ್ವೇಷ

ಹುಳುಕುಗಳು
ಜಾಸ್ತಿ ಆಗುತ್ತಾ
ಆಗುತ್ತಾ
ಕನ್ನಡಿಯ ಮೇಲೆ
ದ್ವೇಷ
ಮೂಡುವುದು

- ರಮೇಶಚಂದ್ರ

ಭಯ ನನಗೆ" ಅಂದಳು.

ಹೋಟೆಲ್‌ಗೆ ಬಂದ ನಂತರ ಮಾಲಿಕನಿಗೆ ಮರುದಿನ ಬೆಳಿಗ್ಗೆನೆ ನಾನು ಲಂಡನ್‌ಗೆ ಹೊರಟು ಹೋಗುತ್ತಿರುವುದಾಗಿ ಹೇಳಿದೆ. ಕೊಡಬೇಕಿದ್ದ ಹಣ ಸಂದಾಯ ಮಾಡಿದೆ. ಆ ರಾತ್ರಿ ಕೋಣೆಗೆ ಬಂದ ರೆನೀ ಬಗೆಗೆ ಖುಷಿಯಿಂದ, ತಮಾಷೆಯಿಂದ ಮಾಲಿಕ ಮಾತನಾಡಲು ಪ್ರಯತ್ನಿಸಿದ. ಅದಕ್ಕೆ ಪ್ರತಿ ನುಡಿಯದ್ದರಿಂದ ಆತ ತೆಪ್ಪಗಾದ. ಸ್ವಲ್ಪ ಹೊತ್ತಿನ ನಂತರ ತನ್ನ ಹೆಂಡತಿ ಮಕ್ಕಳು ನಿದ್ದೆ ಮಾಡುತ್ತಿರುವರೆಂದು ಹೇಳಿದ. ಅವರಿಗೆ ಹೇಳದೆ ಹೋಗುತ್ತಿರುವೆನಾದ್ದರಿಂದ ನನ್ನ ಕ್ಷಮಿಸಬೇಕೆಂದು ಹೇಳಲು ತಿಳಿಸಿದೆ.

ಮರುದಿನ ಹೊರಟು ಲಂಡನ್ ಸೇರಿಕೊಂಡೆ. ಪ್ಯಾರಿಸ್‌ನಿಂದ ಲಂಡನ್‌ವರೆಗೆ ನನ್ನದು ಒಂದೇ ಆಲೋಚನೆ, ಪ್ಯಾರಿಸ್‌ನಲ್ಲಿ ರೈಲು ಹತ್ತುವ ಕೊನೆ ನಿಮಿಷದಲ್ಲೇನಾದರೂ ರೆನೀ ಬಂದು ಬಿಟ್ಟರೆ ಎಂಬ ದಿಗಿಲು ಕಾಡಿತು. ರೈಲು ವಿಕ್ಟೋರಿಯಾ ಸ್ಟೇಶನ್ ಪ್ರವೇಶಿಸುತ್ತಿರುವಾಗ ರೆನೀ ಬಗ್ಗೆ ಯೋಚಿಸುತ್ತ ದುಃಖ ಉಮ್ಮಳಿಸಿ ಅಳತೊಡಗಿದೆ.

ಆನಂತರ ಲಂಡನ್ನಿನಲ್ಲಿ ನಾನು ಅಂದುಕೊಂಡಷ್ಟು ದಿನಗಳಿರಲಿಲ್ಲ. ಅಕಸ್ಮಾತ್ತಾಗಿ ನಾನು ಲಂಡನ್ ಬಿಟ್ಟು ಮನೆಗೆ ವಾಪಸಾಗಬೇಕಾಗಿ ಬಂತು. ಇಲ್ಲಿಯವರೆಗೆ ರೆನೀ ಬಗ್ಗೆ ಯಾವ ಸುದ್ದಿ ತಿಳಿದುಕೊಳ್ಳಲಿಲ್ಲ ನಾನು.....

ಇದು ಇಂಡಿಯಾ ದೇಶ. ಇಲ್ಲಿನ ಸ್ತ್ರೀ ಪ್ರಪಂಚದಲ್ಲಿ ಎಲ್ಲಿ ನೋಡಿದರೂ ನಾಚಿಕೆಯ ಮೇಲ್ ಮುಸುಕುಗಳೇ, ಘೋಷಾಗಳೇ. ಈಗ ನನ್ನ ಲೋಕ ಇದು, ರೆನೀ ಲೋಕ ಇದು ಅಲ್ಲ. ಆಗೊಮ್ಮೆ ಈಗೊಮ್ಮೆ ಸಂಜೆ ಸಮಯದಲ್ಲಿ ಕಣ್ಣು ಮುಚ್ಚಿ ರೆನೀ ಕುರಿತು ಯೋಚಿಸಿದರೆ, ರೆನೀಯ ಆ ಮುಖ ದೈನ್ಯ ರೌದ್ರದಿಂದ ಕನಲಿರುವಂತೆ ಕಾಣಸುತ್ತದೆ. ರೆನೀ ನನ್ನನ್ನು ಕ್ಷಮಿಸೋದಿಲ್ಲ ಎಂದು ಯೋಚಿಸುತ್ತೇನೆ. ಆದರೆ ಮಟಮಟ ಮಧ್ಯಾಹ್ನ ರೆನೀ ಕುರಿತು ಆಲೋಚಿಸುತ್ತ ಫಿಲಿಪ್‌ನೊಂದಿಗೆ ಆಕೆ ಮದುವೆ ಮಾಡಿಕೊಂಡಿರಬಹುದೆಂದೂ; ಐದಾರು ಮಂದಿ ಮಕ್ಕಳಿಗೆ ತಾಯಿಯಾಗಿರಬಹುದೆಂದೂ; ನನ್ನ ಬಗ್ಗೆ ಮರೆತುಬಿಟ್ಟಿರುತ್ತಾಳೆಂದೂ ನನಗೆ ಹೊಳೆಯುತ್ತದೆ....

ಜೀವಿಸುತ್ತಿರುವ ಪ್ರತಿ ಪ್ರಾಣಿಗೆ ಎರಡು ಪರಸ್ಪರ ವಿರುದ್ಧವಾದ ಮನೋಗುಣಗಳಿರುತ್ತವೆ, ಒಂದು ಮನೋಗುಣಕ್ಕೆ ಜೀವನ ಪರಿಸ್ಥಿತಿಯೊಂದಿಗೆ ಮೈತ್ರಿ: ಎರಡನೆ ಗುಣಕ್ಕೆ ಜೀವನ ಪರಿಸ್ಥಿತಿಯೊಂದಿಗೆ ದ್ವೇಷ... ಇವೆರಡೂ ಮುಖ್ಯವೇ.

ಸಾಫಲ್ಯ

೧೯೦೦ರಲ್ಲಿ ಮುಂಬಯಿಯ ಎಲ್‌ಫಿನ್‌ಸ್ಟನ್ ಕಾಲೇಜಿನ ಇಬ್ಬರು ವಿದ್ಯಾರ್ಥಿಗಳ ನಡುವೆ ಪ್ರತಿಭಾಶಾಲಿಗಳಿಗಿಟ್ಟ ವಿದ್ಯಾರ್ಥಿವೇತನ ಗಿಟ್ಟಿಸಲು ತೀವ್ರವಾದ ಪೈಪೋಟಿ ನಡೆದಿತ್ತು. ಅವರಲ್ಲಿ ಒಬ್ಬಾತ ಶ್ರೀಮಂತ, ಇನ್ನೊಬ್ಬ ಏನೂ ಇಲ್ಲದವ. ಅತ್ಯುತ್ತಮ ಅಂಕಗಳಿಸಿದ ಶ್ರೀಮಂತ ಹುಡುಗ ವಿದ್ಯಾರ್ಥಿವೇತನ ಪಡೆಯಲು ಅರ್ಹನಾದ. ಆದರೆ ವಿದ್ಯಾರ್ಥಿವೇತನ ಪಡೆಯದ ತನ್ನ ಸಹಪಾಠಿ ಅದೇ ಕಾರಣದಿಂದ ಓದು ಮುಂದುವರೆಸಲು ಸಾಧ್ಯವಾಗದೆಂದು ತಿಳಿದಾಗ ಆತ ಪ್ರಿನ್ಸಿಪಾಲರ ಬಳಿ ಹೋಗಿ ತನ್ನ ಬದಲು ತನ್ನ ಸ್ನೇಹಿತನಿಗೆ ವಿದ್ಯಾರ್ಥಿವೇತನ ದೊರಕಿಸಿಕೊಡಬೇಕೆಂದು ಕೇಳಿಕೊಂಡ. ಮುಂದೆ ಜೀವನದಲ್ಲಿ ಅವರಿಬ್ಬರೂ ಅತ್ಯಂತ ಸಫಲರೆನಿಸಿದರು. ವಿದ್ಯಾರ್ಥಿವೇತನವನ್ನು ಬಿಟ್ಟುಕೊಟ್ಟ ವ್ಯಕ್ತಿ ಸ್ವತಂತ್ರ ಭಾರತದ ಮುಂಬಯಿ ರಾಜ್ಯದ ಮೊದಲ ಹಣಕಾಸು ಸಚಿವರೆನಿಸಿದ ವೈಕುಂಠ ಮೆಹತಾರವರಾದರೆ ಮತ್ತೊಬ್ಬರು ಮಹಾತ್ಮಾ ಗಾಂಧಿಯವರ ಅತ್ಯಂತ ಅಚ್ಚುಮೆಚ್ಚಿನ ಕಾರ್ಯದರ್ಶಿಯಾಗಿದ್ದ ಮಹದೇವ ದೇಸಾಯಿಯವರು.

- ಟಿ.ಎಸ್. ಲಲಿತ



ವ್ಯಾಸರಾಯ ಬಲ್ಲಾಳ

ಆಕಾಶಕ್ಕೊಂದು ಕಂದೀಲು

ಸಂಗ್ರಹ:
ಮಣಿಮಾಲಿನಿ ಎ.ಕೆ.

ನಾನು ನಾನಲ್ಲ

೧: ನನ್ನದ್ದೇ ಒಂದು ಆತ್ಮಕಥೆ ಬರೆಯಬೇಕೆಂದು ನನಗೆ ತೋರಿದ್ದು ನಾನು ಯಾರು ಎಂಬ ಪ್ರಶ್ನೆ ನನ್ನನ್ನು ಕಾಡತೊಡಗಿದಾಗ. ನನ್ನ ಜೀವನದುದ್ದಕ್ಕೂ ನೀನು ಯಾರು ಎಂದು ನನ್ನನ್ನು ಕೇಳಿದವರಂತೆ ನೀವಾದರೂ ಕೇಳುತ್ತೀರೆಂದು ನನಗೆ ಗೊತ್ತು. ನಾನು ಯಾರೆಂದು ಹೇಳಲೇಬೇಕಾದಾಗ ನನಗೇ ಅರ್ಥವಾಗದ ನನ್ನ ಹೆಸರನ್ನು ಹೇಳಿದ್ದಿದೆ. ಆದರೆ ನನ್ನ ಹೆಸರಿಗೂ ನನಗೂ ಸಂಬಂಧವೇ ಇಲ್ಲವೆನ್ನುವ ಭಾವನೆಯನ್ನು ಇದಿರಿಸುತ್ತಲೇ ನಾನು ಬದುಕಬೇಕಾಗಿ ಬಂದಿದೆ. ಹೆಸರಿಗೂ ನನಗೂ ಸಂಬಂಧವನ್ನು ಸ್ಥಾಪಿಸುವ, ಉಳಿಸುವ, ಬೆಳೆಸುವ ಹೆಸರನ್ನು ನನ್ನ ಮನಸ್ಸಿಗೆ ಹೊಂದಿಸುವ ಕಾರ್ಯದಲ್ಲಿ ನಾನು ಜೀವನದುದ್ದಕ್ಕೂ ಓಡಿದ್ದೇನೆಯೇ? ನನ್ನ ಹೆಸರು ನಾನಾಗುವುದಿದೆಯೇ?

೨: ವಾರದ ಕೆಲಸದ ಮಜೂರಿಯ ಬಟವಾಡೆಗೆಂದು ನಮ್ಮ ಮುಕಾದಮ್ ನನ್ನನ್ನ 'ಸುಲೇಮಾನ್' ಎಂದು ಕರೆದು ಹತ್ತರ ಹೊಸ ಹೊಸ ನೋಟುಗಳನ್ನು ನನ್ನ ಕೈಗೆ ದಾಟಿಸಿದಾಗ ನನ್ನ ಹೆಸರಿಗೂ ಆ ನೋಟುಗಳಿಗೂ ಇರುವ ಸಂಬಂಧವನ್ನು ನೆನೆಸಿ ಖುಷಿಯಾಗುತ್ತಿತ್ತು. ಒಂದು ವಾರಕಾಲ ಗಿರಣಿಯ ಇದಿರು, ಪಾನ್‌ವಾಲಾನ ಬಳಿ, ಕಿರಾಣಿ ದುಕಾನ್‌ದ ಸಮೀಪ ನಾನು ಸುಲೇಮಾನ್ ಅಲ್ಲ ಎನ್ನುವಂತೆ ತಲೆ ಮರೆಸಿಕೊಂಡು ಹೋಗಬೇಕಾದ ಕಷ್ಟವಿರದೆ, ಈ ನೋಟುಗಳ ಕಟ್ಟು ನನ್ನ ಹೆಸರಿಗೂ ಗೌರವ ಕೊಡುವ ಸಂಪಾದನೆಯಾಗಿ ನನ್ನ ಮತ್ತು ನನ್ನ ಫರೀದಾಳ ಸುಖದ ಸುಲೇಮಾನ್ ಕಟ್ಟೆಂದೆ ತೋರುತ್ತಿತ್ತು.

ನೋಡಿ...

ಒಮ್ಮೆ ಊರ್ಧ್ವಮುಖವಾಗಿ ಮೇಲೆ ಮೇಲೆ ಹೋಗುತ್ತಿದ್ದ ಕ್ರೇನ್‌ನಲ್ಲಿದ್ದೆ... ಅದರ ಕೊಕ್ಕೆ ಹಿಡಿದಿದ್ದುದು ಒಂದು ಸರಪಳಿಯ ಪಂಜರ. ಬದಿಯಲ್ಲಿ ಕೆಳಗೆ ಕಾಣುತ್ತಿದ್ದುದು ಅರಬೀ ಸಮುದ್ರ. ಮೇಲೆ ಆಕಾಶ. ನಾನು ಹಾಡತೊಡಗಿದ್ದೆ. ಯಾವ ಹಾಡೋ ನನಗೆ ಸರಿಯಾಗಿ ನೆನಪಿಲ್ಲ. ಹಿಂದೆ ಯಾವತ್ತೋ ಕೇಳಿದ್ದ ಹಾಡಿನ ತುಣುಕು

ಮನಸ್ಸಿನಲ್ಲಿ ಉಳಿದಿತ್ತು. ಕೆಳಗೆ ಕೆಲಸ ಮಾಡುತ್ತಿರುವವರೆಲ್ಲ ಕಾಣುತ್ತಿರುವುದು ಇರುವೆಗಳಂತೆ. ಮೇಲೆ ನಾನು ಆಕಾಶದಲ್ಲಿ ಹಕ್ಕಿಯಂತೆ, ಕೆಳಗೆ ನನ್ನ ಫರೀದಾ ಇರುವೆಯಂತೆ. ಕೆಳಗೆ ಇರುವ ಕೆಲಸಗಾರರಲ್ಲಿ ನನಗೆ ನೆನಪಾಗುತ್ತಿದ್ದುದು ಫರೀದಾ ಮಾತ್ರ... ಕೆಳಗೆ ಇನ್ನೂ ಯಾರೆಲ್ಲ ಇದ್ದಾರೆ. ಅವರ ಹೆಸರುಗಳೆಲ್ಲ ನನಗೇನು ಗೊತ್ತು... ಎಲ್ಲರಿಗೂ ಏನೇನೋ ಹೆಸರುಗಳಿವೆ. ಈ ಹೆಸರುಗಳೆಲ್ಲ ಇಲ್ಲವಾಗಿ ನನಗೆ ಅವರು ಕಾಣುತ್ತಿರುವುದು ಇರುವೆಗಳಂತೆ...

ಇದ್ದಕ್ಕಿದ್ದಂತೆ, ನಮ್ಮ ಮುತ್ತಯ್ಯ ನನ್ನನ್ನು 'ಮಾದರ್ ಭೋದ್' ಎಂದು ಕರೆದಿದ್ದ. ನಾನು ಆಗ ಒಮ್ಮೆಗೇ ಹಾಡು ನಿಲ್ಲಿಸಿದ್ದೆ... ಮತ್ತೆ ಕೆಳಗೆ ನೋಡಿ ನನ್ನ ಹಟ್ಟಿಯ ನೆನಪಿನ ಜೊತೆಗೇ ಫರೀದಾಳ ಉಬ್ಬಿದ ಮೊಲೆಗಳ ನೆನಪು ಬಂದಾಗ ನಾನು ಸುಲೇಮಾನ್.... ಸುಲೇಮಾನ್ ಮಾದರ್ ಭೋದ್... ಮಾದರ್ ಭೋದ್ ಸುಲೇಮಾನ್ ಎನ್ನಿಸಿತ್ತು...

೩: ನಾನು ಧಾರಾವಿಯ ನನ್ನ ಜೋಪಡಿಯಲ್ಲಿ ಮಧ್ಯಾಹ್ನದ ಹೊತ್ತು ಮಲಗಿದ್ದೆ... ಒಬ್ಬನೇ... ಹಿಂದಿನ ದಿನ ಕೆಲಸದಲ್ಲಿದ್ದಾಗಲೇ ಬಿದ್ದು ಕೈಗಂಟನ್ನು ಮುರಿದುಕೊಂಡುದರಿಂದ ಮುನ್ಸಿಪಾಲ್ಟಿ ಆಸ್ಪತ್ರೆಯಲ್ಲಿ ಪಟ್ಟಿ ಕಟ್ಟಿಸಿಕೊಂಡು ಬಂದಿದ್ದೆ. ಅಲ್ಲಿ ಡಾಕ್ಟರ್ ಕೂಡಾ ಹೆಸರು ಕೇಳಿದ್ದ. "ಆರ್ಮುಗಂ" ಎಂದಿದ್ದೆ, ಅಷ್ಟೇನೂ ಉತ್ಸಾಹವಿರದೆ, ನೋವೂ ತಿನ್ನುತ್ತಾ. ನಾನು ಕೊಟ್ಟುದು ಆತ ಬೇಡಿದ ಅರ್ಧ ಹಣವೆಂದು ತನ್ನ ಕೆಲಸವನ್ನೂ ಅರ್ಧವೇ ಮಾಡಿದ್ದ. ಅವನು ಕಟ್ಟಿದ ಕಟ್ಟು ಸರಿಯಾಗಿರಲಿಲ್ಲ. ನನ್ನ ಕೈಯ ನೋವು ನಿಂತಿರಲಿಲ್ಲ. ಇಂಥ ಸ್ಥಿತಿಯಲ್ಲಿ ನನಗೆ ಹೊರಗಡೆ ಹೋಗಬೇಕೆಂದು ತೋರಿತ್ತು. ನೋವಿದ್ದರೂ ಎದ್ದು ಹೊರಟೇಬಿಟ್ಟೆ... ಬಾಂದ್ರಾ ಕ್ರೀಕ್‌ನ ಕಡೆ ಸರಿಯಾಗಿದ್ದ ಕೈಯಲ್ಲಿ ಹಿಡಿದಿದ್ದ ಒಂದು ತಟ್ಟೆಯಲ್ಲಿ ಅರ್ಧ ತಟ್ಟೆ ನೀರು... ನನ್ನ ಸಂಡಾಸ್ ಕೆಲಸ ಮುಗಿಸುತ್ತಿದ್ದಾಗ ನನಗೆ ನನ್ನ ನೋವೆಲ್ಲ ಮರೆತು ಹೋಗಿತ್ತು... ಈಗ ನಾನು ಆಕಾಶವನ್ನು ನೋಡುತ್ತಿದ್ದೆ. ಹಕ್ಕಿಗಳು ಗುಂಪಾಗಿ ಹಾರುತ್ತಿರುವುದನ್ನು ನೋಡುತ್ತಾ ನನಗೆ ಅನಿಸಿದ್ದೆಂದರೆ ಯಾವ ಹೆಸರನ್ನೂ ಕೊಟ್ಟರೂ ಅವು ಪಕ್ಷಿಗಳೆಂದೇ...

೪: ನಾನು ಕ್ರೀಡಾಂಗಣದಲ್ಲಿ, ಆಟಗಳಲ್ಲಿ, ಓಟಗಳಲ್ಲಿ ನನ್ನ ಬೆನ್ನ ಹಿಂದಿನ ಸಂಖ್ಯೆಯಾಗುತ್ತೇನೆ. ತೀರಾ ಅಪರಿಚಿತ ಪ್ರೇಕ್ಷಕ ಸಮುದಾಯಕ್ಕೂ ನನ್ನ ಪ್ರತಿಭೆಯನ್ನು ಮೆರೆಸುವ ಸಂಖ್ಯೆಯಾಗುತ್ತೇನೆ. ಅವರ ಸಂತೋಷವೇ ನನ್ನ ಸಂತೋಷವಾಗಿದ್ದ ಸಂದರ್ಭಗಳಲ್ಲಿ ನನ್ನ ಹೆಸರು ನನಗೂ ಅಮುಖ್ಯವೆನಿಸುವುದಿದೆ.

ಎರಡು ದಿನಗಳು ಉಪವಾಸವಿದ್ದುದರಿಂದ, ನಾನು ಪಶ್ಚಿಮ ರೈಲ್ವೆಯ ತುಂಬಿದ ಗಾಡಿಯಲ್ಲಿ ಪಿಕ್‌ಪಾಕೆಟ್ ಮಾಡಿ ಸಿಕ್ಕಿಬಿದ್ದೆ. ಎಲ್ಲರಿಗೂ ನಾನು ಆಗ ಕಳ್ಳ. ಸಿಗಬಹುದೆಂದು ನಿರೀಕ್ಷಿಸಿದ್ದ ಹಣದ ಬದಲಿಗೆ ನನಗೆ ಸಿಕ್ಕಿದ್ದು ಆರ್ಥರ್ ಜೈಲಿನೊಳಗೆ ಪ್ರವೇಶ, ಆಮೇಲೆ ನಾನು ತೊಟ್ಟ ಅಂಗಿಯಿಂದ ನಾನು 'ಏಕ್ ಸೌ ಬಾವನ್' (೧೫೨) ಆದೆ. ಆ ಅಂಗಿ ತೊಡಬೇಕಾಗಿದ್ದಷ್ಟು ಕಾಲ ನಾನು ಏಕ್ ಸೌ ಬಾವನ್.. ರುಕ್ಕು ಪಾಟೀಲ್ ಅಲ್ಲ.... ಹೆಸರು ಪರಿಚಯಿಸುವುದು ಏನನ್ನು ಎಂಬ ತೊಡಕಿನ ಪ್ರಶ್ನೆಯಷ್ಟೇ ಇದು ಮುಂದೆ ತರುವಾಗ ನನ್ನನ್ನು ಯಾರೆಂದು ಹೇಗೆ ಗುರುತಿಸಿಕೊಳ್ಳಬೇಕು ಎನ್ನುವುದು ಸಮಸ್ಯೆಯಾಗುತ್ತದೆ.

೫: ಒಮ್ಮೆ ದಿಲ್ಲಿಯಿಂದ ಚಂದೀಗಡ್ ಹಾದು ಅಮೃತಸರದ ಬಳಿ ನಮ್ಮ ಕಂಪೆನಿ ನಿರ್ಮಾಣ ಮಾಡುತ್ತಿದ್ದ ಒಂದು ಕೂಲಿಂಗ್ ಟವರ್‌ನ ಕೆಲಸದ ಪ್ರಗತಿಯ ಪರೀಕ್ಷೆಗೆಂದು ಪಂಜಾಬ್ ರೋಡ್‌ವೇಸ್‌ನ ಸುಖಾಸೀನ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದೆ. ಬಸ್ಸು ತನ್ನ ನಿರ್ಧಾರಿತ ಗತಿಯಲ್ಲಿ ಮುಂದುವರಿಯುತ್ತಿದ್ದಾಗ, ಮುಂದಿನ ಸೀಟಿನಲ್ಲಿ ಕುಳಿತವನೊಬ್ಬನು ಎದ್ದು ನಿಂತಿದ್ದ. ಅವನ ಹಿಂದೆಯೇ ಇನ್ನಿಬ್ಬರು ಎದ್ದರು. ಮೊದಲು ಎದ್ದಾತನ ನಿಲುವಂಗಿಯಿಂದ ಒಂದು ರೈಫಲ್ ಹೊರಗೆ ಬಂತು. ಅದರ ತುದಿಯನ್ನು ಆತ ಡ್ರೈವರನ ಬೆನ್ನಿಗೆ ತಗಲುವಂತೆ ಹಿಡಿದು ಒದರಿಕೊಂಡ, "ರೋಕೋ". ಬಸ್ಸು ಒಮ್ಮೆಗೇ ನಿಲ್ಲು

ವಂತಾಯಿತು. ಆಗ ಒಮ್ಮಿಂದೊಮ್ಮೆಗೆ ನನಗೆ, ಸುಹಾಸ್ ಗುಪ್ತಾ, ಎಂ. ಟೆಕ್.ಗೆ ಒಮ್ಮಿಂದೊಮ್ಮೆಗೆ ಹೊಕ್ಕುಳಿಂದ ಹೊರಟು ಎದೆಯೊಳಗೆ ಬಂದಂಥ ನಡುಕದ ಅನುಭವ... ಬಸ್ಸಿನಲ್ಲಿದ್ದ ಎಲ್ಲರಿಗೆ ಈ ಭಯದ ನಡುಕ ಒಂದೇ ರೀತಿಯದಾಗಿತ್ತು.

ರೈಫಲ್ ಹಿಡಿದವನ ಆಜ್ಞೆಯಂತೆ, ಸೀಖರಲ್ಲದ ಎಲ್ಲರೂ ಕೆಳಗಿಳಿಯತೊಡಗಿದಾಗ ನಾನೂ ಇಳಿದೆ. ಆ ಕ್ಷಣದಲ್ಲಿ ನನಗನಿಸಿದ್ದು ನಾನಿನ್ನು ಮರಣಕ್ಕೆ ಸಿದ್ಧನಾಗಬೇಕು ಎಂದು. ನನಗೆ ವಾಸ್ತವವಾಗಿ ನನ್ನ ರತಿಯ, ಮಕ್ಕಳು ಶ್ಯಾಮ್ ಮತ್ತು ಇಂದ್ರಜಿತ್‌ರ, ನನ್ನ ಅಮ್ಮನ ನೆನಪಾಗಬೇಕಿತ್ತು. ಆದರೆ ನನಗೆ ಆ ಗಳಿಗೆಯಲ್ಲಿ ಯಾರ ನೆನಪೂ ಬರುತ್ತಿರಲಿಲ್ಲ. ಭಯದಲ್ಲಿ ಮೈಯೆಲ್ಲ ಅದುರುತ್ತಿದ್ದಾಗ ನಾನು ಯೋಚಿಸುತ್ತಿದ್ದುದು ಮರಣದ ಕುರಿತೆ... ಅನುಭವಿಸುತ್ತಿದ್ದುದು ಸಾವಿನ ಭಯವನ್ನೇ.... ಈ ಭಯವೆ ಬೆನ್ನಟ್ಟಿದಂತೆ ಬದುಕಿಗಾಗಿ ಓಡಿದ್ದೆ....

ಒಂದರ್ಧ ತಾಸಿನಲ್ಲಿ ನಾನು ಹೆಸರನ್ನೆ ಮರೆಸುವ ಭಯವನ್ನು ತಂದುಕೊಳ್ಳಬೇಕಾದ ಹೆಸರಿಲ್ಲದವನಾಗಿದ್ದೆ. ಆ ಭಯದಲ್ಲಿ ಜೀವನದ ಎಲ್ಲ ಸಂಬಂಧಗಳನ್ನೂ ಕೊನೆಗೊಳಿಸುವ ಮರಣದ ದಾರಿ ಕಾಯುತ್ತಿದ್ದಾಗ ಹಿಂದೂ ಆಗಿದ್ದೆ, ಅಲ್ಲಿಂದ ಬದುಕಿ ಉಳಿದು ಓಡುತ್ತಿದ್ದಾಗ ನನ್ನಿಂದ ಮರೆಯಾಗುತ್ತಿದ್ದ ಜೀವನವನ್ನು ಮತ್ತೆ ಗಳಿಸಿಕೊಂಡ, ಬದುಕಲೇ ಬೇಕು ಎಂದು ಓಡುತ್ತಿದ್ದ ಸುಹಾಸ್ ಗುಪ್ತಾ ಆಗಿದ್ದೆ.

ಹುಟ್ಟಿನಂದಿನಿಂದ ಮರಣದ ಭಯವನ್ನು ಎದೆಯೊಳಗಿರಿಸಿಕೊಂಡೇ ಎಲ್ಲ ಸಂಬಂಧಗಳನ್ನು ರೂಪಿಸಿಕೊಳ್ಳುವ ನಾನು ಯಾರು?

೬: ನಾನು ಪತ್ರಿಕೋದ್ಯಮವನ್ನು ಆಶ್ರಯಿಸಿದ್ದು ಬದುಕಿನ ಎಲ್ಲ ಮುಖಗಳನ್ನು ಅಭ್ಯಸಿಸುವ ಅವಕಾಶ ಅಲ್ಲಿದೆಯೆಂದು. ಆದರೆ ಅಲ್ಲಿಂದ ಹೊರಬಂದದ್ದು ನನ್ನ ಹೆಸರು, ಪದವಿ, ಉದ್ಯಮಾಸಕ್ತಿ- ಇವೆಲ್ಲ ನಾನು ಯಾರೆಂಬುದನ್ನೇ ಸರಿಯಾಗಿ ತಿಳಿದುಕೊಳ್ಳಲು ಸಹಾಯ ಮಾಡದಿರುವಾಗ ನಾನು ಬದುಕನ್ನು ಹೇಗೆ ಅರ್ಥಮಾಡಿಕೊಂಡೇನು ಎಂಬ ಸಂದೇಹದಿಂದ.

ನಾನು ಮೊದಲನೆಯ ವರ್ಗದೊಂದಿಗೆ ಆಂಗ್ಲ ಭಾಷೆಯಲ್ಲಿ ಎಂ.ಎ. ಮಾಡಿದ್ದೆ. ಹೆಸರು ರೇವಣಕರ್. ನನ್ನ ಹೆಸರು, ವಿದ್ಯೆ, ಕೆಲಸಗಳನ್ನು ಹೊಂದಿಸುವ ಯೋಗ್ಯತೆ ನನ್ನಲ್ಲಿಲ್ಲವೆಂದು ಚೀಫ್ ರಿಪೋರ್ಟರ್ ಕಾಮತ್ ಹೇಳಿದಾಗ ನನಗೆ ನಾನು ಯಾರೆಂದು ಕಳವಳವಾಗಿತ್ತು. ಇವೆಲ್ಲವನ್ನು ಹೊಂದಿಸುವ ಯೋಗ್ಯತೆ ನನ್ನಲ್ಲಿದೆಯೆಂದು ತೋರಿಸಿಯೇ ಸಿದ್ಧವೆಂದು ನಾನು ಅಂದು ಸಂಜೆಯಾಗುವ ತನಕ ಕಾದು, ಮತ್ತೆ ಹೊರಟುದು ಫೋರಾಸ್ ರೋಡಿಗೆ, ಫ್ಯಾಕ್ಟ್ಸ್ ಸಂಪಾದಿಸಲು.

... ಫೋರಾಸ್ ರೋಡಿನ ಪಂಜರದಲ್ಲಿರುವ ಹಕ್ಕಿಗಳೆಲ್ಲ ಸಂಜೆಗತ್ತಲಿನಲ್ಲಿ, ಕೆಂಪುಗತ್ತಲಿನಲ್ಲಿ ಬೇರೆಯೇ ಆಗಿ ಕಾಣುತ್ತಾರೆಯೇ.... ನನಗೆ ಬೇಕಾಗಿರುವುದು ಫ್ಯಾಕ್ಟ್ಸ್... ಈ ಸತ್ಯ ರಾತ್ರಿಗೆ ಬೇರೆ, ಹಗಲಿಗೆ ಬೇರೆಯೆ ಆಗುವಾಗ ಚೀಫ್ ರಿಪೋರ್ಟರ್ ಕಾಮತ್ ಯಾವುದನ್ನು ಆರಿಸಿಕೊಳ್ಳುತ್ತಾನೆ ಎಂದು ಯೋಚಿಸುತ್ತಿದ್ದಂತೆ, ನಾನು ಈ ಪಂಜರದ ಹಕ್ಕಿಗಳನ್ನು ಪಂಜರದಿಂದ ಬೇರ್ಪಡಿಸಿ ನೋಡಬೇಕಾದುದು ರಾತ್ರಿಗಲ್ಲ... ಹಗಲಿಗೆ ಎಂದು ತೋರಿ ಕಸಿವಿಸಿಯಾಯಿತು....

ಪಂಜರದಲ್ಲಿ ಬದುಕುವ ಒಬ್ಬಾಕೆ ಅಭಾಗಿನಿಯ ಕತೆಯನ್ನಾದರೂ ಉತ್ಪ್ರೇಕ್ಷೆಯಿಂದ ವರದಿ ಮಾಡುವ ಅವಕಾಶವನ್ನು ಯಾಕೆ ಕಳೆದುಕೊಳ್ಳಬೇಕು ಎಂದುಕೊಂಡೆ. ನಗುನಗುತ್ತ ಪಂಜರದ ಬಾಗಿಲು ಕಾಯುತ್ತಿದ್ದ ಒಬ್ಬಾಕೆ ಮಧ್ಯವಯಸ್ಸಿನ ಯುವತಿಯ ಕಡೆ ನೋಡಿ, ಪಂಜರದ ಒಳಹೊಕ್ಕೆ. ನಾನು ಒಳ ಹೋದಂತೆ, ಒಳಕೋಣೆಯ ಬಾಗಿಲಿನ ಬಟ್ಟೆಯ ಪರದೆಯು ಸರಿದುಕೊಂಡಿತು. ನಾನು ಪತ್ರಿಕೋದ್ಯಮಿಯಾಗಿ, ಫ್ಯಾಕ್ಟ್ಸ್ ಪರೀಕ್ಷಿಸತೊಡಗಿದೆ.

ನನ್ನ ದೃಷ್ಟಿ ಎತ್ತೆತ್ತಲೋ ಹೋಗುತ್ತಿದ್ದುದನ್ನು ಗಮನಿಸಿಯೇ ಎಂಬಂತೆ ನನಗೆ ಬಂತು ಪ್ರಶ್ನೆ....

"ಎಷ್ಟು ಕೊಡಬೇಕಾಗುತ್ತೆ ಗೊತ್ತಾ?"

"......."

ಫ್ಯಾಕ್ಟ್ಸ್ ಸಂಪಾದಿಸಲು ಬೇರೆ ದಾರಿಯೇ ಇಲ್ಲ

ವೆಂದುಕೊಂಡು ನಾನು ಪರ್ಸಿನಿಂದ ಇಪ್ಪತ್ತೈದು ರೂಪಾಯಿ ತೆಗೆದು ಆಕೆಯ ಕೈಗೆ ತುರುಕಿಸುತ್ತಾ, "ನೋಡು, ಬೇರೇನೂ ಬೇಕಿಲ್ಲ, ನಾನು ಕೇಳುವ ಕೆಲವು ಪ್ರಶ್ನೆಗಳಿಗೆ ನೀನು ಉತ್ತರ ಕೊಟ್ಟರೆ ಸಾಕು" ಎಂದಿಷ್ಟೇ ಹೇಳಿದೆ.

ನಾನು ಕೇಳಿದ ಪ್ರಶ್ನೆಗಳಿಗೆ ನಂಬಲು ಸಾಧ್ಯವಾಗದಂಥ ಉತ್ತರಗಳು... ಫ್ಯಾಕ್ಟ್‌ಗಳು... "ಗಂಡನಿಗೆ ದುಡ್ಡು ಕಳುಹಿಸುತ್ತಿದ್ದೇನೆ. ಅವನಿಗೆ ತೆಂಗಿನ ಮರ ಇಡಿಸಿ ಕೊಟ್ಟಿದ್ದೇನೆ. ಹೊಸಮನೆ ಕಟ್ಟಿಸಿಕೊಟ್ಟಿದ್ದೇನೆ. ಅವನು ಆರಾಮವಾಗಿ ತಿಂದುಂಡು ಇದ್ದಾನೆ" ಎನ್ನುವ ನಿರಾಳ.... ನಾನು ಸಂದರ್ಶಿಸಿದ್ದು ಯಾರನ್ನು, ಯಾವ ಕಾರಣಕ್ಕಾಗಿ ಎಂಬ ಸಂದೇಹ ಮಾಯವಾಗದ ಈ ಸಂದರ್ಶನಕ್ಕೂ ನನಗೂ ಇರುವ ಸಂಬಂಧ ನಾನು ಪತ್ರಿಕೋದ್ಯಮಿ ಎಂದಷ್ಟೇ.....

"ಸೂಳೆಗಾರಿಕೆ ಆರ್ಥಿಕ ನೆಮ್ಮದಿಗೆ ದಾರಿ" ಎನ್ನುವ ಶೀರ್ಷಿಕೆಯಡಿ ಒಂದು ವರದಿಯನ್ನು ತಯಾರಿಸಿ ಕಾಮತ್‌ಗೆ ಒಪ್ಪಿಸಿದೆ. ಪರಿಣಾಮವಾಗಿ ನನ್ನ ಕೆಲಸವನ್ನು ಕಳೆದುಕೊಂಡೆ.

ನಾನು ನನ್ನ ಹೆಸರಿನಂತೆ, ರೇವಣಕರ್ ಆಗಿ ಫೋರಾಸ್ ರೋಡಿನ ಸೂಳೆಗೇರಿಗೆ ಸಂದರ್ಶನಕ್ಕೆಂದು ಹೋಗುತ್ತೇನೆ ಎಂದಿದ್ದರೆ ನನ್ನ ಉದ್ದೇಶಕ್ಕೂ ನನಗೂ ಸಂಬಂಧವಿಲ್ಲವೆಂದೇ ಎಲ್ಲರೂ ತಿಳಿಯುತ್ತಿದ್ದರೂ, ಹಾಗಾದರೆ, ಎಷ್ಟೋ ಸಂದರ್ಭಗಳಲ್ಲಿ ನಾನು ನಾನಲ್ಲವೆಂದು ತಿಳಿಯಲ್ಪಡುವ ನಾನು ನಿಜವಾಗಿ ನಾನಾಗುವುದು ಯಾವಾಗ?

೭: ನಾನು ಲೋಹಶಾಸ್ತ್ರದಲ್ಲಿ ಎಂ.ಟೆಕ್. ಮಾಡಿದ್ದೆ. 'ವೆಲ್ಡಿಂಗ್ ಟೆಕ್ನಾಲಜಿ'ಯಲ್ಲಿ ವಿಶೇಷ ಪ್ರಾವೀಣ್ಯವನ್ನು ಸಂಪಾದಿಸಿದ್ದೆ. ಬದುಕನ್ನು ಕಟ್ಟುವ ಕಾಯಕದಲ್ಲಿ ಅಪರಿಮಿತ ವಿಶ್ವಾಸವಿದ್ದ ನನಗೆ, ಎಲ್ಲವನ್ನೂ, ಎಲ್ಲರನ್ನೂ ಗುರುತಿಸುವ ಶಕ್ತಿಯಿದೆಯೆಂದು ತಿಳಿದಿದ್ದ ನನಗೆ ನನ್ನ ರೀಮಾ, "ನೀನು ಯಾರು?" ಎಂದು ಕೇಳಿದ ಪ್ರಶ್ನೆಗೆ ಉತ್ತರಿಸಲಾಗದೆ ಹೋದದ್ದು ಹೇಗೆ?

ಐವತ್ತು ಲಕ್ಷಗಳನ್ನು ಸುರಿದು ಸಜ್ಜುಗೊಳಿಸಿದ ಮನೆ.... ಅದರಿಂದ ದೂರ ಓಡಬೇಕೆನ್ನುವ ಮನಸೇಕಾಗುತ್ತಿದೆಯೆನ್ನುವ ಕಳವಳ ಈಗ ನಿತ್ಯದ್ದಾಗಿದೆ. ಈ ಮನೆಯನ್ನು ತುಂಬಬೇಕಾದ ಇಬ್ಬರು ಮಕ್ಕಳೂ ಪಂಚಗಣಿಯ ಶಾಲೆಯಲ್ಲಿ.... ಆಫೀಸಿಗೆ ಹೋದಾಗ, ಒಂದು ಉತ್ಪಾದನೆಯ ಪುಂಜದ ಪ್ರಭು ನಾನೆಂಬ ಅಹಂಕಾರ ಕಾಡುವಾಗ, ನಾನು, ನರೇಂದ್ರ ಪ್ರಧಾನ್ ಅದರ ಸಂಚಾಲಕ ಶಕ್ತಿಯಾಗುತ್ತೇನೆ. ಆದರೆ ಸಂಜೆ ಮನೆಗೆ ಮರಳುವಾಗ, ರೀಮಾ ಎಂದಂತೆ, ನಾನು ಉಗುಳಬೇಕಾದ ಹುಳು... ತಂದೆ ತಾಯಂದಿರ ವಿಚಾರಗಳನ್ನು ಧಿಕ್ಕರಿಸಿಯೂ ನನ್ನ ಕೈಹಿಡಿದು, "ಐ ನೋ ಯು ನರೇನ್... ನೀನು ಜತೆಗಿದ್ದರೆ ಇಡಿಯ ಜಗತ್ತನ್ನೆ ಧಿಕ್ಕರಿಸಿಯೇನು" ಎಂದ ರೀಮಾ ಹತ್ತು ವರ್ಷಗಳ ಬಳಿಕ 'ನರೇನ್, ನೀನು ಬರೇ ಹುಳು' ಎನ್ನುವ ಸಂದರ್ಭ ಏಕೆ ಬಂತು? ನಾನು ಯಾರು? ರೀಮಾ ಯಾರು? ಎಂಬ ಪ್ರಶ್ನೆಯು ಮತ್ತೆ ಕಳವಳವನ್ನು ಉಂಟು ಮಾಡುತ್ತದೆ.

ಅಂದರೆ ನಾನು ಬದಲಿದ್ದೇನೆಯೇ? ಬದಲುತ್ತಲೇ ಇರುವ ನಾನು ಯಾರು?

೮: ಎರಡು ಘಟನೆಗಳ ಅಂತರಕ್ಕೆ ಕಾಲ ಎನ್ನುತ್ತಾರೆ ಎಂದು ನಾನು ಕೇಳಿದ್ದೇನೆ. ಬದುಕಿನ ಎಲ್ಲ ಸಂವೇದನೆಗಳಿಗೆ ಸಮಾನ ರೀತಿಯಲ್ಲಿ ಸ್ಪಂದಿಸಬೇಕಾದ ಮನುಷ್ಯರ ಸ್ಪಂದಿಸುವಿಕೆಯಲ್ಲಿ ಕಾಣುವ ಅಂತರಕ್ಕೆ ಏನೆನ್ನಬೇಕು ಎಂಬ ಪ್ರಶ್ನೆ ಒಂದು ವಿಚಿತ್ರ ರೀತಿಯಲ್ಲಿ ನನ್ನನ್ನು ಕಾಡಿದಾಗಲೂ ನಾನು ಯೋಚಿಸಿದ್ದು ನಿಜವಾಗಿ ನಾನು ಯಾರು ಎಂದೇ.

ರಾವೋಳಿಯ ತಪ್ಪಲಲ್ಲಿ ನಾನು ಕಂಡ ಸಾಲುಗಟ್ಟಿ ನಿಂತೋ ಕುಳಿತೋ ಇದ್ದ ನೂರಾರು ಮನುಷ್ಯಾಕೃತಿಗಳು.... ಮಣ್ಣನ್ನೂ ಮಣ್ಣಿನ ಬಣ್ಣವನ್ನೂ ದೇಹಕ್ಕೆ ಲೇಪಿಸಿಕೊಂಡಂತಿದ್ದ ಬೂದು ಕಂದು ಬಣ್ಣದ ಅವರೆಲ್ಲ ಟ್ರಕ್ ಟ್ಯಾಂಕರುಗಳು ಹೊರಡಿಸುತ್ತಿದ್ದ ಹೊಗೆಯ ಪರಿಸರ ಮಾಲಿನ್ಯಕ್ಕೆ ಹೊಂದಿಕೊಳ್ಳುತ್ತಿದ್ದಾರೆಯೇ ಎಂಬ ಭೀತಿ ಮನಸ್ಸಿನಲ್ಲಿ ಬಲಿಯುತ್ತಿದ್ದಂತೆ ನನಗೆ ನೆನಪಾದದ್ದು ಬಾಚಿದಷ್ಟೂ ಕಡಮೆಯಾಗದ, ತುಂಡಾದರೂ ಜೀವದಿಂದ ಹೊರಳುವ ನಕ್ಕಳು ಹುಳುಗಳು. ಮನುಷ್ಯ ಮನುಷ್ಯರ ಅಂತರವನ್ನು ಯೋಚಿಸ

ಹೊರಟಾಗ ನನಗನಿಸಿದ್ದು ನಾನು ನಕ್ಕಳು ಹುಳು ವಲ್ಲ ಎಂದು. ಹಾಗಾದರೆ ನಾನು ಯಾರು?

ನೀನೂ ನೀನಲ್ಲ

ನಾನು ಯಾರೆಂದು ನನಗೆ ಸರಿಯಾಗಿ ತಿಳಿದಿಲ್ಲ ನಿಜ. ಆದರೆ ನನ್ನ ಮನಸಿನ ಗ್ರಹಿಕೆಯಲ್ಲಿ ನೀನು ಕಾಣದೆ ಇರುವಂತಿದ್ದರೆ ಯಾವ ಸಂಬಂಧವೂ ಹುಟ್ಟಿಕೊಳ್ಳುವುದಿಲ್ಲ. ಎಲ್ಲ ಸಂಬಂಧಗಳಿಗೂ ಮೂಲ ಕಾರಣ ನೀನು. ನಾನೂ-ನೀನೂ ಇರದ ಸಂಬಂಧಗಳನ್ನು ರೂಪಿಸಿಕೊಳ್ಳಲು ನನಗೆ ಸಾಧ್ಯ ವಾಗುವುದಿಲ್ಲ.

ನನ್ನ ಜೀವನದುದ್ದಕ್ಕೂ ಒಳಿತಿಗೂ ಕೆಡುಕಿಗೂ ನಾನು ನಿನ್ನನ್ನು ಅರಸಿಕೊಂಡೇ ಬಂದಿದ್ದೇನೆ. ಈ ಅರಸುವಿಕೆ ನಿನಗೂ ಬೇಕೆಂದು ನನಗೆ ಗೊತ್ತು. ಯಾಕೆಂದರೆ ನೀನೂ - ನಿನ್ನ ಗ್ರಹಿಕೆಯಲ್ಲಿ ನಾನೇ ಅಲ್ಲವೇ? ನಾನು ಹಾತೊರೆಯುತ್ತಿರುವುದೇ ಈ ಐಕ್ಯದ ಬೆಸುಗೆಗಲ್ಲವೆ?

ನಾನು ಎಳೆಯವನಿದ್ದಾಗಿನ ನೆನಪುಗಳು... ಸತ್ತ ಹಿರಿಯರ ನೆನಪಿನ ಶ್ರಾದ್ಧ ಮಾಡುತ್ತಿದ್ದಾಗ ಅನ್ನದ ಪಿಂಡ ಮಾಡಿ, ಕೊನೆಗೆ ಕಾಗೆಗಳು ತಿನ್ನಲೆಂದು ಅವನ್ನು ಅಂಗಳದಲ್ಲಿಡುತ್ತಿದ್ದರು. ಕಾಗೆಗಳು ಅವನ್ನು ಕುಕ್ಕಿ ಕುಕ್ಕಿ ತಿನ್ನುವುದನ್ನು ನೋಡುವುದು ತುಂಬ ಇಷ್ಟವಾಗುತ್ತಿತ್ತು. ಆದುದರಿಂದಲೇ ನಾನು ಕಾಗೆಯೊಂದಕ್ಕೆ ದಿನವೂ ಅನ್ನ ಹಾಕಿ ಅದರೊಡನೆ ಘನಿಷ್ಠ ಸಂಬಂಧವನ್ನು ಸ್ಥಾಪಿಸಿಕೊಂಡಿದ್ದೆ.... ಮಾತನಾಡದೆಯೇ ಹತ್ತಿರ ಬಂದ ಆ ಕಾಗೆಯ ಸಂಬಂಧ ಕಡಿದಾಗ ಅಜ್ಜನ ಸಂಪರ್ಕವೇ ಕಡಿದಂತೆ ಭಾಸವಾಗಿತ್ತು. ಹೀಗೆ ನಾನು ಕಳೆದು ಕೊಂಡ ಸಂಬಂಧಗಳಲ್ಲೇ ನಾನು ನಿನ್ನನ್ನು ಗುರುತಿಸಿದ್ದು....

ನಾನು ನೀನು ಎಂಬ ದ್ವೈತ ಪರಿಚಯಿಸುವ ವಿಶ್ವ, ಸಂಬಂಧಗಳನ್ನು ಹುಟ್ಟು ಹಾಕುವ, ಕೆಡುಹುವ ರೀತಿ ನನಗೆ ವಿಸ್ಮಯವನ್ನುಂಟು ಮಾಡುತ್ತಿದ್ದುದು ನಿಜ. ಆದರೆ ಯಾವಾಗಿನಿಂದ ಎಂದು ನೆನಪಿಸಿ ಹೇಳಲು ನಾನು ಅಶಕ್ತ ಎನ್ನುವಂತೆ ನೀನು ನನ್ನ ಬದುಕಿನ ಅಂಗವಾಗಿ ಬಂದಿರುವುದು ನಿಜ.

ನಾನು ನಾನಾಗಿಯೆ ಇರಲು ಸಾಧ್ಯವಿಲ್ಲವೆಂದೆ ನೀನು.... ನೀನು ಬಂದಾಗ ಹುಟ್ಟಿಕೊಳ್ಳುವ ಸಂಬಂಧಗಳಿಗೆ ಆಕಾರ ಕೊಡುವುದು ಯಾರು ನೀನೇ ಅಥವಾ ನಾನೇ? ನಾನೇ.... ನೀನೇ.....

- ೨ -

ಮಾತು, ಮೌನಗಳೆರಡೂ ಸಂಬಂಧಗಳನ್ನು ಸೃಷ್ಟಿಸುತ್ತವೆಯೆಂಬುದು ನನಗೆ ತಿಳಿದಿಲ್ಲ. ನನ್ನವರು, ನನ್ನದು, ನನ್ನ ಎಂದರೇನೆಂದು ತಿಳಿಯದ ವಯಸ್ಸಿನಲ್ಲಿ ಎಲ್ಲ ಕಡೆಗೂ ಅದ್ಭುತಗಳನ್ನು, ವಿಸ್ಮಯಗಳನ್ನು ಕಾಣುತ್ತಿದ್ದೆ. ನಾನಿದ್ದುದು ಸಾಲಾಗಿ ಮನೆಗಳಿದ್ದ ಒಂದು ದೊಡ್ಡ ಕಟ್ಟಡದಲ್ಲಿ. ಒಂದೇ ಉದ್ದವಾದ ಬಾಲ್ಕನಿಯನ್ನು ಹಂಚಿಕೊಂಡ ಹತ್ತು ಮನೆಗಳಲ್ಲಿ ಎಲ್ಲ ಕಡೆಗೂ ನಾನು ಓಡಾಡುತ್ತಿದ್ದೆ. ಬಾಗಿಲು ತೆರೆದಿರುವ ಯಾವ ಮನೆಯ ಒಳಹೋಗಲೂ ನಾನು ಯಾರ ಪರವಾನಿಗೆಯನ್ನು ಕೇಳಬೇಕೆಂದು ಆಗ ನನಗನಿಸುತ್ತಿರಲಿಲ್ಲ. ಎಲ್ಲ ಸಮೂಹಸೂಚಕ ಶಬ್ದಗಳಲ್ಲಿ ನಾನು ಹತ್ತು ಮನೆಯವರನ್ನೂ ಗುರುತಿಸಲು ಶಕ್ತನಿದ್ದಾಗ ನನಗೆ ಯಾವ ಹೆಸರೂ ಬೇಕಾಗುತ್ತಿರಲಿಲ್ಲ. ಉದ್ದದ ಬಾಲ್ಕನಿಯಲ್ಲಿ ನಿಂತು ಅದರ ಸರಳಿನ ದಂಡೆಯಿಂದ ಹೊರಗೆ ನೋಡುತ್ತಿದ್ದಾಗ ಕಾಣುತ್ತಿದ್ದ ಜಗತ್ತನ್ನು ಗುರುತಿಸಲು ನನಗೆ ಹೆಸರು ಬೇಕಾಗುತ್ತಿರಲಿಲ್ಲ. ನಾನು ಬೀದಿಯಲ್ಲಿ ನಡೆದು ಹೋಗುತ್ತಿದ್ದ ಸಂದರ್ಭಗಳಲ್ಲಿ ಹೇರ್‌ಕಟ್‌ವಾಲಾ, ದೂದ್‌ವಾಲಾ, ಚಣಾವಾಲಾ ಎಂದು ಗುರುತಿಸುವ ಖುಷಿ ಇರುವಾಗ ಹೆಸರಿನ ಗೊಡವೆಯೇ ನನಗೆ ಇರುತ್ತಿರಲಿಲ್ಲ.

ಈ ಹತ್ತು ಮನೆಗಳಲ್ಲಿ ಒಂದರಲ್ಲಿ ಬಿಳಿಕಣ್ಣಿನ ಮಾಮಿ ಒಬ್ಬರಿದ್ದರು. ನನ್ನನ್ನು ಬಹಳ ಮುದ್ದು ಮಾಡುತ್ತಿದ್ದರು. ಆ ಮಾಮಿಯ ಮನೆಯಲ್ಲಿ ಯಾವ ಮಗುವೂ ಇರಲಿಲ್ಲ. ನಾನು ಅಲ್ಲಿಗೆ ಹೋಗದ ದಿನವಿರಲಿಲ್ಲ. ಹೋಗುವ ಮೊದಲು ಅಲ್ಲಿ ಮಾಮ ಇಲ್ಲವೆಂದು ಖಚಿತ ಮಾಡಿಕೊಂಡೇ ಹೋಗುತ್ತಿದ್ದೆ. ಆ ಮಾಮ ಸದಾ ಮೌನವಾಗಿಯೇ ಇರುತ್ತಿದ್ದರು. ಆ ಮೌನ ಸೃಷ್ಟಿಸುತ್ತಿದ್ದ ಭಯದಿಂದಾಗಿಯೇ ನಾನು ಅವರಿದ್ದಾಗ ಒಳ ಹೋಗಲು

ಅನುಮಾನಿಸುತ್ತಿದ್ದೆ. ಅವರ ಟಿ.ವಿ.ಯ ಮೇಲಿದ್ದ ತಾಳ ಹೊಡೆಯುವ ಮಂಗ ನನಗೆ ತುಂಬ ಬೇಕಾಗಿತ್ತು. ಅದನ್ನು ಪಡೆಯುವ ಪ್ರಯತ್ನದಲ್ಲಿ ಅದನ್ನು ಕೆಳಗೆ ಬೀಳಿಸಿ ತುಂಡು ಮಾಡಿದಾಗಲೂ ಮಾಮಿ 'ಎಷ್ಟು ತುಂಟನೋ ನೀನು' ಎಂದು ಎತ್ತಿಕೊಂಡು ಮುದ್ದು ಮಾಡಿದ್ದರು.... ಅಂಥ ಮಾಮಿ, ನನಗೆ ತುಂಬ ಪ್ರಿಯರಾಗಿದ್ದ ಮಾಮಿ ಒಂದು ದಿನ ಕೋಣೆಯ ನಡುವಿನ ಫ್ಯಾನ್ ಹಿಡಿದು ನೇತಾಡಿದ್ದರು. ಇಲ್ಲವಾಗಿದ್ದರು. ಯಾವ ಮಾಮಿ? ಯಾರು ಮಾಮಿ?

- ೩ -

ಮಾತು- ಮೌನ ಎರಡರನ್ನೂ ಮೀರಿದ ಪರಿಸರದಲ್ಲಿ ಹುಟ್ಟಿಕೊಳ್ಳಬಹುದಾದ ಯಾವುದೇ ರೀತಿಯ ಸಂಬಂಧದಲ್ಲಿ ನಾನು ನೀನು ಎರಡೂ ಅಮುಖ್ಯವೇ ಎಂಬುದು ನನಗಿನ್ನೂ ತಿಳಿದಿಲ್ಲ. ಮಾತು ಧ್ವನಿಸದ ಸಂಬಂಧವೂ ಅದೇ ಮಾತಿನಲ್ಲಿ ಹುಟ್ಟಿಕೊಳ್ಳುವುದೂ ಸಾಧ್ಯ. ಮೌನದಲ್ಲಿ ಮಾತಿನ ಆಕಾರ ಮೂಡುವುದೂ ಸಾಧ್ಯ. ಅಲ್ಲವೇ?

ಸದ್ದಿನಲ್ಲಿ ಸ್ವರೂಪವನ್ನು ಗ್ರಹಿಸಬಹುದಾದ ದೊಡ್ಡ ಶಹರ ಮುಂಬಯಿಯ, ಒಂದು ಪ್ರತಿಷ್ಠಿತ ಅಪಾರ್ಟ್‌ಮೆಂಟಿನಲ್ಲಿ ನಾನಿದ್ದೆ. ಮಮ್ಮಿ ನನ್ನ ಕೋಣೆಗೆ ಬರುತ್ತಿದ್ದುದು ತೀರ ಅಪರೂಪವಾಗಿ... ನನ್ನ ಕೋಣೆಯಲ್ಲಿ ಯಾವಾಗಲೂ ಇರುತ್ತಿದ್ದುದು ಆಯಾ ಲಕ್ಷ್ಮೀ. ಆಕೆಯ ಮಾತಿಗಿಂತಲೂ ಆಕೆಯ ಚಲನವಲನ ಹಾವಭಾವಗಳು ನನಗೆ ಚೆನ್ನಾಗಿ ಅರ್ಥವಾಗುತ್ತಿದ್ದುವು. ನನ್ನ ಎಲ್ಲ ಚಟುವಟಿಕೆಗಳೂ ಪೂರ್ವಭಾವಿಯಾಗಿ ನಿರ್ಧರಿತವಾದವುಗಳೇ ಎಂಬುದೂ ನನಗೆ ಗೊತ್ತು. ಹಾಗೆಯೇ ಅವಳು "ನವ್ ಇಟ್ ಈಸ್ ಟೈಂ ಫಾರ್...." ಎಂದಾಗ ನಾನೇ ಮುಂದಿನದನ್ನು ಊಹಿಸಿಬಿಡುತ್ತಿದ್ದೆ.

ಡ್ಯಾಡಿ ನನ್ನೊಡನೆ ಮಾತನಾಡುತ್ತಿದ್ದುದು ತುಂಬ ಕಡಮೆ. ನನ್ನ ಊಟವೋ, ತಿಂಡಿಯೋ ಮುಗಿದ ಕ್ಷಣವೇ ನಾನು ನನ್ನ ಕೋಣೆಗೆ ಹೊರಟು ಹೋಗಬೇಕಿತ್ತು. ಡ್ಯಾಡಿ-ಮಮ್ಮಿ ಮಾತನಾಡುವಾಗಲಂತೂ ನಾನು ಅಲ್ಲಿ ಇರಲೇಬಾರದೆಂದು ಅವರಿಬ್ಬರೂ ಬಯಸುತ್ತಿದ್ದರು.... ಅವರ ಮಧ್ಯೆ ಸದಾ "ನೀವು..... ನೀನು" ಗೊಂದಲಗಳು....

ಮಾತನ್ನೂ ಮೀರಿ, ಮೌನದಲ್ಲೂ ಸ್ಫೋಟಿಸಿ ಸಂಬಂಧಗಳು ರೂಪುಗೊಳ್ಳುವ ವಿಚಿತ್ರ ರೀತಿ ಆಗ ನನಗೆ ಅರ್ಥವಾಗುತ್ತಿರಲಿಲ್ಲ. ಎಲ್ಲ ಮಾತುಗಳ ಹಿಂದೆ ಬೇರೇನೋ ಇದೆಯೆಂಬ ಭಾವ ಬಲಿಯುವಾಗ, ನಾನು ಯಾರು.... ನೀನು ಯಾರು ಎಂದು ಕೇಳುವುದರ ಅರ್ಥ ಏನು ಎಂದು ಕೇಳುವುದು ಯಾರನ್ನು? ನನ್ನನ್ನೇ? ನಿನ್ನನ್ನೇ?

ನಾನು ನಚಿಕೇತನೇನಲ್ಲ

ಬಾಲ್ಯದ ಸ್ಮೃತಿಗಳು ಬದುಕನ್ನು ನಿಯಂತ್ರಿಸುತ್ತವೆಯೇ? ಚಿಕ್ಕಂದಿನ ಅನುಭವಗಳು ನೆನಪಾಗುವುದಕ್ಕೂ ಮೊದಲೇ ಪ್ರಶ್ನೆಗಳಾಗಿ ಪರಿವರ್ತನೆಗೊಳ್ಳುವ ರೀತಿಯನ್ನು ತಿಳಿಯುವ ಕುತೂಹಲದ ಆಚೆ ಏನಿದೆ? ಬರೇ ಕುತೂಹಲವೇ? ವಿಸ್ಮಯವೇ? ಭಯವೇ?

ನಮ್ಮ ಮನೆಯ ಹಿತ್ತಲಲ್ಲಿ ದೊಡ್ಡದೊಂದು ಆಲದ ಮರವಿತ್ತು. ನನಗೆ ಅದರ ಮೇಲೆ ತುಂಬ ಪ್ರೀತಿಯಿತ್ತು. ಹಟ್ಟಿಯಲ್ಲಿ ದನಗಳು ಹುಲ್ಲು ಮೆಲ್ಲುವುದನ್ನು ನೋಡುವುದೂ ನನಗೆ ತುಂಬ ಸಂತೋಷವನ್ನು ಕೊಡುತ್ತಿತ್ತು. ಹಾಗೇ ನಚಿಕೇತನಂತೆ, ಅಜ್ಜನೊಂದಿಗೆ ಪ್ರಶ್ನೆಗಳನ್ನು ಕೇಳುವುದೂ ಕೂಡಾ... ಆಡುತ್ತಲೇ ಇರಬೇಕಾದ ವಯಸ್ಸಿನಲ್ಲೂ ನಾನು ಆಡುತ್ತಿದ್ದುದು ಕಡಮೆಯೇ. ಅಜ್ಜ ಆಡು ಎಂದಾಗಲೆಲ್ಲಾ ನಾನು ಹಾಡತೊಡಗುತ್ತಿದ್ದೆ, ಇಲ್ಲ ಮನೆಯ ಹಿಂದಿನ 'ಹಾಡಿ'ಗೆ ಹೋಗುತ್ತಿದ್ದೆ.

ಅಜ್ಜನ ವಯಸ್ಸು ಎಷ್ಟೆಂದು ನನಗೆ ತಿಳಿದಿರಲಿಲ್ಲ. ನಾನು ಬುದ್ಧಿಯ ಬೆಳಕಿನಲ್ಲಿ ಚಿಂತಿಸಲು ಆರಂಭಿಸಿದಂದಿನಿಂದಲೂ, ಅದಕ್ಕೂ ಮೊದಲೂ ಅವರು ನನಗೆ ಅಜ್ಜನೇ. ಅಜ್ಜನ ನೆನಪು ನನಗೆ ಯಾವಾಗಲೂ ಒಂದು ಮಧುರ ಸ್ಮೃತಿ. ಆದರೆ ಅಪ್ಪ ಮಾತ್ರ ಹಾಗಲ್ಲ. ಅಪ್ಪನ ಹೆಸರೇನೆಂದು ನನಗೆ ಶಾಲೆಗೆ ಸೇರುವ ತನಕವೂ ತಿಳಿದಿರಲಿಲ್ಲ. ನಾನು ಅಪ್ಪನ ಹೆಸರು ಕೇಳಿದವರಿಗೆ 'ಶಾನುಭೋಗಪ್ಪ'ಎಂದು-ಹಾಗೆಂದರೇನೆಂದು ತಿಳಿದಿರದಿದ್ದರೂ

- ಹೇಳಿದ್ದಿದೆ. ಆಳುಗಳಿಗೆ ನಿರ್ದಯವಾಗಿ ಹೊಡೆಸುವ 'ಊರಿನ ಹುಲಿ' ಎಂದು ಕರೆಯಲ್ಪಡುತ್ತಿದ್ದ ಈ ಶಾನುಭೋಗಪ್ಪನೆಂದರೆ ನನಗೆ ಭಯವೇ ಇತ್ತು.

ಆಳು ತನಿಯನನ್ನು ಹೊಡೆಸಿದ್ದ ಅಪ್ಪ ತಾನೂ ಹೊಡೆಯುವುದರಲ್ಲಿ ತುಂಬ ಪರಿಣಿತನೆಂದು ತೋರಿಸಿಕೊಟ್ಟದ್ದು ತನ್ನ ತಂಗಿ, ನನ್ನ ಕೃಷ್ಣಾ ಅತ್ತೆಯನ್ನು ಹೊಡೆದ ಸಂಜೆ... ಮೈಯೆಲ್ಲ ರಕ್ತದ ಕಲೆಗಳು ಮೂಡುವಂತೆ ಅವರು ಹೊಡೆದಿದ್ದರು. ಅವಾಚ್ಯವಾಗಿ ಬೈಯುತ್ತಾ ಅವರು ಕೈ ಸೋಲುವ ತನಕ ಹೊಡೆಯುತ್ತಿದ್ದಾಗ, ಒಳಕೋಣೆಯಲ್ಲಿ ಅಜ್ಜ ಏನೂ ಮಾಡಲು ಸಾಧ್ಯವಾಗದವರಂತೆ ಭಯಭೀತರಾಗಿ ಕುಳಿತಿದ್ದಾಗ, ಅಮ್ಮ ಮಾತೇ ಆಡದೆ ಇದ್ದಾಗ, ನಾನು ನಡುಗುತ್ತಿದ್ದೆ. ಆ ಸಂಜೆ ಏನು ನಡೆಯಿತೆಂದು ಆಗ ನನಗೆ ಸ್ಪಷ್ಟವಾಗಿರಲಿಲ್ಲ. ಮುಂದೆ ಎಷ್ಟೋ ಸಮಯ ಕಳೆದ ಮೇಲೆ ನನಗೆ ತಿಳಿದದ್ದು ನನ್ನ ಪ್ರೀತಿಯ ಅತ್ತೆ, ಗಂಡ ಎಳೆಯ ವಯಸ್ಸಿನಲ್ಲಿ ತೀರಿಕೊಂಡು ವಿಧವೆಯಾದ ಅತ್ತೆ ಯಾರದೋ ಸಂಪರ್ಕ ಬೆಳೆಸಿ ಒಂದು ಮಗುವಿನ ತಾಯಿಯಾಗಲಿದ್ದಾರೆಂದು, ಅದರಿಂದ ಅಪ್ಪ ಸಿಟ್ಟಿಗೆದ್ದು ಅತ್ತೆಯನ್ನು ಆ ರೀತಿ ಹೊಡೆದದ್ದು ಎಂದು... ಅಜ್ಜ ಮಾತ್ರ ಯಾವಾಗಲೂ ಕಣ್ಣೀರಿಳಿಸದವರು.

ಅಂದು ಮಾತಿರದೆ ಕಣ್ಣೊರಸಿಕೊಳ್ಳುತ್ತಿದ್ದರು.... ಅದೇ ರಾತ್ರಿ ಕೃಷ್ಣಾ ಅತ್ತೆ ಯಾರಿಗೂ ತಿಳಿಯದಂತೆ ಮನೆಯಿಂದ ಓಡಿ ಹೋದರು.... ಅವರು ಎಲ್ಲಿಗೆ ಹೋದರೆಂದು ನನಗೆ ಇಂದಿಗೂ ತಿಳಿದಿಲ್ಲ. ಮರುದಿನ ನನ್ನ ಅಜ್ಜ ಬಿಕ್ಕಿ ಬಿಕ್ಕಿ ಅಳುವುದನ್ನು ನೋಡುವುದೂ ನನಗೆ ಕಷ್ಟವೆನಿಸಿತ್ತು. ಸಾವಿನ ಬಗ್ಗೆ ಯಾವಾಗಲೂ ಅವರನ್ನು ಕೇಳುತ್ತಿದ್ದಂತೆ "ಅಜ್ಜಾ, ಸಾಯುವುದೆಂದರೆ ಇಲ್ಲವಾಗುವದೇ?" ಎಂದು ಕೇಳುವ ಧೈರ್ಯ ಮಾತ್ರ ನನಗಾಗಲೇ ಇಲ್ಲ.

ಅತ್ತೆ ಇಲ್ಲವಾಗಿ ಎಷ್ಟೋ ಸಮಯ ಕಳೆದ ಮೇಲೆ ನಾನು ಒಮ್ಮೆ ಅಜ್ಜನೊಡನೆ ಕೇಳಿದ್ದೆ "ಅಜ್ಜಾ, ದಿನವೂ ಏನಾದರೂ ನಡೀತಾನೇ ಇರತ್ತೆ. ಅವುಗಳಲ್ಲಿ ಕೆಲವು ನೆನಪಿರುತ್ತೆ. ಕೆಲವು ಮರೆತು ಹೋಗತ್ತೆ. ಯಾಕೆ ಹೀಗೆ?"

ಅಜ್ಜ ನಕ್ಕಿದ್ದರು "ಮಗೂ, ನೆನಪು ಬೇಕಾದುದನ್ನು ಮಾತ್ರ ಇರಿಸಿಕೊಳ್ಳುತ್ತೆ. ಬೇಡವಾದುದನ್ನು ಮರೆತುಬಿಡತ್ತೆ. ಹಾಗಿರದೆ ಎಲ್ಲವನ್ನೂ ಮರೆತು ಬಿಡುವ ಶಕ್ತಿ ನಮಗಿದ್ದಿದ್ದರೆ ನಮಗೆ ದುಃಖಾನೂ ಇರ್ತಿರಲಿಲ್ಲ. ಪ್ರಾಯಶಃ ಜೀವನಕ್ಕೆ ಅರ್ಥಾನೂ ಇರ್ತಿರಲಿಲ್ಲ."

ಅವರ ಮಾತುಗಳು ನನಗೆ ಅರ್ಥವಾಗಿರಲಿಲ್ಲ. ಹೀಗೆಯೇ ಮನೆಕೆಲಸದ ಜಲಜ ಅಪ್ಪನ ಸಂಬಂಧವೂ ಅರ್ಥವಾಗಿರಲಿಲ್ಲ. ಅಪ್ಪ ಅವಳೊಂದಿಗೆ ಹಲವು ಬಾರಿ "ಜಲಜಾ, ನನ್ನ ಕೋಣೆಯಿಂದ ನನ್ನ ವೀಳ್ಯದೆಲೆಯ ಅಡತಟ್ಟೆ ತಾ, ಅಡಕತ್ತರಿ ತಾ, ಸರ್ಪ ಚೈನು ತಾ...." ಎಂದು ಅವಳನ್ನು ಕಳುಹಿಸುವುದೂ, "ಈ ಕೆಲಸದ ಹೆಣ್ಣು ಒಂದು ತಾ ಎಂದರೆ ಇನ್ನೊಂದನ್ನು ತರತ್ತೆ. ತಲೆಯಿಲ್ಲದೆ ಅದಕ್ಕೆ?" ಎಂದು ತಾನೂ ಅವಳನ್ನು ಅನುಸರಿಸುವುದು ಏಕೆಂದೂ ತಿಳಿಯುತ್ತಿರಲಿಲ್ಲ.

ಒಮ್ಮೆ ಕುತೂಹಲದಿಂದ ನಾನೂ ಛಾವಣಿಯ ಮೆಟ್ಟಿಲುಗಳನ್ನು ಏರಿ, ಅಪ್ಪನ ಕೋಣೆಗೆ ಹೋಗಿದ್ದೆ. ಅರ್ಧ ಮುಚ್ಚಿದ ಬಾಗಿಲಿನಿಂದ ಒಳಗೆ ಇಣುಕಿದ್ದೆ. ಒಳಗೆ ಜಲಜ ನಗುತ್ತಿದ್ದಳು.... ಜತೆಗೆ ಅಪ್ಪನ ತೀರ ಅಪರೂಪದ ನಗು. ಮತ್ತೆ ನನಗೆ ಕಂಡದ್ದು ಅಪ್ಪನ ಹಿಂಭಾಗ. ಅದರಲ್ಲಿ ಮುಚ್ಚಿಹೋಗಿದ್ದ ಜಲಜ.... ರಾತ್ರಿ ಹೊತ್ತಿನಲ್ಲಿ ಭೂತ ಸಂಚಾರ ಕಂಡವನಂತೆ ನಾನು ನಡುಗತೊಡಗಿ ಒಂದೇ ಉಸುರಿಗೆ ಮಾಳಿಗೆಯ ಮೆಟ್ಟಲುಗಳನ್ನು ಇಳಿದು ಕೆಳಗೆ ಬಂದಿದ್ದೆ....

ನನ್ನ ವಯಸ್ಸು, ಬುದ್ಧಿ ಬೆಳೆದಂತೆಲ್ಲ ನನ್ನ ಮನಸ್ಸಿನಲ್ಲಿ ಸಾವು ಆಕಾರ ಪಡೆಯುತ್ತಿದ್ದ ರೀತಿ ನನ್ನಲ್ಲಿ ವಿಸ್ಮಯವನ್ನೂ ಜತೆಗೆ ಭಯವನ್ನೂ ಉಂಟು ಮಾಡುತ್ತಿದ್ದುದು. ಅದು ಆತ್ಯಂತಿಕವೆನಿಸುವ ಎಲ್ಲ ಸಂಪರ್ಕಗಳನ್ನೂ ಕಡಿಯುವ ಮೌನವಾಗುವುದೆಂದೇ....

ಅಪ್ಪ ಹೇಳಿದ್ದನ್ನು ಮನೆಯಲ್ಲೂ ಹೊರಗೂ ಎಲ್ಲ ಯಾಕೆ ಕೇಳುತ್ತಾರೆ, ಅಪ್ಪ ತನ್ನನ್ನು ತೊಡ

ಗಿಸಿಕೊಳ್ಳುತ್ತಿದ್ದ ತಂಟೆ, ತಕರಾರು, ವ್ಯಾಜ್ಯ ಮುಂತಾದುವುಗಳಲ್ಲಿ ನೋವು ತಿಂದವರು, ಸೋಲುಂಡವರು ಇರಬಹುದಾಗಿದ್ದರೂ ಅವರ ವರ್ಚಸ್ಸನ್ನು ಕಡೆಗಣಿಸುವ ಎದೆಗಾರಿಕೆಯನ್ನು ಯಾರೂ ತೋರಿದ್ದಿಲ್ಲ. ಒಂದಲ್ಲ ಒಂದು ಕಾರಣದಿಂದ ಅಪ್ಪ ಎಲ್ಲರಿಗೂ ಬೇಕೇ ಬೇಕು ಎಂದು ನನಗೆ ತಿಳಿಯುತ್ತಿದ್ದುದು ಮನೆಯಲ್ಲಿ ಅಪ್ಪನನ್ನು ನಿತ್ಯ ನೋಡಲು ಬರುತ್ತಿದ್ದ ಜನರಿಂದಾಗಿ. ಆದರೆ, ಅಪ್ಪನೇ ಏಕೆ ಬೇಕು? ಅಜ್ಜನನ್ನು ಕೇಳಿದಾಗ, "ಏನು ಸಮಸ್ಯೆಯಿದ್ದರೂ ಅದರ ಹೆದರಿಕೆ ಕಳೆಯುವುದಕ್ಕೆ ಒಂದು ಆಧಾರ ಬೇಕಲ್ಲ. ಈ ಊರಿಗೆ ನಿನ್ನಪ್ಪ ಈಗ ಅಂಥ ಆಧಾರ..." ಎಂದುದೂ ನನಗೆ ಅರ್ಥವಾಗಿರಲಿಲ್ಲ.

ನನ್ನಲ್ಲಿದ್ದುದು ಭಯ. ನನ್ನ ವಯಸ್ಸಿಗೆ ಸಾವಿನ ಕುರಿತು ಕುತೂಹಲ ನನಗಿದದ್ದರೂ ದೂರದ ಸಾವಿನ ಭಯ ನನ್ನನ್ನು ಅಷ್ಟಾಗಿ ಕಾಡುತ್ತಿರಲಿಲ್ಲ. ಆದರೆ ಅಪ್ಪ-ಅಮ್ಮ ಹೇಳುವ ಕಥೆಯಲ್ಲಿ ಬರುವ ಹುಲಿ, ಸಾವುಗಳೆಲ್ಲ ಭಯ ಸೂಚಕ ಪ್ರತಿಮೆಗಳಾಗಿ ನನ್ನ ಮುಂದೆ ನಿಲ್ಲುತ್ತಿದ್ದುದೇಕೆಂದು ನನಗೆ ಅರ್ಥವಾಗುತ್ತಿರಲಿಲ್ಲ.

ಜಲಜಳ ನೆವನದಿಂದ ಅಪ್ಪನೊಡನೆ ಜಗಳವಾಡುತ್ತ, ಅಪ್ಪನಿಂದ ಏಟು ತಿನ್ನುತ್ತ, ನೋವನ್ನೇ ಉಂಡು ಕೊರಗುತ್ತಿದ್ದ ಅಮ್ಮ ದಿನದಿಂದ ದಿನಕ್ಕೆ ನಿಶ್ಶಕ್ತಳಾಗಿ ಮೂರೇ ತಿಂಗಳಲ್ಲಿ ತೀರಿಕೊಂಡಳು... ಅಮ್ಮ ತೀರಿಕೊಂಡದ್ದು ರಾತ್ರಿಗೆ. ಕತ್ತಲೆಯಲ್ಲಿ ಕಾಣಬಯಸುವುದೂ ಬೆಳಕಿನ ಸಹಾಯವಿಲ್ಲದೆ ಕಾಣದೆ ಹೋಗಬಹುದು ಎನ್ನುವ ಭಯವೇ ಮುಂದೆಂದೂ ಕಾಣದೆಯೇ ಹೋಗುವ ಸಾವಿನ ಭಯವನ್ನು ಹುಟ್ಟಿಸುವುದೇ ಎಂಬ ಸಂದೇಹ ನನಗೆ ಆ ವಯಸ್ಸಿನಲ್ಲಿ ಬಂದಿರಲಿಲ್ಲ. ಅಮ್ಮ ಸತ್ತಾಗ, ಶಾಲೆಯ ನೆನಪು ಮಾಡಿಕೊಂಡಿರಬೇಕಾದ ವಯಸ್ಸಿನಲ್ಲಿ ಮನೆಯ ಎಲ್ಲ ಸಂಬಂಧಗಳ ಕೊಂಡಿಯಂತೆ ಹೊಂದಿಕೊಂಡಿದ್ದ ಅಮ್ಮನೇ ಇಲ್ಲವಾದಾಗ ನಾವೆಲ್ಲ ಯಾವ ರೀತಿಯಿರುತ್ತೇವೆ? ನನಗೆ, ಅಜ್ಜನಿಗೆ, ಅಪ್ಪನಿಗೆ, ಏನು ಗತಿ ಎಂಬ ಯೋಚನೆಗಳು ಹೊಕ್ಕುಳಿಂದ ಮೇಲೆದ್ದು ಬರುವಂತಿದ್ದಾಗ ನಾನು ಕಸಿವಿಸಿಯಿಂದ ಮನೆಯಲ್ಲಿ ಎಲ್ಲೆಲ್ಲ ಓಡುತ್ತಿದ್ದೆ.

ಅಮ್ಮ ಸತ್ತ ಮೇಲೆ ಅಜ್ಜನ ಮಾತು ಮತ್ತಷ್ಟು ಕಡಮೆಯಾಗಿತ್ತು. ಅಪ್ಪನ ಆರ್ಭಟ ಕಡಮೆಯಾಗಿ ಅವರು ತುಸು ತುಸುವೆ ನಗುವುದು ಕಂಡುಬಂದರೂ ನಾನು ಅಪ್ಪನ ಕುರಿತು ಬೆಳೆಸಿಕೊಂಡಿದ್ದ ಭಯವೇನೂ ಕಡಮೆಯಾಗಲಿಲ್ಲ. ಅಮ್ಮ ಬದುಕಿದ್ದಾಗ ಮಾತು ಸಂಪರ್ಕಗಳನ್ನು ಬೆಸೆಯುತ್ತಿತ್ತು. ಮಾತಿಗಿಂತ ಮೌನವೇ ಹೆಚ್ಚು ಸುಖ ಕೊಡತ್ತೆ ಅನಿಸುತ್ತಿದ್ದಾಗ, ನಾನು ನನ್ನಷ್ಟಕ್ಕೆ ಜೀವನವನ್ನು ಇದಿರಿಸಬೇಕಾಗಿ ಬಂದಿದೆ ಎಂಬ ತಿಳಿವಳಿಕೆ ಮೂಡುತ್ತಿದ್ದಂತೆ ಭಯವೇಕೆ ಅಂಟಿಕೊಳ್ಳುತ್ತಿದೆ ಎಂದು ನನಗೆ ತಿಳಿದಿರಲಿಲ್ಲ. ಆ ಭಯದ ಬೆನ್ನಲ್ಲೆ ಕ್ರೋಧ.

ಅಮ್ಮ ಸತ್ತ ಮೇಲೆ ಜಲಜ ನನ್ನ ಬೇಕು-ಬೇಡಗಳ ಕಡೆ ಹೆಚ್ಚು ಗಮನಕೊಡಲು ಮುಂದಾಗುತ್ತಿದ್ದಾಗಲೂ ನನಗೆ ಅಸಹನೆ ತಿರಸ್ಕಾರದ ಭಾವನೆಗಳೇ ಹೆಚ್ಚತೊಡಗಿದ್ದು ಏಕೆಂದು ತಿಳಿದಿಲ್ಲ. ಈ ಕಾರಣದಿಂದಲೇ ಒಮ್ಮೆ ಅಮ್ಮನ ಬೈಗುಳ ನೆನಪಾಗಿ ಸಿಟ್ಟಿನಿಂದ ಆಕೆಯೊಡನೆ, "ರಂಡೆ... ಇಷ್ಟು ತಿಳಿಯುವುದಿಲ್ಲವೆ ನಿನಗೆ?" ಎಂದಿದ್ದೆ. ಆಗ ಜಲಜ, "ಅಣ್ಣಾವರೇ..." ಎಂದು ನನ್ನನ್ನು ನೋಡಿದ ರೀತಿಯಲ್ಲಿ ಆಕೆಯ ತಿರಸ್ಕಾರವನ್ನು ಗಮನಿಸಿದ ನಾನು ಹೆದರಿ ನಡುಗತೊಡಗಿದ್ದೆ. ಅಮ್ಮ ಹಾಗೆ ಹೇಳಿದಾಗಲೆಲ್ಲ ಮುಸಿ ಮುಸಿ ನಗುತ್ತ ತನ್ನ ಎದೆ ಕುಲುಕಿಸುತ್ತಿದ್ದ ಜಲಜ, "ಇನ್ನೊಮ್ಮೆ ಹಾಗೆ ಕರೆದರೆ ಜೋಕೆ" ಎಂದು ನನ್ನನ್ನು ಎಚ್ಚರಿಸಿದ್ದಳು. ನಾನು ಅಲ್ಲಿಂದ ಓಡಿ ಹೋಗಿದ್ದೆ. ಆ ದಿನವಿಡೀ ಆ ಮಾತು ನನಗೆ ಕೊಟ್ಟ ನೋವು... ಭಯ....

ನಾನು ಬೆಳೆಯುತ್ತಿದ್ದಂತೆ ಅಜ್ಜನೂ ಕತೆ ಹೇಳುವುದು ಕಡಮೆಯಾಗಿ ನಾನು ನನ್ನ ಕೋಣೆಯಲ್ಲೇ ಮಲಗುತ್ತಿದ್ದೆ. ಹರಿಯುವ ನದಿಯ, ತನಿಯನ, ಅಮ್ಮನ, ಕೃಷ್ಣಾ ಅತ್ತೆಯ ನೆನಪಿನಲ್ಲಿ ತೊಳಲಾಡುತ್ತಿದ್ದೆ. ಈ ತೊಳಲಾಟ ಎಂಟು ತಿಂಗಳುಗಳ ಕಾಲ ಮುಂದುವರೆದು ನನ್ನ ವಾರ್ಷಿಕ ಪರೀಕ್ಷೆ ಕೆಲವೇ ದಿನಗಳಿವೆಯೆನ್ನುವಾಗ ನನ್ನ ಅಪ್ಪ ತೀರಿಕೊಂಡದ್ದು-

ಅದೂ ಕೊಲೆಯಾಗಿ.

ತಾಲೂಕಿಗೆಂದು ಹೋಗಿದ್ದ ಅಪ್ಪ ಒಂದು ರಾತ್ರಿ ಮನೆಗೆ ಮರಳಲಿಲ್ಲ. ಮತ್ತೆರಡು ದಿನಗಳು ಕಳೆದ ಮೇಲೆ ಯಾರೋ ಬಂದು ಅಪ್ಪನ ಶವ ಮೂರು ಮೈಲು ದೂರದಲ್ಲಿ, ಹೊಳೆಯ ದಂಡೆಯಲ್ಲಿ, ಕೊಳೆತ ಸ್ಥಿತಿಯಲ್ಲಿ ಸಿಕ್ಕಿದೆಯೆಂಬ ಸುದ್ದಿಯನ್ನು ತಂದರು. ಅಪ್ಪ ಅನಿರೀಕ್ಷಿತವಾಗಿ ಎಂಬಂತೆ ಇಲ್ಲವಾಗಿದ್ದರು. ಕೊಲೆ.... ಅಪ್ಪನನ್ನು ಯಾರೋ ಕೊಂದು ಹಾಕಿದ್ದರು. ಸುದ್ದಿ ಬಂದಾಗ ಅಜ್ಜ ಚಾವಡಿಯಲ್ಲಿ ಕುಳಿತಿದ್ದರು. ನಾನು ಆಗಷ್ಟೆ ಶಾಲೆಯಿಂದ ಮರಳಿದ್ದೆ. ಅಜ್ಜನಾಗಲಿ, ನಾನಾಗಲಿ ಅತ್ತಿರಲಿಲ್ಲ. ನಾನು ಥರಥರ ನಡುಗಲಾರಂಭಿಸಿದ್ದೆ. ಸಾವಿನ ಕಲ್ಪನೆ ತರುವ ಭಯಕ್ಕಿಂತಲೂ ಹೆಚ್ಚಿನ ಭಯಾನಕವೆನಿಸುವ ನೋವನ್ನುಂಟು ಮಾಡುವ ಶಕ್ತಿ ಕೊಲೆಗಿದೆಯೆಂದು ನನಗೆ ಮನವರಿಕೆಯಾದದ್ದು ಆಗಲೇ.

ಮತ್ತೆ ಎರಡೇ ತಿಂಗಳಲ್ಲಿ ಅಜ್ಜ ತೀರಿಕೊಂಡರು. ಯಾವ ಕಾಯಿಲೆಯೂ ಇರದೆ, ತಾನಾಗಿ ಸಾವನ್ನು ಬಯಸಿದವರಂತೆ. ಅಪ್ಪು ದಿನವೂ ಹೆಚ್ಚಾಗಿ ಮಾತನಾಡದಿದ್ದವರು ಒಂದು ಸಂಜೆ, 'ಮಗೂ' ಎಂದು ನನ್ನನ್ನು ಕರೆದು ಮಾತನಾಡತೊಡಗಿದ್ದರು. ಮಾತು ಕಷ್ಟದಿಂದ ಬರುತ್ತಿತ್ತು. "ಮಾತನಾಡಬೇಡಿ ಅಜ್ಜಾ, ನಿಮಗೆ ಸಾಕಾಗುತ್ತೆ" ಎಂದಿದ್ದೆ. ಆದರೂ ಅವರು, "ಹೊತ್ತು ಗೊತ್ತಾಗುವುದರಿಂದಲೇ ನಾವು ಸಾಯ್ತೇವೇಂತ ಹೆದರೋದು ಮಗೂ, ಯಾರೂ ಸಾಯೋಲ್ಲ ಮಗೂ... ಯಾರೂ ಸಾಯೋಲ್ಲ.... ನಾನೊಬ್ಬನೇ ಇದೀನೀಂತ ತಿಳ್ಕೊಳ್ಳೋದರಲ್ಲೇ ನಾವು ಸಾಯ್ತೇವೆ... ಇಲ್ಲಾ, ಇದೇನೇಂತ್ಲೇ ತಿಳ್ಕೋ.... ಯಾರೂ ಸಾಯೋಲ್ಲಾಂತ ತಿಳ್ಕೋ..." ಎನ್ನುತ್ತಲೇ ಸತ್ತು ಹೋಗಿದ್ದರು.

ಅಪ್ಪ ಸತ್ತಿದ್ದಾರೆ ಎಂಬುದು ತಿಳಿದಾಗ, ಯಾವ ರೀತಿಯ ಪ್ರತಿಕ್ರಿಯೆ ನನ್ನದಿರಬೇಕು ಎಂದು ಯೋಚಿಸುತ್ತ, ಭಯದ ವರ್ತುಲವನ್ನು ನಿರ್ಮಿಸಿಕೊಂಡು ನಡುಗುತ್ತಿದ್ದ ನಾನು, ಈಗ ಅಜ್ಜ ಸತ್ತಾಗ ಮಗುವಿನಂತೆ ಅಳುತ್ತಿದ್ದೆ.

ಬದುಕು ಕಲಿಸುವುದೆ ಬಿಲ್ಲು ವಿದ್ಯೆ

ನಾನು ಹೊಣೆಗಾರನಲ್ಲದ ನನ್ನ ಹುಟ್ಟಿಗೂ ನಾನು ಕೊನೆಗೊಂದು ದಿನ ಅನುಭವಿಸಬೇಕಾಗಿರುವ ಸಾವಿಗೂ ಅರ್ಥ ಹೇಳುವ, ಸಂಬಂಧ ಕಲ್ಪಿಸುವ ತಿಳಿವಳಿಕೆಯ ವಯಸ್ಸು ನನ್ನದಾಗಿರಲಿಲ್ಲ. ಎಳವೆಯಿಂದಲೂ ನನಗೆ ಬಣ್ಣಗಳಲ್ಲಿ ತುಂಬ ಆಸಕ್ತಿ. ನಾನು ನಿಂತಿದ್ದಲ್ಲಿ ಕೆಂಪು, ಹಸಿರು, ಹಳದಿಯಾಗಿ ಬಣ್ಣ ಬದಲಿಸುವ ಟ್ರಾಫಿಕ್ ದೀಪಗಳನ್ನು ನೋಡುತ್ತ ನಿಲ್ಲುವುದು ನನಗೆ ತುಂಬ ಖುಷಿ ಕೊಡುವ ಅನುಭವವಾಗಿತ್ತು. ಸಿಗ್ನಲ್ಲಿನಲ್ಲಿ ನಿಲ್ಲುವ ಕಾರುಗಳ ಮೈಯೊರಸುವ ಕಾರ್ಯ ಕೈಗಳಿಗೆ ಕಣ್ಣುಗಳಲ್ಲಿ ತಣಿಯದ ಕುತೂಹಲ... ಕಾರುಗಳ ಸಾಲು ಹರಿಯುತ್ತಲೇ ಇತ್ತು. ಗತಿ ನಿರ್ದೇಶಿಸುವ ದೀಪದ ಬಣ್ಣ ಬದಲಾಗುತ್ತಲೇ ಇತ್ತು. ನಾನು ಮಿಥುನ್... ಅಪಘಾತವೊಂದನ್ನು ಮಾಡಿ ನಿಲ್ಲದೆ ಹೋಗಿದ್ದ ಕಾರನ್ನು ಹಿಂಬಾಲಿಸುತ್ತಾ ಓಡುತ್ತಿದ್ದ ಪೊಲೀಸರೊಂದಿಗೆ ನಾನು ಓಡತೊಡಗಿದ್ದೆ. ಓಡಿ, ಓಡಿ ಬಂದು ಬಿದ್ದುದು ರಾವ್ಗೋಜಿ ಕಾಕಾನ ಮನೆಯ ಮುಂದೆ. ರಾವ್ಗೋಜಿ ಕಾಕಾ ಹಾಗೂ ಅವನ 'ಪಾರೂ ಕೀ ಮಾ'ರ ದಯೆಯಿಂದ ನನಗೆ ಮಲಗಲು ನಿಶ್ಚಿತ ಜಾಗ ಸಿಕ್ಕಿತ್ತು. ನನ್ನ ನಿತ್ಯವಿಧಿಗೂ ನಿರ್ದೇಶನ ದೊರಕಿತ್ತು. ಇದಕ್ಕೆ ಪ್ರತಿಯಾಗಿ 'ಪಾರೂ ಕೀ ಮಾ'ಗೆ ಬೇಕಾದ ನೀರನ್ನು ಕದ್ದು ನಾನು ತಂದುಕೊಡಬೇಕಾಗಿತ್ತು. ಅವಳಿಗೆ ನೀರು ಕೊಡಲು ಸಾಧ್ಯವೆಂದಾದರೆ ನನಗೆ ಮಲಗಲು ಜಾಗದ ಚಿಂತೆಯಿಲ್ಲವೆಂದಾದ ಮೇಲೆ ರಾವ್ಗೋಳಿ ಕ್ಯಾಂಪ್‌ನ ಬದಿಯ ಜೋಪಡ ಪಟ್ಟಿಯಲ್ಲಿ ನೆಲ ದೊರಕಿದ ಘಟಕ ನಾನಾದೆ. ನೀರು ಬೇರೆಲ್ಲೂ ಸಿಗದಿದ್ದಾಗ ಶಿವಡಿಯ ರಸ್ತೆಯ ಬದಿಯ ಹೈಡ್ರೆಂಟ್ ಹುಡುಕಿಕೊಂಡು ಹೋಗುತ್ತಿದ್ದೆ. ಹೈಡ್ರೆಂಟ್ ತಿರುಗಿಸುವ ಇಕ್ಕುಳದ ಆಟ ನನಗೆ ಪ್ರಿಯವಾಗುತ್ತಿದ್ದಂತೆ ತಿರುಗಿಸುವ ದಾಂಡಿಗ, ಅವನ ಇಕ್ಕುಳ, ಒಟ್ಟಾರೆಯಾದ ನೀರು ಕದಿಯುವ ಮೇಲೆ ನನಗೆ ವಿಚಿತ್ರ ಆಕರ್ಷಣೆ ಬೆಳೆಯುತ್ತಿತ್ತು.

ಜೋಪಡಿಯ ತಟ್ಟಿಯ ಮುಂದಿನ ಹಲಗೆಯ ನನ್ನ ಮಲಗುವ ಜಾಗದಲ್ಲಿ-ಹೊಟ್ಟೆ ತುಂಬಿರಲಿ,

ಕೆಲವೊಮ್ಮೆ ಪಾವ್ ತುಂಡಿಗೂ ಕಾಸಿರದೆ ಹೊಟ್ಟೆ ಖಾಲಿಯೇ ಇರಲಿ-ರಾತ್ರಿ ತುಂಬ ಇಷ್ಟವಾಗುತ್ತಿತ್ತು. ಕೆಲವು ದಿನಗಳಲ್ಲಿ ಜೋಪಡಪಟ್ಟಿಯ ಪರಿಚಿತ-ಅಪರಿಚಿತ ಸದ್ದುಗಳಿಂದಾಗಿ ರಾತ್ರಿ ಕೂಡಾ ಜೀವಂತವಾಗುತ್ತಿತ್ತು.

ಆ ತನಕ ನಿದ್ದೆ-ಎಚ್ಚರಗಳ ನಡುವೆ ಗೆರೆಯೇ ಇಲ್ಲವೆಂದು ತಿಳಿದುಕೊಂಡಿದ್ದ ನನಗೆ ಇವೆರಡರ ನಡುವಿನ ವ್ಯತ್ಯಾಸ ತಿಳಿದುದು ಆ ರಾತ್ರಿಯೇ... ಆ ವಾತಾವರಣ ಪೋಷಿಸಿದ್ದ ನಿದ್ದೆಯ ಮಂಪರಿನ ಸುಖದಿಂದ ಬೇರೆಯೇ ಆದ ಎಚ್ಚರ ಕೊಟ್ಟದ್ದು, ವ್ಯಾಗನ್ನಿನಿಂದ ಸಾಮಾನು ಕದಿಯುತ್ತಿದ್ದಾಗ ಸಿಕ್ಕಿಬಿದ್ದ ನನ್ನದೇ ವಯಸ್ಸಿನ ತರುಣ... ಒದೆ ತಿಂದೇ ಸಾಯಲು ಸಿದ್ಧನಾಗಿದ್ದ ತರುಣ... ಆಮೇಲೆ ನನಗೆ ಆ ರಾತ್ರಿಯಷ್ಟೇ ಅಲ್ಲ, ಯಾವ ರಾತ್ರಿಯೂ ನಿದ್ದೆ ಬರಲಿಲ್ಲ. ನಿದ್ದೆಯ ಅರ್ಥ ತಿಳಿಯಲೂ ಇಲ್ಲ.

ಯಾವ ಕಾರಣವೂ ಇರದೆ ಘರ್ಷಣೆಯ ಕಿಡಿ ಹರಡಲು ಸಮಯ ಬೇಕಿಲ್ಲ ಎಂಬ ತಿಳಿವಳಿಕೆಯೂ ನನಗೆ ಬರತೊಡಗಿದ್ದು ರಾವ್ಳೋಳಿಯಲ್ಲಿಯೇ. ಅವಾಚ್ಯ ಬೈಗುಳಗಳನ್ನು ಅವುಗಳ ಅರ್ಥವ್ಯಾಪ್ತಿಯನ್ನೂ ಗಮನಿಸದೆಯೇ ಸಿಟ್ಟಿಗೆ, ತಿರಸ್ಕಾರಕ್ಕೆ, ಅಸೂಯೆಗೆ ಆಕಾರ ಕೊಡಲು ಉಪಯೋಗಿಸುತ್ತಾರೆಂದು ತಿಳಿದುಕೊಳ್ಳುವುದೂ ನನಗೆ ಕಷ್ಟವಾಗಲಿಲ್ಲ.

ರಾವ್ಳೋಳಿಗೆ ಪ್ರತಿ ಭಾನುವಾರ ಬಂದು ಸಾಕ್ಷರತೆಯ ಮೂಲಮಂತ್ರಗಳನ್ನು ಉಪದೇಶಿಸುತ್ತಿದ್ದ ಗುರೂಜಿಯ ಬಳಿಯಲ್ಲಿ ಪಾಠ ಕಲಿಯುತ್ತಿದ್ದ ನಜ್ಮಾ...ನಜ್ಮಾಳ ನಗುವಿಗಾಗಿಯೇ ನಾನು ಭಾನುವಾರದ ಪಾಠ ತಪ್ಪಿಸುತ್ತಿರಲಿಲ್ಲ...

ನನಗೆ ಪೊಲೀಸರ ಕಾರ್ಯಾಸಕ್ತಿಯ ಪರಿಚಯವಾದದ್ದು ತುಸು ತಡವಾಗಿಯೇ. ಶಿವಡಿಯಲ್ಲಿ ನೀರು ಬಿಡುವ ದಾಂಡಿಗನ ಹೆಸರು ನನಗೆ ಗೊತ್ತಿರದಿದ್ದರೂ, ಅವನು ನನ್ನ ಮೇಲೆ ತೋರಿಸುತ್ತಿದ್ದ ಆತ್ಮೀಯತೆಯಿಂದಾಗಿ ಆತ ನನಗೆ ಮಾಮನಾಗಿದ್ದ. ಆತ ಪರಿಚಯಿಸಿದ ಹೊಸ ಕೆಲಸ ನನಗೆ ದಿನಕ್ಕೆ ಹತ್ತು ರೂಪಾಯಿಗಳ ಸಂಪಾದನೆಯ ದಾರಿ ಕಾಣಿಸಿತ್ತು. ಆತನ ನಿರ್ದೇಶನದಂತೆ ನಾನು ಕೆಲಸ ಮಾಡಿದ್ದೆ... ಕಾರಿನೊಳಗಿನಿಂದ ಡ್ರೈವರ್ ಎತ್ತಿ ಹಾಕಿದ ಟ್ಯೂಬುಗಳನ್ನು ಹೊತ್ತುಕೊಂಡು ಸುತ್ತು ಸುರುಳಿಗಳಿರುವ ಗಲ್ಲಿಗಳ ಒಳಹೊಕ್ಕು ಅವುಗಳಿಗಾಗಿಯೇ ಕಾಯುತ್ತಿದ್ದ ಹೆಂಗಸಿಗೋ ಗಂಡಸಿಗೋ ನಾನು ಒಪ್ಪಿಸಿ ಬರಬೇಕಿತ್ತು. ನನಗೆ ಸಂಪಾದನೆಯನ್ನು ದೊರಕಿಸಿಕೊಟ್ಟ ಕಾಯಕ.

ಆದುದರಿಂದಲೇ ಒಂದು ಸಂಜೆ ಬಾಂದ್ರಾದ ಲಿಂಕಿಂಗ್ ರಸ್ತೆಯಲ್ಲೆಲ್ಲ ತಿರುಗಾಡಿ, ಹುಡುಕಿ, ಹುಡುಕಿ ಇಪ್ಪತ್ತೈದು ರೂಪಾಯಿಗಳನ್ನು ಕೊಟ್ಟು ಚಂದದ ನಜ್ಮಾಳ ಕಿವಿಯಲ್ಲಿ ನೇತಾಡಬಹುದಾದ ಒಂದು ಜೊತೆ ಲೋಲಾಕುಗಳನ್ನು ಖರೀದಿಸಿದೆ. ಆದರೆ... ನಾನಿನ್ನೂ ನಜ್ಮಾಳೊಂದಿಗೆ ಒಂದು ಮಾತನ್ನೂ ಆತನಕ ಆಡಿರಲಿಲ್ಲ. ಅವಳ ಅರೆಬಿರಿದ ತುಟಿಗಳಲ್ಲಿ ನಗುವಿನ ಅಂಚನ್ನು ಕಂಡ ಮರುದಿನವೇ ನಾನು ಪೊಲೀಸರ ಕೈಗೆ ಸಿಕ್ಕಿಬಿದ್ದೆ. ಕಳ್ಳ ಸಾರಾಯಿಯನ್ನು ಮಾರಿದ ಅಪರಾಧವು ನನ್ನದಾಗಿತ್ತು.

ಮೂರು ದಿನಗಳ ಕಾಲ ಪೊಲೀಸರ ಚಿತ್ರಹಿಂಸೆಯನ್ನು ಅನುಭವಿಸುತ್ತ ನಾನು ಲಾಕಪ್‌ನಲ್ಲಿದ್ದೆ. ಪರಿಸರದ ಪ್ರಜ್ಞೆಯನ್ನು ಕಳೆದುಕೊಂಡು ಮಲ ಮೂತ್ರಗಳ ಪರಿವೆಯೂ ಇರದೆ, ನೋವು ಮಾತ್ರ ಸತ್ಯವಾಗಿ ನಾನು ಮಲಗಿಯೆ ಇದ್ದೆ... ನಾಲ್ಕನೆಯ ದಿನ ನನ್ನ ಬಿಡುಗಡೆಯಾಯಿತು.

ರಾವ್ಳೋಳಿಗೆ ಬಂದಾಗ ಮಧ್ಯಾಹ್ನ. ಮರುದಿನ ನಾನು ಮತ್ತೆ ನಿತ್ಯ ಜೀವನಕ್ಕೆ, ಕಲಾನಗರದ ಕೂಡು ರಸ್ತೆಯ ಕಾರು ಒರೆಸುವ ಕಾಯಕಕ್ಕೆ ಮರಳಿದ್ದೆ. ಮುಂದಿನ ಭಾನುವಾರ, ಗುರೂಜಿಯ ಪಾಠಕ್ಕೆ ಹೋಗಲೇಬೇಕೆಂದು ನನಗೆ ಅನಿಸಿದ್ದು ನಜ್ಮಾಳಿಂದಾಗಿಯೇ. ಮೂರು ದಿನಗಳು ಕಳೆದ ಮೇಲೆ ನನ್ನ ಜೀವಮಾನದಲ್ಲಿ ನಾನು ಮರೆಯಲಾರದ ಸಂಧಿ ಒದಗಿ ಬಂತು.

ನಾನು ಸ್ವಂತ ದುಡಿಮೆಯಿಂದ ಖರೀದಿಸಿದ ಲೋಲಾಕುಗಳನ್ನು ನಜ್ಮಾಳಿಗೆ ಕೊಡುವ ಅವಕಾಶ... ಅದನ್ನು ಅವಳಿಗೆ ತೋರಿಸುವ ಪ್ರಯತ್ನದಲ್ಲಿ ನನ್ನ ಒಂದು ಕೈ ಆಕೆಯ ಭುಜವನ್ನು ಹಿಡಿದಿತ್ತು. ಇನ್ನೊಂದರ ಬಿಡಿಸಿದ ಅಂಗೈಯಲ್ಲಿ ಲೋಲಾಕುಗಳು ಮಿಂಚುತ್ತಿದ್ದುವು. ನಾನು ಭುಜ ಹಿಡಿದೊಡ

ನೆಯೆ ಆಕೆ ಲೋಲಾಕುಗಳನ್ನು ನೋಡದೆಯೆ "ಮಾ...ಮಾ...ಅಬ್ಬಾ...ಹೋ" ಎಂದು ಕೂಗಲು ಆರಂಭಿಸಿದಳು. ಹೇಗಾದರೂ ಆಕೆಯ ಕೂಗು ನಿಲ್ಲಿಸಬೇಕೆಂದು ಆಕೆಯ ಬಾಯಿಗೆ ಕೈ ಅಡ್ಡ ಹಿಡಿದಿದ್ದ ನಾನು ಆಕೆಯನ್ನು ಇನ್ನಷ್ಟು ಅಪ್ಪಿ ಕೊಂಡು ಒಂದು ವಿಚಿತ್ರ ರೀತಿಯ ಸುಖವನ್ನು ಅನುಭವಿಸುತ್ತಿದ್ದಂತೆಯೇ ಆಕೆಯ ಬಾಯಿ-ಕುತ್ತಿಗೆಗಳೆರಡನ್ನೂ ಬಿಗಿಯಾಗಿ ಮುಚ್ಚಲು ಪ್ರಯತ್ನಿಸುತ್ತ ಆಕೆಯನ್ನು ಕೊಂದೇ ಬಿಟ್ಟಿದ್ದೆ...

* * *

ಕೇಸು ವಿಚಾರಣೆಗೆ ಬಂದಾಗ ನ್ಯಾಯಾಲಯದ ಕಟಾಂಜನದಲ್ಲಿ ನಿಂತೆ... ಏನೇನೋ ಪ್ರಮಾಣ ಮಾಡಿದೆ. ವಿಚಾರಣೆ ಆರಂಭವಾದಾಗ ನನ್ನ ಮೇಲಿನ ಆರೋಪವನ್ನು ಯಾರೋ ಓದಿ ಹೇಳಿದರು. "....."

ನನ್ನ ಹೇಳಿಕೆಯಲ್ಲಿ ನಾನು ಹೇಳಿದ್ದಿಷ್ಟೆ. "... ನಾನು ಯಾರು ಎಂದು ತಿಳಿದುಕೊಳ್ಳುವ ಪ್ರಯತ್ನದಲ್ಲಿ ಇನ್ನೂ ಇದ್ದೇನಾದ ಕಾರಣ ನಾನು ಯಾರೆಂದು ನನಗಿನ್ನೂ ಗೊತ್ತಿಲ್ಲ. ನಾನು ಯಾರೆಂದು ತಿಳಿಯಲು ನನಗೆ ನಜ್ಮಾ ಬೇಕಿದ್ದಳು. ಆದರೆ... ನಾನು ಆಕೆಯನ್ನು ಕೊಂದೆ. ನನಗೆ ಕಾದಿರುವ ಶಿಕ್ಷೆ ಏನೆಂದೂ ನನಗೆ ತಿಳಿದಿದೆ. ಅದೂ ನನಗೆ ಬೇಕಾದುದೇ. ಕಾರಣ ಆಮೇಲೆ ನಾನು ಯಾರೆಂದು ತಿಳಿಯಬೇಕಾದ ಪ್ರಶ್ನೆಯೇ ಬರುವುದಿಲ್ಲ..."

ಕೋರ್ಟಿನ ತುಂಬ ನಗುಮುಖದ ನಜ್ಮಾಳೇ ತುಂಬಿದ್ದಳು.

ಪ್ರತಿಮೂರ್ತಿಗಳ ಹುಡುಕಾಟಗಳು

-೧-

ಆಯ್ಕೆ ಮತ್ತು ಹುಟ್ಟು ಈ ಸಂಬಂಧಗಳಿಂದ ಬೆಸೆಯಲ್ಪಟ್ಟ ಅಮ್ಮ ಅಪ್ಪ ಮತ್ತು ನಾನು... ಎಲ್ಲ ಸಂಬಂಧಗಳ ಸ್ವರೂಪಕ್ಕಷ್ಟೇ ಅರ್ಥ ಕೊಡಬೇಕಾದ ಬದುಕಿಗೆ ಸ್ಪಂದಿಸುತ್ತ, ಪ್ರತಿಸ್ಪಂದಿಸುತ್ತ ಬಂದ ನನಗೆ ನನ್ನ ಮುಂದೆ ಬಿರುಕುಗಳೇ ಕಾಣಿಸುತ್ತವೆ. ಈ ಬಿರುಕುಗಳಲ್ಲಿ ಯಾವುದು ವಾಸ್ತವ-ಯಾವುದು ಭ್ರಮೆ ಎಂದು ಯೋಚಿಸುವಾಗ-ಅಮ್ಮನೊಂದಿಗೆ ನನಗೆ ಆಗುವ ಜಗಳಗಳ ನೆನಪು... ನನ್ನ ಸಿಟ್ಟಿಗೆ ಕಾರಣವಾಗುವ ನಾನು ನನ್ನಲ್ಲೇ ಕಾಣುವ ಅಮ್ಮನ ಪ್ರತಿಬಿಂಬ. ನಾನು ಬೆಳೆಯುತ್ತಿದ್ದ ರೀತಿಯಲ್ಲಿ ನಾನು ಅಮ್ಮನಿಗೆ ನೋವು ಕೊಡುತ್ತಿದ್ದೇನೆಯೇ ಎಂಬ ಸಂದೇಹ ನನಗೆ ಮೊದಲು ಬಂದದ್ದು ನಾನು ಯಾವ ಉದ್ದೇಶವೂ ಇರದೆ ಅಮ್ಮನಿಗೆ ಪ್ರತಿ ಹೇಳಲು ಮೊದಲು ಮಾಡಿದಾಗ, ಅಮ್ಮನ ವಾತ್ಸಲ್ಯದ ನೆನಪುಗಳೆಲ್ಲ ತುಣುಕುಗಳಾಗಿ ಮರವೆಯ ಕತ್ತಲನ್ನು ಸೇರುತ್ತಿದ್ದಂತೆ, ಅಮ್ಮನ ಪ್ರತಿರೂಪವೆಂದು ಎಲ್ಲರಿಂದಲು ಹೇಳಿಸಿಕೊಳ್ಳುತ್ತಿದ್ದ ನಾನು ಪ್ರತಿ ಹೇಳಲು ಶುರು ಮಾಡಿದಾಗ ಆಕೆಗೆ ಅದು ಜಗಳವೆಂದು ಕಾಣಿಸಿಕೊಂಡದ್ದು ನಿಜ.

ಅಮ್ಮನೋ ಮಾತಿನ ಮಲ್ಲಿ. ಅಪ್ಪ ಹಾಗಲ್ಲ. ಅವರ ಮಾತು, ಮೌನ, ನಗು, ಸಿಟ್ಟು ಎಲ್ಲವೂ ಒಂದು ರೀತಿಯ ಭಯವನ್ನೆ ಮೂಡಿಸುವಂಥವು. ಮನೆಯಲ್ಲಿದ್ದ ತಮ್ಮ-ತಂಗಿಯರಿನ್ನೂ ಎಳೆಯರು. ಹೀಗಾಗಿ ಅಮ್ಮನ ಎಲ್ಲ ಚಿಂತನೆಗಳಿಗೆ ಮರುದನಿ ಕೊಡಬಹುದಾದುದು ನಾನೇ ಎಂದು ಅಮ್ಮ ಎಂದೋ ನಿರ್ಧರಿಸಿಬಿಟ್ಟಂತಿತ್ತು. ಆಕೆಯ ಮಾತುಗಳಲ್ಲಿ ಜೀವನದೃಷ್ಟಿಯ ವಿಸ್ತಾರ ಮಿತಿಗಳೆರಡನ್ನೂ ಕಾಣುವ ಕುತೂಹಲ ನನ್ನಲ್ಲಿ ಹೇಗೆ ಬಂತೆಂದು ತಿಳಿದಿಲ್ಲವಾದರೂ ಅದು ಬೆಳೆಯುತ್ತಿದ್ದುದಂತೂ ನಿಜ. ಭ್ರಮೆ-ವಾಸ್ತವಗಳ ನಡುವೆ ಗೆರೆಯಿದೆಯೆಂಬ ತಿಳವಳಿಕೆ ಚಿಗುರುತ್ತಿದ್ದಂತೆ ಕಂಡದ್ದು, ಕೇಳಿದ್ದೆಲ್ಲ ವಾಸ್ತವವಲ್ಲ ಎಂಬ ಜ್ಞಾನ ಮೂಡುತ್ತಿದೆಯೇನೋ ಎನ್ನುವ ಸಂದೇಹವೂ ನನ್ನಲ್ಲಿ ಮೊಳೆಯುತ್ತಿತ್ತು.

ಅಪ್ಪ ಮಾತಾಡುತ್ತಿದ್ದುದೇ ಕಡಿಮೆ. ಅವರ ಮಾತಿರದಾಗ ಮನೆಯಲ್ಲಿ ಮೌನದ ಬ್ರಹ್ಮಾಂಡ. ಅದನ್ನು ಕದಡಿಸುತ್ತಿದ್ದುದು ಅಮ್ಮನ ಮಾತಿನ ಸದ್ದು. ಅದರಲ್ಲಿ ಬೆರೆತಿದ್ದ ಮೌನವನ್ನು ಸೀಳುವ ಇಚ್ಛೆಯ ಒರಟುತನ. ನನಗೆ ಬುದ್ಧಿ ತಿಳಿಯತೊಡಗಿದಂದಿನಿಂದಲೇ ಅಪ್ಪನ ವಿಚಿತ್ರ ರೀತಿಗಳು ಅಪರಿಚಿತತೆಯ ಭಯ ಮೂಡಿಸುತ್ತಿದ್ದುವು. ಅವರು ನಗುತ್ತಿದ್ದುದೂ ಕಡಿಮೆ. ಆಫೀಸಿನಿಂದ ಮರಳಿದ ಬಳಿಕ ಅವರು ತಮ್ಮನ್ನು ಸದಾ ತೊಡಗಿಸಿಕೊಳ್ಳುತ್ತಿದ್ದುದು-ಅಮ್ಮನಿಗೆ ಚೂರೂ ಇಷ್ಟವಿರದ- ಬಡಗಿಯ ಕೆಲಸಗಳಲ್ಲಿ.

ಇದನ್ನು ಬಿಟ್ಟರೆ ಅವರು ಕೆಲವು ವೇಳೆ ನೆಚ್ಚಿಕೊಳ್ಳುತ್ತಿದ್ದ ವಿಚಿತ್ರ ಚರ್ಯೆಗಳಲ್ಲಿ ಗಾಯತ್ರಿ ಪಠಣವೂ ಒಂದು. ಇವೆಲ್ಲವೂ ಅಮ್ಮನ ದೃಷ್ಟಿಯಲ್ಲಿ 'ಹುಚ್ಚು'ಗಳೇ. ವಾಸ್ತವವಾಗಿ ನಮ್ಮ ಮನೆಯಲ್ಲಿ ಒಬ್ಬರನ್ನೊಬ್ಬರು ಹುಚ್ಚರೆಂದು ಕರೆಯುತ್ತಿದ್ದುದು ರೂಢಿಯೆನಿಸಿ ನಿಜವಾಗಿ ಯಾರು ಹುಚ್ಚರೆಂದೆ ತಿಳಿಯುತ್ತಿರಲಿಲ್ಲ. ನಮ್ಮ ಮನೆಯಲ್ಲಿ ಯಾವ ಗಳಿಗೆಯಲ್ಲಿ ಉತ್ಸಾಹ ಕುದುರತ್ತೆ, ಯಾವ ಗಳಿಗೆಯಲ್ಲಿ ಅನಾಹುತ ಕಾದಿದೆಯೆಂಬ ಭಯ ಮೂಡುತ್ತೆ ಎಂದು ಹೇಳುವುದೇ ಕಷ್ಟವಾಗುತ್ತಿತ್ತು.

ಅಮ್ಮ-ಅಪ್ಪ ಜಗಳವಾಡುತ್ತಿದ್ದುದು, ಲಾಟರಿ ಟಿಕೇಟುಗಳನ್ನು ಖರೀದಿಸಿ ಜತೆಯಾಗಿ ಅನಿರೀಕ್ಷಿತವಾಗಿ ಹೆಚ್ಚಿನ ಸಂಪಾದನೆ ಹೇಗೆ ಬಂದೀತೆಂದು ಕಾಯುತ್ತಿದ್ದುದು, ಪರಸ್ಪರ ಅಭಿಪ್ರಾಯ ವಿನಿಮಯದಲ್ಲಿ ತಮ್ಮ ತಮ್ಮ ಪೂರ್ವಾಗ್ರಹಗಳಿಗೇ ಅಂಟಿಕೊಳ್ಳುತ್ತಿದ್ದುದು-ಇವೆಲ್ಲ ನನ್ನ ಬದುಕಿಗೆ ಹೇಗೆ ಸಂಬಂಧಿಸಿವೆಯೆಂದು ಆ ವಯಸ್ಸಿನಲ್ಲಿ ನಾನು ಯೋಚಿಸುತ್ತಿರಲಿಲ್ಲವಾದರೂ, ಇವುಗಳಲ್ಲಿ ವಾಸ್ತವ ಎಲ್ಲಿದೆಯೆಂದು ಹುಡುಕುವ ಕುತೂಹಲವು ನನಗಿತ್ತು.

ಅಪ್ಪನ ಸಿದ್ಧ ಹಾಗೂ ಪೂರ್ವನಿರ್ಧಾರಿತ ಕಾರ್ಯಕ್ರಮ ಅವರ ಸ್ವಂತದ ಆಸಕ್ತಿಯ ಕ್ಷೇತ್ರಗಳಲ್ಲೆ ಹೊರಳುತ್ತಿರುವಾಗ, ಅಮ್ಮ ದಿನ ಕಳೆಯುತ್ತಿದ್ದ ರೀತಿಯೇ ಬೇರೆ. ನಮ್ಮ ಮನೆಯ ನಾಲ್ಕು ಗೋಡೆಗಳ ಬಂದಿ ತಾನು ಎಂಬ ಭಾವನೆಯನ್ನು ಆಕೆ ಕಳೆದುಕೊಳ್ಳುತ್ತಿದ್ದುದು ಮನೆಯ ಬಾಗಿಲು ಮುಚ್ಚಿ ನೆರೆಮನೆಗಳಿಗೆ ಹರಟೆಗೆಂದು ಹೋಗುತ್ತಿದ್ದಾಗ ಅಥವಾ ನಾವೆಲ್ಲರೂ ಜತೆಯಾಗಿ ಏನಾದರೂ ಖರೀದಿಗೆಂದು ಪೇಟೆ ಸುತ್ತಾಡಿಕೊಂಡು ಬರುತ್ತಿದ್ದಾಗ.

ನಗು, ಸಿಟ್ಟು, ಅಳುಗಳ ಗತಿಗೆ ಕಾಲದ ನಿರ್ದೇಶನ ಹಾಕುತ್ತಿದ್ದುದು ವಾರಾಂತ್ಯ. ತ್ರಿಮೂರ್ತಿ ಮಾಮಾಗಳೊಂದಿಗೆ ಅಪ್ಪನ ಇಸ್ಪೀಟಿನ ಆಟ ಶನಿವಾರ ರಾತ್ರಿಯಿಂದ ಭಾನುವಾರ ರಾತ್ರಿಯವರೆಗೂ ಮುಂದುವರೆಯುವ ಬಿಡುವೇ ಇರದಂಥ ವಿಧಿ... ಈ ನಾಲ್ಕು ಜನ ಆಟದಲ್ಲಿ ಬೆರೆಯುತ್ತಿದ್ದ ರೀತಿ, ಉನ್ಮಾದಕ್ಕೆ ಟಿಪ್ಪಣಿ ಕೊಡುವಂಥದ್ದು....

ನಾನು ಬೆಳೆಯುತ್ತಿದ್ದೇನೆಂದು ಮನೆಯ ರೂಢಿ ಬದಲಾಗಿರಲಿಲ್ಲ. ಯಂತ್ರವತ್ತಾಗಿ ನಡೆಯುತ್ತಿದ್ದ ದೈನಂದಿನ ವಿಧಿಗಳಲ್ಲಿ ಬದುಕಿನ ಭಾಷ್ಯ ಬರೆಯುತ್ತಿದ್ದ ಅಪ್ಪ-ಅಮ್ಮ ನನ್ನನ್ನು ಕಾಣುತ್ತಿದ್ದುದು ಈ ರೂಢಿ ಹಳಸಲಾಗಿ ಕೊಳೆಯುವಾಗ ನೆಚ್ಚಿಕೊಳ್ಳುವ ಊರುಗಂಬವೆಂದೇ?

ಆ ಶನಿವಾರ ರಾತ್ರಿ ಎಂದಿನಂತೆ ಆಟ ಭರದಿಂದ ಸಾಗಿದ್ದಂತೆ, ಅಜ್ಜನ ಮರಣದ ಸುದ್ದಿ ಬಂದಿತ್ತು. ಅಮ್ಮನಿಗೆ ತನ್ನ ಈ ಅಪ್ಪನಲ್ಲಿ ತುಂಬ ಅಭಿಮಾನ. "ಮಗೂ, ನೀನು ನನ್ನ ಅಪ್ಪನ ಹಾಗೆ ಆಗಬೇಕು. ನಿನ್ನ ಅಪ್ಪನಂತೆ ಆಗೋದು ಬೇಡ" ಎಂದು ಅವಳು ನನ್ನೊಡನೆ ಅಂದಿದ್ದು ಒಂದೆರಡು ಬಾರಿಯಲ್ಲ. ಆದರೆ ಅಮ್ಮ ತುಂಬ ಉತ್ಸಾಹದಿಂದ ತನ್ನ ಮನೆಯೆಂದು ಊರಲ್ಲಿ ತಾನು ಕಲ್ಪಿಸಿಕೊಳ್ಳುತ್ತಿದ್ದ ಸಂಬಂಧದ ಎಳೆಗಳನ್ನು ಅಷ್ಟೇ ಆಸಕ್ತಿಯಿಂದ ಗಮನಿಸಲು ನನಗೆ ಸಾಧ್ಯವಾಗುತ್ತಿರಲಿಲ್ಲ.

ಅಪ್ಪ-ಅಮ್ಮನಿಗೆ ನಾನು ತೋರಿಸುತ್ತಿದ್ದ ಪ್ರತಿಭಟನೆಯಲ್ಲಿ ನನಗೆ ಒಂದು ರೀತಿಯ ವೈಚಾರಿಕ ಕುತೂಹಲ ಉಂಟಾದುದರಿಂದ ಅಮ್ಮ ಅಪ್ಪ, ನಾನು ವಿಚಾರ ಮಾಡುತ್ತಿರುವುದೆಲ್ಲ ಬೇರೆ ಬೇರೆ ಸ್ತರಗಳಲ್ಲಿ ಎಂಬ ತಿಳಿವಳಿಕೆಯೊಂದಿಗೆ ತುಸು ನೋವು ಕೂಡಾ ಉಂಟಾಗಿತ್ತು. ಆದರೆ ಆ ಪ್ರತಿಭಟನೆಯ ಆಸಕ್ತಿಯನ್ನು ತಡೆದು ಹಿಡಿಯಲು ನನ್ನಿಂದಾಗಲಿಲ್ಲ. ಕ್ಲಾಸಿನಲ್ಲಿ ನಾನು ಬುದ್ಧಿವಂತ ಹುಡುಗ ಎಂಬ ಅಹಂಕಾರದ ಕವಚದಲ್ಲಿ ನಾನು ಪ್ರತಿಕ್ರಿಯಿಸುತ್ತಿರುವುದು ನನ್ನ ಪರಿಸರಕ್ಕೇ, ನನ್ನ ಅಪ್ಪ, ಅಮ್ಮಂದಿರಿಗೇ ಅಥವಾ ನಾನು ಯಾರು ಎಂಬ ಕುತೂಹಲವೂ ಹುಟ್ಟಲು ಸಾಧ್ಯವಾಗದಂತೆ ನನ್ನ ಅಸ್ತಿತ್ವದ ಕುರಿತ ಅಸ್ಪಷ್ಟ ಕಲ್ಪನೆಗಳಿಗೇ ಎಂಬ ಸಂದೇಹವೂ ನನಗೆ ಬರುತ್ತಿರಲಿಲ್ಲ.

ಸಾವು ಸಂಬಂಧಗಳನ್ನು ಕಟ್ಟುವ-ಕೆಡಹುವ ರೀತಿ ವಿಚಿತ್ರ ಎಂದು ನನಗೆ ತೋರತೊಡಗಿದ್ದು ಅಜ್ಜ ಸತ್ತಾಗ... ಎಲ್ಲ ಸಂಬಂಧಗಳೂ ಅರ್ಧ ನಿರೀಕ್ಷೆಯಲ್ಲಿ, ಅರ್ಧ ತಮ್ಮ ಅಸ್ತಿತ್ವದ ಕಲ್ಪನೆಯಲ್ಲಿ ನಿಲ್ಲುವುದು, ಹೆಣೆಯಬಹುದಾದ ನೆನಪುಗಳಲ್ಲಿ

ಎಂಬ ತಿಳಿವಳಿಕೆ ಮೂಡತೊಡಗಿದ್ದೂ ಪ್ರಾಯಶಃ ಅಂದೇ.

ನಾನು ಭವಿಷ್ಯದ ಬಗೆಗಿನ ಕನಸುಗಳನ್ನು ಹೆಣೆಯುತ್ತ ಅಭ್ಯಾಸದಲ್ಲಿ ನಿರತನಾಗಿದ್ದಾಗ, ಅಪ್ಪ ಹೃದಯಾಘಾತದಿಂದ ತೀರಿಕೊಂಡಿದ್ದರು. ಈ ಬದುಕಿನ ತಿರುವಿನಲ್ಲಿ-ಅಜ್ಜ ಸತ್ತಾಗ ಅತ್ತಂತೆ-ಅಮ್ಮ ಕಣ್ಣೀರಿಳಿಸಲಿಲ್ಲ. ಅತ್ತದ್ದು ನಾನು. ನನ್ನ ಕನಸುಗಳೆಲ್ಲ ನುಚ್ಚುನೂರಾಗುವ ಭಯವೇ ಈ ಕಣ್ಣೀರಿಗೆ ಕಾರಣವೇ ಎಂಬುದೂ ನನಗೆ ತಿಳಿದಿರಲಿಲ್ಲ. ಅಮ್ಮ ಆಗ ಹೇಳಿದ ಮಾತು ನನಗೆ ಚೆನ್ನಾಗಿ ನೆನಪಿದೆ. "ಮರೀ, ಧೈರ್ಯ ತಂದುಕೋಬೇಕು. ಈಗ ನೀನು ದೊಡ್ಡವನಾಗಿದ್ದಿ, ಎಲ್ಲ ಜವಾಬ್ದಾರಿ ನಿನ್ನ ಮೇಲಿದೆ..."

ಅಮ್ಮ ನನ್ನಲ್ಲಿ ಗುರುತಿಸಿದ್ದೇನು? ಮುರಿದ ಒಂದು ಸಂಬಂಧದ ಅರ್ಥ ಹಚ್ಚಲು ಕಷ್ಟವೆನಿಸಿದ ಸಂಬಂಧದ ನೋವಿನಿಂದ ಆಕೆ ಇನ್ನೊಂದು ಸಂಬಂಧದಲ್ಲಿ ತನ್ನವೇ ಕರ್ತವ್ಯಗಳನ್ನು ಕಾಣಲು ಆರಂಭಿಸಿದ್ದಳೇ?... ಸಂಬಂಧಗಳನ್ನು ರೂಪಿಸುವ ಮಾತಿನ ಆಚೆಯ ಮೌನದಲ್ಲೆ ನಾನು ಈ ಪ್ರಶ್ನೆಗೆ ಉತ್ತರವನ್ನು ಹುಡುಕಬೇಕು.

-೨-

ನನ್ನ ಅಪರಿಚಿತತೆ ತರುವ ಏಕಾಂತದ ನೋವನ್ನು ಕಳೆಯಲೆಂದು ನಾನು ಒಮ್ಮೊಮ್ಮೆ ಜುಹೂ ಸಮುದ್ರ ತೀರಕ್ಕೆ ಹೋಗುತ್ತೇನೆ. ಈ ಸಾಗರದ ಸಾನ್ನಿಧ್ಯ ನನಗೆ ಕೊಡುವುದು "ಏನನ್ನೋ ಕಳೆದುಕೊಂಡುದನ್ನು ಹುಡುಕಬೇಕು" ಎನ್ನುವ ನೋವನ್ನೇ. ಇಂಥದೇ ಹುಡುಕಾಟದ ಹಾದಿಯಲ್ಲಿ ಒಮ್ಮೆಗೇ ಬೆಳಕು ಕಂಡಂತೆ ಅನಿಸಿದ್ದು ಅವಳನ್ನು ಕಂಡಾಗ. ಆಗ ನಾನು ಅನುಭವಿಸಿದ ಪುಳಕ, ಭ್ರಮೆ ವಾಸ್ತವಗಳ ಕುತೂಹಲಕ್ಕಿಂತ ದೂರವಾದದ್ದು. ನನಗೆ ಮತ್ತೆ ಮತ್ತೆ ಬೇಕೆನಿಸುವಂಥದ್ದು ಎಂದು ತೋರಿದಾಗ... ಅವಳನ್ನು ಮೊದಲ ಬಾರಿಗೆ ನೋಡಿದಾಗ ಅತಿ ಪರಿಚಿತವೆನಿಸುವ ನನ್ನ ಪ್ರತಿಬಿಂಬವನ್ನೆ ಕಂಡಂತೆ ಭಾಸವಾಗಿತ್ತು.

ಪ್ರಥಮ ಪರಿಚಯದ ಯಾವ ಔಪಚಾರಿಕ ನಿಯಮವೂ ಅಗತ್ಯವೆನಿಸದಂತೆ ನಾವು ಹತ್ತಿರವಾಗಿದ್ದೆವು. ಮನಶ್ಶಾಸ್ತ್ರದ ಅಧ್ಯಾಪಕನಾದ ನನ್ನ ಮತ್ತು ಸಿಟಿ ಟೈಮ್ಸ್ ರಿಪೋರ್ಟರ್‌ಳಾದ ಅವಳ ಮಧ್ಯದ ಕೊಂಡಿ... "ಎಲ್ಲ ನಿರ್ಬಂಧಗಳಲ್ಲೆ ಬದುಕನ್ನು ಕಟ್ಟುವ" ನಮ್ಮ ಅನಿವಾರ್ಯತೆಯೇ? ನಾವು ಭೇಟಿಯಾದ ಗ್ರಂಥಾಲಯ, ಕಾಫಿ ಕುಡಿದ ಕೆಫೆಟೇರಿಯಾ, ಒಟ್ಟಾಗಿ ಸಂದರ್ಶಿಸಿದ ಧಾರಾವಿಯ ರತನ್‌ಬಾಯಿ... ಈ ವರ್ತುಲಗಳಿಂದ ಹೊರಗೆ ಬಂದು ನಮ್ಮ ದಾರಿ ಕವಲೊಡೆಯಲೇ ಬೇಕಿತ್ತು. ಆಕೆ ಇನ್ನು ಸಿಗುವುದೇ ಇಲ್ಲವೆ ಎಂಬ ಭಯ... ಜತೆಯಾಗಿಯೇ ಹೆಜ್ಜೆಯಿಡುತ್ತಿದ್ದವರು, ಕೆಲವೇ ತಾಸುಗಳ ಹಿಂದಿನ ಅಪರಿಚಿತತೆಯ ತೊಡಮೆಯನ್ನು ದಾಟಿ ಬಂದವರು, ಎಷ್ಟು ಕಾಲ ಹೀಗೆ ಹೆಜ್ಜೆಯಿಡುತ್ತ ಸಾಗಬಹುದು ಎಂಬ ಯೋಚನೆ ನನ್ನಲ್ಲಿ ಮೂಡಿದ್ದು ನಮ್ಮಿಬ್ಬರ ಗುರಿ ಯಾವುದೆಂಬ ಯೋಚನೆ ಕಾಡಿದಾಗ.

"ಜೀವನಕ್ಕೆ ಗತಿಯೂ ಇಲ್ಲ, ಗುರಿಯೂ ಇಲ್ಲ. ಮನಸ್ಸು ಕಲ್ಪಿಸಿಕೊಳ್ಳುವ ಗತಿ-ಗುರಿಗಳಲ್ಲವೆ ಎಲ್ಲ ಸಂಬಂಧಗಳನ್ನೂ ಅವುಗಳ ಮುಖವಾಡಗಳನ್ನೂ ಸೃಷ್ಟಿಸುತ್ತಿರುವುದು?" ಅವಳು ಅಂದುದು ನನ್ನ ಮಾತುಗಳನ್ನೆ ಎಂಬ ಭ್ರಮೆಯೂ ಉಂಟಾಗಿತ್ತಲ್ಲ. ಆಕೆ ಇನ್ನೂ ಮಾತನಾಡುತ್ತಿರಬೇಕೆಂದು ಅನಿಸುತ್ತಿತ್ತು. ನನ್ನ ಮನಸ್ಸಿನಲ್ಲಿ ಒಂದು ವಿಚಿತ್ರ ರೀತಿಯ ಧನ್ಯತೆಯ ಭಾವ ಕೆಲವೇ ತಾಸುಗಳ ಹಿಂದೆ ಅಪರಿಚಿತಳಾಗಿದ್ದ ಈ ಯುವತಿ ಮಾತಿನಲ್ಲೆ ಹತ್ತಿರವಾಗುತ್ತಿರುವುದೇಕೆ?

ನಾವಿಬ್ಬರೂ ಒಟ್ಟಿಗೆ ಕಂಡು ಆನಂದಿಸಿದ ಸರ್ರಿಯಲಿಸ್ಟ್ ಚಿತ್ರ, ಜೀವನದ ನಗ್ನತೆಯನ್ನು ಹತ್ತಿರದಿಂದ ನೋಡಿ ದಾಖಲಿಸಿಕೊಂಡ ಧಾರಾವಿಯ ದೃಶ್ಯ, ಜೊತೆಯಾಗಿ ಸಾಗಿದ ಟ್ಯಾಕ್ಸಿಯ ಪ್ರಯಾಣ, ಎದುರು ಬದುರಾಗಿ ಕುಳಿತು ಸ್ವೀಕರಿಸಿದ ಲಂಚ್... ಈ "ಎಲ್ಲಾದಕ್ಕೂ ಥ್ಯಾಂಕ್ಸ್" ಎಂದ ವಿದಾಯವಷ್ಟೇ ಅರ್ಥಪೂರ್ಣವೇ ಎನ್ನುವ ಸಂದೇಹದೊಡನೆಯೇ ಮನೆಗೆ ಮರಳಿದ್ದೆ.

ಈ ಮನಃಸ್ಥಿತಿಯಲ್ಲಿ ಮಗನ ಪ್ರೋಗ್ರೆಸ್ ಬಗೆಗೆ ಆತಂಕಿತಳಾಗಿದ್ದ, ಊಟವನ್ನೂ ಮಾಡದೆ ನನ

ಗಾಗಿ ಕಾದಿದ್ದ ನನ್ನವಳ ನೋವಿಗೆ ಸ್ಪಂದಿಸುವುದು ನನ್ನಿಂದಾಗಲಿಲ್ಲ... "ಬಾ ನಿನ್ನ ಊಟ ಮೊದಲು, ಉಳಿದುದೆಲ್ಲ ಆಮೇಲೆ" ಎಂದು ನಾನು ಹೇಳುತ್ತಿದ್ದಂತೆ ಆಕೆ ನನ್ನ ತೋಳಿಗೆ ಜೋತುಕೊಂಡು, ನನಗೆ ಅತ್ಯಂತ ಪರಿಚಿತವಾದ ಸ್ಪರ್ಶಸಖ್ಯದ ಭಂಗಿಯಲ್ಲಿ ನನ್ನ ಎದೆಗೆ ಒರಗಿ ಅವಳು ಅಳತೊಡಗಿದ್ದಳು. ನೋಟ, ಸ್ಪರ್ಶ, ಬಯಕೆಗಳು ಮುಪ್ಪುರಿಗೊಂಡ ಬಂಧನದಲ್ಲಿ, ಇವುಗಳ ನಡುವಣ ಗೆರೆಗಳೆಲ್ಲ ಅಳಿಸಿ ಹೋದಂಥ ಸ್ಥಿತಿಯಲ್ಲಿ ಈ ಕಣ್ಣೀರು ಸೂಚಿಸಿದ್ದು ಅಂತರವನ್ನೇ? ಆಕೆ ತಲೆ ಎತ್ತಿ ನೀರು ತುಂಬಿದ ಕಣ್ಣುಗಳಿಂದ ನನ್ನನ್ನೇ ನೋಡಿದಾಗ ಆಕೆಯ ಕಣ್ಣಾಲಿಗಳಲ್ಲಿ ನನ್ನ ಪ್ರತಿಬಿಂಬವಿತ್ತೇ? "ಮಗು ಆಗೋದು ಅದರ ಥರಾನೇ. ಪರೀಕ್ಷೆಯಲ್ಲೇ ಅದರ ಜೀವನ ಮುಗಿಯೋಲ್ಲ. ಈಚ್ ಮ್ಯಾನ್ ಹ್ಯಾಸ್ ಟು ಬೇರ್ ಹಿಸ್ ಓನ್ ಕ್ರಾಸ್..." ಎಂದ ಮಾತುಗಳಲ್ಲಿ ನನಗೇ ನಂಬಿಕೆಯಿತ್ತೇ?

ಮಗನ ಪ್ರಗತಿಯ ವರದಿ ಬಂದಾಗಲೆಲ್ಲ ಆಕೆ ನನ್ನ ಎದೆಗೆ ಜೋತು ಅಳುತ್ತಿದ್ದುದು ಈಗೀಗ ರೂಢಿಯಾಗತೊಡಗಿಯೇ ನನಗೆ ಕಿರಿಕಿರಿಯಾಗಲಾರಂಭಿಸಿದ್ದೇ, ನನಗೆ ತಿಳಿದಿಲ್ಲ.

ಆತನ ಭವಿಷ್ಯದ ಯೋಚನೆಯಲ್ಲಿ ಆಕೆ ಹುಡುಕುತ್ತಿದ್ದುದೇನು? ವಿದ್ಯೆಯಲ್ಲಿ, ಸೈಕಾಲಜಿ ಪಿಎಚ್.ಡಿ. ಆದ ನನ್ನ ಪ್ರತಿಬಿಂಬವನ್ನೇ? ರೂಪದಲ್ಲಿ ತನ್ನ ಪ್ರತಿಬಿಂಬವನ್ನೇ? ಆತ ಮನುಷ್ಯನಾಗಬೇಕು ಎಂದು ಆಕೆ ಹೇಳುತ್ತಿದ್ದಾಗಲೆಲ್ಲ ಎಂಥ ಮನುಷ್ಯ ಎಂದು ಆಕೆ ಯೋಚಿಸಿ ಹೇಳುತ್ತಿದ್ದಳೆ, ಅಥವಾ ಮನಸ್ಸು ಸೂಚಿಸುವ ದ್ವೈತವನ್ನು ಅನುಸರಿಸಿ ಹೇಳುತ್ತಿದ್ದಳೆ ನನಗೆ ಅರ್ಥವಾಗುತ್ತಿರಲಿಲ್ಲ. ಅವಳ ಅನುಪಮ ಸೌಂದರ್ಯದಲ್ಲಿ, ಆಕೆಯ ಆತ್ಮೀಯತೆಯಲ್ಲಿ, ನಾನು-ನೀನುಗಳೆಲ್ಲ ಒಂದಾದ ಅದ್ವೈತದಲ್ಲಿ ಬದುಕಿನ ಚಕ್ರ ಪೂರ್ಣವಾಗುವುದೆಂದು ತಿಳಿದಿದ್ದೆ. ಆದರೆ ಮಗರಾಯನ ಬುದ್ಧಿಮತ್ತೆ ತರುತ್ತಿದ್ದ ಶಂಕೆಗಳಿಂದಾಗಿ ನಾನು-ನೀನು-ಅವನು ಎಲ್ಲ ಬೇರೆ ಬೇರೆಯಾಗಿ ನಾವೆಲ್ಲ ಹುಡುಕುತ್ತಿರುವುದೇನು? ಎಂಬ ಸಂದೇಹದಲ್ಲಿ ಸಿಕ್ಕಿಕೊಂಡ ನಾನು ಸಾಧಿಸಿರುವುದೇನು.

ಈ ಸಂದಿಗ್ಧದಲ್ಲಿ ನಾನು ಸಿಟಿಲೈಟ್ ರಿಪೋರ್ಟರ್ ನೆಲೆಯನ್ನು, ಅವಳು ಕೊಟ್ಟ ಕಾರ್ಡನ್ನು ಕಳೆದುಕೊಂಡ ಉಳಿಸಿಕೊಂಡಿದ್ದೆ. ಅವಳ ಆಕರ್ಷಕ ಮುಖದ ಪ್ರತಿಬಿಂಬವನ್ನು ಮಾಡ ಆಶಾಳಲ್ಲಿ, ಟಾಟಾ ಕ್ಯಾನ್ಸರ್ ಸಂಸ್ಥೆಯ ನರ್ಸ್ ಕರುಣಾಳ ಮುಖದ ಅವಳನ್ನು ಕಾಣಲಾರದೆ ಸೋತಿದ್ದೆ. ನೋಡಿಯೂ ಮತ್ತೆ ನೋಡಬೇಕೆಂದುಕೊಂಡ ಪ್ರತೀಕ್ ನನಗೆ ಸಿಗಲಿಲ್ಲ. ಈ ಕಳೆದುಕೊಳ್ಳುವ ಮನಸ್ಥಿತಿ ಯಾವಾ ಆಸೆಯನ್ನೆ ಉಂಟುಮಾಡುತ್ತದೆ. ಹುಡುಕಾಟ ಯಾವಾಗಲೂ ಸಹಜಸ್ಥಿತಿಯಲ್ ತಿಳಿದಿದ್ದ ನನ್ನ ಮನಶ್ಶಾಸ್ತ್ರಜ್ಞನ ಮನಸ್ಸು ವ್ಯಗ್ರತೆ ಅಸಹಜವೇನೂ ಇರಲಿಲ್ಲ.

ಆದರೆ... ಯಾರು, ಯಾರನ್ನು, ಹೇಗೆ ಅರ್ಥ ಮಾಡಿಕೊಳ್ಳಬೇಕು?

-೩-

ಶಬ್ದಗಳಿಗೆ ಅರ್ಥದ ಪರಿಮಿತಿ ವ್ಯಾಪ್ತಿಗಳಿರುವಂತೆ ನೆನಪುಗಳಿಗೂ ಇವೆಯೇ ಎಂಬ ಯೋಚನೆ ನನ್ನನ್ನು ಮುತ್ತಿದ್ದು ಆ ನರ್ಸ್‌ಳ ಕುತ್ತಿಗೆಯಲ್ಲಿ ಚಿನ್ನದ ಚೈನಿಗೆ ಹೊಂದಿಕೊಂಡಿದ್ದ ಚಿನ್ನದ ಶಿಲುಬೆಯನ್ನು ನೋಡಿದಾಗ ಎಲ್ಲ ನೆನಪುಗಳೂ ಒಂದನ್ನೊಂದು ಸಂಧಿಸುವಾಗ, ಬೆಸೆದುಕೊಳ್ಳುವಾಗ, ಕೆಲವೊಮ್ಮೆ ಸೆಣಸಾಡುವಾಗ ಬೇರೆಯೇ ವಿಚಾರವು ಹುಟ್ಟಿಕೊಳ್ಳುವುದೇ?

ನಾನು ನನಗಾಗಿದ್ದ ಮಿದುಳಿನ ಆಪರೇಶನ್ ಅನ್ನೂ, ಆಸ್ಪತ್ರೆಯನ್ನೂ ಮರೆತು ಆ ಶಿಲುಬೆಯನ್ನು ನೋಡುತ್ತಲೆ ಹೇಳಿದ್ದು

"ಪ್ರತಿಯೊಬ್ಬನೂ ತನ್ನ ಶಿಲುಬೆಯನ್ನು ತಾನೇ ಹೊತ್ತುಕೊಳ್ಳಬೇಕು" ಎಂದೇ. ಹತ್ತಿರ ಬಂದ ನನ್ನ ಪ್ರೀತಿಯ ಮಡದಿ ಕುಳ್ಳಿಯ ಕಣ್ಣಂಚಿನಲ್ಲಿ ನೀರು... ಮುಖದಲ್ಲಿ ನಗು ಅರಳಿತ್ತು. ಆ ನೋಟ, ಆಕೆ ಹಾಸಿಗೆಯ ಬಳಿಗೆ ಬಂದು ನನ್ನ ಹೊದಿಕೆಯನ್ನು ಸರಿಪಡಿಸಿದಾಗಿನ ಸ್ಪರ್ಶ, ಮುಖದಲ್ಲಿ ಎಲ್ಲ ಭಾವಗಳೂ ಹೆಪ್ಪುಗಟ್ಟಿದಂತೆ. ಏನನ್ನು ಹೇಳಬಾರದು ಎಂಬ ಚಡಪಡಿಕೆ, ನೆನಪುಗಳ ಸಂಘರ್ಷದ ಗೊಂದಲವನ್ನೆ ಸೃಷ್ಟಿಸುತ್ತಿದ್ದಂತೆ ನನಗೆ ಭಾಸವಾದುದಾ

ದರೂ ಏಕೋ ನನಗೆ ತಿಳಿದಿಲ್ಲ.

ಕುಳ್ಳಿಯ ಮಾತುಗಳಿಂದ ನೆನಪುಗಳೆಲ್ಲ ಹೊಂದಿಕೊಂಡು ನನ್ನ ಅಸ್ವಸ್ಥತೆಯ ಚಿತ್ರ ಕಣ್ಣೆದುರು ಬಂದು ನಿಂತಿತ್ತು. ನಾನು ಸಾವಿನ ಅಂಚಿನಲ್ಲಿದ್ದೆ... ಏನನ್ನೂ ಮಾಡಲಾರದೆ ಕುಳ್ಳಿ ನೋಡುತ್ತಿರಬೇಕಾಗಿತ್ತು. ಆಗ ಅಸಹಾಯಕಳಾದ ಆಕೆಯ ನೆರವಿಗೆ ಬಂದದ್ದು, ವೈದ್ಯನಾಗಿ ಸಾವಿನೊಡನೆ ಹೋರಾಡಲು ಕಲಿಯುತ್ತಿದ್ದ ನೆರೆಯ ಹುಡುಗ. ಸಾವಿನೊಡನೆ ಯಾಕೆ ಹೋರಾಡಬೇಕು?

ಅದೇ, ಆ ಶಿಲುಬೆಯನ್ನು ಹೊತ್ತ ನರ್ಸ್ ಮಕ್ಕಳ ಬಗೆಗೆ ಕೇಳಿದಾಗ ಕಲ್ಕತ್ತದಲ್ಲಿರುವ ಟಿಂಕುವಿನ ಬಗೆಗೆ, ಅವನ ಸಿಗದಿರುವ ರಜದ ಬಗೆಗೆ, ಮಗ-ಸೊಸೆಯರ ಅನಾಸ್ಥೆಯ ಬಗೆಗೆ ಚಿಂತನೆ ಹರಿದಿತ್ತು. ನಾನು ತಣ್ಣಗೆ ಹೇಳಿದ್ದೆ "ನಮಗೆ ಒಬ್ಬನೇ ಮಗ. ಬೇರೆ ಮಕ್ಕಳು ಇಲ್ಲ" ಈ ಮಾತು ನೆನಪುಗಳ ಮಹಾಪೂರವನ್ನೇ ಹರಿಸಿತ್ತು.

ಇಲ್ಲ ಎನ್ನುವುದು ನೆನಪುಗಳನ್ನು ಒರೆಸಲು ಸಾಧ್ಯವಾಗಿಸುವುದಾದರೂ ನೆನಪುಗಳನ್ನು ಮರೆಸಲು ಸಾಧ್ಯವಾಗಿಸುವುದಿಲ್ಲವಲ್ಲ, ಇಲ್ಲ ಎನ್ನುವುದು ಅರ್ಧ ಸತ್ಯ ಮನಸ್ಸಿನ ಸ್ಥಿತಿಯನ್ನು ಸೂಚಿಸುವ ಸತ್ಯವಷ್ಟೇ ಹೊರತು ವಾಸ್ತವವನ್ನು ಬಿಂಬಿಸುವ ಸತ್ಯವಲ್ಲ.

ಪಿಂಕುಗೆ ಯಾಕೆ ಬದುಕೇ ಬೇಡವಾಯಿತು? ಆಕೆ ಬದುಕಿದ್ದಷ್ಟು ಕಾಲವೂ ನಿರಂತರ ಉತ್ಸಾಹದ ಚಿಲುಮೆಯಾಗಿದ್ದಳು. ಯಾರ ಕಣ್ಣೀರಿಗೂ ಕಾರಣವಾಗದೆ ತನ್ನ ವೈಯಕ್ತಿಕ ಪ್ರಶ್ನೆ-ಪರಿಸರಗಳೆರಡೂ ಸಮಷ್ಟಿಯಲ್ಲಿ ಬಿಡಿಸಲಾಗದಂತೆ ಬೆರೆತುಹೋಗಿದೆಯೇನೋ ಎಂದು ತೋರಿಸುತ್ತಿದ್ದ ಪಿಂಕು... "ಪಪ್ಪಾ... ಅಮ್ಮಾ" ಎಂದು ನಮ್ಮ ಹಿಂದೆ ಮುಂದೆ ಸುಳಿಯುತ್ತಾ ಜೀವನೋತ್ಸಾಹದ ಸೆಲೆಯನ್ನು ಉಕ್ಕಿಸುತ್ತಿದ್ದ ಪಿಂಕು... "ನಾನು ಹುಟ್ಟಿದ್ದೇ ಈ ಜಗತ್ತನ್ನು ಪ್ರೀತಿಸೋದಕ್ಕೆ ಪಪ್ಪಾ... ನನಗೆ ಪ್ರಚಂಡ ಆತ್ಮವಿಶ್ವಾಸ ಇದೆ ಪಪ್ಪಾ... ನೀವೇ ನೋಡ್ತೀರ ನಾನು ಎಲ್ಲಿ ತನಕ ಹೋಗ್ತೇನಂತ..." ಎಂದಿದ್ದಳು ಪಿಂಕೂ...

ಮೈಕೆಲ್ ಫೆರಾರೋನನ್ನು ಪ್ರೀತಿಸಿ ಮದುವೆಯಾಗಿದ್ದ ಪಿಂಕೂ... ಘ್ಯಾನಿನಿಂದ ಹೆಣವಾಗಿ ಜೋತಾಡಿದಳೇಕೆ?

ಅವಳ ಪುಟ್ಟ ಚೀಟಿ "ಪಪ್ಪಾ... ಅಮ್ಮಾ.. ಬದುಕಿನ ಎಲ್ಲ ಕಂದಕಗಳನ್ನು ಹೊಂದಿಸುವ ಉತ್ಸಾಹ ನನ್ನಲ್ಲಿದೆ ಎಂದು ತಿಳಿದಿದ್ದೆ. ನಾನೂ ಮೈಕೇಲ್ ಬೇರೆಯಲ್ಲವೆಂದೇ ನಂಬಿದ್ದೆ. ಪಪ್ಪಾ... ನಾನು ಮದುವೆಯಾದದ್ದು ಒಬ್ಬ ಷಂಢನನ್ನು ಪಪ್ಪಾ. ಒಬ್ಬ ವಿಕೃತ ವ್ಯಕ್ತಿಯನ್ನು". ಅವನ ಸುಂದರ ಮುಖದ ಹಿಂದೆ ವಿಕೃತ ವ್ಯಕ್ತಿತ್ವವಿದ್ದುದು ಹೌದೇ?

ಪಿಂಕೂ ಹೀಗೇಕೆ ಮಾಡಿದಳು? ಆಕೆಯ ಬಿಡುಗಡೆಗೆ ಬೇರೆ ದಾರಿಯೇ ಇರಲಿಲ್ಲವೇ? ಆಕೆಯ ನಿರ್ಧಾರದ ಕ್ಷಣದಲ್ಲಿ ಆಕೆ ಜೀವನವನ್ನು ಪ್ರಶ್ನಿಸಿದ ವಿಧಾನ ಯಾವುದೆಂದು ನನಗೆ ಹೇಗೆ ತಿಳಿಯಬೇಕು?

ಟಿಂಕೂ ಬಂದಿದ್ದಾನೆ. ಒಂದು ದೊಡ್ಡ ಎಂ.ಎನ್.ಸಿ.ಯ ಜನರಲ್ ಮ್ಯಾನೇಜರ್ ಆದ ತನ್ನನ್ನು 'ಟಿಂಕು' ಎಂದು ಕರೆಯಬಾರದೆಂದು ನಮ್ಮನ್ನು ಎಚ್ಚರಿಸುತ್ತಿದ್ದಾನೆ.

"ನಮಗೆ ಬದುಕಿನ ಬಗೆಗಿನ ಥಿಯರಿ ಬೇಕಾಗಿಲ್ಲ. ನಮಗೆ ಬೇಕಾದುದು ವಾಸ್ತವ. ಅಂದರೆ ರಿಯಾಲಿಟಿ. ಮನುಷ್ಯ ಬದಲಾಗ್ತಾನೇ ಇರ್‍ತಾನೆ. ಪಪ್ಪಾ" ಎಂದ ಅವನ ಮಾತಿಗೆ "ಹೌದು ಟಿಂಕೂ... ಬದಲಾಗ್ತಾ ಇರೋದೇ ಬದುಕು" ಎನ್ನುವುದರ ಹೊರತು ನಾನೇನು ಹೇಳಬಹುದಿತ್ತು?

ಮುಂದಿನ ತಿಂಗಳು ನಾವಿಬ್ಬರೂ ಕಲ್ಕತ್ತಾಕ್ಕೆ ಹೋಗಲೇಬೇಕೆಂಬ ಆಗ್ರಹದ ಆಮಂತ್ರಣ ನೀಡಿದ ಟಿಂಕೂ... ಏಕೆಂದರೆ ಆ ಸಮಯದಲ್ಲಿ ಅವನೂ ಅವನ ಪರಿವಾರವೂ ಹತ್ತು ದಿನಗಳ ಕಾಲ ನೇಪಾಳ, ಭೂತಾನ್ ಎಲ್ಲ ತಿರುಗಿಬರುವುದಿತ್ತು.

ಎಂದೋ ಕೇಳಿದ್ದ ಕತೆ ನೆನಪಾಗುತ್ತಿತ್ತು. ಅರುವತ್ತು ವರ್ಷ ವಯಸ್ಸಾದ ಮೇಲೆ ಮನುಷ್ಯನಿಗಿರೋದು ನಾಯಿಯ ಆಯಸ್ಸೂಂತ... ಮನೆ ಕಾಯುವ ವಯಸ್ಸು. ಟಿಂಕೂ ಯೋಚಿಸಿದ್ದು ಹಾಗೆಯೇ ಅಲ್ಲವೇ?

... ಒಂದು ತಿಂಗಳ ಮೇಲೊಂದು ರಾತ್ರಿ ಟಿ.ವಿ. ನೋಡುತ್ತಿದ್ದ ಕುಳ್ಳಿ ಪ್ರಸನ್ನಚಿತ್ತಳಾಗಿ "ತುಂಬ ಚೆನ್ನಾಗಿತ್ತು ಕತೆ... ನಮ್ಮ ಜೀವನವೆಲ್ಲ ಹಾಗೆಯೇ

ಇರ್ತಿದ್ದರೆ ಎಷ್ಟು ಚೆನ್ನಾಗಿರ್ತಿತ್ತು!"ಎಂದು ನಗು ನಗುತ್ತಲೇ ಮಲಗಲು ಹೋದಾಕೆ ಬೆಳಗ್ಗೆ ಏಳಲೇ ಇಲ್ಲ. ಹೆದರಿ ಆಕೆಯನ್ನು ಅಲುಗಾಡಿಸಿದೆ. ಎದೆ ಹೊಡೆದುಕೊಳ್ಳುತ್ತಿದ್ದಂತೆ ಆಕೆಯ ನಾಡಿಯ ಬಡಿತವನ್ನು ಹುಡುಕಿದೆ.

ನಾವು ಜೀವನದುದ್ದಕ್ಕೂ ಹುಡುಕುತ್ತಲೇ ಇರುತ್ತೇವೆ.

ಆಕಾಶಕ್ಕೊಂದು ಕಂದೀಲು

ನನ್ನ ತಾಯಿಯೊಡನೆ ಒಂದಾಗಿದ್ದು ಬೇರೆಯಾದ ಹುಟ್ಟಿನ ಕ್ಷಣದಿಂದ ನಾನು ನನ್ನ ಒಂಟಿತನವನ್ನು ನಿವಾರಿಸಬಹುದಾದ ಸಂಬಂಧಗಳನ್ನೇ ಬಯಸುತ್ತಿದ್ದೇನೆ. ಹಾಗೆಂದು ವಿಶ್ವದ ನಿಯತಿ ರೂಢಿಸುವ ಹಲವು ಸಂಬಂಧಗಳಲ್ಲಿ ನನಗೆ ವಾಸ್ತವ-ಅವಾಸ್ತವ ಪ್ರಶ್ನೆ ಕಾಡುವುದಿಲ್ಲ.

'ಬದುಕು ಎಂದರೆ ಇರುವುದು, ಸಾವು ಎಂದರೆ ಇಲ್ಲವಾಗುವುದು' ಎಂದು ಕೇಳಿದ್ದ ನೆನಪು. ಎಲ್ಲ ನೆನಪುಗಳೂ ಸಾಯದಿರಲು ಕಾರಣ ನಾನೇ... ನಾನು ರೂಪಿಸಿಕೊಳ್ಳುವ ಸಂಬಂಧಗಳೆಲ್ಲ ವಾಸ್ತವವೆಂದು ತಿಳಿಯುವ ಅಜ್ಞಾನದಲ್ಲಿಯೇ ನಾನು ಎಲ್ಲ ನೆನಪುಗಳಿಗೂ ಚಿರಂತನತೆಯನ್ನು ಕೊಡುತ್ತಿರುವೆನೆ?

ಎಂಬತ್ತು ವರ್ಷಗಳನ್ನು ದಾಟಿದ್ದ ನನ್ನ ಕಣ್ಣಲ್ಲಿ ಪರೆ ಬೆಳೆದಿತ್ತು. ದೃಷ್ಟಿ ಮಂದವಾಗಿತ್ತು. ಆದರೂ ನಾನು ಆಕೃತಿಗಳನ್ನು ಗುರುತಿಸುತ್ತಿದ್ದೆ... ಸ್ವರದಿಂದ ಸಂಬಂಧವನ್ನು ಕಲ್ಪಿಸಿಕೊಳ್ಳುತ್ತಿದ್ದೆ. ಅದು ವಾಸ್ತವವೆಂದು ನಂಬುತ್ತಿದ್ದೆ...

ನನ್ನ ಎಂಬತ್ತೊಂದನೆಯ ಹುಟ್ಟುಹಬ್ಬ... ಮನೆಮಂದಿಗೆಲ್ಲ ಸಂಭ್ರಮ. ವಾಸ್ತವದ ಕಲ್ಪನೆಯನ್ನೂ ತಂದುಕೊಳ್ಳಬಾರದಾಗಿದ್ದ ಆ ಸಂತೋಷದ ಸನ್ನಿವೇಶದಲ್ಲಿ, ನಾನು ಹುಟ್ಟಿದಂದಿನಿಂದಲೂ ಬೆಳೆಯುತ್ತಲೇ ಬಂದಿರುವ ಒಂಟಿತನದ ಪ್ರಶ್ನೆಯನ್ನು, ಹುಟ್ಟಿನಿಂದಲೇ ಪ್ರಾಯಶಃ ಬಂದಿರುವ ವಾಸ್ತವವೆನಿಸುವ ಐಕ್ಯವನ್ನು ಎಲ್ಲಿ, ಯಾವ ಸಂಬಂಧಗಳಲ್ಲಿ ಸಾಧಿಸಿಯೇನು ಎಂದು ಯೋಚಿಸುತ್ತಲೇ ಸಾವಿನತ್ತ ಧಾವಿಸುವ ಬದುಕಿನ ಚಿಂತನೆಯನ್ನು ಈ ನಗು, ಮಾತು ಯಾವುವೂ ತಟ್ಟಲಾರವಲ್ಲಾ....

ನಾನು ಪ್ರೀತಿಯನ್ನು ಕಳೆದುಕೊಂಡಾಗ-ಪ್ರೀತಿ ನನ್ನ ಹೆಂಡತಿಯ ನಿಜವಾದ ಹೆಸರಲ್ಲ-ನಾನು ಪ್ರೀತಿಯಲ್ಲಿ ಎಷ್ಟೆಲ್ಲ ಪ್ರತಿಬಿಂಬಗಳನ್ನು ಕಾಣಲು ತವಕಿಸಿದ್ದೆ ಎಂಬ ಯೋಚನೆಯೇ ಮುಖ್ಯವಾಗಿ ಕಾಡಿತ್ತು. ನಾನು ಬದುಕಿನುದ್ದಕ್ಕೂ ಪ್ರೀತಿಯನ್ನು ಹುಡುಕುತ್ತಲೇ ಇದ್ದೆ... ಅದು ಎಲ್ಲಿದೆಯೆಂದು. ಯಾವ ಪ್ರತಿಬಿಂಬದಲ್ಲಿ ಅದನ್ನು ಗುರುತಿಸಿಯೇನು ಎಂದು.. ಜೀವನದುದ್ದಕ್ಕೂ ಈ ಹುಡುಕಾಟ ಮುಗಿಯುವುದೇ ಇಲ್ಲವೇ ಎಂದು ಯೋಚಿಸಿಕೊಂಡಿದ್ದ ನನಗೆ, ಪ್ರೀತಿ ತೀರಿಕೊಂಡಾಗಲೂ ಅದು ಮುಗಿದಿಲ್ಲವೆಂದೆ ಅನಿಸಿತ್ತು. ಪ್ರೀತಿ ನನಗೆ ಬೇಕಾಗಿರುವುದು ನನ್ನ ಒಂಟಿತನವನ್ನು, ನನ್ನ ಅನಾಥಪ್ರಜ್ಞೆಯನ್ನು ಹೊಡೆದೋಡಿಸಬಹುದಾದ ಸಂಬಂಧಗಳ ಸೃಷ್ಟಿಗಾಗಿಯೇ?

ನಾವು ದೂರವಿಡಬೇಕೆಂದೆ ಬಯಸುವ ಸಾವು ವಾಸ್ತವವಾದುದರಿಂದ ನಮ್ಮ ಬದುಕಿನಲ್ಲಿ ಎಲ್ಲ ವಾಸ್ತವಗಳನ್ನು ದೂರವಿಡಬೇಕೆಂದು ನಮಗೆ ತೋರುವುದೇ?

ನನ್ನ ಪ್ರೀತಿ ಕೂಡಾ ಸತ್ತು ವಾಸ್ತವವಾದಳೇ?


ಸಾವು ಆತ್ಯಂತಿಕವಾಗಿ ನೆನಪುಗಳನ್ನು ಕೊನೆಗೊಳಿಸುವ ಒಂದು ಘಟ್ಟ. ಆದರೆ ನೆನಪುಗಳು ತಮ್ಮಷ್ಟಕ್ಕೆ ತಾವೇ ಸಾಯುವುದಿಲ್ಲ. ಸಾಯುವಂತಿದ್ದರೆ ಸಂಬಂಧಗಳೇ ಸೃಷ್ಟಿಯಾಗುತ್ತಿರಲಿಲ್ಲ. ಆ ಕಾರಣ ವಾಸ್ತವ-ಅವಾಸ್ತವಗಳ ಗೊಡವೆಯೇ ಬೇಕಾಗುತ್ತಿರಲಿಲ್ಲ.

ಸಾವು ಸತ್ಯವಾಗಿಯೇ ನನ್ನನ್ನು ಕರೆಯುತ್ತಿತ್ತು. ನನಗೆ ಬಂದುದು ಪುಪ್ಪುಸದ ಕ್ಯಾನ್ಸರ್... ಸೆಕೆಂಡರಿ ಚಿಹ್ನೆಗಳು ತೋರಿವೆ ಎಂದಾದರೆ ಸಾವು ತಡವಾಗುವುದಿಲ್ಲ, ಎಲ್ಲ ಹುಟ್ಟುಹಬ್ಬಗಳನ್ನು ಮರೆಸುವ ಸಾವೇ ನಿಜವಾದ ಹುಟ್ಟುಹಬ್ಬ... ನಾನು ಮತ್ತೊಮ್ಮೆ ತಾಯಿಯ ಗರ್ಭಾಶ್ರಯದಲ್ಲಿ... ಕತ್ತಲಲ್ಲೇ ಬೆಳಕು.

ನಾನು ಒಂಟಿಯಲ್ಲ.

ಆಯುರ್ವೇದ ಚಿಕಿತ್ಸೆ:

ಒಗ್ಗದಿರುವಿಕೆಯ ನೆಗಡಿ ಹಾಗೂ ದಮ್ಮು



— ಡಾ. ಧನ್ಯಕುಮಾರ ಇಜಾರಿ,
ಆಯುರ್ವೇದ ತಜ್ಞ
೧೦-ಎ, ೨ನೇ ಮಹಡಿ, ಯುರೇಕಾ ಟಾವರ್ಸ್,
ಟ್ರಾಫಿಕ್ ಐಲಂಡ್, ಹುಬ್ಬಳ್ಳಿ-೫೮೦೦೨೯

ಆಯುರ್ವೇದ ಚಿಕಿತ್ಸೆ:
ಒಗ್ಗದಿರುವಿಕೆಯ ನೆಗಡಿ ಹಾಗೂ ದಮ್ಮು

ನಮಗೆಲ್ಲಾ ತಿಳಿದಂತೆ ನೆಗಡಿಯೊಂದು ಸಾಮಾನ್ಯ ವಿಕಾರ. ಎಲ್ಲರಿಗೂ ಒಮ್ಮಿಲ್ಲೊಮ್ಮೆ ಅದರ ಅನುಭವ ಬರುವಂಥದೆ. ಆದರೆ ಎಲ್ಲ ನೆಗಡಿಗಳು ಒಂದೇ ರೀತಿಯವಲ್ಲ! ಹಾಗಿದ್ದರೆ "ನೆಗಡಿಯಂತಹ ರೋಗವಿಲ್ಲ; ಬುಗುಡೆಯಂತಹ ಆಭರಣವಿಲ್ಲ" ಎಂಬ ಗಾದೆ ಮಾತು ರೂಢಿಯಲ್ಲಿ ಬರುತ್ತಿರಲಿಲ್ಲ. ಹತ್ತಾರು ವರ್ಷಗಳಿಂದ ನೆಗಡಿಯಿಂದ ಬಳಲುವವರಿಗೇನೂ ಕಡಿಮೆ ಇಲ್ಲ. ಅಲ್ಲದೆ ಈ ಸಂಖ್ಯೆ ದಿನೆ ದಿನೆ ಹೆಚ್ಚುತ್ತಿದೆ. ಈ ತೊಂದರೆಯ ಮತ್ತೊಂದು ಉಪದ್ರವ ಎಂದರೆ ಇದು ಬರಬರುತ್ತ ಅನೇಕರಲ್ಲಿ ದಮ್ಮನ್ನುಂಟು ಮಾಡುವುದು, ಹಾಗೂ ಅನೇಕ ಊರ್ಧ್ವ ಮತ್ತು ಅಧೋ ಶ್ವಾಸಾಂಗ ರೋಗಗಳಿಗೆ ದಾರಿ ಮಾಡಿಕೊಡುವುದು.

ಇತ್ತೀಚೆಗೆ ಅಲರ್ಜಿಕ್ ನೆಗಡಿಯ ವಿಕಾರ ಹೆಚ್ಚುತ್ತಿರುವುದಕ್ಕೆ ಹೊಗೆ, ಧೂಳುಗಳಿಂದ ಆವೃತವಾದ ಪರಿಸರವೇ ಮುಖ್ಯ ಕಾರಣ. ಸಹಸ್ರಾವಧಿ ವರ್ಷಗಳ ಹಿಂದೆ ಪರಿಸರ ಮಾಲಿನ್ಯದ ಸಮಸ್ಯೆಯೆ ಇಲ್ಲದಿದ್ದಾಗ ಹೊಗೆ, ಧೂಳು, ಘಾಟು, ಋತುಗಳ ಬದಲಾವಣೆ, ಅತಿ ಶೈತ್ಯ ವಾತಾವರಣ ಇಲ್ಲವೆ ಅತಿ ಶೀತ ಪದಾರ್ಥ/ಪಾನೀಯಗಳ ಸೇವನೆಯು ನೆಗಡಿಗೆ ಕಾರಣವೆಂದು ಚರಕನು ಹೇಳಿದ್ದಾನೆ. ಇದೀಗ ಬೆಳೆಯುತ್ತಿರುವ ಔದ್ಯಮಿಕ ಕೇಂದ್ರಗಳು, ವಾಹನಗಳು ಉಗುಳುವ ಹೊಗೆ, ಹೆಚ್ಚುತ್ತಿರುವ ಜನಸಂದಣಿ, ಕೊಳಚೆ ಪ್ರದೇಶಗಳು ಹಾಗೂ ಕಣ್ಮರೆಯಾಗುತ್ತಿರುವ ಗಿಡ-ಗಂಟೆ, ಅರಣ್ಯಗಳು, ಗುಡ್ಡ-ನದಿ-ಸರೋವರಗಳು ಈ ಮೊದಲಾದ ಕಾರಣಗಳಿಂದ ಪರಿಸರ ಮಾಲಿನ್ಯದ ಪ್ರಭಾವ ಮಾನವನ ಮೇಲೆ ಆಗಿ ತನ್ಮೂಲಕ ಅಲರ್ಜಿಯ ವಿಕಾರಗಳು ಹೆಚ್ಚುತ್ತಿವೆ. ಈ ಮಾತು ಒಗ್ಗದಿರುವಿಕೆಯ ನೆಗಡಿ (ALLERGIC RHINITIS)ಗೂ ಅನ್ವಯಿಸುತ್ತದೆ.

ಈ ಸಮಸ್ಯೆ ಹಳ್ಳಿಗಳಿಗಿಂತ ಪಟ್ಟಣಗಳಲ್ಲೆ ಜಾಸ್ತಿ. ಹೆಚ್ಚುತ್ತಿರುವ ಉದ್ಯಮಗಳು, ಬೆಳೆಯುತ್ತಿರುವ ನಗರಗಳು, ವಾಹನಗಳು, ಕೊಳಚೆ ಪ್ರದೇಶಗಳು, ವಿಪರೀತ ಜನಸಂದಣಿ, ಸಾರ್ವಜನಿಕ ಆರೋಗ್ಯ ಅವ್ಯವಸ್ಥೆ ಇತ್ಯಾದಿ ಅನೇಕ ಕಾರಣಗಳಿಂದ ಪಟ್ಟಣ ಪ್ರದೇಶಗಳಲ್ಲಿ ಪರಿಸರ ಮಾಲಿನ್ಯ ಹೆಚ್ಚಾಗುತ್ತಿದೆ. ಇದರಿಂದ ಅನೇಕ ರೋಗಗಳು ಹುಟ್ಟುತ್ತವೆ.

ಸಾಮಾನ್ಯ ನೆಗಡಿಯ ಕಾರಣಗಳು:

ಶಾರೀರಕವಾದ ನೈಸರ್ಗಿಕ ಆವೇಗಗಳನ್ನು (Natural urges) ತಡೆಯುವುದು, ಅಜೀರ್ಣ, ಧೂಳನ್ನು ಸೇವಿಸುವುದು, ಅತಿ ಹೆಚ್ಚು ಮಾತನಾಡುವುದು, ಸಿಟ್ಟು, ಋತುಮಾನದಲ್ಲಿಯ ಬದಲಾವಣೆ, ತಲೆಗೆ ಅಪಾಯವನ್ನುಂಟು ಮಾಡುವ ಹೊಗೆಯ ಸೇವನೆ, ನಿದ್ರೆಗೆಡುವುದು, ಹಗಲು ನಿದ್ರೆ, ಅತಿ ತಂಪಾದ ನೀರನ್ನು ಕುಡಿಯುವುದು (ಮಂಜುಗಡ್ಡೆ ನೀರು, ಐಸ್‌ಕ್ರೀಮ್, ಕೋಲ್ಡ್ ಡ್ರಿಂಕ್ಸ್ ಮುಂತಾದವುಗಳು) ಈ ಎಲ್ಲ ಕಾರಣಗಳಿಂದ ಶಿರಸ್ಸಿನಲ್ಲಿ ಗಟ್ಟಿಯಾದ ಕಫವು ವಾತಪ್ರಕೋಪದಿಂದ ಕರಗಿ ಮೂಗಿನಲ್ಲಿ ನೀರಾಗಿ ಹರಿಯತೊಡಗುತ್ತದೆಂದು ಚರಕಾಚಾರ್ಯನು ಹೇಳುತ್ತಾನೆ. ಇದರಲ್ಲಿ ಸೀನು ಬರುವುದು, ತಲೆಭಾರ, ಮೈ-ಕೈಗಳ ನೋವುಗಳಿದ್ದು ಇದು ಇತರ ಉಪದ್ರವಗಳಿಗೆ ದಾರಿ ಮಾಡಿಕೊಡುವುದು.

ನಾಸಾ ಸ್ರಾವ:

ಮೂಗಿನಿಂದ ಗಟ್ಟಿಯಾಗಿ ಹಳದಿ ಇಲ್ಲವೆ ತಿಳಿಹಳದಿ ಅಥವಾ ಬಿಳಿ ವರ್ಣವಿರುವ ನೀರಿನಂತಹ ದ್ರವವು ಹೊರ ಬರುವುದಕ್ಕೆ 'ನಾಸಾಸ್ರಾವ'ಎನ್ನುತ್ತಾರೆ. ಮೂಗಿನ ಎರಡೂ ಹೊರಳೆಗಳ ಶ್ಲೇಷ್ಮತ್ವಚೆಯಲ್ಲಿ ಬಾವು ಬರುವುದರಿಂದ ತಿಳಿಯಾದ ನೀರಿನಂತಹ ದ್ರವ ಸ್ರವಿಸತೊಡಗುತ್ತದೆ. ಇದು ಹೆಚ್ಚಾದಾಗ ನಾಸಾ ವಿರೋಧವಾಗುತ್ತದೆ. ಇಲ್ಲಿ ಮತ್ತೆ ಕ್ರಿಮಿಸಾಂಕರ್ಯವಾದರೆ ಗಟ್ಟಿಯಾದ ಸಿಂಬಳ ಬರುವುದು.

ದೀಪ್ತರೋಗ:

ಮೂಗಿನ ಹೊರಳೆಗಳಲ್ಲಿ ಬಹಳವಾಗಿ ಬಾವು ಬಂದಾಗ ರಕ್ತಾಧಿಕ್ಯವೂ ಆಗಿ ವಿಶೇಷವಾಗಿ ಉರುಪು ಕಂಡುಬರುವುದು. ಇದು ತೀವ್ರ ಸ್ವರೂಪದ ನಾಸಾಶೋಥ (ACCUTE RHINITIS) ದಲ್ಲಿ ಕಂಡು ಬರುವುದು. ಜೋರಾಗಿ ಸೀನಿದಾಗ ಕೆಲವೇಳೆ ಮೂಗಿನಿಂದ ರಕ್ತವೂ ಬರಬಹುದು. ಸ್ವಲ್ಪ ಕೆರಳಿಕೆ ಉಂಟಾದರೂ ಸೀನುಗಳು ಬರುವವು.

ಪೀನಸರೋಗ:

ತಲೆಯಲ್ಲಿ ಭಾರ, ಅರುಚಿ, ಮೂಗಿನಿಂದ ನೀರಿನಂತೆ ದ್ರವ ಸುರಿಯುವುದು, ಜೀರ್ಣಜ್ವರ, ಮೇಲಿಂದ ಮೇಲೆ ಉಗುಳಬೇಕೆಂಬ ಪ್ರವೃತ್ತಿ ಇದರ ಲಕ್ಷಣಗಳು.

ಸಾನ್ನಿಪಾತಿಕ ಪ್ರತಿಶ್ಯಾಯ:

ಯಾವ ರೋಗಿಗೆ ಮೇಲಿಂದ ಮೇಲೆ ನೆಗಡಿ ಬಂದು ತಂತಾನೆ ಗುಣವಾಗಿ ಮತ್ತೆ ಮತ್ತೆ ಬರುವುದೋ ಕೆಲ ವೇಳೆ ಅದು ಪಕ್ವವಾಗಿ ಇನ್ನು ಕೆಲವು ವೇಳೆ ಅಪಕ್ವವಾಗಿರುವುದೋ ಅದಕ್ಕೆ 'ಸಾನ್ನಿಪಾತಿಕ ಪ್ರತಿಶ್ಯಾಯ' (CHRONIC COLD) ಎನ್ನುವರು.

ದುಷ್ಟ ಪ್ರತಿಶ್ಯಾಯ:

ಮೂಗು ಒಣಗುವಿಕೆ, ಅವರೋಧತ್ವ ಹಾಗೂ ತಂತಾನೆ ಸರಿಯಾಗುವುದು, ಶ್ವಾಸವು ದುರ್ಗಂಧಿತವಾಗುವುದು, ಮೂಗಿನಲ್ಲಿ ದುರ್ವಾಸನೆ ಬರುವುದು ಇದು

ದುಷ್ಟ ಪ್ರತಿಶ್ಯಾಯ ಎನಿಸುವುದು ಹಾಗೂ ಚಿಕಿತ್ಸೆಗೆ ಕಷ್ಟಸಾಧ್ಯವೆಂದು ಸುಶ್ರುತ ಹೇಳಿದ್ದಾನೆ. ಸರಿಯಾದ ಚಿಕಿತ್ಸೆ ತೆಗೆದುಕೊಳ್ಳದಿದ್ದರೆ ಎಲ್ಲ ನೆಗಡಿ ವಿಕಾರಗಳು ಕಾಲಾಂತರದಲ್ಲಿ ದುಷ್ಟ ಪ್ರತಿಶ್ಯಾಯ ಸ್ಥಿತಿಯನ್ನು ತಲುಪುವವು.

ನೆಗಡಿಯ ಉಪದ್ರವಗಳು:

ನೆಗಡಿಯು ಹೆಚ್ಚಾಗುತ್ತ ಹೋದಂತೆ ಕಿವುಡು, ದೃಷ್ಟಿಮಾಂದ್ಯ, ವಾಸನೆ ಗೊತ್ತಾಗದಿರುವುದು, ಕಣ್ಣುಗಳ ರೋಗಗಳು, ಬಾವು, ಅಗ್ನಿಮಾಂದ್ಯ, ಕೆಮ್ಮು ಇತ್ಯಾದಿ ಉಪದ್ರವಗಳು ಹುಟ್ಟಿಕೊಳ್ಳುವವೆಂದು ಸುಶ್ರುತನು ಹೇಳಿದ್ದಾನೆ.

ಆಯುರ್ವೇದದಲ್ಲಿ ನೆಗಡಿಯ ಬಗ್ಗೆ ಸಾಕಷ್ಟು ವಿವರಣೆ ದೊರಕುವುದು. ನೆಗಡಿಯ ಕಾರಣಗಳನ್ನು ಹೇಳುವಾಗ ಧೂಳಿನ ವಾತಾವರಣ ಬದಲಾವಣೆ ಹಾಗೂ ಅತಿಶೀತ ಪದಾರ್ಥಗಳ ಸೇವನೆಯಿಂದ ನೆಗಡಿ ಬರುವುದೆಂದೂ ಹೇಳಲಾಗಿದೆ. ದೀಪ್ತರೋಗವು ತೀವ್ರ ಸ್ವರೂಪದ ನಾಸಾಶೋಥವಾಗಿದೆ. ಪೀನಸ ರೋಗವು 'ಸೈನ್ಯುಸೈಟಿಸ್' ಆಗಿದೆ. ಸರಿಯಾದ ಕಾಲದಲ್ಲಿ ಚಿಕಿತ್ಸೆಯನ್ನು ತೆಗೆದುಕೊಳ್ಳದಿದ್ದರೆ ಆಗುವ ಸಾನ್ನಿಪಾತಿಕ ದುಷ್ಟ ಪ್ರತಿಶ್ಯಾಯಗಳನ್ನೂ ಹೇಳಿ ಹಳೇ ನೆಗಡಿಯನ್ನು ಅಲಕ್ಷಿಸುವುದರಿಂದಾಗುವ ಉಪದ್ರವಗಳನ್ನೂ ಆಯುರ್ವೇದ ಗ್ರಂಥಗಳಲ್ಲಿ ಹೇಳಲಾಗಿದೆ. ಆದರೆ ಇತ್ತೀಚಿಗೆ ಒಗ್ಗದಿರುವಿಕೆಯ ನೆಗಡಿ ಹೆಚ್ಚಾಗುತ್ತಿದೆ.

ಒಗ್ಗದಿರುವಿಕೆ ಎಂದರೇನು?

ಒಗ್ಗದಿರುವಿಕೆ (ALLERGY) ಎಂದರೆ ಪರಿಸರದ ಯಾವುದಾದರೂ ವಸ್ತುವಿನಿಂದ ದೇಹದ ಮೇಲೆ ಉಂಟಾಗುವ ದುಷ್ಪರಿಣಾಮ ಎಂದು ಸ್ಥೂಲವಾಗಿ ಹೇಳಬಹುದು. ಈ ತರಹದ ಪ್ರತಿಕ್ರಿಯೆಯು ಎಲ್ಲರಲ್ಲಿಯೂ ಉಂಟಾಗದೆ ನೂರರಲ್ಲಿ ಇಬ್ಬರಿಗೊ ಮೂವರಿಗೊ ಉಂಟಾಗಬಹುದು. ಇದಲ್ಲದೆ ಹಲವಾರು ರಾಸಾಯನಿಕ ವಸ್ತುಗಳು ಮತ್ತು ಕೈಗಾರಿಕೆ ಇಲ್ಲವೆ ಕಾರ್ಖಾನೆಗಳಲ್ಲಿ ಬಳಸಲ್ಪಡುವ ವಸ್ತುಗಳು ದೇಹದ ಮೇಲೆ ದುಷ್ಪರಿಣಾಮ ಬೀರಬಲ್ಲವು. ಅಲರ್ಜಿಕ್ ಪ್ರತಿಕ್ರಿಯೆಯಲ್ಲಿ ಸಾಮಾನ್ಯವಾಗಿ ದೇಹದ ಅಂಗಾಂಗಗಳ ಮೇಲೆ ಯಾವ ಕೆಟ್ಟ ಪರಿಣಾಮವನ್ನುಂಟು ಮಾಡದೆ ಇರುವ ವಸ್ತು ಹಲವು ಜನರಲ್ಲಿ ಮಾತ್ರ ಪ್ರತಿಕೂಲವಾದ ಬದಲಾವಣೆಗಳನ್ನುಂಟು ಮಾಡಬಲ್ಲದು. (ಉದಾ: ಮನೆಧೂಳು) ಕಸ ಗುಡಿಸುವಾಗ ಏಳುವ ಧೂಳಿಗೆ ಅಲರ್ಜಿ ಇರುವವರು ಮಾತ್ರ ಧೂಳಿನ ವಾಸನೆ ಬಂದೊಡನೆ ಸೀನುವುದಕ್ಕೆ ಪ್ರಾರಂಭಿಸುತ್ತಾರೆ. ಕೆಮ್ಮಲೂಬಹುದು. ಆದರೆ ಮನೆಯಲ್ಲಿ ಇರುವವರಿಗೆಲ್ಲ ಈ ರೀತಿ ಆಗದು. ಅಂದರೆ ಅಲರ್ಜಿಯ ವಿಕಾರವಿದ್ದವರಿಗೆ ಮಾತ್ರ ಅತಿ ಸೂಕ್ಷ್ಮವಾದ ಪ್ರತಿಕ್ರಿಯೆಯನ್ನುಂಟು ಮಾಡುವ ಪ್ರವೃತ್ತಿ ಇದೆ ಎಂದಂತಾಯಿತು. ಗಾಳಿಯಲ್ಲಿ ಅತಿ ಕಡಿಮೆ ಧೂಳು ಹರಡಿದರೂ ಅಲರ್ಜಿ ಇರುವ ವ್ಯಕ್ತಿ ಅದಕ್ಕೆ ಪ್ರತಿಕ್ರಿಯೆ ತೋರಿಸಬಲ್ಲ!

ಅಲರ್ಜನ್‌ಗಳು:

ಪ್ರಕೃತಿಯಲ್ಲಿರುವ ಹಲವಾರು ವಸ್ತುಗಳು ಮಾನವನಲ್ಲಿ ಅಲರ್ಜಿಕ್

ಪ್ರತಿಕ್ರಿಯೆಯನ್ನುಂಟು ಮಾಡಬಲ್ಲವು. ಈ ಅಲರ್ಜೆನ್ ಮೂಗು, ಬಾಯಿಯ ಮೂಲಕ ಶ್ವಾಸದೊಡನೆ ದೇಹದಲ್ಲಿ ಪ್ರವೇಶಿಸಬಹುದು. ಅಥವಾ ಆಹಾರದ ರೂಪದಲ್ಲಿ ಜೀರ್ಣಾಂಗಗಳನ್ನು ಸೇರಿಯೂ ಪ್ರತಿಕ್ರಿಯೆಯನ್ನುಂಟು ಮಾಡಬಹುದು. ಅಲ್ಲದೆ ಸದಾ ವಾತಾವರಣಕ್ಕೆ ಸಂಪರ್ಕ ಹೊಂದಿರುವ ಚರ್ಮ ಅಥವಾ ಕಣ್ಣುಗಳಲ್ಲಿ ಅಲರ್ಜಿಯು ನೇರವಾಗಿ ಉಂಟಾಗಬಹುದು. ಈ ಅಲರ್ಜೆನ್ನುಗಳು ಹಲವು ವಿಧದಲ್ಲಿರುತ್ತವೆ.

೧) **ಧೂಳು:** ಹತ್ತಿಯ ಹುಡಿ, ಕೆಲವು ಬಗೆಯ ಬೂಷ್ಟುಗಳು, ಚರ್ಮದಿಂದ ಉದುರುವ ಹೊಟ್ಟು, ಧೂಳಿನಲ್ಲಿರುವ ಮೈಟ್ ಎಂಬ ಕೀಟ (ಇದು ವಿಶೇಷವಾಗಿ ಹಾಸಿಗೆಯ ಪರಿಕರಗಳಲ್ಲಿದ್ದು ತೇವಾಂಶವಿದ್ದಾಗ ಹೆಚ್ಚು ಜಾಗ್ರತೆಯಾಗಿರುವುದು. ಆದ್ದರಿಂದ ಆ ಕಾಲದಲ್ಲಿ ಅಲರ್ಜಿಯ ರೋಗಗಳು ಜಾಸ್ತಿ). ಕಾರ್ಖಾನೆಗಳಲ್ಲಿಯ ಧೂಳು, ಅಲ್ಲಲ್ಲಿ ಸಣ್ಣ ಪ್ರಮಾಣದಲ್ಲಿ ತಯಾರಾಗುವ ವಸ್ತುಗಳಿಂದುಂಟಾಗುವ ಧೂಳು ಹಾಗೂ ಮನೆ ಧೂಳು ಸಾಮಾನ್ಯವಾಗಿ ಅಲರ್ಜಿಯನ್ನುಂಟುಮಾಡುವ ವಸ್ತುಗಳು. ನಾವು ದಿನದಲ್ಲಿ ಬಹುತೇಕ ವೇಳೆಯನ್ನು ಮನೆಯಲ್ಲಿಯೇ ಕಳೆಯುವುದರಿಂದ ಹಾಗೂ ಧೂಳನ್ನು ಪೂರ್ತಿ ನಿರ್ಮೂಲನಗೊಳಿಸಲು ಸಾಧ್ಯವಾಗದೆ ಇರುವುದರಿಂದ ಇದರಿಂದಾಗುವ ಅಲರ್ಜಿಯನ್ನು ಸಂಪೂರ್ಣವಾಗಿ ಹೋಗಲಾಡಿಸಲಾಗುವುದಿಲ್ಲ.

೨) **ಪರಾಗಗಳು:** ಜಟಿಲವಾದ ರಚನೆಯುಳ್ಳ ವಿವಿಧ ಪರಾಗಗಳು ಪಾರ್ಥೇನಿಯಂ ಸಹಿತ ಅಲರ್ಜಿಯನ್ನುಂಟು ಮಾಡುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ. ಈ ಪರಾಗಗಳು ಗಾಳಿಯಲ್ಲಿ ಹಾರಾಡುವುದರಿಂದ ನೀರಿನ ಮೂಲಕ ಹಾಗೂ ಕೀಟ ಸ್ಪರ್ಶದ ಮೂಲಕ ಹರಡುತ್ತವೆ. ವಿವಿಧ ಗಿಡಮರಗಳು ವರ್ಷದ ಬೇರೆ ಬೇರೆ ಋತುಗಳಲ್ಲಿ ಪರಾಗಗಳನ್ನು ಉತ್ಪಾದಿಸುತ್ತವೆ.

೩) **ಬೂಷ್ಟುಗಳು:** (MOULDS) ಆರ್ದ್ರವಾಗಿರುವ ವಾತಾವರಣದಲ್ಲಿ ಬೆಳೆಯುವ ಈ ಬೂಷ್ಟುಗಳು ಗಾಳಿಯಲ್ಲಿ ಹಾರಾಡುವ ಬೀಜಕಣ (SPORES)ಗಳನ್ನು ಉತ್ಪಾದಿಸುತ್ತವೆ. ಇವುಗಳು ಅಲರ್ಜಿಯನ್ನುಂಟು ಮಾಡುತ್ತವೆ.

೪) **ಆಹಾರ:** ಮೀನು, ತತ್ತಿ, ಹಾಲು ಹಾಗೂ ದುಗ್ಧಜನ್ಯ ಪದಾರ್ಥಗಳು, ಐಸ್‌ಕ್ರೀಮ್, ಹಣ್ಣುಗಳು, ಬಾಳೆ, ಹುಳಿಹಣ್ಣುಗಳು, ಬದನೆಕಾಯಿ, ಬೆಂಡೆಕಾಯಿ, ಚವಳಿಕಾಯಿ ಇತ್ಯಾದಿ.

೫) **ವಾಸನೆ:** ಮೀನಿನ ವಾಸನೆ, ತತ್ತಿ, ಕಾಫಿ, ಹುಳಿಹಣ್ಣುಗಳು, ತಂಬಾಕು ಗಂಧ, ಗುಗ್ಗುಳ, ಸಾಬೂನು, ಪೆಟ್ರೋಲ್, ಡೀಜೈಲ್, ಫ್ಯಾಕ್ಟರಿಯ ಹೊಗೆ, ಒಗ್ಗರಣೆಯ ವಾಸನೆ ಗಂಧಕ-ಕಲ್ಲಿದ್ದಲು ಸುಡುವ ವಾಸನೆ.

೬) **ಔಷಧಿಗಳು:** ಪೆನಿಸಿಲಿನ್, ಸಲ್ಫಾ, ಬಿ. ಜೀವಸತ್ವದ ಚುಚ್ಚುಮದ್ದು, ಜೀವರೋಧಕಗಳು, ನೋವನ್ನು ಕಡಿಮೆ ಮಾಡುವ ಅನಾಲ್ಜಿನ್, ಆಸ್ಪಿರಿನ್‌ಗಳು, ಫೆನಿಲ್ ಬುಟಾಯೋನ್, ಆಕ್ಸೆ ಫೇನಿಲ್ ಬೂಟಾರ್ಝಾನ್, ಇಬುಬ್ರುಫೆನ್ ಇತ್ಯಾದಿಗಳು.

೭) **ಸೂಕ್ಷ್ಮ ಜೀವಾಣುಗಳು:** ಬ್ಯಾಕ್ಟೀರಿಯಾ ಹಾಗೂ ಶಿಲೀಂಧ್ರಗಳು.

೮) ಜಂತುಗಳು: ದುಂಡು ಜಂತು, ಪಿನ್ ಹಾಗೂ ಪಟ್ಟೆ ಜಂತುಗಳು.

೯) ಪರಿಸರ: ಯಾವಾಗಲೂ ತೇವವಾಗಿರುವಂತಹ ಪರಿಸರ, ಗಿಡಗಳು ಹೆಚ್ಚಾಗಿರುವ ಪ್ರದೇಶಗಳು ಮೂಗಿನ ಅಲರ್ಜಿ ಮತ್ತು ದಮ್ಮಿನ ರೋಗಿಗಳಿಗೆ ಒಗ್ಗುವುದಿಲ್ಲ. ಮಳೆಗಾಲ, ಮೋಡ ಮುಸುಕಿದ ಹವಾಮಾನ, ಚಳಿಗಾಲಗಳಲ್ಲಿ ಅಲರ್ಜಿ ನೆಗಡಿ, ದಮ್ಮುಗಳು ಕಂಡುಬರುವುದು ಹೆಚ್ಚು. ಬೇಸಿಗೆ ಕಾಲದಲ್ಲಿ ಧೂಳು ವಿಶೇಷವಾಗಿರುವುದರಿಂದ ಆಗ ಈ ತೊಂದರೆ ಹೆಚ್ಚಾಗಿ ಕಂಡುಬರುವುದು.

೧೦) **ಮಾನಸಿಕ ಕಾರಣಗಳು:** ಉದ್ವೇಗ, ಅತಿಯಾದ ದುಃಖ ಇಲ್ಲವೆ ಸಂತೋಷಗಳು ಅಲರ್ಜಿಯನ್ನು ಉಂಟುಮಾಡುವುದಕ್ಕೆ ಸಹಕಾರಿಗಳಾಗಿವೆ.

೧೧) **ಅನುವಂಶಿಕತೆ:** ಅಲರ್ಜಿಯ ಸುಮಾರು ೭೦% ರೋಗಿಗಳಲ್ಲಿ ಅನುವಂಶಿಕತೆಯ ಇತಿಹಾಸ ದೊರಕುವುದು.

೧೨) **ಇನ್ನಿತರ ಅಲರ್ಜಿಗಳು:** ಮುಖಕ್ಕೆ ಹಚ್ಚುವ ಪೌಡರ್, ಕ್ರೀಮ್‌ಗಳು, ಕುಂಕುಮ, ಸೋಪುಗಳು, ಲಿಪ್‌ಸ್ಟಿಕ್‌ಗಳು ಕೂದಲು, ಸೀಗೆಕಾಯಿ ಪುಡಿ, ಪಾತ್ರೆ ತೊಳೆಯಲು ಉಪಯೋಗಿಸುವ ಪುಡಿ, ಸೊಳ್ಳೆ ನಿವಾರಣೆಗೆ ಹಚ್ಚುವ ಬತ್ತಿ, ಬಣ್ಣಗಳು, ರಾಸಾಯನಿಕ ಗೊಬ್ಬರಗಳು.

ಮುಖ್ಯಾಂಶಗಳು

ಋತುಕಾಲದಲ್ಲಿ ಅಲರ್ಜಿ ಲಕ್ಷಣಗಳು ವಿಶೇಷವಾಗಿ ಕಂಡುಬರುವವು.

ಗರ್ಭಿಣಿಯರಲ್ಲಿ ದಮ್ಮಿನ ವೇಗ ಕಡಿಮೆ, ಆದರೆ ಮೂಗಿನ ಅಲರ್ಜಿ ಹೆಚ್ಚಾಗಿ ಕಂಡುಬರುವುದು.

ಶಾಲಾ ಮಕ್ಕಳಿಗೆ ಅದರಲ್ಲೂ ವಿಶೇಷತಃ ಹದಿವಯಸ್ಕರಲ್ಲಿ ಒಗ್ಗದಿರುವಿಕೆಯ ಲಕ್ಷಣಗಳು ಕಂಡುಬರಲಾರಂಭಿಸುವವು.

ಚಿಕ್ಕ ಮಗುವಿದ್ದಾಗ ಇಸಬು ನಂತರ ಅಲರ್ಜಿಕ್ ನೆಗಡಿಯಾಗಿ ತದನಂತರ ಅದು ದಮ್ಮಿನ ಸ್ವರೂಪಕ್ಕೆ ತಿರುಗುವುದು.

ಮಧುಮೇಹ ರೋಗಿಗಳಲ್ಲಿ ಅಲರ್ಜಿ ತುಂಬ ಕಡಿಮೆ.

ತುಂಬ ಬಲವಂತರಾದವರಲ್ಲಿ ಹಾಗೂ ಉದ್ವೇಗದ ಸ್ವಭಾವದವರಲ್ಲಿ ಒಗ್ಗದಿರುವಿಕೆಯ ಲಕ್ಷಣಗಳು ಹೆಚ್ಚಾಗಿ ಕಂಡುಬರುತ್ತವೆ.

ಬುದ್ಧಿಮಾಂದ್ಯವಿದ್ದವರಲ್ಲಿ ಅಲರ್ಜಿಯ ವಿಕಾರಗಳು ಕಡಿಮೆ.

ಮೈಯಲ್ಲಿ ಕ್ಯಾಲ್ಸಿಯಂ, ಸಿ, ಡಿ ಜೀವಸತ್ವಗಳ ಕೊರತೆಯುಂಟಾದಾಗ ಅಲರ್ಜಿ ಉಂಟಾಗುವುದು.

ಮೂಗಿನಲ್ಲಿ ಶಸ್ತ್ರಚಿಕಿತ್ಸೆ ಬಳಿಕ ತೋರಿಬರುವ ಒಗ್ಗದಿರುವಿಕೆಯ ಲಕ್ಷಣಗಳು.

೫೦ ವರ್ಷಗಳಾದ ಬಳಿಕ ಅಲರ್ಜಿಕ್ ನೆಗಡಿ ಆಗುವುದು ತೀರಾ ಕ್ವಚಿತ್ತಾಗಿ.

ಅಲರ್ಜಿ ಉಂಟಾಗುವುದು ಹೇಗೆ?

ಶರೀರದಲ್ಲಿ ಪ್ರತಿರೋಧ ಶಕ್ತಿಯ ಒಂದು ಸಂಕೀರ್ಣ ವ್ಯವಸ್ಥೆ ಇದೆ. ಈ ರಕ್ಷಣಾ ವ್ಯವಸ್ಥೆಯಲ್ಲಿ ಎರಡು ಪ್ರಮುಖ ಭಾಗಗಳಿರುವವು. ಅವುಗಳಲ್ಲಿ ಮೊದಲನೆಯದೆಂದರೆ ರಕ್ತದಲ್ಲಿನ ವಿಶೇಷ ಪ್ರೋಟೀನುಗಳಾದ

ಗ್ಯಾಮಾಗ್ಲೋಬಿಲಿನ್‌ಗಳು ಹಾಗೂ ರಕ್ಷಣಾ ವ್ಯವಸ್ಥೆಯ ಜೀವಕೋಶಗಳು. ಇವು ರಕ್ತದಲ್ಲಿ ಹೇರಳವಾಗಿದ್ದು ರೋಗಾಣುಗಳ ವಿರುದ್ಧ ಹೋರಾಟ ನಡೆಸುತ್ತವೆ. ಅಲರ್ಜಿಯ ಪ್ರಕೃತಿಯವರಲ್ಲಿ ಇವು ಹೆಚ್ಚಿನ ಪ್ರಮಾಣದಲ್ಲಿರುತ್ತವೆ ಎನ್ನಬಹುದು. ಅಲ್ಲದೆ ದೇಹದ ಎಲ್ಲ ಅಂಗಾಂಗಗಳಲ್ಲೂ ಮಾಸ್ಟ್‌ಸೆಲ್ ಎಂಬ ವಿಶೇಷ ಕಣಗಳಿರುತ್ತವೆ. ಇವುಗಳಲ್ಲಿ ಹಿಸ್ಟಮಿನ್ ಎಂಬ ರಸಾಯನಿಕ ವಸ್ತು ಶೇಖರಗೊಂಡಿರುತ್ತದೆ. ಇದರ ಪ್ರಮುಖ ಕಾರ್ಯವೆಂದರೆ ರಕ್ತನಾಳಗಳನ್ನು ಸಂಕುಚಿತಗೊಳಿಸುವುದು ಹಾಗೂ ರಕ್ತನಾಳಗಳಲ್ಲಿ ಹೆಚ್ಚು ರಕ್ತ ಸಂಗ್ರಹಗೊಳ್ಳುವಂತೆ ಮಾಡುವುದು. ಅದರಿಂದಲೇ ಪಿತ್ತಗಂಧೆಗಳು ಕಾಣಿಸಿಕೊಳ್ಳುವವು. ಶ್ವಾಸನಾಳ ಸಂಕುಚಿಗೊಂಡು ದಮ್ಮು ಉಂಟಾಗಲೂ ಈ ಹಿಸ್ಟಮಿನ್‌ಗಳೇ ಕಾರಣವೆನಿಸುವವು.

ಅಲರ್ಜಿಕ್ ನೆಗಡಿ:

ಇದು ಸತತವಾಗಿರುವ ಗುಣಕಾಣದ, ಉತ್ತೇಜಕ ಕಾರಣಗಳಿಂದ ಹೆಚ್ಚಾಗುವಂಥದು. ಮೇಲಿಂದ ಮೇಲೆ ಸೀನು, ಮೂಗಿನಿಂದ ನೀರಿನಂತಹ ದ್ರವ ಸೋರುವುದು, ಮೂಗು ಕಟ್ಟಿಕೊಂಡು ಉಸಿರಾಡಲು ಕಷ್ಟವಾಗುವುದು ಇವು ಮುಖ್ಯ ಲಕ್ಷಣಗಳು.

ಮೂಗಿನ ತಿಳಿಸ್ರಾವ ಕೈವಸ್ತ್ರ ಜಿಗುಟಾಗಿರುವಷ್ಟು ಗಟ್ಟಿಯಾಗಿರುವುದಿಲ್ಲ. ಮೂಗಿನ ಹೊರಳೆಗಳ ಒಳಗಿನ ಶ್ಲೇಷ್ಮ ತ್ವಚೆಯು ಕೆಂಪಗಾಗಿರುವುದು. ಮೂಗಿನಲ್ಲಿ ಕೆರೆತವಿರುವುದು. ಮೂಗು ಕಟ್ಟಿದಾಗ ಉಸಿರಾಟದ ತೊಂದರೆಯಾಗಿ ಹೊರಳಿ ಮಲಗಿಕೊಂಡರೆ ಉಸಿರಾಟ ಸರಾಗವಾಗುವುದು. ಮೂಗಿನ ಸ್ರಾವವನ್ನು ಸೂಕ್ಷ್ಮ ದರ್ಶಕ ಯಂತ್ರದಲ್ಲಿ ಪರೀಕ್ಷಿಸಿದರೆ ಇಸಿನೋಫಿಲ್‌ಗಳು ವಿಶೇಷವಾಗಿ ಕಂಡು ಬರುವವು. ಈ ರೋಗಿಗಳಿಗೆ ಫ್ಲು ಇತ್ಯಾದಿ ವೈರಸ್ ಮೂಲದ ರೋಗ ಬಂದಾಗ ಲಕ್ಷಣಗಳು ಅತಿ ತೀವ್ರಸ್ವರೂಪದ್ದಾಗಿರುವುದು. ಇದಕ್ಕೆ ಯಾವುದೇ ಉಪಾಯ ಕಾಣದೆ ಹತ್ತಾರು ವರ್ಷಗಳಿಂದ ಎಲ್ಲ ಋತುಮಾನಗಳಲ್ಲಿ ಬಳಲುವ ರೋಗಿಗಳಿದ್ದಾರೆ. ಹಿಸ್ಟಮಿನ್‌ಗಳು ಈ ನೆಗಡಿಗೆ ಕಾರಣವಾಗಿರುವುದರಿಂದ ಇವುಗಳಿಗೆ ಕೊಡುವ ಚಿಕಿತ್ಸೆ ಕೇವಲ ತಾತ್ಕಾಲಿಕವಾಗಿ ಗುಣಕೊಡುವಂಥದು. ಇದೇ ಹಿಸ್ಟಮಿನ್‌ಗಳಿಂದಲೇ ಮೂಗಿನಲ್ಲಿಯ ರಕ್ತನಾಳಗಳು ಒತ್ತಲ್ಪಡುವುದರಿಂದ ಹಾಗೂ ರಕ್ತ ಪರಿಚಲನೆ ಬಹಳ ಹೆಚ್ಚಾಗುವುದರಿಂದ ಮೂಗು ಕಟ್ಟುವುದು ಹಾಗೂ ಮೂಗು ಸೋರುತ್ತಿರುವುದು. ಸಾಮಾನ್ಯ ನೆಗಡಿಯಲ್ಲಿ ಈ ಲಕ್ಷಣಗಳು ೨-೩ ದಿವಸಗಳವರೆಗಿದ್ದು ಅನಂತರ ತಂತಾನೆ ಮಾಯವಾದರೆ ಅಲರ್ಜಿಕ್ ನೆಗಡಿಯಲ್ಲಿ ಅವು ಹಾಗೆಯೇ ಮುಂದುವರೆಯುವವು.

ಅಲರ್ಜಿಕ್ ನೆಗಡಿಯ ವಿಕಾರವಿದ್ದರಿಗೆ ದಮ್ಮು ಬರುವುದು ತೀರ ಸಾಮಾನ್ಯ. ನಾನು ಕಂಡ ಪ್ರಕಾರ ಅನೇಕ ದಮ್ಮಿನ ರೋಗಿಗಳು ತಮಗೆ ಹಿಂದೆ ಅಲರ್ಜಿಕ್ ನೆಗಡಿ ಇದ್ದಿತೆಂದೋ ಅಥವಾ ದಮ್ಮಿನ ತೊಂದರೆ ಈಗಲೂ ಇದೆ ಎಂದೋ ಹೇಳುತ್ತಾರೆ. ಇದರೊಡನೆ ಅನುವಂಶಿಕ ದಮ್ಮಿನ ಇತಿಹಾಸ, ಸ್ತ್ರೀಯರಲ್ಲಿ ಪ್ರಥಮ ಋತುಸ್ರಾವ, ಮದುವೆ ಹಾಗೂ ಮುಟ್ಟುನಿಲ್ಲುವ ಕಾಲ, ಉದ್ವೇಗ ಮೂಲದ ಮಾನಸಿಕ ಕಾರಣ, ತೇವಾಂಶ ಹೆಚ್ಚಿಗಿದ್ದ ಹವಾಮಾನ, ಕ್ರಿಮಿ ಸಾಂಕರ್ಯ

ಮುಂತಾದ ಕಾರಣಗಳಿಂದ ಈ ವಿಕಾರ ಹೆಚ್ಚಾಗುತ್ತದೆ. ಕೆಲವರಿಗೆ ಕೆಲ ಹವಾಮಾನಗಳಲ್ಲಿ ಮಾತ್ರ ಈ ತೊಂದರೆ ಹೆಚ್ಚಾದರೆ ಇನ್ನು ಕೆಲವರಿಗೆ ವರ್ಷವಿಡಿ ನೆಗಡಿಯ ತೊಂದರೆ ತಪ್ಪದು.

ಸಾಮಾನ್ಯ ನೆಗಡಿಗೆ ಚಿಕಿತ್ಸೆ:

ಅರಿಶಿನ ಬೋಟನ್ನು ಇಕ್ಕಳದಲ್ಲಿ ಸಿಕ್ಕಿಸಿ ಬೆಂಕಿಗೆ ಹಿಡಿದಾಗ ಒಂದು ರೀತಿಯ ಹೊಗೆ ಬರುವುದು. ಆ ಹೊಗೆಯನ್ನು ಮೂಗಿನ ಮೂಲಕ ಒಳಗೆ ಎಳೆದುಕೊಂಡರೆ ನೆಗಡಿ, ಮೂಗು ಕಟ್ಟುವುದು ನಿಂತುಹೋಗಿ ತಲೆಭಾರವೂ ಇಲ್ಲದಾಗುವುದು.

ಒಂದು ಚಮಚಕ್ಕೆ ತುಳಸಿ ರಸ ಒಂದು ಚಮಚ ಜೇನು ಸೇರಿಸಿ ದಿನಕ್ಕೆ ೩ ಸಾರಿ ಕೊಡಬೇಕು.

ಲವಂಗವನ್ನು ಬಾಯಿಯಲ್ಲಿಟ್ಟುಕೊಂಡರೆ ನೆಗಡಿ, ಗಂಟಲು ಕೆರೆತ ಮತ್ತು ತಲೆಭಾರಗಳು ನಿಲ್ಲುವವು.

ನಿಂಬೆಹಣ್ಣಿನ ರಸಕ್ಕೆ ಬೆಚ್ಚಗಿನ ನೀರನ್ನು ಸೇರಿಸಿ ಕುಡಿದರೆ ರೋಗನಿರೋಧಕ ಶಕ್ತಿ ಹೆಚ್ಚಿ ಮೇಲಿಂದ ಮೇಲೆ ಕಾಡುವ ನೆಗಡಿ ಕಡಿಮೆ ಆಗುತ್ತದೆ. ಚ್ಯವನ ಪ್ರಾಶವನ್ನು ತೆಗೆದುಕೊಂಡರೂ ಮೇಲಿಂದ ಮೇಲೆ ಕಾಡುವ ನೆಗಡಿ, ಕೆಮ್ಮು ದಮ್ಮುಗಳು ಗುಣವಾಗುವವು.

ಸಿತೋಪಲಾದಿ ಚೂರ್ಣ, ಕರ್ಪೂರಾದಿ ಚೂರ್ಣ, ತಾಲೀಸಾದಿ ಚೂರ್ಣ, ಶೃಂಗ್ಯಾದಿ ಚೂರ್ಣಗಳಲ್ಲಿ (ಯಾವುದಾದರೊಂದನ್ನು) ಅರ್ಧದಿಂದ ಒಂದು ಚಮಚೆಯಷ್ಟು ಜೇನುತುಪ್ಪದೊಡನೆ ತೆಗೆದುಕೊಳ್ಳಬೇಕು.

ನೆಗಡಿಯೊಡನೆ ಜ್ವರ, ಕೆಮ್ಮು ದಮ್ಮುಗಳಿದ್ದರೆ ಸೌಭಾಗ್ಯವಟಿಯನ್ನು ದಿನಕ್ಕೆ ೩ರಂತೆ ಬಿಸಿನೀರಿನಲ್ಲಿ ತೆಗೆದುಕೊಳ್ಳಬೇಕು.

ಆರು ಗ್ರಾಮುಗಳಷ್ಟು ಬೆಳ್ಳುಳ್ಳಿ ಪಕಳಿಗಳಿಗೆ ಅಷ್ಟೇ ಪ್ರಮಾಣದಲ್ಲಿ ಬೆಲ್ಲ ಸೇರಿಸಿ ರಾತ್ರಿ ಮಲಗುವ ಮೊದಲು ತಿಂದರೆ ನೆಗಡಿಯು ಬೇಗನೆ ಗುಣವಾಗುವುದು.

ಅಲರ್ಜಿಕ್ ನೆಗಡಿಗೆ ಚಿಕಿತ್ಸೆ:

ನಿದಾನ ಪರಿವರ್ಜನಮ್ ಎಂದರೆ ನೆಗಡಿಗಿರುವ ಮೂಲ ಕಾರಣದಿಂದ ದೂರವಿರಬೇಕು ಎನ್ನುವುದೇ ಮೊಟ್ಟಮೊದಲನೆ ಚಿಕಿತ್ಸೆ.

ತ್ರಿಭುವನ ಕೀರ್ತಿರಸ ಹಾಗೂ ಲಕ್ಷ್ಮೀ ವಿಲಾಸರಸ (ನಾರದೀಯ) ಇವೆರಡನ್ನೂ ಬೆಳಿಗ್ಗೆ ಒಂದೊಂದು, ರಾತ್ರಿ ಒಂದೊಂದು ಹೀಗೆ ೨-೩ ತಿಂಗಳು ತೆಗೆದುಕೊಳ್ಳಬೇಕು. (ಪಿತ್ತ ಪ್ರಕೃತಿಯವರು ತ್ರಿಭುವನ ಕೀರ್ತಿಯನ್ನು ತೆಗೆದುಕೊಳ್ಳಬಾರದು.)

ಮೇಲಿನ ಚಿಕಿತ್ಸೆಯೊಡನೆ ಸಿತೋಪಲಾದಿ ಚೂರ್ಣ ಇಲ್ಲವೆ ಕರ್ಪೂರಾದಿ ಚೂರ್ಣಗಳನ್ನು ೨೫೦ ರಿಂದ ೫೦೦ ಮಿಲಿಗ್ರಾಂ ಪ್ರಮಾಣದಲ್ಲಿ ಬೆಳಿಗ್ಗೆ ಹಾಗೂ ರಾತ್ರಿ ಜೇನುತುಪ್ಪದೊಡನೆ ತೆಗೆದುಕೊಳ್ಳಬೇಕು.

ತಲೆನೋವು ಬರುತ್ತಿದ್ದರೆ ೧೨೫ ರಿಂದ ೨೫೦ ಮಿಲಿಗ್ರಾಂ ವರೆಗೆ ಗೋವಂತಿ ಭಸ್ಮವನ್ನು ತೆಗೆದುಕೊಳ್ಳಬೇಕು.

ಅಲರ್ಜಿ ವಿಕಾರಕ್ಕೆ ೨೫೦ ರಿಂದ ೫೦೦ ಮಿಲಿಗ್ರಾಂವರೆಗೆ ಹರಿದ್ರಾಖಂಡ

ಚೂರ್ಣವನ್ನು ಬಿಸಿನೀರಿನಲ್ಲಿ ತೆಗೆದುಕೊಳ್ಳಬೇಕು.

ಮೂಗಿನೊಳಗಿನ ಬಾವನ್ನು ಇಳಿಸಲು ಅಮೃತ ಸತ್ವ ತುಂಬ ಪರಿಣಾಮಕರ. ಪ್ರಮಾಣ ೧೨೫ ಮಿಲಿಗ್ರಾಂನಂತೆ ಎರಡು ಸಾರೆ.

ಮೂಗಿನಲ್ಲಿನ ದ್ರವಾಂಶ ಹೀರಲು ೨೫೦ ಮಿಲಿಗ್ರಾಂ ನವಸಾಗರವನ್ನು ದಿನಕ್ಕೆರಡು ಸಾರೆ ತೆಗೆದುಕೊಳ್ಳಬೇಕು.

ಉಸಿರಾಟ ಸರಾಗವಾಗಲು ಅಣುತೈಲ, ಕುಷ್ಠಾದಿ ತೈಲ, ಕೇಶರ ಘೃತಗಳು ಉಪಯುಕ್ತ. ಬೆಳಿಗ್ಗೆ ಹಾಗೂ ರಾತ್ರಿ ಎರಡು ಹನಿಗಳಂತೆ ಮೂಗಿನಲ್ಲಿ ಹಾಕಿಕೊಳ್ಳಬೇಕು.

ಯೋಗಶಾಸ್ತ್ರದಲ್ಲಿ ಹೇಳಿದ ಜಲನೇತಿ ಕ್ರಿಯೆಯನ್ನು ನಿತ್ಯಮಾಡಿಕೊಳ್ಳುವ ರೂಢಿಯನ್ನಿಟ್ಟುಕೊಂಡರೆ ಮೂಗು ತಂಪಿಗೆ ಒಗ್ಗಿಕೊಳ್ಳುವುದರ ಮೂಲಕ ಮೇಲಿಂದ ಮೇಲ ನೆಗಡಿ ಆಗದು.

ಪಥ್ಯ:

ತಣ್ಣಗಿನ ನೀರು, ಐಸ್‌ಕ್ರೀಮುಗಳು, ತಂಪಾದ ಪಾನೀಯಗಳು, ಬಾಳೆಹಣ್ಣು, ಸವತೆಕಾಯಿ ಇಲ್ಲವೆ ತನಗೆ ಒಗ್ಗದ ಪದಾರ್ಥಗಳನ್ನು ಬಿಡಬೇಕು. ಅತಿ ಶೈತ್ಯ, ತಲೆಯ ಮೇಲೆ ತಣ್ಣೀರಿನ ಸ್ನಾನ, ಫ್ಯಾನ್ ಇಲ್ಲವೆ ಏರ್‌ಕೂಲರ್‌ಗಳನ್ನು ಹಾಕಿಕೊಳ್ಳುವುದು, ಧೂಳು, ಧೂಮಗಳಿಂದ ಸಾಧ್ಯವಾದಷ್ಟು ದೂರವಿರಬೇಕು.

ಒಗ್ಗದಿರುವಿಕೆಯ ದಮ್ಮು

ಈ ಮೊದಲೇ ಹೇಳಿದಂತೆ ಒಗ್ಗದಿರುವಿಕೆಯ ಇತರ ಲಕ್ಷಣಗಳೆಂದರೆ ಕೆಮ್ಮು ದಮ್ಮು ಹಾಗೂ ಚರ್ಮವಿಕಾರಗಳು. ಒಬ್ಬನಿಗೆ ಯಾವುದಾದರೊಂದು ತೊಂದರೆ ಮುಖ್ಯವಾಗಿ ಕಾಣಿಸಿಕೊಳ್ಳಬಹುದು. ದಮ್ಮು ಇರುವಾಗ ಚರ್ಮವಿಕಾರಗಳಿರಲಿಕ್ಕಿಲ್ಲ, ಚರ್ಮವಿಕಾರಗಳಿದ್ದಾಗ ದಮ್ಮು ಇರಲಿಕ್ಕಿಲ್ಲ. ಇಸಬು, ಋತುಕಾಲಕ್ಕೆ ಸಂಬಂಧಿಸಿದ ಇಲ್ಲವೆ ವರ್ಷವಿಡೀ ಇರುವ ನೆಗಡಿ, ಹವಾಮಾನ ಬದಲಾವಣೆಯಿಂದ ಕಂಡುಬರುವ ದಮ್ಮು ಇವು ಒಂದಕ್ಕೊಂದು ಸಂಬಂಧಿಸಿದ ತೊಂದರೆಗಳಾಗಿವೆ. ರೋಗಿಗೆ ಇವು ಒಂದಲ್ಲ ಒಂದು ರೀತಿಯಲ್ಲಿ ತೊಂದರೆ ಕೊಡುತ್ತಿರುತ್ತವೆ. ಇದಕ್ಕೆ ಮೂಲ ಕಾರಣವಾಗಿರುವ ಅಲರ್ಜಿನ್ ಆಂಟಿಬಾಡಿ ಪ್ರತಿಕ್ರಿಯೆಯಿಂದಾಗಿ ಜೀವಕೋಶಗಳಿಂದ ಒಂದು ವಿಧಧ ರಾಸಾಯನಿಕ ದ್ರವ ಜಿನುಗುತ್ತದೆ. ಇದು ಶ್ವಾಸಕೋಶಗಳಲ್ಲಾದರೆ ದಮ್ಮು ಮೂಗಿನಲ್ಲಾದರೆ ಒಗ್ಗದಿರುವಿಕೆಯ ನೆಗಡಿ ಹಾಗೂ ಚರ್ಮದಲ್ಲಾದರೆ ಮೈಕೆರೆತ, ಪಿತ್ತಗಂಧ, ಇಸಬು ಇತ್ಯಾದಿ ತೊಂದರೆಗಳು ಕಾಣಿಸಿಕೊಳ್ಳುವವು. ಮಗು ಚಿಕ್ಕದಿದ್ದಾಗ ಅದು ಈ ಇಸಬು ಇಲ್ಲವೆ ಒಗ್ಗದಿರುವಿಕೆಯ ನೆಗಡಿ ವಿಕಾರಗಳಿಂದ ಬಳಲಿದ್ದರೆ ಬಹುಬೇಗ ದಮ್ಮು ಬರುವ ಸಂಭವವಿರುತ್ತದೆ.

ನಮ್ಮ ದೇಶದಲ್ಲಿ ಸುಮಾರು ಎರಡು ಕೋಟಿ ಜನ ದಮ್ಮಿನ ವಿಕಾರದಿಂದ ಬಳಲುತ್ತಿದ್ದಾರೆ ಎಂಬುದೊಂದು ಅಂದಾಜಿದೆ. ಈ ಸಂಖ್ಯೆ ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚುವ ಭೀತಿಯೂ ಇದೆ. ಈ ವಿಕಾರವನ್ನು ಸಂಪೂರ್ಣವಾಗಿ

ಗುಣಪಡಿಸಲು ಸಾಧ್ಯವಾಗ ದಿದ್ದರೂ ಅದನ್ನು ನಿಯಂತ್ರಣದಲ್ಲಿ ಇಟ್ಟುಕೊಂಡು ತಮ್ಮ ಕೆಲಸ ಕಾರ್ಯಗಳನ್ನು ಮಾಡುತ್ತ ಸುಖಜೀವನವನ್ನು ನಡೆಸಬಹುದಾಗಿದೆ. ರೋಗಿಯು ತನ್ನ ದೈನಂದಿನ ಚಟುವಟಿಕೆ, ವೃತ್ತಿ, ಆಹಾರ ಪದ್ಧತಿ, ವ್ಯಾಯಾಮ, ಚಂಕ್ರಮಣ, ಯೋಗಾಸನಗಳು ಇವನ್ನೆಲ್ಲ ಸರಿಯಾಗಿಟ್ಟುಕೊಂಡು ಕಾಲಕಾಲಕ್ಕೆ ರೋಗಪ್ರತಿಬಂಧಕ ಕ್ರಮ ಹಾಗೂ ಚಿಕಿತ್ಸೆಗಳನ್ನು ತೆಗೆದುಕೊಳ್ಳುತ್ತಿದ್ದರೆ ದಮ್ಮನ್ನು ಹತೋಟಿಯಲ್ಲಿ ಇಟ್ಟುಕೊಂಡು ಸಾಮಾನ್ಯ ಜೀವನ ನಡೆಸಬಹುದಾಗಿದೆ.

ಕ್ರಿಸ್ತಪೂರ್ವ ಕಾಲದಷ್ಟು ಹಿಂದೆಯೇ ರಚಿತವಾದ ಆಯುರ್ವೇದ ಗ್ರಂಥಗಳಲ್ಲಿ ದಮ್ಮಿನ ಬಗ್ಗೆ ಸವಿಸ್ತಾರವಾದ ವೈಜ್ಞಾನಿಕ ವರ್ಣನೆಯಿದೆ. ಚರಕಾಚಾರ್ಯರು ಇದರಲ್ಲಿ ಐದು ವಿಧಗಳನ್ನು ಮಾಡಿ ಕ್ಷುದ್ರ ಶ್ವಾಸವು ಚಿಕಿತ್ಸೆಗೆ ಸುಲಭ ಸಾಧ್ಯವೆಂದೂ ತಮಕಶ್ವಾಸ (BRONCHIAL ASTHMA)ವು ಮೊದಲನೆ ಹಂತದಲ್ಲಿ ಇರುವಾಗಲೇ ಚಿಕಿತ್ಸೆ ತೆಗೆದುಕೊಂಡರೆ ಯುವ ರೋಗಿಯು ಗುಣ ಹೊಂದುವನು ಎಂಬುದಾಗಿಯೂ ಹೇಳಿದ್ದಾರೆ. ಸಕಾಲದಲ್ಲಿ ಚಿಕಿತ್ಸೆ ತೆಗೆದುಕೊಳ್ಳದವರಿಗೂ ಕೃಶರು, ಕ್ಷೀಣರು, ವೃದ್ಧರಿಗೂ ಈ ರೋಗ ಯಾಪ್ಯ (CHRONIC) ಎಂದಿದ್ದಾರೆ. ಇನ್ನೂ ಮೂರು ವಿಧದ ಶ್ವಾಸರೋಗಗಳು ಚಿಕಿತ್ಸೆಗೆ ಅಸಾಧ್ಯವೆಂದು ಹೇಳಿದ ಮಾತು ಇಂದಿಗೂ ಸತ್ಯವಾಗಿದೆ. ಅವರು ರೋಗ ಹುಟ್ಟುವುದಕ್ಕೆ ಹೇಳಿದ ಕಾರಣಗಳು, ರೋಗ ಸಂಪ್ರಾಪ್ತಿ ಲಕ್ಷಣಗಳು, ಚಿಕಿತ್ಸೆ, ಪಥ್ಯ ಹಾಗೂ ರೋಗದ ಸಾಧ್ಯಾಸಾಧ್ಯತೆಗಳು ಸಕಾಲಿಕವೆನಿಸಿವೆ.

ರೋಗದ ಕಾರಣಗಳು:

೧. ವಿದಾಹಿ (ದೇಹದಲ್ಲಿ ಕೆರಳಿಕೆ ಉಂಟುಮಾಡುವ, ಗುರು (ಪಚನಕ್ಕೆ ಭಾರವಾದ) ವಿಷ್ಟಂಭಿ (ಮಲಬದ್ಧತೆಯನ್ನುಂಟು ಮಾಡುವ) ವಿರುದ್ಧಾಹಾರ ಹಾಗೂ ಮನಸ್ಸಿಗೆ ಹಿತಕರವಲ್ಲದ ಆಹಾರಗಳನ್ನು ತಿನ್ನುವುದು.

೨. ಅತಿಯಾದ ತಣ್ಣೀರು ಕುಡಿಯುವುದು, ಐಸ್‌ಕ್ರೀಮ್, ಸವತೆಕಾಯಿ, ಶೀತಲವಾದ ಹಣ್ಣುಗಳು, ಶೀತಲ ಪೇಯಗಳು, ಮೊಸರು, ಹಾಲು, ಜಲಚರ ಪ್ರಾಣಿಗಳ ಮಾಂಸ ಸೇವಿಸುವುದು,

೩. ಅತಿ ಶೀತವಾದ ಪ್ರದೇಶಗಳಲ್ಲಿ ವಾಸಿಸುವುದು, ಸಮುದ್ರ ಪಾತಳಿಗಿಂತ ಅತಿ ಎತ್ತರದಲ್ಲಿರುವ ಗಿರಿಧಾಮಗಳು, ಕೃತ್ರಿಮವಾಗಿ ಹವೆ ತಣ್ಣಗಿರುವಂತೆ ಮಾಡಿದ ಕೋಣೆಗಳಲ್ಲಿ ವಾಸಿಸುವುದು ಸದಾ ಫ್ಯಾನುಗಳನ್ನು ಹಚ್ಚಿಕೊಂಡಿರುವುದು ಇಲ್ಲವೆ ಸತತವಾಗಿ ಗಾಳಿಗೆ ಮೈಯೊಡ್ಡಿ ಮಲಗಿಕೊಳ್ಳುವುದು ಮನೆಯ ಸುತ್ತಮುತ್ತ ತೋಟ, ಅರಣ್ಯ, ಕೆರೆಗಳಿದ್ದು ವಾತಾವರಣ ಅತಿ ತಣ್ಣಗಾಗಿರುವುದು.

೪. ಧೂಳು, ೫. ಹೊಗೆ (ಧೂಮಪಾನ), ೬. ಬಿಸಿಲು, ೭. ಅತಿಯಾದ ಗಾಳಿ, ೮. ಅತಿ ವ್ಯಾಯಾಮ, ಅತಿ ಹೆಚ್ಚು ಭಾರವಾದ ಕೆಲಸಗಳನ್ನು ಮಾಡುವುದು ಇಲ್ಲವೆ ಭಾರವನ್ನು ಹೊರುವುದು.

೯. ಎದೆಗೆ ನೇರವಾದ ಪೆಟ್ಟು ಬೀಳುವುದು.

೧೦. ಅತಿಯಾದ ಸಂಭೋಗ.

೧೧. ಕಾಲ್ನಡಿಗೆಯಿಂದ ಬಹುದೂರ ಕ್ರಮಿಸುವುದು, ೧೨. ದೈಹಿಕ, ಮಾನಸಿಕ, ನೈಸರ್ಗಿಕ ಕರೆ (ವೇಗ)ಗಳನ್ನು ತಡೆಯುವುದು, ೧೩. ಹೆಚ್ಚಾಗಿ ಉಪವಾಸ ಮಾಡುವುದು, ೧೪. ಹಳೆಯದಾದ ಕೆಮ್ಮು ೧೫. ಜಠರದಲ್ಲಿ ಕ್ಷೋಭೆ ದಿನಕ್ಕಿಂತ ಹೆಚ್ಚು ಊಟ ಮಾಡುವುದರಿಂದ ಹೆಚ್ಚಾಗುವ ಕಫ. ೧೬. ಇತರ ಕಾರಣಗಳು: ಜಂತು ಹುಳುಗಳು, ಫೈಲೇರಿಯಾ ಎಂಬ ಪರಾವಲಂಬಿ ಜೀವಿಗಳ ಸಾಂಕರ್ಯ ದೇಹದಲ್ಲುಂಟಾದಾಗ ದಮ್ಮು ಕಾಣಿಸಿಕೊಳ್ಳಬಹುದು. ರಕ್ತಕಣಗಳಲ್ಲಿರುವ ಇಸಿನೋಫಿಲಿಯಾಗಳು ತಮ್ಮ ಸಹಜ ಪ್ರಮಾಣ (೧ ರಿಂದ ೩) ಕ್ಕಿಂತಲೂ ಜಾಸ್ತಿ ಆದಾಗಲೂ ಕೆಮ್ಮು-ದಮ್ಮುಗಳು ಉಂಟಾಗುವವು. ಇದನ್ನು ರಕ್ತ ಪರೀಕ್ಷೆಯಿಂದ ಗೊತ್ತುಪಡಿಸಿಕೊಳ್ಳಬೇಕಾಗುತ್ತದೆ. ಇನ್ನು ಕೆಲವು ರೋಗಿಗಳಲ್ಲಿ ಕ್ರಿಮಿ ಸಾಂಕರ್ಯದಿಂದುಂಟಾಗುವ ಸೈನ್ಯುಸೈಟಿಸ್ ವಿಕಾರವೂ ದಮ್ಮಿನೊಂದಿಗೆ ಇರಬಹುದು. ಒಗ್ಗದಿರುವ ಮೂಗಿನ ಉರಿಯೂತದಲ್ಲಿ (ALLERGIC RHINITIS) ಕ್ರಿಮಿ ಸಾಂಕರ್ಯವಾಗಿ ಈ ವಿಕಾರ ಬರುವುದು. ಇದರಲ್ಲಿ ಇನ್ನಿತರ ಲಕ್ಷಣಗಳೊಡನೆ ತೀವ್ರ ಸ್ವರೂಪದ ತಲೆನೋವು ತಲೆಭಾರಗಳು ಇರುವುದು ವಿಶೇಷ.

ಪ್ಲಾಟಿನಂ ಲವಣದ ತಯಾರಿಕೆ, ಫೋಮ್ ರಬ್ಬರನ್ನು ತಯಾರಿಸುವ ಕಾರ್ಖಾನೆ, ಹತ್ತಿ ಗಿರಣಿಯಲ್ಲಿನ ಹುಡಿ, ಗಣಿ ಕೆಲಸ, ಬಣ್ಣದ ಕಾರ್ಖಾನೆ, ಬಟ್ಟೆ ಕಾರ್ಖಾನೆ, ರೇಷ್ಮೆ ಕಾರ್ಖಾನೆ, ಬಡಿಗತನ, ಸಾಮಿಲ್‌ಗಳು ಮುಂತಾದವುಗಳಲ್ಲಿ ಕೆಲಸ ಮಾಡುವವರಿಗೆ ಅಲ್ಲಿರುವ ಧೂಳಿಕಣ, ರಾಸಾಯನಿಕಗಳಿಗೆ ಅಲರ್ಜಿವುಂಟಾಗುವುದಲ್ಲದೆ ಈ ಮೊದಲೇ ಅಲರ್ಜಿ, ಕೆಮ್ಮು ದಮ್ಮುಗಳಿಂದ ಬಳಲುವವರಿಗೆ ಅದು ಹೆಚ್ಚಲೂಬಹುದು. ಇಂಥವರಿಗೆ ಚಿಕಿತ್ಸೆ ಸಂಪೂರ್ಣ ಫಲಪ್ರದವಾಗಬೇಕೆಂದಿದ್ದರೆ ಅವರನ್ನು ಆ ಕೆಲಸದಿಂದ ಬಿಡಿಸಿ ಬೇರೆ ವೃತ್ತಿಯಲ್ಲಿ ತೊಡಗಿಸಬೇಕು.

೧೭. ಮಾನಸಿಕ ಕಾರಣಗಳು: ಮಾನಸಿಕ ದುಗುಡಗಳಿಗೂ ದಮ್ಮಿಗೂ ನಿಕಟ ಸಂಬಂಧವಿದೆ.

ಮನಸ್ಸಿನ ಅಶಾಂತ ಸ್ಥಿತಿಯಿಂದ ಅದು ಪ್ರೇರಿತವಾಗಬಹುದಾದರೂ ಆರೋಗ್ಯವಂತರಿಗೆ ಬರುವುದಿಲ್ಲ, ಆದ್ದರಿಂದ ಈ ಮೊದಲೇ ಇದ್ದ ದಮ್ಮಿನ ರೋಗಿಗೆ ಮನೆ, ಆಫೀಸು, ಶಾಲೆ ಮುಂತಾದ ಸ್ಥಳಗಳಲ್ಲಿ ಕಂಡುಬರುವ ಕೆಲಸದ ಒತ್ತಡ, ಆತಂಕ, ಬೇಸರ, ಹೀಯಾಳಿಕೆ, ಮೂದಲಿಕೆಗಳಿಂದ ಮಾನಸಿಕ ಒತ್ತಡ ಹೆಚ್ಚಾಗಿ ದಮ್ಮು ಕಾಣಿಸಿಕೊಳ್ಳಬಹುದು.

ಅನುವಂಶಿಕ ಅಲರ್ಜಿಕ್ ಪರಿಸ್ಥಿತಿ ಸುಪ್ತವಾಗಿದ್ದರೂ ಮಾನಸಿಕ ದುಗುಡಗಳು ದಮ್ಮಿನಲ್ಲಿ ಕೊನೆಗೊಳ್ಳಬಹುದು.

ದಮ್ಮಿನಿಂದ ತೀವ್ರವಾಗಿ ಹಾಗೂ ಬಹುಕಾಲ ನರಳುವ ರೋಗಿಗಳಲ್ಲಿ ೩೦% ಜನ ಈ ರೀತಿ ಮಾನಸಿಕ ಒತ್ತಡಗಳ ಕಾರಣದಿಂದಾಗಿ ರೋಗ ಉಲ್ಬಣವಾಗುವ

ಪರಿಸ್ಥಿತಿಯನ್ನೆದುರಿಸುತ್ತಾರೆ.

ಈ ರೋಗಿಗಳನ್ನು ಕೇವಲ ಔಷಧಿಗಳಿಂದ ಗುಣಪಡಿಸಲು ಸಾಧ್ಯವಾಗುವುದಿಲ್ಲ, ಅವರ ಮಾನಸಿಕ ಆತಂಕವನ್ನೂ ಹೋಗಲಾಡಿಸಬೇಕಾಗುತ್ತದೆ. ಇದು ತುಂಬ ಕಷ್ಟದ ಕೆಲಸ. ಇದಕ್ಕೆ ರೋಗಿ ಹಾಗೂ ವೈದ್ಯರು ಪರಸ್ಪರ ಚೆನ್ನಾಗಿ ಅರಿತುಕೊಂಡರೆ ಮಾತ್ರ ಚಿಕಿತ್ಸೆ ಸುಲಭವಾಗುತ್ತದೆ.

ದಮ್ಮು ಬರುವುದು ಹೇಗೆ?

ಪ್ರಕುಪಿತ ವಾತವು ಎದೆಯಲ್ಲಿಯ ಪ್ರಾಣವಾಯು ಸ್ರೋತಸ್ಸುಗಳನ್ನು ಪ್ರವೇಶಿಸಿ, ಕುಪಿತಗೊಂಡು ಎದೆಯಲ್ಲಿನ ಕಫವನ್ನು ತಡೆದು ಪುಪ್ಪುಸದಲ್ಲೆಲ್ಲ ವ್ಯಾಪಿಸಿದಾಗ 'ದಮ್ಮು' ಬರುತ್ತದೆಂದು ಚರಕನು ಹೇಳಿದ್ದಾನೆ.

ಸಾಮಾನ್ಯವಾಗಿ ನಮ್ಮ ದೇಹದಲ್ಲಿ ಪ್ರಾಣವಾಯು ಸ್ವಸ್ಥವಿದ್ದಾಗ ಈ ತೊಂದರೆಯನ್ನುಂಟು ಮಾಡುವುದಿಲ್ಲ, ಯಾವಾಗ ಶ್ವಾಸನಳಿಕೆಗಳು ಕಫದಿಂದ ತಡೆಯಲ್ಪಡುವವೋ ಆಗ ಮಾತ್ರ ಈ ತೊಂದರೆಯು ಕಾಣಿಸಿಕೊಳ್ಳುವುದು. ಆಗ ಪ್ರಾಣವಾಯು ಸರಳವಾಗಿ ಚಲಿಸಿ ತನ್ನ ಪ್ರಕ್ರಿಯೆಗಳನ್ನು ಮುಂದುವರಿಸಲು ಸ್ಥಳಾವಕಾಶ ದೊರಕುವುದಿಲ್ಲ. ಮಾನವನಿಗೆ ಸಹಜವಾಗಿ ಜೀವಿಸಲು ಹಾಗೂ ಇನ್ನಿತರ ಕಾರ್ಯಗಳು ನಡೆಯಲು ಹವೆಯಲ್ಲಿನ ಆಮ್ಲಜನಕವು ಬೇಕೇಬೇಕು. ಅದಕ್ಕಾಗಿ ದೇಹ ಚಡಪಡಿಸುವುದರಿಂದ ಮತ್ತೆ ಮತ್ತೆ ಉಸಿರನ್ನು ಎಳೆದುಕೊಳ್ಳಬೇಕಾಗುತ್ತದೆ. ಇದಕ್ಕೇ ಉಬ್ಬಸ, ಗೂರಲು, ದಮ್ಮು ಅಸ್ತಮಾ ಎನ್ನುತ್ತಾರೆ. ಇದರಲ್ಲಿ ಉಸಿರನ್ನು ಒಳಗೆಳೆದುಕೊಳ್ಳುವುದು ಸರಳವಾದರೂ ಹೊರಬಿಡುವುದು ತೊಂದರೆದಾಯಕ.

ದಮ್ಮಿನಲ್ಲಿ ಎರಡು ಬಗೆ:

ದಮ್ಮು ಮಳೆಗಾಲ - ಚಳಿಗಾಲಗಳಲ್ಲಿ ವಿಶೇಷವಾಗಿ ಕಾಣಿಸಿಕೊಳ್ಳುವುದುಂಟು. ಇದರರ್ಥ ಅದು ಬೇಸಿಗೆಯಲ್ಲಿ ಕಾಣಿಸಿಕೊಳ್ಳುವುದಿಲ್ಲ ಎಂದಲ್ಲ. ಈ ಕಾಲದಲ್ಲಿ ಧೂಳು, ಹೊಗೆ, ಘಾಟು, ಪರಿಸರ ಮಾಲಿನ್ಯಗಳಿಂದ ವಿಶೇಷವಾಗಿ ಈ ರೋಗ ಕಂಡುಬರುವುದು. ಕೆಲವು ರೋಗಿಗಳು ಒಂದೊಂದು ಕಾಲದಲ್ಲಿ ಮಾತ್ರ ಹೀಗೆ ತೊಂದರೆಗೊಳಗಾಗುವರು. ಇದಕ್ಕೆ 'ಋತುಕಾಲಿಕ ದಮ್ಮು' (Seasonal Asthma)ಎಂದು ಹೆಸರು. ಸಾಮಾನ್ಯವಾಗಿ ಜೂನ್ ತಿಂಗಳಿಂದ ಅಕ್ಟೋಬರ್‌ದವರೆಗೆ ದಮ್ಮಿನ ಪ್ರಕೋಪ ಬಹಳ.

ಇನ್ನು ಕೆಲವು ರೋಗಿಗಳು ವರ್ಷವಿಡಿ ತೊಂದರೆಗೊಳಗಾಗುತ್ತಿರುವರು. ಅದಕ್ಕೆ ಸಾರ್ವಕಾಲಿಕ ದಮ್ಮು (Perennial Asthama) ಎಂದು ಹೆಸರು.

ಲಕ್ಷಣಗಳು:

ರೋಗಿಗೆ ಒಮ್ಮೆ ಕೆಮ್ಮು ಪ್ರಾರಂಭವಾಯಿತೆಂದರೆ ಕೆಲವು ಗಂಟೆಗಳವರೆಗೆ ಸತತವಾಗಿ ಬರತೊಡಗುವುದು. ವಿಶೇಷವಾಗಿ ದಮ್ಮಿನ ತೊಂದರೆ ರಾತ್ರಿ ತಡವಾಗಿ ಪ್ರಾರಂಭವಾಗಿ ಬೆಳಗಿನವರೆಗೂ ಮುಂದುವರೆಯುವುದುಂಟು. ಆಗ ರೋಗಿ

ಉಸಿರಾಡಲು ತುಂಬ ತೊಂದರೆ ಪಡುತ್ತಾನೆ. ಮಲಗಿದರೆ ತೊಂದರೆ ಹೆಚ್ಚು, ಎದ್ದು ಕುಳಿತರೆ ಸ್ವಲ್ಪ ಸಮಾಧಾನ. ಎದೆ, ಶ್ವಾಸಕೋಶಗಳ ಮಾಂಸಖಂಡಗಳು ಜೋರಾಗಿ ಕಂಪಿಸತೊಡಗುವವು. ಪ್ರತಿಸಲ ಉಸಿರು ಬಿಟ್ಟಾಗಲೂ ಒಂದು ರೀತಿಯ ಗೊರ್‌ಗೊರ್ ಶಬ್ದ ಕೇಳಿ ಬರುವುದು. ಮುಖ ನಿಸ್ತೇಜವಾಗುವುದು. ಕೈಕಾಲುಗಳು ಕೆಲವು ವೇಳೆ ತಣ್ಣಗಾಗಬಹುದು. ಕೆಮ್ಮು ಬಿಗಿತದಿಂದ ಕೂಡಿ ಒಣದಾಗಿರುತ್ತದೆ. ತುಂಬ ಕಷ್ಟಪಟ್ಟಮೇಲೆ ಸ್ವಲ್ಪ ಪ್ರಮಾಣದಲ್ಲಿ ಜಿಗುಟಾದ ಕಫವನ್ನು ತೆಗೆಯಲು ಸಾಧ್ಯವಾಗುವುದು. ಆಗ ಉಸಿರಾಟದ ತೊಂದರೆ ಸ್ವಲ್ಪ ಕಡಿಮೆಯಾಗಿ ರೋಗಿಯು ಸುಧಾರಿಸಿಕೊಳ್ಳುವನು. ಒಮ್ಮೊಮ್ಮೆ ಹೀಗಾದ ಬಳಿಕವೂ ಕೆಲ ಸಮಯದ ನಂತರ ಮತ್ತೆ ಕೆಮ್ಮು ಬಂದು ಉಬ್ಬಸ ಪ್ರಾರಂಭವಾಗಬಹುದು.

ಚಿಕಿತ್ಸೆ:

ರೋಗಿಗೆ ಮಲಬದ್ಧತೆಯಾಗದಂತೆ ನೋಡಿಕೊಳ್ಳಬೇಕು. ದಮ್ಮಿಗಿರುವ ಆಗಂತು (ಹೊರಗಿನ) ಕಾರಣಗಳು ಹಾಗೂ ನಿಜ ಕಾರಣಗಳಿಂದ (ಪಥ್ಯಾಪಥ್ಯ) ಸಾಧ್ಯವಿದ್ದಷ್ಟು ದೂರವಿರುವುದರಿಂದ ದಮ್ಮನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಬಹುದು.

ಅರ್ಧ ಚಮಚದಷ್ಟು ಹಿಪ್ಪಲಿ ಚೂರ್ಣ ಒಂದು ಲೋಟ ಹಾಲು ಹಾಗೂ ಅರ್ಧ ಲೋಟ ನೀರನ್ನು ಸೇರಿಸಿ ನೀರಿನಂಶ ಆವಿಯಾಗಿ ಹೋಗುವವರೆಗೆ ಕುದಿಸಿ ನಿತ್ಯ ಬೆಳಿಗ್ಗೆ ಬರಿಹೊಟ್ಟೆಯಲ್ಲಿ ಆರು ತಿಂಗಳುಗಳವರೆಗೆ ತೆಗೆದುಕೊಳ್ಳಬೇಕು.

ಬಳಿಗಾರ + ತ್ರಿಕಟು (ಶುಂಠಿ - ಹಿಪ್ಪಲಿ - ಮೆಣಸು) ಚೂರ್ಣ + ಜೇಷ್ಠಮಧು ಚೂರ್ಣಗಳನ್ನು ಸೇರಿಸಿ ಜೇನಿನಲ್ಲಿ ತೆಗೆದುಕೊಳ್ಳಬೇಕು.

ಪ್ರತಿ ವರ್ಷ ಮೃಗಶಿರಾ ನಕ್ಷತ್ರ ಪ್ರಾರಂಭವಾಗುವಾಗ ಎಂದರೆ ಜೂನ್ ೭ ಅಥವಾ ೮ನೇ ತಾರೀಖಿಗೆ ಬರಿ ಹೊಟ್ಟೆಯಲ್ಲಿ ಶುದ್ಧ ಇಂಗನ್ನು ೫೦೦ ಮಿಲಿಗ್ರಾಂ ಬೆಲ್ಲದೊಡನೆ ತೆಗೆದುಕೊಳ್ಳಬೇಕು. ನಂತರ ತಾಲೀಸಾದಿ ಚೂರ್ಣ ೧ ರಿಂದ ೫ ಗ್ರಾಂ + ಪುಷ್ಕರ ಮೂಲ ಚೂರ್ಣ ೧ ರಿಂದ ೫ ಗ್ರಾಂ ಜೇನಿನಲ್ಲಿ ಸೇರಿಸಿ ಬೆಳಿಗ್ಗೆ ರಾತ್ರಿಯಂತೆ ೪೦ ದಿವಸಗಳವರೆಗೆ ತೆಗೆದುಕೊಂಡರೆ ಮಳೆಗಾಲದಲ್ಲಿ ಬರುವ ದಮ್ಮುರೋಗ ನಿಯಂತ್ರಣದಲ್ಲಿರುವುದು.

ಆಡುಸೋಗೆ ರಸವು ಪ್ರಾಣವಾಯು ಸ್ರೋತಸ್ಸುಗಳನ್ನು ಸಡಿಲಿಸಿ ಕಫವನ್ನು ಹೊರಹಾಕುವುದು.

ಸೋಮವಲ್ಲಿ ದಮ್ಮಿನಲ್ಲಿ ಕಂಡುಬರುವ ಉಸಿರಾಟದ ತೊಂದರೆಯನ್ನು ದೂರಮಾಡುವುದು.

ಎದೆಯಲ್ಲಿ ಕಫವು ಹೆಚ್ಚಾಗಿದ್ದರೆ ಶೃಂಗಭಸ್ಮ ೧ ಗ್ರೇನ್ + ನವಸಾಗರ ೩ ಗ್ರೇನ್ ಪ್ರಮಾಣದಷ್ಟನ್ನು ಪ್ರತಿ ಅರ್ಧ ಗಂಟೆಗೊಮ್ಮೆ ತೆಗೆದುಕೊಳ್ಳಬೇಕು.

ಕಂಟಕಾರಿಯು ಮೇಲಿಂದ ಮೇಲೆ ದಮ್ಮುಬಾರದಂತೆ ತಡೆಯುವ ಬಲಶಾಲಿ ಹಾಗೂ ಕಫ ನಿವಾರಕ ಔಷಧ. ಇದು ಚೂರ್ಣ, ಮಾತ್ರೆ ಔಷಧ ರೂಪದಲ್ಲಿ ದೊರಕುವುದು.

ಎರಡು ಮಾತ್ರೆಗಳನ್ನು ದಿನಕ್ಕೆ ಎರಡು ಸಾರೆ ಇಲ್ಲವೆ ಒಂದು ಚಮಚ ಚೂರ್ಣವನ್ನು ದಿನಕ್ಕೆ ಮೂರು ಸಾರೆ ಬಿಸಿನೀರು ಇಲ್ಲವೆ ಜೇನಿನಲ್ಲಿ ತೆಗೆದು ಕೊಳ್ಳಬೇಕು.

ಅದರಂತೆ ಬಹುವರ್ಷಾಯು (Tylophora Asthmatica) ಎಲೆಗಳ ಪುಡಿಯನ್ನು ೫ ಗ್ರಾಂನಷ್ಟು ತೆಗೆದುಕೊಂಡು ಕಷಾಯ ಮಾಡಿ ದಮ್ಮು ಬರುವುದಕ್ಕಿಂತ ೧೫ ದಿವಸ ಮೊದಲು ಒಂದು ವಾರದವರೆಗೆ ತೆಗೆದುಕೊಂಡರೆ ಮೂರುನಾಲ್ಕು ತಿಂಗಳುಗಳವರೆಗೆ ಅದರ ತೊಂದರೆ ಆಗುವುದಿಲ್ಲ. ಈ ಮೊದಲು ಹೇಳಿದ ಕಾಲಜ ದಮ್ಮಿನವರಿಗೆ ಇದು ಹೆಚ್ಚು ಉಪಯುಕ್ತ.

ದಮ್ಮಿನ ವೇಗ ನಿಯಂತ್ರಣಕ್ಕೆ ಬಾರದೆ ಮೇಲಿಂದ ಮೇಲೆ ಬರುತ್ತಿದ್ದರೆ ಜೇಷ್ಠಮಧು ಕಷಾಯಕ್ಕೆ ಜೇನು ಸೇರಿಸಿ ಎರಡೆರಡು ಚಮಚಗಳಂತೆ ಮತ್ತೆಮತ್ತೆ ಕೊಡುತ್ತಿದ್ದರೆ ಗುಣಕಾಣಿಸುತ್ತದೆ.

ಮನಃಶಿಲ, ಪುಷ್ಕರ ಮೂಲ, ಧತ್ತೂರ, ಅಪಾಮಾರ್ಗ ಮುಂತಾದವುಗಳನ್ನು ಬೆಂಕಿಯಲ್ಲಿ ಹಾಕಿ ಅದರ ಧೂಮವನ್ನು ಸಾವಕಾಶವಾಗಿ ಒಳಗೆಳೆದುಕೊಳ್ಳುತ್ತ ಹೋದರೆ ದಮ್ಮಿನ ವೇಗವು ಕಡಿಮೆ ಆಗುವುದು.

ಅರ್ಕದ ಹೂವುಗಳನ್ನು ಒಣಗಿಸಿ ಪುಡಿ ಮಾಡಿಟ್ಟುಕೊಂಡು ೧೨೫ ಮಿಲಿಗ್ರಾಂನಿಂದ ೨೫೦ ಮಿಲಿಗ್ರಾಂವರೆಗೆ ನಿತ್ಯ ೨-೩ ಸಾರೆ ತೆಗೆದುಕೊಂಡರೂ ದಮ್ಮು ಕಡಿಮೆ ಆಗುವುದು.

ಸಿದ್ಧ ಔಷಧಗಳು:

ದಮ್ಮಿನಲ್ಲಿ ನೆಗಡಿ ಪ್ರಧಾನವಾಗಿದ್ದವರೆಗೂ ಹಳೆಯ ಶ್ವಾಸರೋಗಿಗಳಿಗೂ ಚ್ಯವನಪ್ರಾಶವು ತುಂಬಾ ಚೆನ್ನಾಗಿ ಕೆಲಸಮಾಡುವುದು. ಬೆಳಿಗ್ಗೆ ರಾತ್ರಿ ೨ ಚಮಚಗಳಂತೆ ನಾಲ್ಕಾರು ತಿಂಗಳುಗಳವರೆಗೆ ತೆಗೆದುಕೊಳ್ಳಬೇಕು. ಇದರಿಂದ ದಮ್ಮು ಕಡಿಮೆ ಆಗುವುದಲ್ಲದೆ ಪ್ರಕೃತಿಯೂ ಸುಧಾರಿಸಿ ರೋಗ ನಿರೋಧಕ ಶಕ್ತಿ ಬೆಳೆಯುವುದು. ಅಗಸ್ತ್ಯ ರಸಾಯನವೂ ಇದರಂತೆಯೇ ಕಾರ್ಯಮಾಡುವುದು.

ಮೇಲಿಂದ ಮೇಲೆ ಬರುವ ಕೆಮ್ಮು-ದಮ್ಮುಗಳನ್ನು ನಿಯಂತ್ರಿಸಲು ಹಾಗೂ ಫುಪ್ಫು ಸಾವಯವಗಳಿಗೆ ಶಕ್ತಿಯನ್ನುಂಟುಮಾಡಲು ೫ ಗ್ರಾಮಿನಷ್ಟು ಅಭ್ರಕಭಸ್ಮ (ಶತಪುಟ)ವನ್ನು ಚ್ಯವನಪ್ರಾಶ (೫೦೦ ಗ್ರಾಂ)ದಲ್ಲಿ ಸೇರಿಸಿ ತೆಗೆದುಕೊಳ್ಳಬೇಕು.

ದಮ್ಮಿನ ವೇಗವನ್ನು ಕಡಿಮೆ ಮಾಡಲು ಹಾಗೂ ಕಫವನ್ನು ಹೊರಹಾಕಲು ಶ್ವಾಸಕುಠಾರ, ಶ್ವಾಸಕಾಸ ಚಿಂತಾಮಣಿ ಮಾತ್ರೆಗಳನ್ನು ದಿನಕ್ಕೆ ೩ ರಿಂದ ೬ರ ಪ್ರಮಾಣದಲ್ಲಿ ತೆಗೆದುಕೊಳ್ಳಬೇಕು.

ಎದೆಯಲ್ಲಿ ತುಂಬಾ ಕಫವಿದ್ದು ಹೊರಹಾಕಲು ತೊಂದರೆ ಆಗುತ್ತಿದ್ದರೆ



ಕಫಕುಠಾರರಸ, ಶೃಂಗಭಸ್ಮಗಳು ಚೆನ್ನಾಗಿ ಕೆಲಸ ಮಾಡುತ್ತವೆ.

ಶ್ವಾಸಕಟ್ಟಿ ತೊಂದರೆಯಾದಾಗ ಶ್ವಾಸಕೇಂದ್ರಗಳನ್ನು ಉತ್ತೇಜಿಸಲು ಲವಂಗ, ದಾಲಚಿನ್ನಿ, ಕಪಿಲ, ನಾಗಕೇಶರ, ಕರಿಲವಂಗ, ತೇಜಪತ್ರ, ಹಿಪ್ಪಲಿ, ಶುಂಠಿ, ಚಂಗಲ್ಕೋಷ್ಠ, ಮೆಣಸು ದ್ರವ್ಯಗಳು ಸಹಾಯಕವಾಗಿವೆ.

ನಿಯಂತ್ರಣ ಕ್ರಮಗಳು:

ಕಫ ಮತ್ತು ವಾತಗಳನ್ನು ಹೋಗಲಾಡಿಸುವ ಉಷ್ಣ ಮತ್ತು ವಾತಾನುಲೋಮಕರವಾದ ಅನ್ನಪಾನವನ್ನೂ ಅದರಲ್ಲೂ ವಿಶೇಷವಾಗಿ ವಾತಹರ ದ್ರವ್ಯಗಳನ್ನು ತೆಗೆದುಕೊಳ್ಳಬೇಕು. ಕುಡಿಯಲು ಬಿಸಿನೀರು ಇಲ್ಲವೆ ಕಾಯ್ದು ಆರಿದ ನೀರನ್ನೇ ಉಪಯೋಗಿಸಬೇಕು.

ಅತಿ ತಣ್ಣಗಿನ ಹವೆ, ನೀರು, ಐಸ್‌ಕ್ರೀಮ್, ಕೋಲ್ಡ್ ಡ್ರಿಂಕ್ಸುಗಳು, ಮಳೆಯಲ್ಲಿ ನೆನೆಯುವುದು, ಫ್ಯಾನಿನ ನೇರವಾದ ಗಾಳಿ, ಕೃತ್ರಿಮವಾಗಿ ತಂಪನ್ನಾಗಿಸಿದ ಮನೆ, ಅತಿ ಬೆಳಗಿನ ಜಾವದಲ್ಲಿ ಎದ್ದು ಓಡಾಡುವುದು, ತಣ್ಣೀರಿನ ಸ್ನಾನ ಇತ್ಯಾದಿಗಳು ಕೂಡದು.

ಧೂಳು, ಹುಡಿ, ಹೊಗೆ, ವಾಸನೆ ಮೊದಲಾದ ಪ್ರಕೃತಿಗೆ ಒಗ್ಗದ ಪದಾರ್ಥಗಳಿಂದ ದೂರವಿರಬೇಕು. ಅದರ ಬದಲು ಪ್ರಕೃತಿಗೆ ಒಗ್ಗುವ ಪರಿಸರದಲ್ಲಿ ಕೆಲಸ ಮಾಡಬೇಕು.

ಕಫವನ್ನುಂಟುಮಾಡುವ ತತ್ತಿ, ಹಾಲು, ಮೊಸರು, ಕೆನೆ, ಬೆಣ್ಣೆ, ಎಣ್ಣೆ ಹಾಗೂ ಜಿಡ್ಡಿನ ಪದಾರ್ಥಗಳು, ಅತಿ ಹೆಚ್ಚು ಸಿಹಿ ಪದಾರ್ಥಗಳು, ಇಡ್ಲಿ-ದೋಸೆಗಳು, ಕೇಕ್ ಮೊದಲಾದ ಬೇಕರಿ ಪದಾರ್ಥಗಳು, ಕೇವಲ ಅನ್ನ ಉಣ್ಣುವುದು, ಉಪ್ಪನ್ನು

ಹೆಚ್ಚಾಗಿ ಬಳಸುವುದು ಇತ್ಯಾದಿಗಳನ್ನು ಬಿಡಬೇಕು.

ಜೀರ್ಣಕ್ರಿಯೆಯನ್ನು ಚೆನ್ನಾಗಿ ಇಟ್ಟುಕೊಳ್ಳಬೇಕು. ರಾತ್ರಿ ಬೇಗನೆ ಊಟ ಮಾಡಬೇಕು. ಮಲಬದ್ಧತೆಯಾಗದಂತೆ ನೋಡಿಕೊಳ್ಳಬೇಕು.

ಮಲಗುವ ಕೋಣೆ ಸ್ವಚ್ಛವಾಗಿದ್ದು ಚೆನ್ನಾಗಿ ಗಾಳಿ, ಬೆಳಕುಗಳು ಬರುವಂತಿರಬೇಕು. ಮಲಗುವಾಗ ಎದೆಯಭಾಗ ಎತ್ತರವಾಗಿರುವಂತೆ ನೋಡಿಕೊಳ್ಳಬೇಕು.

ಕ್ರಮಬದ್ಧವಾದ ನಿತ್ಯ ವ್ಯಾಯಾಮ ಅವಶ್ಯ ವೃದ್ಧರಿಗೆ ಚಂಕ್ರಮಣ (Walking) ಒಳ್ಳೆಯದು.

ಉಸಿರಾಟದ ವ್ಯಾಯಾಮ, ಪ್ರಾಣಾಯಾಮಗಳನ್ನು ಚೆನ್ನಾಗಿ ಕಲಿತುಕೊಂಡು ಆಚರಿಸಿ. ಧ್ಯಾನ, ಸೂರ್ಯ ನಮಸ್ಕಾರಗಳು ಒಳ್ಳೆಯವು. ಸರ್ವಾಂಗಾಸನ, ಭುಜಂಗಾಸನ, ಪಶ್ಚಿಮೋತ್ಥಾಸನ, ಮತ್ಸ್ಯಾಸನಗಳು ಉಪಯುಕ್ತವೆನಿಸಿವೆ. ಈ ಆಸನಗಳನ್ನು ಹಾಕಿದ ಮೇಲೆ ಶವಾಸನವನ್ನು ೧೦-೧೫ ನಿಮಿಷಗಳವರೆಗೆ ಹಾಕಬೇಕು.

ಈ ಮೇಲ್ಕಂಡ ಪಥ್ಯಕ್ರಮ, ಔಷಧ ಯೋಗಾಸನಗಳನ್ನು ಅನುಸರಿಸಿದರೆ ಅಲರ್ಜಿಕ್ ನೆಗಡಿ ಹಾಗೂ ದಮ್ಮಿನ ವಿಕಾರದವರಿಗೆ ತುಂಬ ಉಪಯುಕ್ತವಾಗುವುದರಲ್ಲಿ ಸಂಶಯವಿಲ್ಲ.

Printed and Published by S.K. KATOTE on behalf of
Laka Shikshana Trust at Samyukta Karnataka Press,
Koppikar Road, Hubli-580 020. (Phone: 364303)
No. 2, Residency Road, Bangalore-560 025 (Phone: 2213265)

Managing Editor: K. SHAMARAO
Registered with the Registrar of Newspaper for India under No. 3633/57

ಲೋಕ ಶಿಕ್ಷಣ ಟ್ರಸ್ಟ್
ಗ್ರಂಥಮಾಲೆಯ ಪ್ರಕಟಣೆಗಳು
ಹುಬ್ಬಳ್ಳಿ-ಬೆಂಗಳೂರು

	ಪುಸ್ತಕದ ಹೆಸರು	ಲೇಖಕರ ಹೆಸರು	ಬೆಲೆ
೧.	ನನಗೆ ನಾನೇ ಮಾದರಿ	ಶ್ರೀ ಬಿ.ಡಿ. ಜತ್ತಿ	ರೂ. ೪೦-೦೦
೨.	ಶ್ರೀ ರಾಮದಾಸರು ಹೇಳಿದ ಕಥೆಗಳು	ಶ್ರೀ ಬಿ.ಡಿ. ಜತ್ತಿ	,, ೧೫-೦೦
೩.	ಕೃಷ್ಣಾವತಾರ ಭಾಗ-೧	ಮೂಲ: ಶ್ರೀ ಕೆ.ಎಂ. ಮುನ್ಷಿ ಅನುವಾದ: ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮ	,, ೨೦-೦೦
೪.	ಕೃಷ್ಣಾವತಾರ ಭಾಗ-೨	-"-	,, ೨೫-೦೦
೫.	ಕೃಷ್ಣಾವತಾರ ಭಾಗ-೩	-"-	,, ೨೦-೦೦
೬.	ಕೃಷ್ಣಾವತಾರ ಭಾಗ-೪	-"-	,, ೨೦-೦೦
೭.	ಕೃಷ್ಣಾವತಾರ ಭಾಗ-೫	-"-	,, ೨೫-೦೦
೮.	ಕೃಷ್ಣಾವತಾರ ಭಾಗ-೬	-"-	,, ೨೦-೦೦
೯.	ಕೃಷ್ಣಾವತಾರ ಭಾಗ-೭	-"-	,, ೨೦-೦೦
೧೦.	ಕೃಷ್ಣಾವತಾರ ಭಾಗ-೮	-"-	,, ೨೫-೦೦
೧೧.	ಕೃಷ್ಣಾವತಾರ ಭಾಗ-೯, ೧೦	-"-	,, ೨೦-೦೦
೧೨.	ಕರ್ನಾಟಕದಲ್ಲಿ ಕ್ವಿಟ್ ಇಂಡಿಯಾ ಚಳವಳಿ	ಡಾ. ಸೂರ್ಯನಾಥ ಕಾಮತ	,, ೪೫-೦೦
೧೩.	ವಂದೇಮಾತರಂದಿಂದ ಜನಗಣಮನದವರೆಗೆ	ಶ್ರೀ ಪಿ.ಎಚ್. ದೇಸಾಯಿ	,, ೫೦-೦೦
೧೪.	ಗೀತಾ ನಿತ್ಯಪಾಠ	ಶ್ರೀ ರಂಗನಾಥ ದಿವಾಕರ	,, ೩-೦೦
೧೫.	ಶ್ರೀ ಕೃಷ್ಣಾವತಾರದ ಕೊನೆಯ ಗಳಿಗೆಗಳು	ಪ್ರೊ. ಕೆ.ಎಸ್. ನಾರಾಯಣಾಚಾರ್ಯ	,, ೨೦-೦೦
೧೬.	ಗಾಂಧೀಜಿ ನಾನು ಕಂಡಂತೆ	ಶ್ರೀ ರಂಗನಾಥ ದಿವಾಕರ	,, ೧೦-೦೦
೧೭.	ನೆನಪಿನಂಗಳದಲ್ಲಿ	ಶ್ರೀ ಜೆ.ಎಂ. ಪಾಟೀಲ	,, ೨೦-೦೦

ವಿ.ಸೂ. ಪುಸ್ತಕ ಮಾರಾಟಗಾರರಿಗೆ ಕನಿಷ್ಠ ೧೦ ಪ್ರತಿಗಳನ್ನು ತರಿಸಿದರೆ ಶೇ. ೨೫ರಷ್ಟು ಕಮೀಷನ್ ಕೊಡಲಾಗುವದು. ಪುಸ್ತಕಗಳು ಬೇಕಾದಲ್ಲಿ ತಕ್ಷಣ ಕೆಳಕಂಡ ವಿಳಾಸಕ್ಕೆ ಎಲ್ಲ ವಿವರಗಳೊಂದಿಗೆ ಡಿ.ಡಿ. ಅಥವಾ ಮನಿಯಾರ್ಡರ್ ಮೂಲಕ ಬರೆದು ತಿಳಿಸುವುದು. ಅಂಚೆ ವೆಚ್ಚ ಪ್ರತ್ಯೇಕ. ವಿ.ಪಿ.ಪಿ. ಸೌಲಭ್ಯ ಇರುವುದಿಲ್ಲ.

ಪ್ರಸಾರಾಂಗ ವ್ಯವಸ್ಥಾಪಕರು

ಸಂಯುಕ್ತ ಕರ್ನಾಟಕ, ಕೊಪ್ಪೀಕರ ರಸ್ತೆ, ಹುಬ್ಬಳ್ಳಿ-೨೦.

ಸಂಯುಕ್ತ ಕರ್ನಾಟಕ, ನಂ. ೨, ರೆಸಿಡೆನ್ಸಿ ರಸ್ತೆ, ಬೆಂಗಳೂರು-೨೫.

KASTURI, Kannada Digest Reg No. KRNG. 43, Licence No. L2120. WPP No. 33 Price Rs. 6-00.

